www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಸುಳ್ಳು ಪತ್ತೆ ಪರೀಕ್ಷೆಗಳ ಸುತ್ತ

ಇಂದು ಸ್ಪರ್ಧಾವಾಣಿ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,510	18,267	₹53,950 (ಬೆಂಗಳೂರು)	₹63,100 (ಬೆಂಗಳೂರು)	81.93

ಚುನಾವಣಾ ಆಯೋಗ ದುರ್ಬಲ ಸಂಸ್ಥೆಯಂತಿದೆ: ಸುಪ್ರೀಂ ಕೋರ್ಟ್

ಪ್ರಬಲ ಚುನಾವಣಾ ಆಯುಕ್ತ ಅಗತ್ಯ

ನವದೆಹಲಿ (ಪಿಟಿಐ): 'ಪ್ರಧಾನಿ ವಿರುದ್ಧ ದೂರು ಬಂದರೆ, ಅವರ ವಿರುದ್ಧವೂ ಕ್ರಮ ತೆಗೆದುಕೊಳ್ಳುವಂತಹ ಮುಖ್ಯ ಚುನಾವಣಾ ಆಯುಕ್ತರ ಅಗತ್ಯವಿದೆ' ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಮುಖ್ಯ ಚುನಾವಣಾ ಆಯುಕ್ತರ ನೇಮಕಕ್ಕೆ ಈಗ ಇರುವ ವ್ಯವಸ್ಥೆ ಅಡಿಯಲ್ಲಿ, ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪಕ್ಷಗಳು 'ಹೌದಪ್ಪ' ಎನ್ನುವ ಅಧಿಕಾರಿಗಳನ್ನೇ ಆಯುಕ್ತರಾಗಿ ನೇಮಕ ಮಾಡುತ್ತವೆ. ಅಂತಹವರು ಪ್ರಧಾನಿ ವಿರುದ್ಧ ಕ್ರಮ ತೆಗೆದುಕೊಳ್ಳುತ್ತಾರೆಯೇ? ಹೀಗಾಗಿ ಪ್ರಬಲ ಚುನಾವಣಾ ಆಯುಕ್ತರ ಅಗತ್ಯ ವಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಮುಖ್ಯ ಚುನಾವಣಾ ಆಯುಕ್ತರ (ಸಿಇಸಿ) ನೇಮಕಕ್ಕೆ ಕೊಲಿಜಿಯಂ ಸ್ವರೂಪದ ವ್ಯವಸ್ಥೆ ಬೇಕು ಎಂದು ಕೋರಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆಯನ್ನು ನ್ಯಾಯಮೂರ್ತಿ ಕೆ.ಎಂ.ಜೋಸೆಫ್ ನೇತೃತ್ವದ ಐವರು ಸದಸ್ಯರ ಸಂವಿಧಾನ ಪೀಠವು ನಡೆಸುತ್ತಿದೆ. ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ, ಅನಿರುದ್ಧ ಬೋಸ್, ಹೃಷಿಕೇಶ್ ರಾಯ್ ಮತ್ತು ಸಿ.ಟಿ.ರವಿ ಕುಮಾರ್ ಅವರು ಈ ಪೀಠದಲ್ಲಿದ್ದಾರೆ.

ಈಗ ಚಾಲ್ತಿಯಲ್ಲಿ ಇರುವ ವ್ಯವಸ್ಥೆಯಲ್ಲಿ ಕಾರ್ಯದರ್ಶಿ, ಮುಖ್ಯಕಾರ್ಯದರ್ಶಿ ದರ್ಜೆಯ ಅಧಿಕಾರಿಗಳನ್ನು ಚುನಾವಣಾ ಆಯುಕ್ತ ಮತ್ತು ಮುಖ್ಯ ಚುನಾವಣಾ ಆಯುಕ್ತರನ್ನಾಗಿ ನೇಮಕ ಮಾಡುವಂತೆ ಕೇಂದ್ರ ಸಚಿವ ಸಂಪುಟವು ಶಿಫಾರಸು ಮಾಡುತ್ತದೆ. ಆ ಶಿಫಾರಸಿನಂತೆ ರಾಷ್ಟ್ರಪತಿಯು ಆಯುಕ್ತರನ್ನು ನೇಮಕ ಮಾಡುತ್ತಾರೆ.

ಮುಖ್ಯ ಚುನಾವಣಾ ಆಯುಕ್ತರ ನೇಮಕ ವ್ಯವಸ್ಥೆಯಲ್ಲಿ ಬದಲಾವಣೆಯಾಗಬೇಕು. ಸಮಾಲೋಚನೆ ನಡೆಸಿ ನೇಮಕ ಮಾಡುವಂತಹ ವ್ಯವಸ್ಥೆ ಬೇಕು. ಆ ವ್ಯವಸ್ಥೆಯಲ್ಲಿ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳೂ ಇರಬೇಕು ಎಂದು ಪೀಠವು ಅಭಿಪ್ರಾಯಪಟ್ಟಿದೆ.

ಅರ್ಜಿಯ ವಿಚಾರಣೆ ವೇಳೆ ಪೀಠವು, 'ಚುನಾವಣಾ ಆಯೋಗವು ಸ್ವತಂತ್ರ ಸಂಸ್ಥೆಯಾಗಿರಬೇಕು' ಎಂದು ಹೇಳಿತು.

ಸರ್ಕಾರದ ಪರ ಹಾಜರಿದ್ದ ಅಟಾರ್ನಿ ಜನರಲ್ ಆರ್.ವೆಂಕಟರಮಣಿ, '1991ರ ಚುನಾವಣಾ ಆಯೋಗ (ಚುನಾವಣಾ ಆಯುಕ್ತರ ಸೇವಾ ಷರತ್ತುಗಳು ಮತ್ತು ಕಾರ್ಯ ನಿರ್ವಹಣೆ) ಕಾಯ್ದೆಯ ಅಡಿಯಲ್ಲಿ ಚುನಾವಣಾ ಆಯುಕ್ತರನ್ನು ಜೇಷ್ಠತೆ ಆಧಾರದಲ್ಲಿ ನೇಮಕ ಮಾಡಲಾಗುತ್ತಿದೆ. ಆಯೋಗದ ಸದಸ್ಯರು ಸ್ವತಂತ್ರವಾಗಿ ಕಾರ್ಯನಿರ್ವಹಿಸುವಂತೆ ಈ ಕಾಯ್ದೆ ಯನ್ನು ರೂಪಿಸಲಾಗಿದೆ' ಎಂದರು.

ಆಗ ಪೀಠವು, 'ನೀವು ಉಲ್ಲೇಖಿಸುತ್ತಿರುವ ಕಾಯ್ದೆಯು ಹೆಸರೇ ಹೇಳುತ್ತಿರುವಂತೆ ಆಯುಕ್ತರ ಸೇವಾ ಷರತ್ತುಗಳಿಗೆ ಮಾತ್ರ ಸಂಬಂಧಿಸಿದ್ದು. ನಾವು ಹೇಳುತ್ತಿರುವುದು ಆಯುಕ್ತರ ನೇಮಕಕ್ಕೆ ಸಂಬಂಧಿಸಿದ್ದು. ಸರ್ಕಾರವು ತನ್ನದೇ ಸಿದ್ಧಾಂತ ಮತ್ತು ಮನಸ್ಥಿತಿ ಹೊಂದಿರುವ 'ಹೌದಪ್ಪ' ಎನ್ನುವ ಅಧಿಕಾರಿಯನ್ನು ಆಯುಕ್ತರಾಗಿ ನೇಮಕ ಮಾಡುತ್ತದೆ ಎಂದಿಟ್ಟುಕೊಳ್ಳಿ. ಹೀಗಿರುವಾಗ ಆಯೋಗವು ಸ್ವತಂತ್ರ ಸಂಸ್ಥೆ ಹೇಗಾಗುತ್ತದೆ? ನೇಮಕದ ಸಂದರ್ಭದಲ್ಲೇ ಆ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಬೇಕು ಎಂಬುದು ನಮ್ಮ ಇಚ್ಛೆ' ಎಂದು ಹೇಳಿತು.

'ಮುಖ್ಯ ಚುನಾವಣಾ ಆಯುಕ್ತರಾಗಿ ನೇಮಕವಾಗುವವರು ರಾಜಕೀಯ ಪ್ರಭಾವಗಳಿಂದ ಹೊರತಾಗಿರಬೇಕು ಮತ್ತು ಸ್ವತಂತ್ರವಾಗಿರಬೇಕು. ಪ್ರಧಾನಿ ವಿರುದ್ಧ ಆರೋಪ ಇದೆ ಎಂದಿಟ್ಟುಕೊಳ್ಳಿ. ಆಗ ಮುಖ್ಯ ಚುನಾವಣಾ ಅಧಿಕಾರಿಯು ಪ್ರಧಾನಿ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು.

10ನೇ ಪುಟ ನೋಡಿ

ಸಂವಿಧಾನ ಪೀಠ ಹೇಳಿದ್ದು...

- 2004ರ ನಂತರ ಯಾವ ಮುಖ್ಯ ಚುನಾವಣಾ ಆಯುಕ್ತರೂ ಆರು ವರ್ಷಗಳ ಪೂರ್ಣ ಅವಧಿಯವರೆಗೆ ಅಧಿಕಾರದಲ್ಲಿ ಇರಲಿಲ್ಲ. ಯುಪಿಎ ಅಧಿಕಾರದ 10 ವರ್ಷಗಳ ಅವಧಿಯಲ್ಲಿ ಆರು ಮಂದಿ ಮುಖ್ಯ ಚುನಾವಣಾ ಆಯುಕ್ತರು ಬದಲಾಗಿದ್ದಾರೆ. ಎನ್‌ಡಿಎ ಅವಧಿಯ ಎಂಟು ವರ್ಷಗಳಲ್ಲಿ ಎಂಟು ಮಂದಿ ಬದಲಾಗಿದ್ದಾರೆ
- ಅಧಿಕಾರದಲ್ಲಿರುವ ಎಲ್ಲಾ ಪಕ್ಷಗಳೂ ನಿವೃತ್ತಿ ಅಂಚಿನಲ್ಲಿರುವ, ಹೆಚ್ಚು ಅಧಿಕಾರದ ಅವಧಿ ದೊರೆಯದೇ ಇರುವವರನ್ನೇ ಈ ಹುದ್ದೆಗೆ ನೇಮಕ ಮಾಡಿವೆ
- ಮುಖ್ಯ ಚುನಾವಣಾ ಆಯುಕ್ತರಾಗಿದ್ದ ಟಿ.ಎನ್.ಶೇಷನ್ (1990ರ ಡಿಸೆಂಬರ್‌ನಿಂದ 1996ರ ಡಿಸೆಂಬರ್‌ವರೆಗೆ ಈ ಹುದ್ದೆಯಲ್ಲಿದ್ದರು) ಅವರಂತಹ ಪ್ರಬಲ ವ್ಯಕ್ತಿ ಈ ಹುದ್ದೆಗೆ ಬರಬೇಕು. ಸಮರ್ಥರ ಜತೆಗೆ ಪ್ರಬಲ ವ್ಯಕ್ತಿತ್ವ ಇರುವವರು ಮುಖ್ಯ ಚುನಾವಣಾ ಆಯುಕ್ತರಾಗುವ ಅಗತ್ಯವಿದೆ

ಚುನಾವಣಾ ಆಯೋಗವು ಕೆಲಸ ಮಾಡುತ್ತಿಲ್ಲ ಎಂಬುದನ್ನು ಸುಪ್ರೀಂ ಕೋರ್ಟ್‌ನ ಅಭಿಪ್ರಾಯಗಳು ಸೂಚಿಸುತ್ತವೆ. ಆಯೋಗದ ಕಾರ್ಯನಿರ್ವಹಣೆಯ ಬಗ್ಗೆ ಮಾತ್ರ ಕೋರ್ಟ್ ಪ್ರಶ್ನಿಸಿಲ್ಲ. ಬದಲಿಗೆ ಪ್ರಧಾನಿ ವಿರುದ್ಧವೂ ಆಯೋಗ ಕ್ರಮ ತೆಗೆದುಕೊಳ್ಳುತ್ತದೆಯೇ ಎಂದು ಪ್ರಶ್ನಿಸಿದೆ

ಮನೋಜ್ ಝಾ, ಆರ್‌ಜೆಡಿ ವಕ್ತಾರ ಮತ್ತು ಸಂಸದ

ಚುನಾವಣಾ ಆಯುಕ್ತರ ನೇಮಕಕ್ಕೆ ಕೊಲಿಜಿಯಂನಂತಹ ವ್ಯವಸ್ಥೆ ಬೇಕು ಎಂದು ನಾನು ಆಡಳಿತಾತ್ಮಕ ಆಯೋಗ ವರದಿಯಲ್ಲಿ ಶಿಫಾರಸು ಮಾಡಿದ್ದೆ. ನ್ಯಾಯಾಂಗ ಮತ್ತು ಚುನಾವಣಾ ಆಯೋಗ ಸ್ವತಂತ್ರವಾಗಿ ಇರಬೇಕು ಎಂದಾದರೆ, ಅದನ್ನು ಮಾಡಲೇಬೇಕು

ಎಂ.ವೀರಪ್ಪ ಮೊಯಿಲಿ,
ಕಾಂಗ್ರೆಸ್ ನಾಯಕ ಮತ್ತು ಮಾಜಿ ಕೇಂದ್ರ ಕಾನೂನು ಸಚಿವ

ಗೋಯೆಲ್ ನೇಮಕದ ಕಡತ ಸಲ್ಲಿಸಿ

ಶನಿವಾರವಷ್ಟೇ (ನ. 19) ಮುಖ್ಯ ಚುನಾವಣಾ ಆಯುಕ್ತರಾಗಿ ನೇಮಕವಾದ ಸ್ವಯಂ ನಿವೃತ್ತ ಅಧಿಕಾರಿ ಅರುಣ್ ಗೋಯೆಲ್ ಅವರ ಆಯ್ಕೆಗೆ ಸಂಬಂಧಿಸಿದ ಕಡತಗಳನ್ನು ಗುರುವಾರ ಸಲ್ಲಿಸಿ ಎಂದು ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಪೀಠವು ತಾಕೀತು ಮಾಡಿದೆ.

ಆಯುಕ್ತರ ನೇಮಕಕ್ಕೆ ಕೊಲಿಜಿಯಂನಂತಹ ವ್ಯವಸ್ಥೆ ಬೇಕು ಎಂದು ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆಯ ಮಧ್ಯೆಯೇ ಹಿರಿಯ ವಕೀಲ ಪ್ರಶಾಂತ್ ಭೂಷಣ್ ಅವರು ಅರುಣ್ ಗೋಯೆಲ್ ಅವರ ನೇಮಕ ವಿಚಾರವನ್ನು ಪ್ರಸ್ತಾಪಿಸಿದರು. 'ಗೋಯೆಲ್ ಅವರು ಸ್ವಯಂ ನಿವೃತ್ತಿ ಪಡೆದ ಒಂದೇ ದಿನದಲ್ಲಿ ಅವರ ನೇಮಕ ನಡೆದಿದೆ. ಇದರಲ್ಲೇನೋ ಅಕ್ರಮ ಇದೆ' ಎಂದು ಆರೋಪಿಸಿದರು.

ಆಗ ಪೀಠವು, 'ಅರುಣ್ ಗೋಯೆಲ್ ಅವರ ನೇಮಕಕ್ಕೆ ಸಂಬಂಧಿಸಿದ ಮೂಲ ದಾಖಲೆ ಪತ್ರಗಳನ್ನು ಸಲ್ಲಿಸಿ' ಎಂದು ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಅವರಿಗೆ ಸೂಚಿಸಿತು. ಆಗ ಅವರು, 'ಮುಖ್ಯ ಅರ್ಜಿಗಳ ವಿಚಾರಣೆ ವೇಳೆ ಈ ಪ್ರತ್ಯೇಕ ನೇಮಕಾತಿಯ ವಿಚಾರಣೆ ಅವಶ್ಯಕತೆ ಇಲ್ಲ' ಎಂದು ಹೇಳಿದರು. ಜತೆಗೆ, 'ಸಚಿವ ಸಂಪುಟದ ನಿರ್ಧಾರದ ಮೇಲೆ ವಿಶ್ವಾಸ ಇಲ್ಲವೇ' ಎಂದು ಅವರು ಪ್ರಶ್ನಿಸಿದರು.

ಆಗ ಪೀಠವು, 'ನಾವು ಆ ಬಗ್ಗೆ ಮಾತನಾಡುತ್ತಿಲ್ಲ. ನೇಮಕಾತಿಗೆ ನೀವು ಅನುಸರಿಸಿದ ವಿಧಾನ ಯಾವುದು ಎಂಬುದನ್ನು ಪರಿಶೀಲಿಸಲು ದಾಖಲೆಗಳನ್ನು ಕೇಳುತ್ತಿದ್ದೇವೆ. ನಿಮಗೆ ಸಾಧ್ಯವಿಲ್ಲದೇ ಇದ್ದರೆ, ಬೇರೆ ಅಧಿಕಾರಿಯ ಕೈಯಲ್ಲಿ ಕಡತ ಕಳುಹಿಸಿ. ನಾಳೆ ಬೆಳಿಗ್ಗೆಯವರೆಗೆ ನಿಮಗೆ ಕಾಲಾವಕಾಶವಿದೆ. ಒಂದೊಮ್ಮೆ ನಿಮಗೆ ಇಷ್ಟವಿಲ್ಲ ಎಂದಾದರೆ ಈ ಅರ್ಜಿಯನ್ನು ವಜಾ ಮಾಡಿಬಿಡುವ' ಎಂದು ಖಾರವಾಗಿ ಹೇಳಿತು. ಆಗ ವೆಂಕಟರಮಣಿ ಅವರು ಕಡತಗಳನ್ನು ಸಲ್ಲಿಸುತ್ತೇವೆ ಎಂದು ಪೀಠಕ್ಕೆ ಹೇಳಿದರು.

ಕೆಎಂಎಫ್ ನಿರ್ಧಾರ: ಪರಿಷ್ಕೃತ ದರ ಇಂದಿನಿಂದ ಜಾರಿ

ಹಾಲು, ಮೊಸರು ದರ ₹ 2 ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಂದಿನಿ ಬ್ರ್ಯಾಂಡ್‌ನ ಎಲ್ಲ ಮಾದರಿಯ ಹಾಲು ಹಾಗೂ ಮೊಸರಿನ ದರವನ್ನು ಪ್ರತಿ ಲೀಟರ್‌ಗೆ ₹ 2 ಹೆಚ್ಚಿಸಲಾಗಿದೆ. ಬುಧವಾರ ನಡೆದ ಕರ್ನಾಟಕ ಹಾಲು ಮಹಾ ಮಂಡಳದ (ಕೆಎಂಎಫ್) ಆಡಳಿತ ಮಂಡಳಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಗುರುವಾರ ಬೆಳಿಗ್ಗೆಯಿಂದಲೇ ಪರಿಷ್ಕೃತ ದರ ಜಾರಿಯಾಗಲಿದೆ.

ನ.14 ರಂದು ಕೆಎಂಎಫ್ ಪ್ರತಿ ಲೀಟರ್‌ಗೆ ₹3 ಹೆಚ್ಚಿಸಲು ನಿರ್ಧರಿಸಿತ್ತು. ಆದರೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ದರ ಹೆಚ್ಚಿಸದಂತೆ ಸೂಚಿಸಿದ್ದರು. ರೈತರಿಗೆ ಮತ್ತು ಗ್ರಾಹಕರಿಗೆ ಹೊರೆಯಾಗದಂತೆ ನಿರ್ಣಯ ಕೈಗೊಳ್ಳುವಂತೆ ಕೆಎಂಎಫ್‌ಗೆ ಮುಖ್ಯಮಂತ್ರಿ ತಿಳಿಸಿದ್ದರು. ಈ ಸೂಚನೆ ಅನ್ವಯ ಸಭೆ ನಡೆಸಿ ದರಗಳನ್ನು ಪರಿಷ್ಕರಿಸಲಾಗಿದೆ.

ಹಾಲು ಒಕ್ಕೂಟಗಳಲ್ಲಿ ಹಳೆಯ ದರ ಮುದ್ರಿತವಾಗಿರುವ ಪ್ಯಾಕೆಟ್‌ಗಳ ದಾಸ್ತಾನಿದೆ. ಈ ದಾಸ್ತಾನು ಮುಗಿಯುವವರೆಗೂ ಹಳೆಯ ದರ ಮುದ್ರಿತ ಪ್ಯಾಕೆಟ್‌ಗಳಲ್ಲಿ ಹಾಲು ಪೂರೈಕೆಯಾಗಲಿದೆ ಎಂದು ಕೆಎಂಎಫ್ ತಿಳಿಸಿದೆ.

'ಹೈನುಗಾರರಿಗೆ ಸಹಾಯ ಹಸ್ತ ಚಾಚುವ ಉದ್ದೇಶದಿಂದ ಹೆಚ್ಚಿಸಿರುವ ದರದ ಮೊತ್ತವನ್ನು ರೈತರಿಗೆ ನೀಡಲಾಗುವುದು' ಎಂದು ವ್ಯವಸ್ಥಾಪಕ ನಿರ್ದೇಶಕ ಬಿ.ಸಿ. ಸತೀಶ್ ತಿಳಿಸಿದ್ದಾರೆ.

'ಗ್ರಾಹಕರಿಂದ ದೊರೆಯುವ ಒಂದು ರೂಪಾಯಿಯಲ್ಲಿ 79 ಪೈಸೆಯನ್ನು ರೈತರಿಗೆ ನೀಡಲಾಗುತ್ತಿದೆ. ಕಳೆದ ಎರಡು ವರ್ಷಗಳಿಂದ ರಾಸುಗಳ ಸಾಕಣೆ ವೆಚ್ಚ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಮುಖ್ಯವಾಗಿ ಪಶು ಆಹಾರ ಉತ್ಪಾದನೆಗೆ ಬಳಸಲಾಗುವ ಮೆಕ್ಕೆ ಜೋಳ, ಭತ್ತದ ತೌಡು, ಹತ್ತಿಕಾಳು ಹಿಂಡಿ, ಪೌಷ್ಟಿಕ ಆಹಾರ ಪದಾರ್ಥಗಳ ಬೆಲೆ ಹೆಚ್ಚಾಗಿದೆ. ಹೀಗಾಗಿ, ರೈತರ ಹಿತದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು ನಂದಿನಿ ಹಾಲಿನ ಬೆಲೆ ಹೆಚ್ಚಿಸುವುದು ಅನಿವಾರ್ಯವಾಗಿದೆ' ಎಂದು ವಿವರಿಸಿದ್ದಾರೆ. 'ದರ ಹೆಚ್ಚಳದ ಬಗ್ಗೆ ಸರ್ಕಾರದ ಹಂತದಲ್ಲೂ ಚರ್ಚಿಸಲಾಗಿದೆ. ನಂದಿನಿ ಹಾಲಿಗೆ ಹೋಲಿಸಿದರೆ, ರಾಜ್ಯದಲ್ಲಿನ ಪ್ರತಿ ಸ್ಪರ್ಧಿ ಬ್ರ್ಯಾಂಡ್‌ಗಳು ಮತ್ತು ಹೊರರಾಜ್ಯದಲ್ಲಿನ ಹಾಲು ಉತ್ಪಾದಕರ ಮಹಾಮಂಡಳದ ಹಾಲಿನ ದರ ಇನ್ನೂ ದುಬಾರಿಯಾಗಿದೆ' ಎಂದು ತಿಳಿಸಿದ್ದಾರೆ.

ಹಾಲು, ಮೊಸರಿನ ದರ ಪರಿಷ್ಕರಣೆ

ಮಾದರಿ	ಪ್ರಸ್ತುತ	ಪರಿಷ್ಕೃತ*
ಟೋನ್ಡ್ ಹಾಲು	37	39
ಹೋಮೋಜಿನೈಸ್ಡ್ ಟೋನ್ಡ್ ಹಾಲು	38	40
ಹೋಮೋಜಿನೈಸ್ಡ್ ಹಸುವಿನ ಹಾಲು	42	44
ಸ್ಪೆಷಲ್ ಹಾಲು	43	45
ಶುಭಂ ಹಾಲು	43	45
ಹೋಮೋಜಿನೈಸ್ಡ್ ಸ್ಟ್ಯಾಂಡರ್ಡೈಸ್ಡ್ ಹಾಲು	44	46
ಸಮೃದ್ಧಿ ಹಾಲು	48	50
ಸಂತೃಪ್ತಿ ಹಾಲು	50	52
ಡಬಲ್ ಟೋನ್ಡ್ ಹಾಲು	36	38
ಮೊಸರು (ಪ್ರತಿ ಕೆ.ಜಿ.ಗೆ)	45	47

*₹ಗಳಲ್ಲಿ ಪ್ರತಿ ಲೀ. ಅಥವಾ ಕೆ.ಜಿ.ಗೆ

₹ 50 ಸಾವಿರ ಸಾಲ– ಸಹಾಯಧನ, ವಿಶೇಷ ಯೋಜನೆ

ತಳಮಟ್ಟದ ಕುಶಲಕರ್ಮಿಗಳಿಗೆ ಸರ್ಕಾರದಿಂದ ನೆರವಿನ ಹಸ್ತ

• ರಾಜೇಶ್ ರೈ ಚಟ್ಲ

ಬೆಂಗಳೂರು: ಕುಂಬಾರ, ಕಮ್ಮಾರ, ಚಮ್ಮಾರಿಕೆ, ಬಡಗಿ, ಶಿಲ್ಪಿಗಳು, ಭಜಂತ್ರಿ, ಬುಟ್ಟಿ ಹೆಣೆಯುವವರು, ವಿಶ್ವಕರ್ಮರು ಮುಂತಾದ ಅತಿ ಸಣ್ಣ ಕುಶಲಕರ್ಮಿಗಳಿಗೆ ಬ್ಯಾಂಕುಗಳಿಂದ ತಲಾ ₹ 50 ಸಾವಿರ ಸಾಲ– ಸಹಾಯಧನ (₹ 35 ಸಾವಿರ ಸಾಲ, ₹ 15 ಸಾವಿರ ಸಹಾಯಧನ) ಸೌಲಭ್ಯ ಒದಗಿಸುವ ಹೊಸ ಯೋಜನೆಗೆ ರಾಜ್ಯ ಸರ್ಕಾರ ಆಡಳಿತಾತ್ಮಕ ಅನು ಮೋದನೆ ನೀಡಿದೆ. ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಮೂಲಕ ಈ ಯೋಜನೆ ಜಾರಿಗೆ ಬರಲಿದೆ.

ರಾಜ್ಯದಲ್ಲಿ ಸುಮಾರು 35 ಸಾವಿರ ಅತಿ ಸಣ್ಣ ನೋಂದಾಯಿತ ಕುಶಲಕರ್ಮಿಗಳಿದ್ದಾರೆ. ಪ್ರತಿ ಕುಶಲಕರ್ಮಿ ಪಡೆಯುವ ಸಾಲಕ್ಕೆ ಸಹಾಯಧನ ನೀಡಲು ಪ್ರಸಕ್ತ ಸಾಲಿನಲ್ಲಿ (2022–23) ₹ 5 ಕೋಟಿ ಹಾಗೂ ಮುಂದಿನ ಮೂರು ಆರ್ಥಿಕ ವರ್ಷಗಳಲ್ಲಿ ತಲಾ ₹ 15 ಕೋಟಿಯಂತೆ ವೆಚ್ಚ ಆಗಲಿದೆ. ಈವರೆಗೆ ನೋಂದಾಯಿಸಿಕೊಳ್ಳದ ಕುಶಲಕರ್ಮಿಗಳಿಗೂ ಈ ಯೋಜನೆಯಡಿ ಸಾಲ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದೆ. ರಾಜ್ಯದ ಸುಮಾರು 30 ಸಾವಿರ ಕುಶಲಕರ್ಮಿಗಳು ಕೇಂದ್ರ ಸರ್ಕಾರದ ಅಭಿವೃದ್ಧಿ ಆಯುಕ್ತರಲ್ಲಿ (ಕರಕುಶಲ) ನೋಂದಾಯಿಸಿಕೊಂಡಿದ್ದಾರೆ. ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮದಲ್ಲಿ ಸುಮಾರು 2,500 ಕುಶಲಕರ್ಮಿಗಳು ನೋಂದಾಯಿಸಿಕೊಂಡಿದ್ದಾರೆ. ಈ ಕುಶಲಕರ್ಮಿಗಳು ಹಣಕಾಸು ಲಭ್ಯತೆ, ಸಾಲ ಸೌಲಭ್ಯ, ದುಡಿಮೆ ಬಂಡವಾಳ, ಹೊಸ ವಿನ್ಯಾಸ, ಮಾರುಕಟ್ಟೆ ಅವಕಾಶ ಇತ್ಯಾದಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅಂಥವರಿಗೆ ವಾಣಿಜ್ಯ ಬ್ಯಾಂಕುಗಳು, ಸಹಕಾರ ಬ್ಯಾಂಕುಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಿಂದ (ಪತ್ತಿನ ಸಹಕಾರ ಸಂಘಗಳನ್ನು ಹೊರತುಪಡಿಸಿ) ಈ ಸಾಲ ಸೌಲಭ್ಯ ಸಿಗಲಿದೆ. ಕುಶಲಕರ್ಮಿಗಳು ಜಿಲ್ಲಾ ಕೈಗಾರಿಕಾ ಕೇಂದ್ರಕ್ಕೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಬಂದ ಅರ್ಜಿಗಳನ್ನು ಕೇಂದ್ರದ ಜಂಟಿ ನಿರ್ದೇಶಕರ ಅಧ್ಯಕ್ಷತೆಯ ಜಿಲ್ಲಾ ಮಟ್ಟದ ಸಮಿತಿಯ ಅನುಮೋದಿಸಿ ಸಂಬಂಧಿಸಿದ ಬ್ಯಾಂಕುಗಳಿಗೆ ಶಿಫಾರಸು ಮಾಡಲಿದೆ.

6ನೇ ಪುಟ ನೋಡಿ

ಯೋಜನೆಗೆ ಅರ್ಹತೆಗಳೇನು?

- ಕುಶಲಕರ್ಮಿಗಳಿಗೆ ಕನಿಷ್ಠ 18 ವರ್ಷ ತುಂಬಿರಬೇಕು
- ಕರಕುಶಲ ವೃತ್ತಿಗಾಗಿ ಬ್ಯಾಂಕಿನಿಂದ ಪಡೆದ ಸಾಲಕ್ಕೆ ಮಾತ್ರ ಸಹಾಯಧನ
- ಒಬ್ಬರಿಗೆ ಒಂದು ಬಾರಿ ಮಾತ್ರ ಸಹಾಯಧನ.
- ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ಅಥವಾ ಅಭಿವೃದ್ಧಿ ಆಯುಕ್ತರ (ಕರಕುಶಲ) ಕಚೇರಿಯಲ್ಲಿ ನೋಂದಣಿ ಆಗಿರಬೇಕು ಅಥವಾ ಉಪ ನಿರ್ದೇಶಕರು (ಗ್ರಾಮೀಣ ಕೈಗಾರಿಕೆ) ಅಥವಾ ಸ್ಥಳೀಯ ಗ್ರಾಮ ಪಂಚಾಯಿತಿ, ನಗರ ಸ್ಥಳೀಯ ಸಂಸ್ಥೆಯಿಂದ ದೃಢೀಕರಣಗೊಂಡಿರಬೇಕು

ಭಕ್ತ ಸಾಗರ ಕೇರಳದ ಪತ್ತನಂತಿಟ್ಟ ಜಿಲ್ಲೆಯಲ್ಲಿರುವ ಶಬರಿಮಲೆ ದೇವಸ್ಥಾನದಲ್ಲಿ ಬುಧವಾರ ಅಯ್ಯಪ್ಪ ಸ್ವಾಮಿ ದೇವರ ದರ್ಶನಕ್ಕಾಗಿ ಅಪಾರ ಸಂಖ್ಯೆಯಲ್ಲಿ ಭಕ್ತರು ಸಾಲುಗಟ್ಟಿ ನಿಂತಿದ್ದರು –ಪಿಟಿಐ ಚಿತ್ರ

ಪರಿಷ್ಕೃತ ಲಾಂಛನ

ಸಾಹಿತ್ಯ ಸಮ್ಮೇಳನ ಲಾಂಛನದಲ್ಲಿ ಮಾರ್ಪಾಡು

ಹಾವೇರಿ: 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಲಾಂಛನದಲ್ಲಿದ್ದ ಕನಕದಾಸ, ಸರ್ವಜ್ಞ, ಶಿಶುನಾಳ ಷರೀಫ ಮುಂತಾದ ಮಹನೀಯರ ಭಾವಚಿತ್ರಗಳನ್ನು ಕೈಬಿಟ್ಟು, ಕೆಲ ಮಾರ್ಪಾಡುಗಳೊಂದಿಗೆ ಪರಿಷ್ಕೃತ ಲಾಂಛನವನ್ನು ಕಸಾಪ ಅಧ್ಯಕ್ಷ ಮಹೇಶ ಜೋಶಿ ಬುಧವಾರ ಬಿಡುಗಡೆ ಮಾಡಿದರು.

ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಮಹೇಶ ಜೋಶಿ, ಅ.29ರಂದು ಹಾವೇರಿಯಲ್ಲಿ ಲಾಂಛನ ಬಿಡುಗಡೆ ಮಾಡಿದ ಬಳಿಕ, ಸಂತ–ಕವಿ–ಸ್ವಾತಂತ್ರ್ಯ ಹೋರಾಟಗಾರರ ಮತ್ತಷ್ಟು ಭಾವಚಿತ್ರಗಳನ್ನು ಸೇರ್ಪಡೆ ಮಾಡುವಂತೆ ಬೇಡಿಕೆಗಳು ಬಂದಿದ್ದವು. ಎಲ್ಲರನ್ನೂ ಲಾಂಛನದಲ್ಲಿ ಸೇರಿಸಲು ಸಾಧ್ಯವಾಗದ ಕಾರಣ, ಹಾವೇರಿ ಜಿಲ್ಲೆಯನ್ನು ಪ್ರತಿನಿಧಿಸುವ ಮಹನೀಯರ ಚಿತ್ರಗಳನ್ನು ಕೈಬಿಟ್ಟು, ಜಿಲ್ಲೆಯ ಐತಿಹಾಸಿಕ ಸ್ಥಳ, ಸಾಂಸ್ಕೃತಿಕ ಅಸ್ಮಿತೆ ಬಿಂಬಿಸಿ ಮಾರ್ಪಾಡು ಮಾಡಲಾಗಿದೆ. ನಗರದ ಹೊರವಲಯದ ಅಜ್ಜಯ್ಯನ ದೇವಸ್ಥಾನ ಹತ್ತಿರದ 80 ಎಕರೆಯಲ್ಲಿ ಸಮ್ಮೇಳನಕ್ಕೆ ಸ್ಥಳ ನಿಗದಿಪಡಿಸಲಾಗಿದೆ' ಎಂದರು.

ಲೈಂಗಿಕ ಅಪರಾಧ: 43 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಮೈಸೂರು: 9 ವರ್ಷದ ಬಾಲಕಿ ಮೇಲೆ ಲೈಂಗಿಕ ಅಪರಾಧ ಎಸಗಿದ ಕಾರ್ಮಿಕ ಎಂ.ಡಿ.ನಾಜೀಮ್ (33) ಎಂಬುವವನಿಗೆ ಇಲ್ಲಿನ ಪೋಕ್ಸೊ ವಿಶೇಷ ನ್ಯಾಯಾಲಯ 43 ವರ್ಷಗಳ ಕಠಿಣ ಶಿಕ್ಷೆ ವಿಧಿಸಿದೆ. ಪೋಕ್ಸೊ ಅಡಿಯಲ್ಲಿ ದೀರ್ಘಾವಧಿ ಶಿಕ್ಷೆ ವಿಧಿಸಿದ ದೇಶದ ಮೊದಲ ಪ್ರಕರಣ ಇದಾಗಿದೆ.

ಬಿಹಾರ ಮೂಲದ ನಾಜೀಮ್ ತಿ.ನರಸೀಪುರ ರಸ್ತೆಯಲ್ಲಿರುವ ನಟರೊಬ್ಬರ ತೋಟದ ಮನೆಯಲ್ಲಿ ಕುದುರೆ ಲಾಳ ಕಟ್ಟುವ ಕೆಲಸ ಮಾಡುತ್ತಿದ್ದ. 2021ರಲ್ಲಿ ಬಾಲಕಿಗೆ ಅಶ್ಲೀಲ ವಿಡಿಯೊಗಳನ್ನು ತೋರಿಸಿ ಲೈಂಗಿಕ ಅಪರಾಧ ಎಸಗಿದ್ದ. ಆ ಬಗ್ಗೆ ಯಾರಿಗಾದರೂ ತಿಳಿಸಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದ. ಸಂತ್ರಸ್ತ ಬಾಲಕಿಯು ಪೋಷಕರಿಗೆ 2021ರ ಸೆ.15ರಂದು ಮಾಹಿತಿ ನೀಡಿದ್ದಳು. ತೋಟದ ಮನೆ ವ್ಯವಸ್ಥಾಪಕ ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡಿದ್ದ ಮೈಸೂರಿನ ಮಹಿಳಾ ಠಾಣೆ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಕುಕ್ಕರ್ ಸ್ಫೋಟ ನಡೆದ ಸ್ಥಳ ಪರಿಶೀಲಿಸಿದ ಗೃಹ ಸಚಿವ

ಎನ್‌ಐಎಗೆ ಶೀಘ್ರ ಹಸ್ತಾಂತರ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಸ್ಫೋಟ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ವಹಿಸುವ ಬಗ್ಗೆ ಒಂದೆರಡು ದಿನಗಳಲ್ಲಿ ನಿರ್ಣಯ ಆಗಲಿದೆ' ಎಂದು ಗೃಹಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

'ಮಂಗಳೂರಿನಲ್ಲೂ ಎನ್‌ಐಎ ಘಟಕ ಸ್ಥಾಪನೆಯ ಅಗತ್ಯ ಇದೆ ಎಂಬುದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಇದಕ್ಕೆ ಕೇಂದ್ರ ಸಕಾರಾತ್ಮಕವಾಗಿ ಸ್ಪಂದಿಸಿದೆ' ಎಂದು ಸುದ್ದಿ ಗೋಷ್ಠಿಯಲ್ಲಿ ಅವರು ತಿಳಿಸಿದರು.

'ಪ್ರಕರಣದ ತನಿಖೆಯಲ್ಲಿ ಎನ್‌ಐಎ ಸೇರಿದಂತೆ ಕೇಂದ್ರದ ಪ್ರಮುಖ ತನಿಖಾ ಏಜೆನ್ಸಿಗಳು ನಮಗೆ ಸಹಕಾರ ನೀಡಿವೆ. ಔಪಚಾರಿಕವಾಗಿ ಈ ಪ್ರಕರಣ ಎನ್‌ಐಎಗೆ ಹಸ್ತಾಂತರ ಆಗುವವರೆಗೂ ನಮ್ಮ ಪೊಲೀಸರೇ ತನಿಖೆ ಮುಂದುವರಿಸಲಿದ್ದಾರೆ. ನಮ್ಮವರ ತಂಡವು ಕೊಯಮತ್ತೂರು ಹಾಗೂ ಕೊಚ್ಚಿಯಲ್ಲಿ ತನಿಖಾ ಕಾರ್ಯಾಚರಣೆ ಮುಂದುವರಿಸಿದೆ. ನೆರೆರಾಜ್ಯಗಳ ಡಿಜಿಪಿಗಳ ಜೊತೆಗೂ ಸಂಪರ್ಕದಲ್ಲಿದ್ದೇನೆ' ಎಂದು ಡಿಜಿಪಿ ಪ್ರವೀಣ್ ಸೂದ್ ತಿಳಿಸಿದರು.

ಸರ್ಕಾರದಿಂದ ಚಿಕಿತ್ಸಾ ವೆಚ್ಚ: 'ಸ್ಫೋಟದಿಂದ ಗಾಯಗೊಂಡಿರುವ ಆಟೊರಿಕ್ಷಾ ಚಾಲಕ ಪುರುಷೋತ್ತಮ ಪೂಜಾರಿ ಅವರ ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸಲಿದೆ. ಅವರ ಕುಟುಂಬಕ್ಕೆ ಆರ್ಥಿಕ ಸಹಾಯ ಮಾಡುವ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಜೊತೆ ಚರ್ಚಿಸಿ ತೀರ್ಮಾನಿಸುತ್ತೇವೆ' ಎಂದು ಆರಗ ತಿಳಿಸಿದರು.

'8 ತಜ್ಞ ವೈದ್ಯರಿಂದ ಆರೋಪಿಗೆ ಚಿಕಿತ್ಸೆ': 'ಆರೋಪಿ ಶಾರಿಕ್ ಚೇತರಿಸಿಕೊಂಡರೆ ಅನೇಕ ಮಾಹಿತಿ ಲಭಿಸುವ ನಿರೀಕ್ಷೆ ಇದೆ. ಹೀಗಾಗಿ ಎಂಟು ತಜ್ಞ ವೈದ್ಯರ ತಂಡದಿಂದ ಆತನಿಗೆ ಚಿಕಿತ್ಸೆ ಕೊಡಿಸಲಾಗುತ್ತಿದೆ' ಎಂದು ಗೃಹಸಚಿವರು ಮಾಹಿತಿ ನೀಡಿದರು.

ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳ ಬೆಳೆಗಾರರಿಗೆ ಮಾತ್ರ ಪ್ರೋತ್ಸಾಹಧನ

ಭತ್ತ ಖರೀದಿ: ರೈತರ ನಡುವೆ ಸರ್ಕಾರದ ತಾರತಮ್ಯ!

• ವೆಂಕಟೇಶ ಜಿ.ಎಚ್.

ಪ್ರಜಾವಾಣಿ ವಿಶೇಷ

ಶಿವಮೊಗ್ಗ: ಕನಿಷ್ಠ ಬೆಂಬಲಬೆಲೆ ಯೋಜನೆಯಡಿ ಭತ್ತ ಖರೀದಿಸುವ ವೇಳೆ ರಾಜ್ಯದ ಉಡುಪಿ, ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ರೈತರಿಗೆ ಮಾತ್ರ ರಾಜ್ಯ ಸರ್ಕಾರ ಪ್ರತಿ ಕ್ವಿಂಟಲ್‌ಗೆ ₹ 500 ಪ್ರೋತ್ಸಾಹ ಧನ (ಎಕ್ಸ್‌ಗ್ರೇಷಿಯಾ) ನಿಗದಿ ಮಾಡಿದೆ. ಇದು ಉಳಿದ ಜಿಲ್ಲೆಗಳ ಭತ್ತ ಬೆಳೆಗಾರರ ಆಕ್ರೋಶಕ್ಕೆ ಕಾರಣವಾಗಿದೆ.

ಪಡಿತರ ವ್ಯವಸ್ಥೆಯಡಿ ಕುಚಲಕ್ಕಿ ವಿತರಿಸಲು ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಬೆಳೆಯಲಾಗುವ ಕಜೆ, ಜಯ, ಜ್ಯೋತಿ, ಪಂಚಮುಖಿ, ಸಹ್ಯಾದ್ರಿ, ಉಮಾ, ಅಭಿಲಾಷ ಮತ್ತಿತರ ತಳಿಯ ಭತ್ತ ಖರೀದಿಸಲಾಗುತ್ತಿದ್ದು, ನವೆಂಬರ್ 21ರಿಂದ ರೈತರ ನೋಂದಣಿ ಆರಂಭವಾಗಿದೆ.

ಹೀಗೆ ಖರೀದಿಸಲಾಗುವ ಭತ್ತಕ್ಕೆ (ಸಾಮಾನ್ಯ) ಪ್ರತಿ ಕ್ವಿಂಟಲ್‌ಗೆ ₹ 2,040 ಹಾಗೂ ಗ್ರೇಡ್ 'ಎ' ಭತ್ತಕ್ಕೆ ₹ 2,060 ಬೆಂಬಲಬೆಲೆ ನಿಗದಿಪಡಿಸಲಾಗಿದೆ. ಪ್ರತಿ ರೈತರಿಂದ ಎಕರೆಗೆ 16 ಕ್ವಿಂಟಲ್‌ನಂತೆ ಗರಿಷ್ಠ 40 ಕ್ವಿಂಟಲ್‌ಗೆ ಮಿತಿಗೊಳಿಸಿ ಖರೀದಿ ನಡೆಯುತ್ತಿದೆ. ಹೀಗೆ ಖರೀದಿ ಆದ ಪ್ರತಿ ಕ್ವಿಂಟಲ್ ಭತ್ತಕ್ಕೆ ಹೆಚ್ಚುವರಿಯಾಗಿ ₹ 500 ಪ್ರೋತ್ಸಾಹಧನ ನಿಗದಿಪಡಿಸಲಾಗಿದೆ.

₹100 ಕೋಟಿ ಬಿಡುಗಡೆ: ಕರಾವಳಿಯ ಮೂರು ಜಿಲ್ಲೆಗಳ ರೈತರಿಗೆ ಪ್ರೋತ್ಸಾಹ ಧನ ನೀಡಲು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರ ಮನವಿ ಪರಿಗಣಿಸಿ, ಆಹಾರ ಇಲಾಖೆ ಸಲ್ಲಿಸಿದ್ದ ಬೇಡಿಕೆ ಆಧರಿಸಿ ಹಣಕಾಸು ಸಚಿವಾಲಯ ₹ 100 ಕೋಟಿ ಬಿಡುಗಡೆ ಮಾಡಿದೆ.

'ಕುಚಲಕ್ಕಿಯ ಜ್ಯೋತಿ ಮತ್ತಿತರ ತಳಿಯ ಭತ್ತವನ್ನು ಶಿವಮೊಗ್ಗ, ಚಿಕ್ಕಮಗಳೂರು ಮಾತ್ರವಲ್ಲದೇ ಹಾವೇರಿ, ಬೆಳಗಾವಿ, ಮೈಸೂರು ಹಾಗೂ ಚಾಮರಾಜ ನಗರ ಜಿಲ್ಲೆಗಳಲ್ಲೂ ಬೆಳೆಯಲಾಗುತ್ತದೆ. ಪ್ರೋತ್ಸಾಹ ಧನವನ್ನು ಮೂರು ಜಿಲ್ಲೆಗಳಿಗೆ ಸೀಮಿತಗೊಳಿಸಿರುವುದು ಸರಿಯಲ್ಲ' ಎಂದು ಭದ್ರಾವತಿ ತಾಲ್ಲೂಕು ಹನುಮಂತಾಪುರದ ರೈತ ಎಂ.ಪಿ.ಸುಮಂತ್ ಹೇಳುತ್ತಾರೆ.

'ಕೇರಳ ಮಾದರಿ ಅನುಸರಿಸಲಿ'



ಎಚ್‌.ಆರ್. ಬಸವರಾಜಪ್ಪ

'ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ರೈತರಲ್ಲಿ ತಾರತಮ್ಯ ಮಾಡಲಾಗಿದೆ. ಕರಾವಳಿ ಕರ್ನಾಟಕದವರು ಮಾತ್ರ ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತಂದಿಲ್ಲ. ಮೂರು ಜಿಲ್ಲೆಗಳಿಗೆ ಮಾತ್ರ ಪ್ರೋತ್ಸಾಹಧನ ಕೊಟ್ಟಿರುವುದು ಉಳಿದವರಿಗೆ ಮಾಡಿದ ದೊಡ್ಡ ದ್ರೋಹ' ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಎಚ್.ಆರ್. ಬಸವರಾಜಪ್ಪ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಕೇರಳದ ಎಲ್ಲ ಭತ್ತ ಬೆಳೆಗಾರರಿಗೂ ಪ್ರತಿ ಕ್ವಿಂಟಲ್‌ಗೆ ₹ 500 ಪ್ರೋತ್ಸಾಹಧನ ನೀಡಲಾಗುತ್ತಿದೆ. ಅದೇ ಮಾದರಿಯನ್ನು ಕರ್ನಾಟಕದಲ್ಲೂ ಅನುಸರಿಸಲಿ. ಕರಾವಳಿ ಹೊರತಾಗಿ ರಾಜ್ಯದ ಉಳಿದ ಭಾಗದಲ್ಲಿ ಬೆಳೆಯಲಾಗುವ ಭತ್ತವನ್ನೂ ಪಡಿತರ ವ್ಯವಸ್ಥೆಯಡಿ ವಿತರಿಸಲಾಗುತ್ತದೆ. ಅದರಲ್ಲಿ ಏನೂ ವ್ಯತ್ಯಾಸವಿಲ್ಲ' ಎಂದು ಅವರು ಹೇಳುತ್ತಾರೆ.

ಸದ್ಯ ಮೂರು ಜಿಲ್ಲೆಗಳಿಗೆ ಮಾತ್ರ ಎಕ್ಸ್‌ಗ್ರೇಷಿಯಾ ಕೊಡಲು ಆದೇಶ ಆಗಿದೆ. ಮುಂದಿನ ದಿನಗಳಲ್ಲಿ ನಮ್ಮ ಭಾಗದ ಜಿಲ್ಲೆಗಳ ರೈತರಿಗೂ ಈ ಯೋಜನೆ ಅನ್ವಯ ಆಗಬಹುದು.

ಟಿ.ಸಿ.ಪೂರ್ಣಿಮಾ,
ಜಂಟಿ ನಿರ್ದೇಶಕಿ, ಕೃಷಿ ಇಲಾಖೆ, ಶಿವಮೊಗ್ಗ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಗುರುವಾರದ ಉಷ್ಣಾಂಶ 26° ಗರಿಷ್ಠ 19° ಕನಿಷ್ಠ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ. ತುಂತುರು ಮಳೆ ಸಾಧ್ಯತೆ.

ಮುನ್ಸೂಚನೆ — ಶುಕ್ರವಾರ 27° 19° | ಶನಿವಾರ 28° 19° | ಭಾನುವಾರ 28° 18°

ಬೆಂಗಳೂರಿನಲ್ಲಿ ಜಿ–20 ಸಭೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತವು ಜಿ–20 ಗುಂಪಿನ ಅಧ್ಯಕ್ಷತೆ ವಹಿಸಿಕೊಂಡ ನಂತರ ನಡೆಯಲಿರುವ ಸಭೆಗಳ ಪೈಕಿ ಎರಡು ಸಭೆಗಳು ಬೆಂಗಳೂರಿನಲ್ಲಿ ನಿಗದಿಯಾಗಿವೆ.

ಹಣಕಾಸು ಮತ್ತು ಕೇಂದ್ರೀಯ ಬ್ಯಾಂಕ್‌ಗಳ ಪ್ರತಿನಿಧಿಗಳ ಸಭೆ ಡಿಸೆಂಬರ್ 13 ರಿಂದ 15ರವರೆಗೆ ಹಾಗೂ ಜಿ-20 ಚೌಕಟ್ಟು ನಿರೂಪಣೆಗೆ ಸಂಬಂಧಿಸಿದ ತಂಡದ ಸಭೆಯು ಡಿಸೆಂಬರ್ 16 ಮತ್ತು 17ರಂದು ನಡೆಯಲಿದೆ.

ಭಾರತವು ಡಿಸೆಂಬರ್ 1 ರಂದು ಗುಂಪಿನ ಅಧ್ಯಕ್ಷತೆ ವಹಿಸಿಕೊಳ್ಳಲಿದೆ. ನವೆಂಬರ್ 16ರಂದು ಇಂಡೊನೇಷ್ಯಾ ಅಧ್ಯಕ್ಷ ಜೊಕೊ ವಿಡೊಡೊ ಅವರು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಧ್ಯಕ್ಷತೆ ಹಸ್ತಾಂತರಿಸಿದ್ದರು.

ಡೆಂಗಿ: ತಿಂಗಳಲ್ಲಿ ಸಾವಿರ ಪ್ರಕರಣ

1.73 ಲಕ್ಷಕ್ಕೂ ಅಧಿಕ ಮಂದಿಯಲ್ಲಿ ಡೆಂಗಿ ಶಂಕೆ ● ಬೆಂಗಳೂರಿನಲ್ಲಿ ಉಲ್ಬಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹವಾಮಾನ ವೈಪರೀತ್ಯದಿಂದ ರಾಜ್ಯದಲ್ಲಿ ಡೆಂಗಿ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆ ಕಂಡಿದ್ದು, ಕಳೆದ ಒಂದು ತಿಂಗಳಲ್ಲಿ 1,076 ಮಂದಿಯಲ್ಲಿ ಈ ಜ್ವರ ದೃಢಪಟ್ಟಿದೆ.

ರಾಜ್ಯದಲ್ಲಿ ಈ ವರ್ಷ 1.73 ಲಕ್ಷಕ್ಕೂ ಅಧಿಕ ಡೆಂಗಿ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 71 ಸಾವಿರಕ್ಕೂ ಅಧಿಕ ಮಂದಿಯ ರಕ್ತ ಪರೀಕ್ಷೆ ನಡೆಸಲಾಗಿದೆ. ಈವರೆಗೆ ವರದಿಯಾದ ಒಟ್ಟು ಡೆಂಗಿ ಪ್ರಕರಣಗಳ ಸಂಖ್ಯೆ 8,184ಕ್ಕೆ ಏರಿಕೆಯಾಗಿದೆ. ಡೆಂಗಿ ಪೀಡಿತರಲ್ಲಿ ನಾಲ್ವರು ಮರಣ ಹೊಂದಿದ್ದಾರೆ. ಕಳೆದ ವರ್ಷ 7,189 ಡೆಂಗಿ ಪ್ರಕರಣಗಳು ದೃಢಪಟ್ಟಿದ್ದವು. ಜ್ವರ ಪೀಡಿತರಲ್ಲಿ ಐವರು ಮೃತಪಟ್ಟಿದ್ದರು.

ಈ ವರ್ಷ ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ವರದಿಯಾಗಿವೆ. ಬಿಬಿಎಂಪಿ ವ್ಯಾಪ್ತಿಯಲ್ಲಿಯೇ 60,408 ಮಂದಿಯಲ್ಲಿ ಡೆಂಗಿ ಶಂಕೆ ವ್ಯಕ್ತವಾಗಿದ್ದು, 1,580 ಮಂದಿಯಲ್ಲಿ ಈ ಜ್ವರ ದೃಢಪಟ್ಟಿದೆ. ಮೈಸೂರಿನಲ್ಲಿ 694, ಉಡುಪಿಯಲ್ಲಿ 487, ವಿಜಯಪುರದಲ್ಲಿ 404, ಚಿತ್ರದುರ್ಗದಲ್ಲಿ 386, ಕಲಬುರಗಿಯಲ್ಲಿ 358, ದಕ್ಷಿಣ ಕನ್ನಡದಲ್ಲಿ 353 ಹಾಗೂ ಬೆಳಗಾವಿಯಲ್ಲಿ 302 ಡೆಂಗಿ ಪ್ರಕರಣಗಳು ದೃಢಪಟ್ಟಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 300ಕ್ಕಿಂತ ಕಡಿಮೆ ಇವೆ.

29 ಜಿಲ್ಲೆಗಳಲ್ಲಿ ಚಿಕೂನ್‌ಗುನ್ಯಾ ಪ್ರಕರಣಗಳು ಪತ್ತೆಯಾಗಿವೆ. 57 ಸಾವಿರಕ್ಕೂ ಅಧಿಕ ಮಂದಿ ಚಿಕೂನ್‌ಗುನ್ಯಾ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 30 ಸಾವಿರಕ್ಕೂ ಅಧಿಕ ಮಂದಿಯ ರಕ್ತ ಪರೀಕ್ಷೆ ನಡೆಸಲಾಗಿದೆ. ಅವರಲ್ಲಿ 1,944 ಮಂದಿ ಈ ಜ್ವರಕ್ಕೆ ಒಳಗಾಗಿರುವುದು ದೃಢಪಟ್ಟಿದೆ.

ಸಮರ್ಪಕ ವಿಲೇವಾರಿ ಅಗತ್ಯ: ‘ಹವಾಮಾನ ಬದಲಾವಣೆಯಿಂದಾಗಿ ರಾಜ್ಯದಲ್ಲಿ ಹೆಚ್ಚಿನವರು ವಿವಿಧ ಜ್ವರಗಳಿಗೆ ಒಳಪಡುತ್ತಿದ್ದಾರೆ. ಸೊಳ್ಳೆಗಳ ಕಡಿತದಿಂದ ಕಾಣಿಸಿಕೊಳ್ಳುವ ಡೆಂಗಿ, ಚಿಕೂನ್‌ಗುನ್ಯಾ ಪ್ರಕರಣಗಳು ಹೆಚ್ಚಳವಾಗುತ್ತಿವೆ. ಮನೆಯ ಸುತ್ತಮುತ್ತಲಿನ ಹೊರಾಂಗಣ ಪ್ರದೇಶಗಳು, ಕಟ್ಟಡ ಕಾಮಗಾರಿ ನಡೆಯುವ ಸ್ಥಳಗಳು, ಖಾಲಿ ನಿವೇಶನ ಸೇರಿ ವಿವಿಧೆಡೆ ಘನತ್ಯಾಜ್ಯ ವಸ್ತುಗಳನ್ನು ಸಮರ್ಪಕವಾಗಿ ವಿಲೇವಾರಿ ಮಾಡಬೇಕು. ಸ್ವಚ್ಛತೆ ಸೇರಿ ವಿವಿಧ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು’ ಎಂದು ಆರೋಗ್ಯ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

ಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕೆ ಸಲಹೆ ನೀಡುವಂತೆ ಆರೋಗ್ಯ ಇಲಾಖೆಯು ಕೋವಿಡ್ ತಾಂತ್ರಿಕ ಸಲಹಾ ಸಮಿತಿಯನ್ನು ಈ ಹಿಂದೆ ಕೋರಿತ್ತು. ಇದಕ್ಕೆ ಪ್ರತಿಕ್ರಿಯಿಸಿರುವ ಸಮಿತಿ, ಈಗಾಗಲೇ ದೇಶದಲ್ಲಿ ಜಾರಿಯಲ್ಲಿರುವ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನು ಹೊರತುಪಡಿಸಿ, ಡೆಂಗಿ, ಚಿಕೂನ್‌ಗುನ್ಯಾ ಹಾಗೂ ಮಿದುಳು ಜ್ವರ ನಿಯಂತ್ರಣದ ಬಗ್ಗೆ ಸಲಹೆ ನೀಡಲು ಸಿದ್ಧವಿರುವುದಾಗಿ ಪತ್ರದಲ್ಲಿ ತಿಳಿಸಿತ್ತು. ಆದರೆ, ಇಲಾಖೆಯಿಂದ ಈವರೆಗೂ ಯಾವುದೇ ನಿರ್ದೇಶನ ಬಂದಿಲ್ಲ ಎಂದು ಸಮಿತಿಯ ಸದಸ್ಯರೊಬ್ಬರು ತಿಳಿಸಿದರು.

ಸುಧಾ, ಮಯೂರ ಓದಿರಿ

ಬ್ಯಾಂಕ್ ಭರವಸೆ: ಹೂಡಿಕೆದಾರರಿಂದ ಕ್ಲೇಮ್ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಣ್ವ ಸಮೂಹ ಸಂಸ್ಥೆಯ ಕಣ್ವ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ, ಹೂಡಿಕೆದಾರರು ಹಾಗೂ ಷೇರುದಾರರಿಗೆ ಹಣ ವಾಪಸ್ ನೀಡುವ ಭರವಸೆ ನೀಡಿದ್ದು, ಬ್ಯಾಂಕ್ ಗ್ರಾಹಕರು ಕ್ಲೇಂ ಅರ್ಜಿ ಸಲ್ಲಿಸಲು ಮುಂದಾಗಿದ್ದಾರೆ.

ಬ್ಯಾಂಕ್ ಎದುರು ಕಳೆದ 15 ದಿನಗಳಿಂದಲೂ ಗ್ರಾಹಕರು ಕಾಣಿಸಿಕೊಳ್ಳುತ್ತಿದ್ದಾರೆ. ಬುಧವಾರವೂ ಗ್ರಾಹಕರ ಸರದಿ ಕಂಡುಬಂತು.

‘ಇದೊಂದು ಸುಳ್ಳು ಭರವಸೆ ಅಷ್ಟೆ’ ಎಂದು ಗುರು ರಾಘವೇಂದ್ರ ಕೋ–ಆಪರೇಟಿವ್ ಬ್ಯಾಂಕ್ ಷೇರುದಾರರು ಮತ್ತು ಠೇವಣಿದಾರರ ಹಿತರಕ್ಷಣಾ ವೇದಿಕೆ ಮಹಾಪೋಷಕ ಶಂಕರ್ ಗುಹಾ ದ್ವಾರಕಾನಾಥ್ ಬೆಳ್ಳೂರು ತಿಳಿಸಿದ್ದಾರೆ.

ವಂಚನೆ ಪ್ರಕರಣದ ಸಂಬಂಧ ಬಸವೇಶ್ವರ ನಗರ ಠಾಣೆಯಲ್ಲಿ ದೂರು ದಾಖಲಾಗಿತ್ತು. ನೂರಾರು ಕೋಟಿ ರೂಪಾಯಿ ವಂಚನೆ ಆರೋಪ ಕೇಳಿಬಂದಿತ್ತು. ವಂಚನೆ ಸಂಬಂಧ ದೂರು ಆಧರಿಸಿ ಬ್ಯಾಂಕ್‌ನ ಹಲವರನ್ನು ಪೊಲೀಸರು ಬಂಧಿಸಿದ್ದರು.

ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಸೇರಿ ಕೆಲವು ಸಹಕಾರ ಬ್ಯಾಂಕ್‌ಗಳಲ್ಲಿ ಕೋಟ್ಯಂತರ ರೂಪಾಯಿ ಅವ್ಯವಹಾರ ನಡೆದಿದ್ದು, ಈ ಬ್ಯಾಂಕ್‌ಗಳ ಷೇರುದಾರರಿಗೆ ನ್ಯಾಯ ಕಲ್ಪಿಸಲು ಆಗ್ರಹಿಸಿ ದೆಹಲಿ ಹಾಗೂ ನಗರದಲ್ಲಿ ಪ್ರತಿಭಟನೆಗಳು ನಡೆದಿದ್ದವು. ಸಿಬಿಐ ತನಿಖೆಗೂ ಆಗ್ರಹಿಸಲಾಗಿತ್ತು.

ಶ್ಯಾಮಲಾಗೆ ‘ಹಾಮಾನಾ ಕನ್ನಡ ಜಾಗೃತಿ ಪುಸ್ತಕ ಬಹುಮಾನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಗೆಳೆಯರ ಬಳಗ ನೀಡುವ ‘ಹಾಮಾನಾ ಕನ್ನಡ ಜಾಗೃತಿ ಪುಸ್ತಕ ಬಹುಮಾನ’ಕ್ಕೆ ಗಾಯಕಿ ಶ್ಯಾಮಲಾ ಪ್ರಕಾಶ್ ಅವರ ‘ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸಂಗೀತದ ಸಾಹಚರ್ಯ’ ಗ್ರಂಥ ಆಯ್ಕೆಯಾಗಿದೆ.

ಬಹುಮಾನವು ₹4 ಸಾವಿರ ನಗದು ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ. ಪತ್ರಕರ್ತ ಶಶಿಧರ ಹಾಲಾಡಿ ಅವರ ‘ಚಿತ್ತ ಹರಿದತ್ತ’ ಅಂಕಣ ಬರಹ ಮತ್ತು ಜ್ಞಾನಶ್ರೀ (ಲಕ್ಷ್ಮಿಕಾಂತಮ್ಮ) ಅವರ ‘ಭವ್ಯ ಭಾರತದ ವೀರ ರಾಣಿಯರು’ ಸಂಕಲನ ಸಮಾಧಾನಕರ ಬಹುಮಾನಕ್ಕೆ ಭಾಜನವಾಗಿವೆ. ಇದು ₹1,500 ನಗದು ಒಳಗೊಂಡಿದೆ.

ಸುಳ್ಯ ಶಾಲೆಯ ಮಕ್ಕಳ ಬರಹ ಸಂಕಲನ ‘ಅಪ್ರಕಾಶಿತ ಸ್ವಾತಂತ್ರ್ಯ ಹೋರಾಟಗಾರರ ಸ್ಮರಣೆ’ ಕೃತಿಯನ್ನು ₹1 ಸಾವಿರ ನಗದು ಒಳಗೊಂಡ ಪ್ರೋತ್ಸಾಹ ಬಹುಮಾನಕ್ಕೆ ಆಯ್ಕೆ ಮಾಡಲಾಗಿದೆ.

ಡಿ.12ರಂದು ಶೇಷಾದ್ರಿಪುರ ಕಾಲೇಜು ಸಭಾಂಗಣದಲ್ಲಿ ಬಳಗದ ವಾರ್ಷಿಕ ಪ್ರಶಸ್ತಿ ಪ್ರದಾನ, ಕನ್ನಡ ಮಾಧ್ಯಮದ ಮಕ್ಕಳಿಗೆ ಪುರಸ್ಕಾರ ನೀಡುವ ಸಮಾರಂಭ ಹಮ್ಮಿಕೊಳ್ಳಲಾಗಿದೆ. ‘ಹಾಮಾನಾ ಕನ್ನಡ ಜಾಗೃತಿ ಪುಸ್ತಕ ಬಹುಮಾನ’ವನ್ನೂ ಅದೇ ಸಮಾರಂಭದಲ್ಲಿ ಕೊಡಲಾಗುವುದು.

ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ ಹಾಗೂ ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ ಅವರು ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಎನ್.ಆರ್ ಚೌಕ, ಬೆಂಗಳೂರು–560002.

ಸಂಖ್ಯೆ: ಬಿಬಿಎಂಪಿ/ಜಆ/ಘನಿ/1935/2022–23 ದಿನಾಂಕ: 19.11.2022

ಪತ್ರಿಕಾ ಪ್ರಕಟಣೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸ್ವಚ್ಛ ಭಾರತ ಅಭಿಯಾನದಡಿ ಘನತ್ಯಾಜ್ಯ ನಿರ್ವಹಣಾ ನಿಯಮಗಳು–2016ಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸಾರ್ವಜನಿಕರ ಸಹಭಾಗಿತ್ವಕ್ಕೆ ಕರೆಕೊಟ್ಟು “ನಮ್ಮ ನಡೆ, ಸ್ವಚ್ಛತೆಯ ಕಡೆ” ಎಂಬ ಗುರಿಯೊಂದಿಗೆ ಹಾಗೂ “ನಮ್ಮ ಕಸ, ನಮ್ಮ ಜವಾಬ್ದಾರಿ” ಎಂಬ ಧ್ಯೇಯ ವಾಕ್ಯದೊಂದಿಗೆ, ಘನತ್ಯಾಜ್ಯ ನಿರ್ವಹಣೆಯ ಕುರಿತು (1) ಸ್ವಚ್ಛ ಟೆಕ್ನಾಲಜಿ ಚಾಲೆಂಜ್ (Social Inclusion, Zero Dump(SWM), Plastic Waste Management, Transparency(Digital Enablement) (2) ಉತ್ತಮ ಆವಿಷ್ಕಾರ & ಅಭ್ಯಾಸಗಳು, 3. ಮಾಹಿತಿ ಸಂವಹನ & ಶಿಕ್ಷಣ ಟೂಲ್‌ಕಿಟ್(ಜಿಂಗಲ್ಸ್, ಮೂವಿ ಕ್ಲಿಪ್ಸ್, ಪೋಸ್ಟರ್, ಮ್ಯೂರಲ್ಸ್ ಮತ್ತು ಕಲಾ ಜಾಥಾ)”ಗಳ ಸ್ಪರ್ಧಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ವಿವಿಧ ಸಂಘ ಸಂಸ್ಥೆಗಳು ಹಾಗೂ ಸ್ಟಾರ್ಟಅಪ್‌ಗಳು, ನಾಗರೀಕರು, ಸಮುದಾಯಗಳು, ನಾಗರೀಕರ ಗುಂಪುಗಳು, ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಂದ ಮೇಲಿನ ಮೂರು ವಿಭಾಗಗಳಡಿ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದ್ದು, ಈ ಕೆಳಗಿನ ಲಿಂಕ್ ಮೂಲಕ ಪ್ರಸ್ತಾವನೆಗಳನ್ನು ಸಲ್ಲಿಸುವುದು https://docs.google.com/forms/d/e/1FAIpQLSf8Oo5eWqKfZKZyORvNVmM91oHUgVhO4WkZInl-Yo6p36S_qw/viewform?vc=0&c=0&w=1&flr=0 ಮತ್ತು ಭೌತಿಕ ಪ್ರತಿಯನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ, 1ನೇ ಮಹಡಿ, ಯು.ಎನ್.ಐ ಬಿಲ್ಡಿಂಗ್, ಲಿಡ್ಕರ್ ಕಛೇರಿ ಪಕ್ಕ, ವಸಂತ ನಗರ, ಬೆಂಗಳೂರು ಇಲ್ಲಿ ದಿನಾಂಕ: 28.11.2022, ಸಂಜೆ: 5.00 ಘಂಟೆಯೊಳಗಾಗಿ ಸಲ್ಲಿಸುವುದು. ಅಪ್ರಸ್ತುತ ಪ್ರಸ್ತಾವನೆಗಳನ್ನು ತಿರಸ್ಕರಿಸುವ ಹಕ್ಕನ್ನು ಬಿಬಿಎಂಪಿ ಹೊಂದಿರುತ್ತದೆ ಹಾಗೂ ಸಮಿತಿಯ ನಿರ್ಣಯವು ಅಂತಿಮವಾಗಿರುತ್ತದೆ. ವಿವರಗಳು www.bbmp.gov.in ನಲ್ಲಿ ಲಭ್ಯವಿದೆ.

ಸಹಿ/–
ಜಂಟಿ ಆಯುಕ್ತರು (ಘನಿ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮೂಲದಲ್ಲಿಯೇ ತ್ಯಾಜ್ಯದ ವಿಂಗಡಣೆ ಮತ್ತು ಸಂಸ್ಕರಣೆಯೇ ಸ್ವಚ್ಛ ಹಾಗೂ ಹಸಿರು ಬೆಂಗಳೂರು ನಗರವನ್ನಾಗಿಸಲು ಪರಿಹಾರ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020.

ಸಂ: ಬೆಂಅಪ್ರಾ/ನಯೋಸ/ಸಿಎಲ್‌ಯು–228/1942/2022–23 ದಿ: 22.11.2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–ಎ ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ.ನಂ	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ–2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಹೆಚ್.ಆರ್. ಚಂದ್ರಶೇಖರ್ # 12/1, ಕೆನರಾ ಬ್ಯಾಂಕ್ ಬಿಲ್ಡಿಂಗ್, ಹೆಬ್ಬಾಳ, ಬೆಂಗಳೂರು–560024	ಬೆಂಗಳೂರು ಉತ್ತರ	ಯಲಹಂಕ	ಗಂಟಿಗಾನ ಹಳ್ಳಿ	267, 269/1, 269/2, 269/3, 269/4, 270/4, 270/5, 283/2 & 375/3 (ಪಿ)	08 ಎಕರೆ –22.25 ಗುಂಟೆ	ವ್ಯವಸಾಯ	ವಸತಿ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನನ್ನು ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಮಾಡುವುದರಿಂದ ಸದರಿ ಜಮೀನಿನ ಸುತ್ತಮುತ್ತಲಿನ ಪ್ರದೇಶದಲ್ಲಿ ಈಗಾಗಲೇ ಮಿಶ್ರ ಅಭಿವೃದ್ಧಿ ಬಂದಿರುವುದರಿಂದ ವಾಸದ ಬೆಳವಣಿಗೆಗಳನ್ನು ಕೈಗೊಂಡಿದ್ದಲ್ಲಿ ಯೋಜಿತ ಬೆಳವಣಿಗೆಗೆ ಬೇಕಾಗುವ ಮೂಲಸೌಕರ್ಯಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರೆಯುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಸರ್ಕಾರಕ್ಕೆ ತೆರಿಗೆಗಳು ಉತ್ಪತ್ತಿಯಾಗುತ್ತದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು "ವ್ಯವಸಾಯ" ವಲಯದಿಂದ "ವಸತಿ" ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

BDA/PRO/CLU/148/2022-23 ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ಜಾಹೀರಾತು

ನಿಮ್ಮ ಜೀವನವನ್ನು ಆಶೀರ್ವದಿಸುವ ನಿಮ್ಮ ಆಕಾಂಕ್ಷೆಗಳನ್ನು ಸ್ಪಷ್ಟಗೊಳಿಸುವ ಯೋಗಕ್ಷೇಮ ಒದಗಿಸುವ ದೈವಿಕ ಸಲಕರಣೆ

‘ರುದ್ರಾಕ್ಷ’



ಇತ್ತೀಚಿನ ದಿನಗಳಲ್ಲಿ ಬಹುತೇಕ ಜನರು ತಮ್ಮ ಆಯ್ಕೆಯ ಜೀವನ ವಿಧಾನದಿಂದಾಗಿ ಮತ್ತು ಧಾವಂತಭರಿತ ತ್ವರಿತಗತಿಯ ಬದುಕಿನಿಂದಾಗಿ, ವಿವಿಧ ಜೀವನಶೈಲಿ ಕಾಯಿಲೆಗಳು ಮತ್ತು ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಇದರಿಂದಾಗಿ ಜನರ ಮನಸ್ಸು, ದೇಹ ಮತ್ತು ಆತ್ಮಗಳ ನಡುವೆ ಅಸಮತೋಲನ ಉಂಟಾಗುತ್ತಿದೆ.

“ಮನುಷ್ಯನ ಇಂತಹ ಸ್ವಯಂಕೃತ ಸಮಸ್ಯೆಗಳಿಗೆ ನಮ್ಮ ಪುರಾತನ ಬರಹಗಳಲ್ಲಿ ಒಂದು ಮಾಂತ್ರಿಕ ಪರಿಹಾರವಿದೆ, ಅದುವೇ – ರುದ್ರಾಕ್ಷ” ಎನ್ನುತ್ತಾರೆ ರುದ್ರಜ್ಯೋತಿಯ ರುದ್ರಾಕ್ಷ ಪರಿಣಿತ ಶ್ರೀ. ಅರವಿಂದ ಪಿ ಬಣಕಾರ.

ರುದ್ರಾಕ್ಷದ ಪ್ರಯೋಜನಗಳು

- ಮನಶಾಂತಿ ಮತ್ತು ಗುಣಮುಖತೆಯನ್ನು ಸ್ಥಿರಗೊಳಿಸುತ್ತದೆ
- ಋಣಾತ್ಮಕ ಅಂಶಗಳಿಂದ ಸಂರಕ್ಷಿಸುತ್ತದೆ
- ಉದ್ದೇಶಗಳನ್ನು ಸ್ಪಷ್ಟಗೊಳಿಸುವ ಶಕ್ತಿಶಾಲಿ ಸಲಕರಣೆಯಾಗಿದೆ
- ಆತ್ಮಶಕ್ತಿ ಮತ್ತು ಅದೃಷ್ಟಗಳನ್ನು ವೃದ್ಧಿಸುತ್ತದೆ

ರುದ್ರಾಕ್ಷವು ನಿಮ್ಮ ಯೋಚನಾ ಧಾಟಿಯನ್ನು ಬದಲಾಯಿಸಲು ನೆರವಾಗುತ್ತದೆ. ಇದನ್ನು ಧರಿಸಿದ ನಂತರ ನಿಮ್ಮೊಳಗೆ ಧನಾತ್ಮಕ ಸಂಚಲನೆ ಉಂಟಾಗುತ್ತದೆ. ಬದುಕಿನ ಬಗ್ಗೆ ನಿಮಗಿರುವ ದೃಷ್ಟಿಕೋನಗಳನ್ನು ಇದು ಬದಲಾಯಿಸುತ್ತದೆ ಮತ್ತು ಕ್ರಮೇಣ ಆ ಬದಲಾವಣೆ ನಿಮ್ಮ ಜೀವನದಲ್ಲಿ ಗೋಚರಿಸತೊಡಗುತ್ತದೆ. ಇದು ನಿಮಗೆ ಉತ್ಕೃಷ್ಟ ಜಾಗೃತ ಮನೋಭಾವ ನೀಡುತ್ತದೆ.

ಅಧಿಕೃತ ರುದ್ರಾಕ್ಷವನ್ನು ನಾನು ಎಲ್ಲಿ ಖರೀದಿಸಬಹುದು?

ಭಾರತದಾದ್ಯಂತ ಬಹುತೇಕ ಎಲ್ಲಾ ಕಡೆಯಲ್ಲೂ ನೀವು ರುದ್ರಾಕ್ಷ ಮಾಲೆಗಳನ್ನು ಖರೀದಿಸಬಹುದು. ಆದರೆ ಸಾಕಷ್ಟು ಮಾಲೆಗಳು ಬೀಜಗಳನ್ನು ಕೊರೆದು ರುದ್ರಾಕ್ಷಗಳಂತೆ ಕಾಣುವಂತೆ ಮಾಡಿರುವ ನಕಲಿ ಮಣಿಗಳು ಕಂಡುಬಂದಿದೆ. ಇನ್ನು ಕೆಲವು ಅಸಲಿಯಾಗಿದ್ದರೂ, ಶಕ್ತಿಯಲ್ಲಿ ಕಳೆಗುಂದಿರುತ್ತವೆ. ಕೆಲವು ಜನರು ಕೇವಲ ವ್ಯಾಪಾರಕ್ಕಾಗಿ ಇವುಗಳನ್ನು ಮಾರಾಟ ಮಾಡುತ್ತಾರೆ.

ಇಂಟರ್‌ನೆಟ್‌ನಲ್ಲಿ ಮಣಿಗಳ ಮಾಲೆಯ ಬಗ್ಗೆ ವಿವರಿಸುವ ಸಾಕಷ್ಟು ಬ್ಲಾಗ್‌ಗಳು ಮತ್ತು ವಿಡಿಯೋಗಳು ತುಂಬಿಕೊಂಡಿವೆ. ಆದರೆ ಅವುಗಳಲ್ಲಿನ ಬಹುತೇಕ ಮಾಹಿತಿಗಳಲ್ಲಿ ರುದ್ರಾಕ್ಷದ ಮೌಲ್ಯಗಳ ಬಗ್ಗೆಯಾಗಲಿ, ಅವುಗಳ ಬಳಕೆಯ ಕುರಿತಾಗಲಿ ಆಳವಾಗಿ ತಿಳಿದುಕೊಂಡು ವಿವರಿಸಲಾಗಿಲ್ಲ. ಆದರೆ, ರುದ್ರಜ್ಯೋತಿಯಲ್ಲಿ ನಾವು ನಿಮಗೆ ಶೋಧಿಸಿ ಹೆಕ್ಕಿ ತೆಗೆದ ಮಣಿಗಳನ್ನು ಒದಗಿಸುತ್ತೇವೆ. ಆದ್ದರಿಂದ ನಮ್ಮ ರುದ್ರಾಕ್ಷ ಧರಿಸಿರುವ ಸಾವಿರಾರು ಜನರು ಉಪಯುಕ್ತ ಫಲಾನುಭವಿಗಳಾಗಿದ್ದಾರೆ.

ಅಧಿಕೃತ ರುದ್ರಾಕ್ಷದಲ್ಲಿ ಅನುವಂಶಿಕ ಶಕ್ತಿ ಅಡಗಿದ್ದು, ಕೇವಲ ಸ್ಪರ್ಶ ಮಾತ್ರದಿಂದಲೇ ನಿಮ್ಮ ದೈವಿಕ ಶಕ್ತಿಯು ಇನ್ನೊಬ್ಬರಿಗೆ ವರ್ಗಾವಣೆ ಆಗಬಹುದಾಗಿರುತ್ತದೆ.

ರುದ್ರಜ್ಯೋತಿಯಲ್ಲಿ, ಒಂದು ಸೂಕ್ತ ರುದ್ರಾಕ್ಷ ಸಂಯೋಜನೆಗೆ ಪುರಾತನ ರುದ್ರಾಕ್ಷ ಚಾಲನಾ ಪ್ರಕ್ರಿಯೆಯ ಮುಖಾಂತರ ಚಾಲನೆ ನೀಡಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಮಣಿಯೊಳಗಿನ ಸುಪ್ತ ಅಧ್ಯಾತ್ಮಿಕ ಶಕ್ತಿಗಳು ಜಾಗೃತಗೊಂಡು, ಅದನ್ನು ಧರಿಸಿದವರಿಗೆ ದೈವಿಕ ಶಕ್ತಿಯು ಸುಲಭವಾಗಿ ಲಭಿಸುವಂತಾಗುತ್ತದೆ ಮತ್ತು ಅವರಿಗೆ ಮನಶಾಂತಿ, ಶಕ್ತಿ ಹಾಗೂ ಋಣಾತ್ಮಕ ಅಂಶಗಳಿಗೆ ಸುರಕ್ಷೆ ದೊರೆಯುತ್ತದೆ.

“ಬಹು ಅಪರೂಪದ ಮಾಲೆಗಳಲ್ಲಿ ಒಂದು, ಶಿವಶಕ್ತಿ ಮಾಲೆ. ಇದನ್ನು ದ್ವಿತೀಯ ಅತ್ಯಂತ ಬಲಶಾಲಿ ರುದ್ರಾಕ್ಷ ಎನ್ನಲಾಗುತ್ತದೆ. ಇದು ಎಲ್ಲಾ ದೇವತೆಗಳನ್ನು ಮತ್ತು ರಾಶಿ ನವಗ್ರಹಗಳನ್ನೂ ಪ್ರತಿನಿಧಿಸುವದರಿಂದ, ಇದನ್ನು ಧರಿಸಿದವರಿಗೆ ದೈವಿಕ ಅನುಭೂತಿ ಆಗುವುದು ಖಂಡಿತ” ಎನ್ನುತ್ತಾರೆ ಅರವಿಂದ ಪಿ ಬಣಕಾರ.

ಅಸಲಿ ರುದ್ರಾಕ್ಷ ನಿಮ್ಮ ಆಯ್ಕೆ ಆಗಿರಲಿ

ಇತ್ತೀಚೆಗೆ ವಿಷಪೂರಿತವಾದ ‘ಭದ್ರಾಕ್ಷ’ ಎಂಬ ಬೀಜವನನ್ನೇ ರುದ್ರಾಕ್ಷ ಎಂದು ಪ್ರಚುರಪಡಿಸಲಾಗುತ್ತಿದೆ. ಕೇವಲ ಒಬ್ಬ ಪರಿಣಿತ ಮಾತ್ರ ರುದ್ರಾಕ್ಷಗಳಿಗೆ ಹಾನಿಯಾಗದಂತೆ, ತನ್ನ ವಿಶೇಷ ತಂತ್ರಗಳಿಂದ ಅದರಲ್ಲಿನ ವ್ಯತ್ಯಾಸಗಳನ್ನು ಕಂಡುಹಿಡಿಯಬಲ್ಲ. ರುದ್ರಜ್ಯೋತಿಯಲ್ಲಿ ಶೂನ್ಯ ಸಹಿಷ್ಣು ನೀತಿಯನ್ನು ಅನುಸರಿಸುವ ಮೂಲಕ, ರುದ್ರಾಕ್ಷದಲ್ಲಿರುವ ಪ್ರಧಾನ ಶಕ್ತಿ ಮೂಲವನ್ನು ಘಾಸಿಗೊಳಿಸಬಲ್ಲ ವಿಕಿರಣಗಳನ್ನು ಸೂಸುವ ಎಕ್ಸ್–ರೇ ವಿಧಾನವನ್ನು ಬಳಸುವುದಿಲ್ಲ. ನೀವು ನಿಮ್ಮ ಮಾಲೆಯನ್ನು, ರುದ್ರಜ್ಯೋತಿಯಂತಹ ವಿಶ್ವಾಸರ್ಹ ಮೂಲದಿಂದ ಪಡೆದುಕೊಳ್ಳುವುದು ಅವಶ್ಯಕವಾಗಿದೆ. ವ್ಯಕ್ತಿಯ ಜನನದ ಸಮಯ ಮತ್ತು ಇನ್ನಿತರ ಅಂಶಗಳ ಆಧಾರದ ಮೇರೆಗೆ ಸೂಕ್ತ ರುದ್ರಾಕ್ಷ ಆಯ್ಕೆ ಮಾಡಿಕೊಳ್ಳಬೇಕು.

ಅಸಲಿ ರುದ್ರಾಕ್ಷಗಳಿಗಾಗಿ ಮತ್ತು ಉಚಿತ ವೈಯಕ್ತಿಕ ಸಮಾಲೋಚನೆಗಾಗಿ ರುದ್ರಜ್ಯೋತಿ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಭೇಟಿ ಕೊಡಿ. ಈ ಮೇಳದಲ್ಲಿ ಇಂದ್ರ ಮಾಲೆ, ಶಿವಶಕ್ತಿ ಮಾಲೆ, ಮರ್ಕ್ಯೂರಿ (ಶಿವಲಿಂಗ, ಲಾಕೆಟ್ಸ್, ಬ್ರೇಸ್‌ಲೆಟ್), ಕ್ರಿಸ್ಟಲ್ ಯಂತ್ರ ಮತ್ತು ಅಧ್ಯಾತ್ಮಿಕ ಆಭರಣಗಳು ಸೇರಿದಂತೆ ಅಪರೂಪದ ರುದ್ರಾಕ್ಷ ಸಂಯೋಜನೆಯುಳ್ಳ ರುದ್ರಾಕ್ಷ ಮಾಲೆಗಳು ಲಭ್ಯವಿರುತ್ತವೆ. ರುದ್ರಾಭಿಷೇಕಂ ಆಚರಣೆಯನ್ನು (ಮಾಲೆಗೆ ಶಕ್ತಿ ತುಂಬುವ ಕಾರ್ಯ) ಉಚಿತವಾಗಿ ಮಾಡಿಕೊಡಲಾಗುತ್ತದೆ.

ರುದ್ರಾಕ್ಷಗಳ ಪ್ರದರ್ಶನ ಮತ್ತು ಮಾರಾಟ

ಕೆನರಾ ಯೂನಿಯನ್ ಹಾಲ್, 8ನೇ ಮುಖ್ಯರಸ್ತೆ, 13ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು

ದಿನಾಂಕ: 24 ನವಂಬರ್ – 28 ನವಂಬರ್, 2022.

ಸಮಯ: ಬೆಳಗ್ಗೆ 11 ರಿಂದ ರಾತ್ರಿ 8 ರ ವರೆಗೆ

www.rudrajyoothi.com | ಸಂಪರ್ಕಿಸಿ: 9867402789

ಸೂಚನೆ:– ವೈಯಕ್ತಿಕ ಸಮಾಲೋಚನೆಗಾಗಿ, ಈ ಪ್ರದರ್ಶನದಲ್ಲಿ ದಯವಿಟ್ಟು ವೈಯಕ್ತಿಕವಾಗಿ ಭೇಟಿಯಾಗಿ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

My client proposes to purchase the property more particularly described in the schedule hereunder from its present owner **Mr.Chittaranjan Gauba** who has represented that he has a clear and marketable title to the Schedule Property. Any person/persons who claims any right, title or interest of any nature or any lien, charge or enforceable right in relation to the Schedule Property and/or has any objections of any nature to the transaction should lodge such claim and/or objections in writing to the undersigned together with supporting documents within fifteen (15) days hereof, failing which it will presumed that no valid claims or objections subsist and my clients would proceed to complete the transaction with the present owner thereof subject to compliance with other statutory and legal formalities.

SCHEDULE PROPERTY

All that piece and parcel of Site No.874, assigned PID No.68-2-874 by the BBMP, situated at Koramangala III Block, Bangalore – 5600 34, totally measuring an extent of about 4800 sq. ft., together with a residential house constructed thereon and bounded on the:
East by: Site No.875
West by: Site No.873
North by: ROAD
South by: Site No.874/1

ARVIND RAGHAVAN
Advocate
No. 48, 'ISHITHA', 2nd Main Road, Vyalikaval, Bangalore – 560 003.
Mob: 98450 04419
Bangalore.
Dated : 23/11/2022

PUBLIC NOTICE

My client proposes to purchase the property more particularly described in the schedule hereunder from its present owner **Mrs.Kiran Mazumdar** who has represented that she has clear and marketable title to the Schedule Property. Any person/persons who claims any right, title or interest of any nature or any lien, charge or enforceable right in relation to the Schedule Property and/or has any objections of any nature to the transaction should lodge such claim and/or objections in writing to the undersigned together with supporting documents within fifteen (15) days hereof, failing which it will presumed that no valid claims or objections subsist and my clients would proceed to complete the transaction with the present owner thereof subject to compliance with other statutory and legal formalities

SCHEDULE PROPERTY

All that piece and parcel of Site No.874/1, assigned PID No.68-2-874/1 by the BBMP, situated at Koramangala III Block, Bangalore – 5600 34, totally measuring an extent of about 4800 sq. ft.,together with a residential house constructed thereon and bounded on the:
East by: Site No.875
West by: Site No.873
North by: Site No.874/A & Passage
South by: Private Property

ARVIND RAGHAVAN
Advocate
No. 48, 'ISHITHA', 2nd Main Road, Vyalikaval, Bangalore – 560 003.
Mob: 98450 04419
Bangalore. Dated : 23/11/2022

PUBLIC NOTICE

My client proposes to purchase the property more particularly described in the schedule hereunder from its present owners **Mr.Stephene Rohan Mazumdar, Mrs.Claire Indira Mazumdar, and Mr.Eric Vivek Mazumdar** who have represented that they have a clear and marketable title to the Schedule Property. Any person/persons who claims any right, title or interest of any nature or any lien, charge or enforceable right in relation to the Schedule Property and/or has any objections of any nature to the transaction should lodge such claim and/or objections in writing to the undersigned together with supporting documents within fifteen (15) days hereof, failing which it will presumed that no valid claims or objections subsist and my clients would proceed to complete the transaction with the present owner thereof subject to compliance with other statutory and legal formalities

SCHEDULE PROPERTY

All that piece and parcel of Site No.13 assigned PID No.68-8-13 by the BBMP measuring an extent of about 3042 sq. ft., together with a residential house constructed thereon situated at Koramangala 4th C Block, Bangalore – 560034, and bounded on the:
East by: ROAD
West by: Site No.13/A
North by: Site No.30
South by: ROAD

ARVIND RAGHAVAN
Advocate
No. 48, 'ISHITHA', 2nd Main Road, Vyalikaval, Bangalore – 560 003.
Mob: 98450 04419
Bangalore. Dated : 23/11/2022

REAL ESTATE SELLING

Agricultural Land

Kunigal

NEWLY CONSTRUCTED 24 Square Farm House Badminton Court Garden in 3 Acres 9 Guntas Drip-Irrigated having Arecanut Coconut Guava Orange Mango Banana & Miscellaneous Plantation Borewell Gated-Compounded Fenced opposite to Sankigatta Panchayath Office Near Government Hospital.Thippasandra Hobli Magadi Taluk.65km from Majestic 35kms from Nelamangala.Rs.3.80 Crores.Contact Owner:9686934717

EDUCATION CORNER

SRI KRISHNA INTERNATIONAL EDUCTIONAL TRUST®
ITI Layout, (Near Vidyapeeta Circle), BSK III Stage, Bengaluru-560085

Management Congratulates staff and students of Final year for their excellent results in September 2022, Bengaluru City University exam

B.Com: 158/160 *98.75%	B.B.A: 48/48 *100%	B.C.A: 55/55 *100%
Outstanding : 10	Outstanding : 04	Outstanding : 02
First Class Exemplary : 43	First Class Exemplary : 16	First Class Exemplary : 23
First Class Distinction : 65	First Class Distinction : 24	First Class Distinction : 24
First Class : 40	First Class : 04	First Class : 06

ADMISSIONS OPEN for the P.G. Courses 2022-23

BHUVANESHWARI S
UNIVERSITY MBA RANK HOLDER & GOLD MEDALIST

GIBS B SCHOOL MBA
080-26691680, 9663890999 / 9686027261
www.gibsskies.in

SRI KRISHNA DEGREE COLLEGE
M.Com ◆ B.Com ◆ BBA ◆ BCA
080 - 26795644, 26796020, 99453 30589; www.skdc.edu.in

BUSINESS

Business Offers

Finance

WANTED BUSINESS Partner Veg Hotel 3 Lakhs Investment Monthly Income 1 Lakhs Contact: 8892501007/ 9606701007

General

SUYAMB MANAGEMENT, A Genuine Share Market Trading Company offers Genuine and Principle Safe Returns for your investment. 6% a Month Fixed Returns. Office in Koramangla. Successful 5th Year. All Investments supported with Legal Document. For Details call 9070990709

JOB OPPORTUNITIES

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

General

BHUMIKA BUILDERS requires experienced PROJECT SUPERVISORS for projects in Bangalore Call 9538223507

PERSONAL

Change of Name

CHANGE OF NAME
I, **SANTOSH YADAV** W/o Col. Sanjeev Dhiman, R/o. A-3/312, Netravati Block, NGV Koramangala, Bengaluru-560047, have changed my name to **SANTOSH DHIMAN,** vide affidavit dated 18/05/2022, before notary D.Gunashekar, Bangalore.

I, KUNHI KANNA SANTOSH R/at No.185, 1st Cross, Bullet Krishnappa Layout, Thindlu, Vidyaranyapura Post Bangalore- 560097, have changed my name to SANTOSH KURUP vide affidavit dated: 22/11/2022 Before Notary C.K. Anupama Bangalore.

I, JAMILA, residing at #202, 10th cross Rashad Nagar AC Post, Bangalore- 560045, have changed my name to JAMEELA, vide affidavit dated 14.11.2022 before Notary Leela, Bangalore. Henceforth I shall be known as JAMEELA only.

I, NAVEEN KUMARA M.R, residing at Bengaluru-13 have changed my name as NAVEEN KUMAR M.R vide affidavit dated 23/11/2022 before Notary P.C.Ramaiah, Bengaluru

CHANGE OF NAME
I **DHAMAYANTHI RAMAMOORTHY** Residing at #202, Navaratna, 3rd Main, 6th cross, HAL 3rd Stage, Bengaluru-560075, Karnataka, have changed my name to **DHAMAYANTHI R KENDAR,** vide affidavit dated 14/11/2022, before notary S. Ramesh, Bengaluru. Henceforth I shall be called **DHAMAYANTHI R KENDAR,** only

I, NIKITA MINI residing at Bengaluru-40 have changed my name as NIKITA PATAWARI, vide affidavit dated 23/11/2022 before Notary P.C.Ramaiah, Bengaluru

GUNJAN W/O 14831991X HAV/MT Dinesh Kumar Sah, R/a Binobanagar Sultanganj Bhagalpur, Bihar, my name GUNJAN to GUNJAN DEVI, Notary BM Chandrashekar.

Lost

LOST
I, Krithika Arayan Veedu have lost my ICSE Pass Certificate Document ID. No. 6814849, New Delhi, from Greenwood High, Bengaluru, year 2019. **while Shifting House, Finders Please Contact: 9844088868**

TOURS & TRAVEL

Resort

RESORT LIKE home Stay with Food Chickmagaluru www.residencyhomestay.in 9611099245, 9380208396, 8277199686.

CONNECT ಕ್ಲಾಸಿಫೈಡ್ಸ್

Grand Flea Market Presents *Entry Free!*

10 Days Exhibition



ಇಂಡಿಯನ್ ಆರ್ಟಿಸನ್ ಬಜಾರ್
INDIAN ARTISAN BAZAAR
Art, Craft & Handlooms Exhibition
Date: 18th Nov to 27th Nov 2022
Timings: 11:00 AM - 7:00 PM
Venue: Karnataka Chitrakala Parishath Kumara Krupa Road, Bengaluru

Covid19 Safety & Precautions are in place, as per Govt standards.

THE PUPPET SHOW Live Performance

The Puppet Show Live
Date: 26th Nov 2022
Timing: 5 PM - 6.30 PM

The Djembe Show Live
Date: 27th Nov 2022
Timing: 5 PM - 6.30 PM

Home Decors | Handmade Paintings | Lampshades | Ceramic Pots |Handlooms & Handicrafts | Curtains | Carpets | Mats | Bags | Khadi Kurtas | Silks Saree | Sarees | Designer Kurtis | Bandhani Bedsheets | Designer Jewelry | Handmade Jewelry | Toys | Pots & Much more...

For Details Contact : 6364685716 / 9036658774 *Entry Free..!*

100+ Shopping Stalls | Live Performance | Much More!

DH DECCAN HERALD
ಪ್ರಜಾವಾಣಿ

Book Your Classifieds Ads

Online Log in to
dhclassifieds.com

Contact :
9845114560 : 9731810277
9901641752 : 9886213331
080 - 45557163 / 164

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಲಾಲ್‌ಬಾಗ್: ಸ್ವಚ್ಛತೆಗೆ ನಿರಾಸಕ್ತಿ, ಸಮಸ್ಯೆಗಳಿಗೆ ಇಲ್ಲ ಮುಕ್ತಿ

‘ಜನಸ್ಪಂದನ’ ನಡೆಸಿ, ಲಾಲ್‌ಬಾಗ್‌ನಲ್ಲಿನ ಸಮಸ್ಯೆಗಳ ಕುರಿತು ಜನರಿಗೆ ಪರಿಹಾರ ಒದಗಿಸಬಹುದೆಂಬ ‘ಪ್ರಜಾವಾಣಿ’ಯ ವಿನಂತಿಗೆ ತೋಟಗಾರಿಕಾ ಸಚಿವ ಮುನಿರತ್ನ ಒಪ್ಪಿಗೆ ನೀಡಲಿಲ್ಲ. ಅಂತಹ ಜನದನಿಗೆ ಪತ್ರಿಕೆಯು ಈ ಮೂಲಕ ವೇದಿಕೆ ಒದಗಿಸಿದೆ.

‘ವಿದ್ಯುದ್ದೀಪ ಸರಿಪಡಿಸಿ’



ಲಾಲ್‌ಬಾಗ್ ಆವರಣದಲ್ಲಿ ಇಂಗುಗುಂಡಿಗಳನ್ನು ನಿರ್ಮಿಸುತ್ತಿರುವುದು ಶ್ಲಾಘನೀಯ. ಆದರೆ ಇಲ್ಲಿರುವ ಪಾದಚಾರಿ ಮಾರ್ಗ ಮತ್ತು ವಿದ್ಯುತ್ ದೀಪಗಳ ವ್ಯವಸ್ಥೆಯ ಕೊರತೆ ಇದ್ದು, ಅಧಿಕಾರಿಗಳು ಅದನ್ನು ಸರಿಪಡಿಸಬೇಕು.

ಪ್ರಸನ್ನ ಜಿ ಕೆ.ಟಿ., ವಿ.ವಿ. ಪುರಂ

‘ಪರಿಸರಸ್ನೇಹಿ ಕುಟೀರಗಳನ್ನು ನಿರ್ಮಿಸಿ’



ಲಾಲ್‌ಬಾಗ್ ಉದ್ಯಾನದಲ್ಲಿ ಮಳೆ ಬಂದಾಗ ಆಶ್ರಯ ಪಡೆಯಲು ಪರಿಸರಸ್ನೇಹಿ ಕುಟೀರಗಳನ್ನು ನಿರ್ಮಿಸಬೇಕು. ಇದರಿಂದ ಉದ್ಯಾನಕ್ಕೆ ಭೇಟಿ ನೀಡುವ ಪ್ರವಾಸಿಗರಿಗೆ, ವಾಯುವಿಹಾರಿಗಳಿಗೆ ಅನುಕೂಲವಾಗುತ್ತದೆ. ತೋಟಗಾರಿಕೆ ಸಚಿವರು ಮತ್ತು ಅಧಿಕಾರಿಗಳು ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು.

ರಾಜೇಂದ್ರ ಕುಮಾರ್ ಗುಬ್ಬಿ, ರಾಮಮೂರ್ತಿ ನಗರ

‘ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿ’

ಲಾಲ್‌ಬಾಗ್‌ನಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ನಾನೊಬ್ಬ ಮ್ಯಾರಥಾನ್ ಓಟಗಾರರ ತಂಡದ ಸದಸ್ಯನಾಗಿದ್ದೇನೆ. ನಮ್ಮ ಓಟದ ಅಭ್ಯಾಸಗಳ ನಂತರ ನೀರು ಕುಡಿಯಬೇಕೆಂದರೆ ನಲ್ಲಿಗಳಿಂದ ನೀರು ಬರುವುದಿಲ್ಲ. ಪ್ರತಿನಿತ್ಯ ಶುದ್ಧ ಕುಡಿಯುವ ನೀರಿನ ಘಟಕಗಳ ಸ್ವಚ್ಛತೆಗೆ ಆದ್ಯತೆ ನೀಡಬೇಕು. ವಾಯುವಿಹಾರಿಗಳು ರಸ್ತೆಯಲ್ಲಿ ವ್ಯಾಯಾಮ ಮಾಡುತ್ತಿದ್ದು, ಅದನ್ನು ತಪ್ಪಿಸಿ ಪ್ರತ್ಯೇಕ ಸ್ಥಳದ ವ್ಯವಸ್ಥೆ ಮಾಡಬೇಕು. ಪ್ರವೇಶ ದ್ವಾರಗಳಲ್ಲಿ ಬೀದಿ ವ್ಯಾಪಾರಿಗಳ ಹಾವಳಿ ಹೆಚ್ಚಿದ್ದು, ಒಳಗಡೆ ಬರಲು ಸ್ವಲ್ಪ ತೊಂದರೆಯಾಗುತ್ತಿದೆ. ಇದನ್ನು ಸರಿಪಡಿಸಬೇಕು.

ವಿದ್ಯಾಧರ ಸಾಲೀಮಠ, ಬನಶಂಕರಿ

‘ಕಾಂಪೌಂಡ್ ದುರಸ್ತಿಗೊಳಿಸಿ’

ಲಾಲ್‌ಬಾಗ್ ಸುತ್ತ ಇರುವ ಕಾಂಪೌಂಡ್ ಶಿಥಿಲಗೊಂಡಿದ್ದು, ದುರಸ್ತಿಗೊಳಿಸಬೇಕು. ಕಾಂಪೌಂಡ್‌ನ ಕೆಲ ಭಾಗಗಳಲ್ಲಿ ಬಿರುಕು ಬಿಟ್ಟಿದ್ದು, ಬೀಳುವ ಆತಂಕವಿದೆ. ಈ ಗೋಡೆಯನ್ನು ನವೀಕರಿಸಿ, ಅದರ ಮೇಲೆ ಗಿಡ–ಮರಗಳ, ಪ್ರಾಣಿ–ಪಕ್ಷಿಗಳ ಚಿತ್ರಗಳನ್ನು ಬಿಡಿಸಬೇಕು. ಜಾಗೃತಿ ಬರಹಗಳನ್ನು ಬರೆಯಬೇಕು.

ಕೆ.ಎಸ್. ನಾಗರಾಜ್, ಹನುಮಂತನಗರ

‘ಬೋಟಿಂಗ್ ಸೌಲಭ್ಯ ಕಲ್ಪಿಸಿ’

ಲಾಲ್‌ಬಾಗ್ ಕೆರೆಯಲ್ಲಿ ಬೋಟಿಂಗ್ ವ್ಯವಸ್ಥೆ ಕಲ್ಪಿಸಿ ಪ್ರವಾಸಿಗರನ್ನು ಸೆಳೆಯಬೇಕು. ಉದ್ಯಾನದಲ್ಲಿ ಈ ಹಿಂದೆ ಭಾನುವಾರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿತ್ತು. ಮತ್ತೆ ಅದನ್ನು ಪ್ರಾರಂಭಿಸಬೇಕು.

ಬಿ.ಆರ್. ಸುರೇಶ್, ಹನುಮಂತನಗರ

‘ಇಲಾಖೆಯ ಅಧಿಕಾರಿಗಳೂ ಕಾರಣ’

ಲಾಲ್‌ಬಾಗ್ ಉದ್ಯಾನದ ಸಮಸ್ಯೆಗೆ ಸಚಿವರಷ್ಟೆ ಕಾರಣ ಎಂದು ಬೊಟ್ಟು ಮಾಡುವುದರಲ್ಲಿ ಅರ್ಥ ಇಲ್ಲ. ತೋಟಗಾರಿಕಾ ಇಲಾಖೆಯ ಅಧಿಕಾರಿಗಳೂ ಹೊಣೆಗಾರರು. ಇಲಾಖೆಯಲ್ಲಿ ಉನ್ನತ ಸ್ಥಾನದಲ್ಲಿರುವ ನಿರ್ದೇಶಕರಾದಿಯಾಗಿ ಅಧಿಕಾರಿಗಳು ಉದ್ಯಾನದ ಅಭಿವೃದ್ಧಿಗೆ ಪೂರಕವಾದ ಪ್ರಸ್ತಾವಗಳನ್ನು ಸಿದ್ಧಪಡಿಸಿ ಸರ್ಕಾರದಿಂದ ಮಂಜೂರಾತಿ ಪಡೆದು ಅನುಷ್ಠಾನಗೊಳಿಸಬೇಕು. ಆದರೆ, ಅಧಿಕಾರಿಗಳ ನಿರ್ಲಕ್ಷ್ಯದ ಕಾರಣದಿಂದ ಇಲಾಖೆಯಲ್ಲಿ ಅನುದಾನ ಇದ್ದರೂ ಸಮರ್ಪಕವಾಗಿ ಬಳಕೆ ಆಗುತ್ತಿಲ್ಲ

ಎಸ್.ಜೆ. ವಿನಯಕುಮಾರ್, ಬಸವನಗುಡಿ

‘ಉದ್ಯಾನದಲ್ಲಿ ಸ್ವಚ್ಛತೆ ಅಭಾವ’



ಲಾಲ್‌ಬಾಗ್ ಉದ್ಯಾನದಲ್ಲಿ 1,000ಕ್ಕೂ ಹೆಚ್ಚು ಫ್ಲೋರಾ ಜಾತಿಯ ಗಿಡಗಳಿವೆ. 673 ಪ್ರಭೇದ ಹಾಗೂ 140 ಕುಟುಂಬಕ್ಕೆ ಸೇರಿದ 2,150 ವಿವಿಧ ಪ್ರಭೇದಗಳಿವೆ. ಈ ಉದ್ಯಾನದಲ್ಲಿ 200 ವರ್ಷಗಳ ಹಳೆಯ ಮರಗಳಿದ್ದು, ಅವುಗಳ ನಿರ್ವಹಣೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು. ಹೈದರ ಅಲಿ, ಟಿಪ್ಪು ಸುಲ್ತಾನ್, ನಾಲ್ವಡಿ ಒಡೆಯರ್ ಅವರು ಬೆಳೆಸಿದ ಈ ಶ್ವಾಸಕಾಶಿಯನ್ನು ಉಳಿಸಿ, ಬೆಳೆಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಇತ್ತೀಚೆಗೆ ಉದ್ಯಾನಕ್ಕೆ ಭೇಟಿ ನೀಡಿದಾಗ ಅಲ್ಲಿ ಸ್ವಚ್ಛತೆಯ ಅಭಾವ ಎದ್ದು ಕಾಣುತ್ತಿತ್ತು.

ಸಚಿನ್ ಮೌರ್ಯ ಶಿವಳ್ಳಿ, ಸಿವಿಲ್ ಎಂಜಿನಿಯರ್

ಪ್ರಜಾವಾಣಿ @75

ಲಾಲ್‌ಬಾಗ್‌ನಲ್ಲಿ ನೀವು ಕಂಡ, ಅನುಭವಿಸಿದ ಸಮಸ್ಯೆಗಳ ಕುರಿತು ಸಂಕ್ಷಿಪ್ತವಾಗಿ ಬರೆದು ನಮಗೆ ವಾಟ್ಸ್‌ಆ್ಯಪ್ ಮಾಡಿ. ಜೊತೆಗೆ ನಿಮ್ಮ ಪೂರ್ಣ ವಿಳಾಸ ಹಾಗೂ ಪಾಸ್‌ಪೋರ್ಟ್ ಅಳತೆಯ ಫೋಟೊವನ್ನು ‘ಪ್ರಜಾವಾಣಿ’ಗೆ ಕಳಿಸಿ. ಆಯ್ದ ಅನುಭವಗಳು ಪ್ರಕಟವಾಗಲಿವೆ.

9606038256

ಶ್ರೀನಗರದಲ್ಲಿ ಬುಧವಾರ ಸುರಿದ ಜಿಟಿಜಿಟಿ ಮಳೆಯಲ್ಲೇ ವಿದ್ಯಾರ್ಥಿಗಳು ಹೆಜ್ಜೆ ಹಾಕಿದರು

ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ರಾಜಧಾನಿಯಲ್ಲಿ ಇನ್ನೂ ಎರಡು ದಿನ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನಲ್ಲಿ ಬುಧವಾರ ಜಿಟಿಜಿಟಿ ಮಳೆ ಸುರಿಯಿತು. ಚಳಿಯ ಜೊತೆಗೆ ಮಳೆ ಸುರಿಯುತ್ತಿದೆ. ಇದರಿಂದ ವಾತಾವರಣ ಮತ್ತಷ್ಟು ಶೀತಮಯವಾಗಿತ್ತು.

ಬುಧವಾರ ಬೆಳಿಗ್ಗೆಯಿಂದಲೂ ಮೋಡ ಕವಿದ ವಾತಾವರಣ ಇತ್ತು. ಮಧ್ಯಾಹ್ನದ ಬಳಿಕ ಜಿಟಿಜಿಟಿ ಮಳೆ ಸುರಿಯಲು ಆರಂಭಿಸಿತು.

ನಾಗಸಂದ್ರ, 8ನೇ ಮೈಲು, ಜಾಲಹಳ್ಳಿ, ಪೀಣ್ಯ ಕೈಗಾರಿಕೆ ವಲಯ, ಕೆಂಗೇರಿ, ಯಶವಂತಪುರ, ಶ್ರೀರಾಮಪುರ, ಮಲ್ಲೇಶ್ವರ, ಯಲಹಂಕ, ರಾಜಾಜಿನಗರ ಭಾಗದಲ್ಲಿ ಮಳೆಯಾಗಿದೆ. ದೀಪಾಂಜಲಿ ನಗರ, ರಾಜರಾಜೇಶ್ವರಿ ನಗರ, ಮಾಗಡಿ ರಸ್ತೆ, ಬಸವನಗುಡಿ, ಬಸವೇಶ್ವರ ನಗರ, ಜೆಪಿ ನಗರ, ಕೆ.ಆರ್. ಮಾರುಕಟ್ಟೆ, ಚಿಕ್ಕಪೇಟೆ, ಹಲಸೂರು, ಎಲೆಕ್ಟ್ರಾನಿಕ್ ಸಿಟಿಯಲ್ಲೂ ಸಾಧಾರಣ ಮಳೆಯಾಗಿದೆ.

ನಗರದಲ್ಲಿ ಇನ್ನೂ ಎರಡು ದಿನ ಇದೇ ವಾತಾವರಣ ಇರಲಿದ್ದು, ಅಲ್ಲಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ನಗರದಲ್ಲಿ ಬುಧವಾರ ಕನಿಷ್ಠ ತಾಪಮಾನ 20 ಡಿಗ್ರಿ ಸೆಲ್ಸಿಯಸ್ ಹಾಗೂ ಗರಿಷ್ಠ ಉಷ್ಣಾಂಶ 26 ಡಿಗ್ರಿ ಸೆಲ್ಸಿಯಸ್ ಇತ್ತು. ಗುರುವಾರ ಕನಿಷ್ಠ 19, ಗರಿಷ್ಠ 26 ಹಾಗೂ ಶುಕ್ರವಾರ ಕನಿಷ್ಠ 19 ಹಾಗೂ ಗರಿಷ್ಠ 7 ಡಿಗ್ರಿ ಸೆಲ್ಸಿಯಸ್ ದಾಖಲಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

‘ಬೂತ್ ಮಟ್ಟದಲ್ಲಿ ಪಕ್ಷ ಸಂಘಟಿಸಿ’

ಬೆಂಗಳೂರು: ‘ಬೂತ್ ಮಟ್ಟದಲ್ಲಿ ಪಕ್ಷ ಸಂಘಟನೆಗೆ ಹಾಗೂ ಬಲವರ್ಧನೆಗೆ ಶ್ರಮಿಸಬೇಕು. ಚುನಾವಣಾ ಪ್ರಕ್ರಿಯೆ ಹಾಗೂ ಮತದಾನದ ವಿಷಯದಲ್ಲಿ ಪಕ್ಷದ ವತಿಯಿಂದ ಜನರಲ್ಲಿ ಅರಿವು ಮೂಡಿಸಬೇಕು’ ಎಂದು ಪಕ್ಷದ ಕಾರ್ಯಕರ್ತರಿಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಸಲಹೆ ನೀಡಿದರು.

ಕೆಪಿಸಿಸಿ ವತಿಯಿಂದ ನಡೆದ ಪಕ್ಷದ ಪರಿವರ್ತನಾ ಶಿಬಿರದ ಸಮಾರೋಪ ಸಮಾರಂಭದಲ್ಲಿ ಬುಧವಾರ ಮಾತನಾಡಿ, ‘ಬಿಜೆಪಿಯವರು ಮತದಾರರ ಮಾಹಿತಿ ಕಳವು ಮತ್ತು ಹಲವರ ಹೆಸರನ್ನು ಮತಪಟ್ಟಿಯಿಂದ ಕೈಬಿಡುವ ಕೆಲಸ ಮಾಡುತ್ತಿದ್ದಾರೆ. ಇದರ ಬಗ್ಗೆ ಬೂತ್ ಮಟ್ಟದಲ್ಲಿ ಜಾಗೃತರಾಗಬೇಕು’ ಎಂದು ಹೇಳಿದರು.

ಹೊಸ ನೇಮಕಾತಿ ಅಧಿಸೂಚನೆ ರದ್ದತಿಗೆ ಆಗ್ರಹ

ಬೆಂಗಳೂರು: ಅಂಗವಿಕಲರ ಅಧಿನಿಯಮ ಆಯುಕ್ತರ ಹುದ್ದೆಯ ನೇಮಕಾತಿಗೆ ಹೊಸದಾಗಿ ಹೊರಡಿಸಿರುವ ಅಧಿಸೂಚನೆಯನ್ನು ರದ್ದುಪಡಿಸುವಂತೆ ‘ಕರ್ನಾಟಕ ರಾಜ್ಯ ವಿಕಲಚೇತನರ ರಕ್ಷಣಾ ಸಮಿತಿ’ ಆಗ್ರಹಿಸಿದೆ.

ಅಂಗವಿಕಲರ ಹಕ್ಕುಗಳ ಅಧಿನಿಯಮದ ಆಯುಕ್ತರ ಹುದ್ದೆಗೆ 2020ರ ಡಿ. 17ರಂದು ನೇಮಕಾತಿಗಾಗಿ ಅರ್ಜಿ ಕರೆಯಲಾಗಿತ್ತು. ಸುಮಾರು 50 ಮಂದಿ ಅರ್ಜಿ ಸಲ್ಲಿಸಿದ್ದರು. ಆದರೆ, ನೇಮಕಾತಿ ಪ್ರಕ್ರಿಯೆ ಕೈಗೊಳ್ಳದೆ ವಿಳಂಬ ಮಾಡಲಾಯಿತು. ನಂತರ ಏಕಾಏಕಿ ಇದೇ ನ.17ರಂದು ಆಯುಕ್ತರ ನೇಮಕಾತಿಗಾಗಿ ಹೊಸದಾಗಿ ಅಧಿಸೂಚನೆ ಮೂಲಕ ಅರ್ಜಿ ಆಹ್ವಾನಿಸಿದೆ.

ಇದರಿಂದ ಈ ಕ್ಷೇತ್ರದಲ್ಲಿ ಸೇವೆ ಮಾಡುವ ಆಕಾಂಕ್ಷೆಯಿಂದ ಕಾಯುತ್ತಿದ್ದ 65 ವಯಸ್ಸಿನ ಅವಧಿಯ ಅಂಚಿನಲ್ಲಿದ್ದ ಹಲವು ಅಭ್ಯರ್ಥಿಗಳನ್ನು ಅವಕಾಶ ವಂಚಿತರನ್ನಾಗಿ ಮಾಡಲಾಗಿದೆ. ಸರ್ಕಾರ ತಕ್ಷಣವೇ ನಿಯಮಬಾಹಿರವಾಗಿ ಹೊರಡಿಸಿರುವ ಹೊಸ ಅಧಿಸೂಚನೆಯನ್ನು ರದ್ದುಪಡಿಸಬೇಕು. ಈ ಹಿಂದೆ ಅರ್ಜಿ ಸಲ್ಲಿಸಿದವರಲ್ಲೇ ಅರ್ಹತೆ ಇರುವ ಅತ್ಯುತ್ತಮ ಅಭ್ಯರ್ಥಿಯನ್ನು ಆಯುಕ್ತರನ್ನಾಗಿ ಆಯ್ಕೆ ಮಾಡಬೇಕೆಂದು ಸಮಿತಿಯ ಕಾರ್ಯಾಧ್ಯಕ್ಷ ಚಂದ್ರಶೇಖರ ಪುಟ್ಟಪ್ಪ ಒತ್ತಾಯಿಸಿದ್ದಾರೆ.

ವಿದ್ಯಾರ್ಥಿಗಳ ಅಮಾನತು: ತನಿಖೆಗೆ ಕೆಸಿಪಿಸಿಆರ್ ಆದೇಶ

ಬೆಂಗಳೂರು: ಅಶಿಸ್ತಿನ ಕಾರಣಕ್ಕೆ ಇಬ್ಬರು ವಿದ್ಯಾರ್ಥಿಗಳನ್ನು ಅಮಾನತುಗೊಳಿಸಿರುವ ಪ್ರಕರಣದ ಬಗ್ಗೆ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣೆ ಮತ್ತು ಹಕ್ಕುಗಳ ಆಯೋಗ (ಕೆಸಿಪಿಸಿಆರ್) ತನಿಖೆಗೆ ಆದೇಶಿಸಿದೆ.

ಬನ್ನೇರುಘಟ್ಟ ರಸ್ತೆಯ ‘ರ್‍ಯಾನ್ ಇಂಟರ್‌ನ್ಯಾಷನಲ್ ಸ್ಕೂಲ್’ಗೆ ಭೇಟಿ ನೀಡಿ, ವರದಿ ಸಲ್ಲಿಸುವಂತೆ ಆಯೋಗವು ಬೆಂಗಳೂರು ದಕ್ಷಿಣದ ಡಿಡಿಪಿಐ ಅವರಿಗೆ ಸೂಚಿಸಿದೆ.

ಅಣ್ಣ–ತಮ್ಮಂದಿರಾಗಿರುವ 9 ಮತ್ತು 10ನೇ ತರಗತಿಯ ಇಬ್ಬರನ್ನು ನ.19ರಂದು ಅಮಾನತುಗೊಳಿಸಲಾಗಿತ್ತು.

ವಿದ್ಯಾರ್ಥಿಗಳ ತಂದೆ ನೀಡಿದ ದೂರಿನ ಮೇರೆಗೆ ಆಯೋಗವು ಈ ಕ್ರಮ ಕೈಗೊಂಡಿದೆ. ವಿದ್ಯಾರ್ಥಿಗಳನ್ನು ಅಮಾನತು ಮಾಡಿರುವುದು ಶಿಕ್ಷಣ ಹಕ್ಕು ಕಾಯ್ದೆಯನ್ನು ಉಲ್ಲಂಘಿಸುತ್ತದೆ ಮತ್ತು ಅನಾಗರಿಕ ನಡವಳಿಕೆಯಾಗಿದೆ ಎಂದು ಆಯೋಗವು ತಿಳಿಸಿದೆ.

ಪ್ರಾಂಶುಪಾಲರಿಗೆ, ಶಿಕ್ಷಕರಿಗೆ ಅಗೌರವ ತೋರಿದ್ದಕ್ಕೆ ಮತ್ತು ಅಶಿಸ್ತಿನ ಕಾರಣಕ್ಕೆ ಇಬ್ಬರನ್ನು ಅಮಾನತು ಮಾಡಲಾಗಿತ್ತು.

‘ಕಳೆದ ಆರು ತಿಂಗಳಿಂದ ನನ್ನ ಮಕ್ಕಳನ್ನು ಉದ್ದೇಶಪೂರ್ವಕವಾಗಿ ಗುರಿಯಾಗಿಸಿಕೊಂಡು ಹಿಂಸೆ ನೀಡಲಾಗಿದೆ. ಪ್ರಾಂಶುಪಾಲರು ಮಕ್ಕಳಿಗೆ ಹೊಡೆದಿದ್ದಾರೆ’ ಎಂದು ಮಕ್ಕಳ ತಂದೆ ದೂರಿದ್ದಾರೆ.

ಈ ಬಗ್ಗೆ ಶಾಲೆಯ ಪ್ರಾಂಶುಪಾಲರು ಪ್ರತಿಕ್ರಿಯಿಸಲು ನಿರಾಕರಿಸಿದರು.

‘ರ್‍ಯಾಪಿಡ್ ರಸ್ತೆ’: ಹೆಚ್ಚಿನ ಬಾಳಿಕೆ

ಕ್ಯೂರಿಂಗ್ ಅವಶ್ಯಕತೆ ಇಲ್ಲ, ಕಾಮಗಾರಿಗೆ ಅಧಿಕ ಸಮಯ ಬೇಕಿಲ್ಲ: ತುಷಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರ್‍ಯಾಪಿಡ್ ರಸ್ತೆ’ ನಿರ್ಮಾಣದ ಸಂದರ್ಭದಲ್ಲಿ ಹೆಚ್ಚಿನ ದಿನ ಸಂಚಾರ ದಟ್ಟಣೆ ಇರುವುದಿಲ್ಲ. ಪ್ಯಾನಲ್ ಅಳವಡಿಸಿದ ಮೂರು ದಿನದಲ್ಲೇ ಸಂಚಾರ ಆರಂಭಿಸಬಹುದು. ಹೆಚ್ಚಿನ ಬಾಳಿಕೆಯೂ ಬರುತ್ತದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಹಳೆ ಮದ್ರಾಸ್ ರಸ್ತೆಯಲ್ಲಿ ‘ರ್‍ಯಾಪಿಡ್ ರಸ್ತೆ’ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆ ನಡೆಸಿ ಅವರು ಬುಧವಾರ ಮಾತನಾಡಿದರು.

‘ವೈಟ್ ಟಾಪಿಂಗ್ ಅಥವಾ ಟೆಂಡರ್ ಶ್ಯೂರ್ ಕಾಮಗಾರಿ ಸಮಯದಲ್ಲಿ ವಾಹನಗಳ ಸಂಚಾರ ನಿಷೇಧಿಸುವುದರಿಂದ ದಟ್ಟಣೆ ಹೆಚ್ಚಾಗುತ್ತದೆ. ಇದನ್ನು ತಪ್ಪಿಸುವ ಸಲುವಾಗಿ ಪ್ರಾಯೋಗಿಕವಾಗಿ ‘ರ್‍ಯಾಪಿಡ್ ರಸ್ತೆ’ ಎಂಬ ವಿನೂತನ ತಂತ್ರಜ್ಞಾನವನ್ನು ದೇಶದಲ್ಲೇ ಪ್ರಥಮ ಬಾರಿಗೆ ನಾವು ಅನುಷ್ಠಾನಗೊಳಿಸುತ್ತಿದ್ದೇವೆ. ಕ್ಯೂರಿಂಗ್ ಅವಶ್ಯಕತೆ ಇಲ್ಲ. ಪ್ರೀ ಕಾಸ್ಟ್ ಪ್ಯಾನಲ್ ಅಳವಡಿಸಿದ ಕೂಡಲೆ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಬಹುದಾಗಿದೆ’ ಎಂದರು.

‘500 ಮೀಟರ್ ಉದ್ದದ ರಸ್ತೆಯಲ್ಲಿ ಪ್ರಾಯೋಗಿಕವಾಗಿ ರ್‍ಯಾಪಿಡ್ ರಸ್ತೆ (ಪ್ರೀಕಾಸ್ಟ್ ಪೋಸ್ಟ್ ಟೆನ್ಷನಿಂಗ್ ಕಾಂಕ್ರೀಟ್ ಪೇವ್‌ಮೆಂಟ್) ನಿರ್ಮಾಣ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಇದನ್ನು ಎಲ್ಲೆಡೆ ವಿಸ್ತರಿಸುವ ಯೋಜನೆ ಇದೆ. ವೆಚ್ಚ ಶೇ 20ರಷ್ಟು ಹೆಚ್ಚಿದ್ದು, ಮುಂದಿನ ದಿನಗಳಲ್ಲಿ ಸ್ಥಳೀಯವಾಗಿ ಪ್ಯಾನಲ್ ತಯಾರಿಕೆಯಿಂದ ವೆಚ್ಚ ತಗ್ಗಲಿದೆ’ ಎಂದರು.

ವಿಂಡ್ ಟನಲ್ ರಸ್ತೆ ಜಂಕ್ಷನ್‌ನಲ್ಲಿ 2023ರ ಜೂನ್ ವೇಳೆಗೆ ಹಾಗೂ ಸುರಂಜನ್ ದಾಸ್ ಜಂಕ್ಷನ್ ಬಳಿ ಮಾರತಹಳ್ಳಿ ಕಡೆಯಿಂದ ಬೆಂಗಳೂರಿಗೆ ಬರುವ ರಿಟೈನಿಂಗ್ ವಾಲ್ ಕಾಮಗಾರಿ ಪೂರ್ಣಗೊಂಡಿದೆ. ಕೆಳಸೇತುವೆ ಕಾಮಗಾರಿಯನ್ನು ಜನವರಿ 15ರೊಳಗೆ ಪೂರ್ಣಗೊಳಿಸಬೇಕು ಎಂದು ಮುಖ್ಯ ಆಯುಕ್ತರು ಸೂಚಿಸಿದರು.

ಭೂಸ್ವಾಧೀನ: ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಒಟ್ಟು ₹90 ಕೋಟಿ ವೆಚ್ಚದಲ್ಲಿ ಗ್ರೇಡ್ ಸೆಪರೇಟರ್ ಕಾಮಗಾರಿ ನಡೆಯುತ್ತಿದೆ. ಹೂಡಿ ಜಂಕ್ಷನ್ ಮೇಲುಸೇತುವೆ, ಬಿಗ್ ಬಜಾರ್ ಜಂಕ್ಷನ್ ಹಾಗೂ ಓ-ಫಾರ್ಮ್ ಜಂಕ್ಷನ್ ಬಳಿ ಕೆಳಸೇತುವೆ ಕಾಮಗಾರಿ ನಡೆಯುತ್ತಿದೆ. ಅಗತ್ಯವಿರುವ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಕಂದಾಯ ನಕ್ಷೆಗಳನ್ನು ಪರಿಶೀಲಿಸಿ, ಸೂಕ್ತ ಕ್ರಮಕ್ಕೆ ಅಧಿಕಾರಿಗಳಿಗೆ ತುಷಾರ್ ಗಿರಿನಾಥ್ ಆದೇಶಿಸಿದರು.

ಪ್ರಧಾನ ಎಂಜಿನಿಯರ್ ಪ್ರಹ್ಲಾದ್, ಯೋಜನಾ ವಿಭಾಗದ ಮುಖ್ಯ ಎಂಜಿನಿಯರ್ ವಿನಾಯಕ್ ಸುಗೂರ್, ವಲಯ ಮುಖ್ಯ ಎಂಜಿನಿಯರ್ ಸುಗುಣಾ, ಕಾರ್ಯಪಾಲಕ ಎಂಜಿನಿಯರ್ ಗೀತಾ ಇದ್ದರು.

ಚುಟುಕು ಸುದ್ದಿ

ನಾಳೆ ಕಾರ್ಯಾಗಾರ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಲೈಂಗಿಕ ದೌರ್ಜನ್ಯ ತಡೆ ಘಟಕದ ವತಿಯಿಂದ ನ.25ರಂದು ಬೆಳಿಗ್ಗೆ 11ಕ್ಕೆ ಸೆನೆಟ್ ಹಾಲ್‌ನಲ್ಲಿ ಕಾರ್ಯಾಗಾರ ಆಯೋಜಿಸಲಾಗಿದೆ.

ವಿಶ್ವವಿದ್ಯಾಲಯದ ಎಲ್ಲ ಮಹಿಳಾ ನೌಕರರು ಪಾಲ್ಗೊಳ್ಳಬೇಕು ಎಂದು ಕುಲಸಚಿವರು ಸೂಚಿಸಿದ್ದಾರೆ. ಎನ್‌ಎಲ್‌ಎಸ್‌ಐಯು ಸಹ ಪ್ರಾಧ್ಯಾಪಕರಾದ ಡಾ. ಎ. ನಾಗರತ್ನ ಅವರು ಉಪನ್ಯಾಸ ನೀಡಲಿದ್ದಾರೆ.

ಅವಧಿ ವಿಸ್ತರಣೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಎಂ.ಪಿ.ಇಡಿ. ಕೋರ್ಸ್‌ಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅವಧಿಯನ್ನು ವಿಸ್ತರಿಸಲಾಗಿದೆ.

ದಂಡ ಇಲ್ಲದೆಯೇ ಡಿ.2ರವರೆಗೆ ಅರ್ಜಿ ಸಲ್ಲಿಸಬಹುದು. ₹200 ದಂಡದೊಂದಿಗೆ ಡಿ.5ರವರೆಗೆ ಅರ್ಜಿ ಸಲ್ಲಿಸಬಹುದಾಗಿದೆ. ಡಿ.7ರಂದು ದೈಹಿಕ ಸಾಮರ್ಥ್ಯ ಪರೀಕ್ಷೆ ನಡೆಯಲಿದೆ. ಡಿ.14ರಂದು ಅಂತಿಮ ಅರ್ಹತಾ ಪಟ್ಟಿ ಪ್ರಕಟಿಸಲಾಗುವುದು ಎಂದು ಕುಲಸಚಿವರು ತಿಳಿಸಿದ್ದಾರೆ.

ಹುಳಿಮಾವು ವಾರ್ಡ್ ಮರುವಿಂಗಡಣೆ ಮೇಲ್ಮನವಿ: ಸರ್ಕಾರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯ ಹುಳಿಮಾವು ವಾರ್ಡ್‌ನ ಕೆಲ ಪ್ರದೇಶಗಳನ್ನು ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರಗಳಿಗೆ ಸೇರ್ಪಡೆ ಮಾಡಿರುವುದನ್ನು ಪ್ರಶ್ನಿಸಲಾದ ಮೇಲ್ಮನವಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮತ್ತು ಬಿಬಿಎಂಪಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕ ಎಂ.ಸತೀಶ್ ರೆಡ್ಡಿ ಸೇರಿ ಆರು ಜನರು ಸಲ್ಲಿಸಿರುವ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಮೇಲ್ಮನವಿದಾರರ ಪರ ವಕೀಲರು, ‘ಬಿಬಿಎಂಪಿ ಕಾಯ್ದೆಯ ಕಲಂ 7(1) (ಬಿ) ಪ್ರಕಾರ ಒಂದು ವಾರ್ಡ್‌ಗೆ ಸೇರಿದ ಪ್ರದೇಶಗಳನ್ನು ವಿಧಾನಸಭೆ ಚುನಾವಣಾ ಕ್ಷೇತ್ರದೊಳಗೇ ಸೇರಿಸಬೇಕು. ಆದರೆ, ಹುಳಿಮಾವು ವಾರ್ಡ್‌ನ ಕೆಲ ಪ್ರದೇಶಗಳನ್ನು ಬೊಮ್ಮನಹಳ್ಳಿ ಮತ್ತು ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರಗಳಲ್ಲಿ ಹಂಚಿಕೆ ಮಾಡಿರುವುದು ಸರಿಯಲ್ಲ. ಇದರಿಂದ ಮತದಾರರಿಗೆ ಗೊಂದಲ ಉಂಟಾಗಲಿದೆ. ಈ ಸಂಬಂಧ ವಾರ್ಡ್ ಮರುವಿಂಗಡಣೆಯನ್ನು ಮರು ಪರಿಶೀಲಿಸುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ಕೋರಲಾಗಿದ್ದ ರಿಟ್ ಅರ್ಜಿಯನ್ನು ಏಕಸದಸ್ಯ ಪೀಠ ಮಾನ್ಯ ಮಾಡಿಲ್ಲ’ ಎಂಬುದನ್ನು ನ್ಯಾಯಪೀಠದ ಗಮನಕ್ಕೆ ತಂದರು.

ವಾದ ಆಲಿಸಿದ ನ್ಯಾಯಪೀಠ, ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ, ಬಿಬಿಎಂಪಿ ಆಯುಕ್ತರು, ರಾಜ್ಯ ಚುನಾವಣಾ ಆಯೋಗ ಸೇರಿದಂತೆ ಆರು ಜನ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

‘ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಹುಳಿಮಾವು ಸೇರಿ ಈ ಹಿಂದೆ ಇದ್ದ 14 ವಾರ್ಡ್‌ಗಳ ಜತೆಗೆ ಹೆಚ್ಚುವರಿಯಾಗಿ 6 ವಾರ್ಡ್‌ಗಳನ್ನು ಸೇರ್ಪಡೆ ಮಾಡಲಾಗಿದೆ. ಆದರೆ, ಹುಳಿಮಾವು ವಾರ್ಡ್‌ಗೆ ಸೇರಿದ ಅಕ್ಷಯ ಗಾರ್ಡನ್, ಸತ್ಯಸಾಯಿ, ಶಿರಡಿ ಸಾಯಿ ನಗರ, ವಿಐಪಿ ಲೇ ಔಟ್ ಮತ್ತಿತರೆ ಪ್ರದೇಶಗಳನ್ನು ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದೊಂದಿಗೆ ಹಂಚಿಕೆ ಮಾಡಲಾಗಿದೆ’ ಎಂಬುದು ಅರ್ಜಿದಾರರ ಆಕ್ಷೇಪ.

ಪೀಪಲ್ ಟ್ರೀ ಸ್ಲೀಪ್ ಕೇರ್ ಸೆಂಟರ್‌ನಿಂದ ಅಧ್ಯಯನ

‘ಉದ್ಯೋಗಸ್ಥರಿಗೆ ನಿದ್ದೆ ಸಮಸ್ಯೆ’

ಪ್ರಜಾವಾಣಿ ವಾರ್ತೆ

ಕೇಂದ್ರವನ್ನು ಆರ್. ಅಶೋಕ ಉದ್ಘಾಟಿಸಿದರು. ಡಾ. ಸತೀಶ್ ರಾಮಯ್ಯ, ಡಾ.ಜ್ಯೋತಿ ನೀರಜಾ, ಡಾ. ರವಿ ಸಚ್ಚಿದಾನಂದ, ಡಾ. ಪ್ರದೀಪ್ ಇದ್ದಾರೆ.

ಬೆಂಗಳೂರು: ಉದ್ಯೋಗಸ್ಥ ವಯಸ್ಕರಿಗೆ ನಿದ್ದೆ ಸಮಸ್ಯೆ ಕಾಡುತ್ತಿದೆ. ಪ್ರತಿ 10 ಮಂದಿಯಲ್ಲಿ ನಾಲ್ವರು ನಿದ್ದೆಯ ತೊಂದರೆ ಅನುಭವಿಸುತ್ತಿದ್ದಾರೆ ಎನ್ನುವುದು ಪೀಪಲ್ ಟ್ರೀ ಇಂಟಿಗ್ರೇಟೆಡ್ ಸ್ಲೀಪ್ ಕೇರ್ ಸೆಂಟರ್ ಅಧ್ಯಯನದಿಂದ ತಿಳಿದುಬಂದಿದೆ.

ಯಶವಂತಪುರದ ಪೀಪಲ್ ಟ್ರೀ ಆಸ್ಪತ್ರೆ ಸ್ಥಾಪಿಸಿರುವ ಈ ಕೇಂದ್ರವನ್ನು ಬುಧವಾರ ಉದ್ಘಾಟಿಸಿದ ಕಂದಾಯ ಸಚಿವ ಆರ್. ಅಶೋಕ, ‘ಬದಲಾದ ಜೀವನಶೈಲಿಯಿಂದ ಯುವಜನರು ನಿದ್ರಾಹೀನತೆ ಸಮಸ್ಯೆಗೆ ಒಳಗಾಗುತ್ತಿದ್ದಾರೆ. ಇದರಿಂದ ಕೆಲವರಲ್ಲಿ ಮಾನಸಿಕ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ’ ಎಂದು ಹೇಳಿದರು.

ಮನೋವೈದ್ಯ ಡಾ. ಸತೀಶ್ ರಾಮಯ್ಯ, ‘ಶೇ 42ರಷ್ಟು ಜನರು ಸರಿಯಾಗಿ ನಿದ್ದೆ ಮಾಡುತ್ತಿಲ್ಲ. ಶೇ 30ರಷ್ಟು ಮಂದಿ ಆಗಾಗ್ಗೆ ನಿದ್ದೆಯಿಂದ ಎಚ್ಚರಗೊಳ್ಳುತ್ತಾರೆ. ಇನ್ನುಳಿದವರು ಮಾತ್ರ ಸಮರ್ಪಕವಾಗಿ ನಿದ್ದೆ ಮಾಡುತ್ತಿದ್ದಾರೆ ಎನ್ನುವುದು ಅಧ್ಯಯನದಿಂದ ತಿಳಿದುಬಂದಿದೆ. ನಿದ್ದೆಯ ಸಮಸ್ಯೆ ಎದುರಿಸುತ್ತಿರುವ ಬಹುತೇಕರಿಗೆ ಏನು ಮಾಡಬೇಕು ಎನ್ನುವುದು ತಿಳಿದಿಲ್ಲ’ ಎಂದರು.

ಆಸ್ಪತ್ರೆಯ ಡಾ.ಜ್ಯೋತಿ ನೀರಜಾ, ‘ನಿದ್ದೆಯು ನಮ್ಮ ಆರೋಗ್ಯವನ್ನು ಸೂಚಿಸುತ್ತದೆ. ನಿದ್ದೆಯ ಸಮಸ್ಯೆ ಕಾಣಿಸಿಕೊಂಡಲ್ಲಿ ದೈಹಿಕ ಹಾಗೂ ಮಾನಸಿಕ ಬೆಳವಣಿಗೆ ಕುಂಠಿತವಾಗುವ ಸಾಧ್ಯತೆ ಇರುತ್ತದೆ. ನಮ್ಮಲ್ಲಿನ ರೋಗನಿರೋಧಕ ಶಕ್ತಿಯೂ ಕಡಿಮೆ ಆಗಲಿದೆ. ನಿದ್ದೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಎದುರಿಸುತ್ತಿರುವವರ ಸಂಖ್ಯೆ ಹೆಚ್ಚಳವಾಗುತ್ತಿದೆ’ ಎಂದು ಹೇಳಿದರು.

‘ಕೇಂದ್ರದಲ್ಲಿ ಮನೋವೈದ್ಯರು, ಆಹಾರ ತಜ್ಞರು ಸೇರಿ ವಿವಿಧ ವೈದ್ಯಕೀಯ ತಜ್ಞರು ಇದ್ದಾರೆ. ನಿದ್ದೆ ಪ್ರಯೋಗಾಲಯ ಸೇರಿ ವಿವಿಧ ಸೌಲಭ್ಯಗಳಿವೆ’ ಎಂದು ತಿಳಿಸಿದರು.

PUBLIC NOTICE

My Client intends to purchase the property more particularly described in the Schedule hereunder from **Smt.Parvathamma, Sri.K.Srinivas** and **Sri.K.Keshavaraju,** the present owners who have represented that they have a clear and marketable title to the same. Any person/s, financial institutions and statutory authorities who claims any right, title or interest of any nature in or any lien, charge or enforceable right in relation to the Schedule Property and/or has any objections of any nature to the aforesaid transaction should lodge such claim and/or objections in writing to the undersigned together with supporting documents within fifteen (15) days hereof, failing which it will be presumed that no valid claims or objections subsist and my clients would proceed to complete the transaction with the present owners thereof subject to compliance with other statutory and legal formalities.

SCHEDULE PROPERTY

All that piece and parcel of the immovable property being agricultural dry land measuring an extent of about 30 guntas (excusive of 1 gunta of Kharab land comprised therein) comprised in Sy.No.101/2 of Kundana Village, Kundana Hobli, Devanahalli Taluk, Bangalore Rural Taluk and bounded on the: **East by** :Lands comprised in Sy.No.102 and 104, **West by** :Lands comprised in Sy.No.101/1, **North by** : Lands comprised in Sy.No.104, 105 and 106, **South by** : Lands comprised in Sy.No.101/3

Sd/-
Arvind Raghavan
For Arvind Raghavan & Associates
Advocates And Solicitors
#48, “Ishita” 2nd Floor, 2nd Main Road,
Vyalikaval, Bangalore – 560 003
MOB : 98450-04419,
E-mail – arvind_ncsr@yahoo.com
Bangalore
Date :24/11/2022

PUBLIC NOTICE

My Client intends to purchase the property more particularly described in the Schedule hereunder from the Hindu Joint Family of **Sri.Rajanna** represented by its Kartha, **Sri.Rajanna,** the present owners who have represented that they have a clear and marketable title to the same. Any person/s, financial institutions and statutory authorities who claims any right, title or interest of any nature in or any lien, charge or enforceable right in relation to the Schedule Property and/or has any objections of any nature to the aforesaid transaction should lodge such claim and/or objections in writing to the undersigned together with supporting documents within fifteen (15) days hereof, failing which it will be presumed that no valid claims or objections subsist and my clients would proceed to complete the transaction with the present owners thereof subject to compliance with other statutory and legal formalities.

SCHEDULE PROPERTY

All that piece and parcel of the immovable property being agricultural dry land measuring an extent of about 05 guntas comprised in Sy.No.99/3 (Old Sy.No.99) of Kundana Village, KundanaHobli, Devanahalli Taluk, Bangalore Rural Taluk and bounded on the: **East by :** Lands comprised in Sy.No.99/2, **West by :** Lands comprised in Sy.No.99/4, **North by :** Road, **South by** : Lands comprised in Sy.No.99/6.

Sd/-
Arvind Raghavan
For Arvind Raghavan & Associates
Advocates And Solicitors
#48, “Ishita” 2nd Floor, 2nd Main Road,
Vyalikaval, Bangalore – 560 003
MOB : 98450-04419,
E-mail – arvind_ncsr@yahoo.com
Bangalore
Date :24/11/2022

PUBLIC NOTICE

My Client intends to purchase the property more particularly described in the Schedule hereunder from **Sri.K.Keshavaraju,** son of late Sri.Kempaiah. **Smt.Kempamma,** wife of late Sri.K.V.Nanjundappa and **Sri.Keshavaraju,** son of late Sri.K.V.Nanjundappa the present owners who have represented that they have a clear and marketable title to the same. Any person/s, financial institutions and statutory authorities who claims any right, title or interest of any nature in or any lien, charge or enforceable right in relation to the Schedule Property and/or has any objections of any nature to the aforesaid transaction should lodge such claim and/or objections in writing to the undersigned together with supporting documents within fifteen (15) days hereof, failing which it will be presumed that no valid claims or objections subsist and my clients would proceed to complete the transaction with the present owners thereof subject to compliance with other statutory and legal formalities.

SCHEDULE PROPERTY

ITEM NO – I :

All that piece and parcel of the immovable property being agricultural dry land measuring an extent of about 04 guntas comprised in Sy.No.99/1 (Old Sy.No.99) of Kundana Village, Kundana Hobli, Devanahalli Taluk, Bangalore Rural Taluk and bounded on the: **East by** : Lands comprised in Sy.No.100, **West by** : Lands comprised in Sy.No.99/2, **North by** : Lands comprised in Sy.No.106, **South by** : Lands comprised in Sy.No.99/2.

ITEM NO – II

All that piece and parcel of the immovable property being agricultural dry land measuring an extent of about 28 guntas comprised in Sy.No.101/1 of Kundana Village, Kundana Hobli, Devanahalli Taluk, Bangalore Rural Taluk and bounded on the: **East by** :Lands comprised in Sy.No.101/2, **West by :** Lands comprised in Sy.No.100, **North by :** Lands comprised in Sy.No.106, **South by:** Lands comprised in Sy.No.99/6 and 101/3

Sd/-
Arvind Raghavan
For Arvind Raghavan & Associates
Advocates And Solicitors
#48, “Ishita” 2nd Floor, 2nd Main Road,
Vyalikaval, Bangalore – 560 003
MOB : 98450-04419,
E-mail – arvind_ncsr@yahoo.com
Bangalore
Date :24/11/2022

PUBLIC NOTICE

My Client intends to purchase the property more particularly described in the Schedule hereunder from **Smt.Subadramma Karanam**, the present owner who has represented that she has a clear and marketable title to the same. Any person/s, financial institutions and statutory authorities who claims any right, title or interest of any nature in or any lien, charge or enforceable right in relation to the Schedule Property and/or has any objections of any nature to the aforesaid transaction should lodge such claim and/or objections in writing to the undersigned together with supporting documents within fifteen (15) days hereof, failing which it will be presumed that no valid claims or objections subsist and my clients would proceed to complete the transaction with the present owners thereof subject to compliance with other statutory and legal formalities.

SCHEDULE PROPERTY

All that piece and parcel of the immovable property being agricultural dry land measuring an extent of about 1 Acre 03 guntas(excusive of 1 gunta of Kharab land comprised therein) comprised in Sy.No.104 of Kundana Village, KundanaHobli, Devanahalli Taluk, Bangalore Rural Taluk and bounded on the: **East by :** Lands comprised in Sy.No.82, **West by:** Lands comprised in Sy.No.102, **North by :** Lands comprised in Sy.No.105 **South by :** Lands comprised in Sy.No.103

Sd/-
Arvind Raghavan
For Arvind Raghavan & Associates
Advocates And Solicitors
#48, “Ishita” 2nd Floor, 2nd Main Road,
Vyalikaval, Bangalore – 560 003
MOB : 98450-04419,
E-mail – arvind_ncsr@yahoo.com
Bangalore
Date :24/11/2022

ತಪ್ಪಿಸಿಕೊಳ್ಳಲು ಯತ್ನ: ಆರೋಪಿ ಕಾಲಿಗೆ ಗುಂಡು

ಪ್ರಜಾವಾಣಿ ವಾರ್ತೆ

ನೆಲಮಂಗಲ: ಸುಲಿಗೆ ಮಾಡಿದ್ದ ಸ್ಥಳದ ಪರಿಶೀಲನೆ ವೇಳೆ ಪೊಲೀಸರ ಮೇಲೆ ಹಲ್ಲೆ ನಡೆಸಿ ತಪ್ಪಿಸಿಕೊಳ್ಳಲು ಯತ್ನಿಸಿದ ಆರೋಪಿಯ ಕಾಲಿಗೆ ಗುಂಡು ಹಾರಿಸಿದ್ದು, ಆತನಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ.

‘ಸೆ.11ರಂದು ಪಟ್ಟಣದ ಬಿನ್ನಮಂಗಲ ಬಳಿ ಬೆಂಗಳೂರಿನ ದಾಸರಹಳ್ಳಿ ನಿವಾಸಿ ಪ್ರೇಮ ಅವರನ್ನು ದ್ವಿಚಕ್ರ ವಾಹನದಲ್ಲಿ ಅಡ್ಡಗಟ್ಟಿದ ಸುಲಿಗೆಕೋರರು, 120 ಗ್ರಾಂ ಚಿನ್ನಾಭರಣ ಹಾಗೂ ಮೊಬೈಲ್ ಕಸಿದುಕೊಂಡು ಪರಾರಿಯಾಗಿದ್ದರು. ಕಾರ್ಯಾಚರಣೆ ನಡೆಸಿ ಬೆಂಗಳೂರಿನ ಬ್ಯಾಡರಹಳ್ಳಿ ನಿವಾಸಿ ರಾಕೇಶ್‌ನನ್ನು (30) ಬಂಧಿಸಿ ವಿಚಾರಣೆ ನಡೆಸಿದಾಗ, ತಾನು ಮತ್ತು ಸ್ನೇಹಿತ, ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಮರಿಸಿಂಗನಹಳ್ಳಿ ನಿವಾಸಿ ಯೋಗಾನಂದ್ ಅಲಿಯಾಸ್ ನೈಟ್‌ಶಿಫ್ಟ್ ಯೋಗಿ(32) ಸೇರಿ ಕೃತ್ಯ ಎಸಗಿರುವುದಾಗಿ ಒಪ್ಪಿಕೊಂಡಿದ್ದರು. ಬಳಿಕ ಆತನನ್ನು ಬಂಧಿಸಲಾಗಿತ್ತು’ ಎಂದು ಮೂಲಗಳು ಹೇಳಿವೆ.

‘ಬುಧವಾರ ಬೆಳಿಗ್ಗೆ ಪಟ್ಟಣದ ಪೊಲೀಸರು ಸುಲಿಗೆ ನಡೆಸಿದ ಸ್ಥಳ ಮಹಜರು ಮಾಡುವ ವೇಳೆ ಯೋಗಾನಂದ್ ತಪ್ಪಿಸಿಕೊಳ್ಳಲೆಂದು ಕಾನ್‌ಸ್ಟೆಬಲ್ ಹನುಮಂತ ಹಿಪ್ಪರಗಿ ಅವರ ಮೇಲೆ ಸಿಮೆಂಟ್ ಇಟ್ಟಿಗೆಯಿಂದ ಹಲ್ಲೆ ನಡೆಸಿದ್ದಾನೆ. ನಂತರ ಪರಾರಿಯಾಗಲು ಯತ್ನಿಸಿದ್ದಾನೆ. ಇನ್‌ಸ್ಪೆಕ್ಟರ್ ಶಶಿಧರ್ ಶರಣಾಗುವಂತೆ ಸೂಚಿಸಿದರೂ ಅವರ ಮೇಲೂ ಹಲ್ಲೆಗೆ ಯತ್ನಿಸಿದ್ದಾನೆ. ರಿವಾಲ್ವರ್‌ನಿಂದ ಗಾಳಿಯಲ್ಲಿ ಗುಂಡು ಹಾರಿಸಿ ಎಚ್ಚರಿಸಿದರೂ ಮತ್ತೆ ಹಲ್ಲೆಗೆ ಮುಂದಾದಾಗ, ಕಾಲಿಗೆ ಗುಂಡು ಹಾರಿಸಿ ವಶಕ್ಕೆ ಪಡೆದು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಹನುಮಂತ ಹಿಪ್ಪರಗಿ ಕೂಡ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆರೋಪಿ ಯೋಗಾನಂದ್ ಮೇಲೆ ಕೊಲೆ, ಸುಲಿಗೆ, ದರೋಡೆ, ಕೊಲೆ ಯತ್ನ ಸೇರಿ 15ಕ್ಕೂ ಹೆಚ್ಚು ಪ್ರಕರಣಗಳು ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿವೆ.

ಅಪರಾಧ ಸುದ್ದಿಗಳು

ಯೋಗಾನಂದ್

ರಾಕೇಶ್

ಚುನಾವಣೆಗೆ ರೌಡಿಗಳಿಂದ ಹಣ ವಸೂಲಿ

ಬೆಂಗಳೂರು: ನಗರದ ಎಂಟು ವಿಭಾಗದಲ್ಲಿ ನೆಲೆಸಿದ್ದ ರೌಡಿಶೀಟರ್ ಮನೆಗಳ ಮೇಲೆ ಮಂಗಳವಾರ ತಡರಾತ್ರಿ ಸಿಸಿಬಿ ಪೊಲೀಸರು ದಾಳಿ ನಡೆಸಿ ಪರಿಶೀಲಿಸಿದರು.

86 ರೌಡಿಶೀಟರ್‌ಗಳ ಮನೆಗಳ ಮೇಲೆ ದಾಳಿ ನಡೆದಿದ್ದು, ಚಾಕು ಹಾಗೂ ಡ್ರ್ಯಾಗರ್‌ಗಳು ಪತ್ತೆಯಾಗಿವೆ.

ಕೊಲೆ, ಸುಲಿಗೆ, ಡಕಾಯಿತಿ, ದರೋಡೆ, ಸಂಚು, ಕೊಲೆ ಪ್ರಯತ್ನ, ಜೀವ ಬೆದರಿಕೆ, ಹಲ್ಲೆ ಪ್ರಕರಣಗಳ ಕುರಿತು ಈ ರೌಡಿಗಳ ವಿರುದ್ಧ ಹಲವು ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದವು. ಕೆಲವರು ಜೈಲಿನಿಂದ ಬಿಡುಗಡೆಗೊಂಡಿದ್ದರೂ ಮತ್ತೆ ಅಪರಾಧ ಪ್ರಕರಣದಲ್ಲಿ ತೊಡಗಿದ್ದರು. ಅಂತಹವರ ಮನೆಗಳ ಮೇಲೆ ದಾಳಿ ನಡೆಸಲಾಗಿದೆ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಕೆಲವು ರೌಡಿಗಳು ಮುಂಬರುವ ಬಿಬಿಎಂಪಿ ಚುನಾವಣೆಯಲ್ಲಿ ಸ್ಪರ್ಧಿಸಲು ತಯಾರಿಯಲ್ಲಿದ್ದರು. ಮತ್ತೆ ಕೆಲವರು ಪತ್ನಿಯರನ್ನು ಚುನಾವಣೆ ಕಣಕ್ಕೆ ಇಳಿಸಲು ವಾರ್ಡ್‌ನಲ್ಲಿ ಓಡಾಟ ನಡೆಸುತ್ತಿದ್ದರು. ಚುನಾವಣೆಗೆ ಹಣ ವಸೂಲಿ ಮಾಡುತ್ತಿದ್ದರು ಎಂದು ಮೂಲಗಳು ತಿಳಿಸಿವೆ.

‘ಸೈಕಲ್’ ರವಿ, ‘ಕೋತಿ’ ರಾಮ, ಆರ್.ಟಿ.ನಗರದ ವೆಂಕಟೇಶ್ ಸೇರಿ 26 ಮಂದಿಯನ್ನು ವಶಕ್ಕೆ ಪಡೆಯಲಾಗಿದೆ. ಅವರ ಆದಾಯ ಹಾಗೂ ರೌಡಿ ಚಟುವಟಿಕೆಗಳ ಬಗ್ಗೆ ತನಿಖೆ ನಡೆಸಲಾಗುವುದು. ನ್ಯಾಯಾಲಯಕ್ಕೆ ಹಾಜರಾದ ಕೆಲವರು ತಲೆಮರೆಸಿಕೊಂಡಿದ್ದಾರೆ. ಅವರ ಪತ್ತೆ ಮಾಡಿ ವಶಕ್ಕೆ ಪಡೆಯಲಾಗುವುದು’ ಎಂದು ಮೂಲಗಳು ತಿಳಿಸಿವೆ.

ಇನ್ನು ಬಸವನಗುಡಿಯಲ್ಲಿ ನಡೆಯುತ್ತಿರುವ ಕಡಲೆಕಾಯಿ ಪರಿಷೆಗೆ ಬಂದಿದ್ದ ರೌಡಿಯನ್ನು ವಶಕ್ಕೆ ಪಡೆಯಲಾಗಿದೆ. ಐವರು ಎಸಿಪಿ ಹಾಗೂ 20 ಇನ್‌ಸ್ಪೆಕ್ಟರ್‌ಗಳು ಕಾರ್ಯಾಚರಣೆಯಲ್ಲಿ ತೊಡಗಿದ್ದರು.

ಟೆಕ್ಕಿ ಆತ್ಮಹತ್ಯೆ– ಪತಿ ಬಂಧನ: ಸಾಫ್ಟ್‌ವೇರ್ ಎಂಜಿನಿಯರ್ ಶ್ವೇತಾ (27) ಎಂಬುವರು ಆತ್ಮಹತ್ಯೆ ಮಾಡಿಕೊಂಡಿದ್ದು, ಪತಿಯ ಕಿರುಕುಳವೇ ಕಾರಣವೆಂದು ಆಪಾದಿಸಿ ಕುಟುಂಬಸ್ಥರು ರಾಮಮೂರ್ತಿ ನಗರ ಪೊಲೀಸರಿಗೆ ದೂರು ನೀಡಿದ್ದಾರೆ. ಆರೋಪಿ ಅಭಿಷೇಕ್‌ನನ್ನು ಪೊಲೀಸರು ಬಂಧಿಸಿದ್ದಾರೆ. ರಾಮಮೂರ್ತಿ ನಗರದ ರಿಚರ್ಡ್ ಗಾರ್ಡನ್‌ನಲ್ಲಿ ಶ್ವೇತಾ ನೆಲೆಸಿದ್ದರು.

‘ಶ್ವೇತಾ ಅವರನ್ನು ಐಟಿಸಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಅಭಿಷೇಕ್‌ಗೆ 11 ತಿಂಗಳ ಹಿಂದೆ ವಿವಾಹ ಮಾಡಿಕೊಡಲಾಗಿತ್ತು. ಶ್ವೇತಾ ಅವರು ಐ.ಬಿ.ಎಂ ಕಂಪನಿ ಉದ್ಯೋಗಿ ಆಗಿದ್ದರು. ಅಭಿಷೇಕ್ ಅವರಿಗೆ ಮದುವೆಗೂ ಮೊದಲು ಯುವತಿಯೊಬ್ಬರ ಪರಿಚಯವಿತ್ತು. ವಿವಾಹದ ನಂತರವೂ ಈ ಸಂಬಂಧ ಮುಂದುವರಿದಿತ್ತು. ಈ ವಿಚಾರಕ್ಕೆ ಇಬ್ಬರ ನಡುವೆ ಗಲಾಟೆ ನಡೆಯುತ್ತಿತ್ತು. ಕುಟುಂಬಸ್ಥರು ರಾಜಿ ಸಂಧಾನ ನಡೆಸಿದ್ದರು. ಈಚೆಗೆ ಗಲಾಟೆ ನಡೆದು ಶ್ವೇತಾ ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮಹಿಳೆಯರಿಗೆ ಆಮಿಷ– ಮೂವರ ಬಂಧನ: ನರ್ಸಿಂಗ್ ಸೆಂಟರ್ ಹೆಸರಿನಲ್ಲಿ ಮಹಿಳೆಯರನ್ನು ಸೆಳೆದು ಲಾಡ್ಜ್‌ಗಳಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದ ಮೂವರು ಆರೋಪಿಗಳನ್ನು ಕಾಟನ್‌ಪೇಟೆ ಪೊಲೀಸರು ಬಂಧಿಸಿದ್ದಾರೆ. ನಾಲ್ವರು ಮಹಿಳೆಯರನ್ನು ಪೊಲೀಸರು ರಕ್ಷಿಸಿದ್ದಾರೆ.

‘ಗಂಧರ್ವ ಡಿಲಕ್ಸ್ ಲಾಡ್ಜ್‌ನಲ್ಲಿ ಹೊರರಾಜ್ಯದ ಮಹಿಳೆಯರನ್ನು ಕರೆತಂದು ಹೆಚ್ಚಿನ ಹಣ, ಕೆಲಸ ನೀಡುವ ಆಮಿಷವೊಡ್ಡಿ ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದರು. ಲಾಡ್ಜ್‌ನ ಮಾಲೀಕ, ವ್ಯವಸ್ಥಾಪಕ ಹಾಗೂ ಮಧ್ಯವರ್ತಿಗಳು ತಲೆಮರೆಸಿಕೊಂಡಿದ್ದಾರೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಸಾಲ ಪಡೆದು ಬ್ಯಾಂಕ್‌ಗೆ ವಂಚನೆ

ಬೆಂಗಳೂರು: ರಾಷ್ಟ್ರೀಯ ಬ್ಯಾಂಕ್‌ಗಳಲ್ಲಿ ನಕಲಿ ಚಿನ್ನಾಭರಣ ಅಡಮಾನವಿಟ್ಟು ಕೋಟ್ಯಂತರ ರೂಪಾಯಿ ವಂಚಿಸುತ್ತಿದ್ದ ಮೂವರು ಆರೋಪಿಗಳನ್ನು ವಿಜಯನಗರ ಪೊಲೀಸರು ಬಂಧಿಸಿದ್ದಾರೆ.

ಅರುಣ್ ರಾಜು ಕಾನಡೆ (30), ಸತ್ಯಾನಂದ (28) ಹಾಗೂ ದತ್ತಾತ್ರೇಯ ಬಾಕಳೆ (28) ಬಂಧಿತರು.

‘ವಿಜಯನಗರದ ಬ್ಯಾಂಕ್ ಆಫ್ ಬರೋಡ ಶಾಖೆಗೆ ಬಂದಿದ್ದ ಮೂವರು ಆರೋಪಿಗಳು 235 ಗ್ರಾಂ ಚಿನ್ನಾಭರಣವನ್ನು ಜಯಲಕ್ಷ್ಮಿ ಹೆಸರಿನಲ್ಲಿ ಅಡಮಾನ ಮಾಡಲು ಮುಂದಾಗಿದ್ದರು. ₹ 7.15 ಲಕ್ಷ ಸಾಲ ನೀಡುವಂತೆಯೂ ಮನವಿ ಸಲ್ಲಿಸಿದ್ದರು. ಬ್ಯಾಂಕ್ ವ್ಯವಸ್ಥಾಪಕರಿಗೆ ಅನುಮಾನ ಬಂದು ಆರೋಪಿಗಳು ನೀಡಿದ್ದ ಚಿನ್ನವನ್ನು ಪರೀಕ್ಷೆಗೆ ಒಳಪಡಿಸಿದ್ದರು. ನಕಲಿ ಎಂದು ಸಾಬೀತಾದ ಮೇಲೆ ವ್ಯವಸ್ಥಾಪಕ ಮಹೇಶ್ ಸಿ. ಹೂಗಾರ ದೂರು ನೀಡಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ತಾಮ್ರದ ಮೇಲೆ ಚಿನ್ನದ ಲೇಪನ ಮಾಡಿ ಹಾಲ್‌ಮಾರ್ಕ್ ಗುರುತು ಮುದ್ರಿಸಿರುವ ನಕಲಿ ಚಿನ್ನಾಭರಣವನ್ನು ಬ್ಯಾಂಕ್‌ಗಳಿಗೆ ನೀಡಿ ಸಾಲ ಪಡೆಯುತ್ತಿದ್ದರು. ಈ ನಕಲಿ ಚಿನ್ನವನ್ನು ಪಶ್ಚಿಮ ಬಂಗಾಳದಿಂದ ಕೊರಿಯರ್ ಮೂಲಕ ಆಮದು ಮಾಡಿಕೊಂಡು ರಾಷ್ಟ್ರೀಯ ಬ್ಯಾಂಕ್‌ಗಳಲ್ಲಿ ಅಡಮಾನವಿಟ್ಟು ಸಾಲ ಪಡೆದು ವಂಚಿಸುತ್ತಿದ್ದರು. ಗುಜರಾತ್ ರಾಜ್ಯದ ಸೂರತ್ ನಗರ, ರಾಜ್ಯದ ಬೆಂಗಳೂರು, ಉಡುಪಿ, ಗದಗ, ಕೊಪ್ಪಳ, ಹಬ್ಬಳ್ಳಿಯ ವಿವಿಧ ಬ್ಯಾಂಕ್‌ಗಳಲ್ಲಿ ಅಂದಾಜು 15 ಕೆ.ಜಿ. ನಕಲಿ ಚಿನ್ನಾಭರಣ ಅಡಮಾನವಿಟ್ಟು ವಂಚಿಸಿದ್ದರು. ಬಂಧಿತರಿಂದ ಒಂದೂವರೆ ಕೆ.ಜಿಯಷ್ಟು ನಕಲಿ ಚಿನ್ನಾಭರಣ ಜಪ್ತಿ ಮಾಡಲಾಗಿದೆ’ ಎಂದು ಪಶ್ಚಿಮ ವಿಭಾಗದ ಡಿಸಿಪಿ ಲಕ್ಷ್ಮಣ ನಿಂಬರಗಿ ಅವರು ತಿಳಿಸಿದ್ದಾರೆ.

ಪ್ರಿ–ಫಿಕ್ಸ್ಡ್ ಆಟೊ ಕೌಂಟರ್ ಆರಂಭ

ಬೆಂಗಳೂರು: ನಗರದಲ್ಲಿ ಹಂತ–ಹಂತವಾಗಿ ಪ್ರಿ–ಫಿಕ್ಸ್ಡ್ (ಪೂರ್ವ ನಿಗದಿತ ದರ) ಆಟೊರಿಕ್ಷಾ ಕೌಂಟರ್‌ಗಳನ್ನು ಪುನರ್ ಆರಂಭಿಸಲು ಸಂಚಾರ ಪೊಲೀಸರು ಮುಂದಾಗಿದ್ದು, ಎಂ.ಜಿ. ರಸ್ತೆಯಲ್ಲಿ ಈ ಕೌಂಟರ್ ಮತ್ತೆ ತೆರೆದಿದ್ದಾರೆ.

ಕೋರಮಂಗಲದ ಫೋರಂ ಮಾಲ್, ಕಮರ್ಷಿಯಲ್ ಸ್ಟ್ರೀಟ್, ಮೆಜೆಸ್ಟಿಕ್ ಬಳಿ ಈ ಕೌಂಟರ್‌ಗಳು ಶೀಘ್ರವೇ ಮರು ಚಾಲನೆ ಪಡೆದುಕೊಳ್ಳಲಿವೆ. ‘ಚಾಲಕರು ಹೆಚ್ಚಿನ ದರ ಪಡೆಯುವುದಕ್ಕೆ ಇದರಿಂದ ಕಡಿವಾಣ ಬೀಳಲಿದೆ. ಪ್ರಿ–ಫಿಕ್ಸ್ಡ್ ಮತ್ತು ಪ್ರಿ–ಪೇಯ್ಡ್ ಕೌಂಟರ್‌ಗಳಲ್ಲಿ ಪ್ರಯಾಣ ದರಪಟ್ಟಿಗಳನ್ನು ಹಿಡಿದು ಪೊಲೀಸರು ಪರಿಶೀಲನೆ ನಡೆಸಲಿದ್ದಾರೆ’ ಎಂದು ನಗರದ ಪೊಲೀಸ್ ವಿಶೇಷ ಆಯುಕ್ತ(ಸಂಚಾರ) ಎಂ. ಅಬ್ದುಲ್ ಸಲೀಂ ತಿಳಿಸಿದರು.

‘ಈಗಾಗಲೇ ಇರುವ ಪ್ರಿ–ಪೇಯ್ಡ್ ಕೌಂಟರ್‌ಗಳಿಗೆ ಮರು ಚಾಲನೆ ನೀಡಲು ಬೆಂಗಳೂರು ಮೆಟ್ರೊ ರೈಲು ನಿಗಮದ ಜತೆ ಒಟ್ಟಾಗಿ ಕೆಲಸ ಮಾಡಲಿದ್ದೇವೆ. ಜನನಿಬಿಡ ಮತ್ತು ಮೆಟ್ರೊ ನಿಲ್ದಾಣಗಳಲ್ಲಿ ಪ್ರಿ–ಫಿಕ್ಸ್ಡ್ ಕೌಂಟರ್‌ಗಳು ಕಾರ್ಯಾರಂಭವಾಗಲಿವೆ. ಪ್ರಯಾಣಿಕರು ಕೊನೆಯ ತಾಣಗಳನ್ನು ತಲುಪಲು ಇದರಿಂದ ಅನುಕೂಲ ಆಗಲಿದೆ’ ಎಂದರು.

‘ಫ್ರೀಡಂ ಪಾರ್ಕ್’ನಲ್ಲಿ ರೈತ ಸಂಘಟನೆಗಳಿಂದ ಪೊರಕೆ ಹಿಡಿದು ಚಳವಳಿ

ಎಫ್‌ಆರ್‌ಪಿ: ಕಬ್ಬು ಬೆಳೆಗಾರರಿಂದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ರಾಜ್ಯ ಕಬ್ಬು ಬೆಳೆಗಾರರ ಸಂಘ ಹಾಗೂ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ಎಫ್‌ಆರ್‌ಪಿ ನಿಗದಿಗೆ ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪೊರಕೆ ಚಳವಳಿ ನಡೆಯಿತು – ಪ್ರಜಾವಾಣಿ ಚಿತ್ರ

ಬೆಂಗಳೂರು: ಕಬ್ಬಿನ ಬೆಳೆಗೆ ‘ನ್ಯಾಯಸಮ್ಮತ ಹಾಗೂ ಪ್ರೋತ್ಸಾಹದಾಯಕ ದರ’ (ಎಫ್‌ಆರ್‌ಪಿ) ನಿಗದಿಗೆ ಆಗ್ರಹಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘ ಹಾಗೂ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುತ್ತಿರುವ ಪ್ರತಿಭಟನೆಯು 2ನೇ ದಿನಕ್ಕೆ ಕಾಲಿಟ್ಟಿದ್ದು, ಬುಧವಾರ ರೈತರು ಪೊರಕೆ ಚಳವಳಿ ನಡೆಸಿದರು.

ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ನೇತೃತ್ವದಲ್ಲಿ ಅಹೋರಾತ್ರಿ ಧರಣಿ ನಡೆಯುತ್ತಿದ್ದು ರಾಜ್ಯದ ವಿವಿಧ ಜಿಲ್ಲೆಗಳ ರೈತರು ಈ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದಾರೆ.

‘ಎಫ್‌ಆರ್‌ಪಿ ದರ ನಿಗದಿಗೆ ರಾಜ್ಯ ಸರ್ಕಾರವು ವಿಳಂಬ ನೀತಿ ಅನುಸರಿಸುತ್ತಿದೆ. ಸಮಿತಿ ರಚಿಸಿ ನ.20ರ ಒಳಗೆ ತೀರ್ಮಾನ ಕೈಗೊಳ್ಳುವುದಾಗಿ ಸಕ್ಕರೆ ಖಾತೆ ಸಚಿವರು ನೀಡಿದ್ದ ಭರವಸೆ ಹುಸಿಯಾಗಿದೆ. ಈ ಸರ್ಕಾರವು ನುಡಿದಂತೆ ನಡೆಯುತ್ತಿಲ್ಲ’ ಎಂದು ಬೆಳೆಗಾರರು ಆಪಾದಿಸಿದರು.

ಕುರುಬೂರು ಶಾಂತಕುಮಾರ್ ಮಾತನಾಡಿ, ‘ಕಬ್ಬಿನ ಉತ್ಪಾದನಾ ವೆಚ್ಚವು ಶೇ 20ರಷ್ಟು ಏರಿಕೆಯಾಗಿದೆ. ಆದರೆ, ಸೂಕ್ತ ಬೆಲೆ ಸಿಗುತ್ತಿಲ್ಲ. ಕೇಂದ್ರ ಸರ್ಕಾರ ಎಫ್‌ಆರ್‌ಪಿ ದರ ನಿಗದಿ ಮಾಡುವಾಗ ಬೆಳೆಗಾರರಿಗೆ ಮೋಸ ಎಸಗುತ್ತಿದೆ. ಕಬ್ಬು ಪೂರೈಕೆ ಮಾಡಿದ ರೈತನಿಗೆ 14 ದಿನದಲ್ಲಿ ಹಣ ಪಾವತಿಸಬೇಕೆಂಬ ಕಾನೂನು ಜಾರಿಯಲ್ಲಿದ್ದರೂ ಪಾಲನೆ ಮಾಡುತ್ತಿಲ್ಲ. ಕಾರ್ಖಾನೆಗಳ ವಿರುದ್ಧ ಯಾವ ಜಿಲ್ಲಾಧಿಕಾರಿಗಳು ಕ್ರಮ ಕೈಗೊಳ್ಳುತ್ತಿಲ್ಲ’ ಎಂದು ದೂರಿದರು.

‘ಕಬ್ಬು ಬೆಳೆಗಾರರು ದೂರು ನೀಡಿದರೆ ಕಸದ ಬುಟ್ಟಿಗೆ ಎಸೆಯಲಾಗುತ್ತಿದೆ. ಬೆಳಗಾವಿ ಜಿಲ್ಲೆಯಲ್ಲೇ 189 ರೈತರಿಗೆ ಕಬ್ಬಿನ ಹಣ ಪಾವತಿಸಿಲ್ಲ’ ಎಂದು ಆಪಾದಿಸಿದರು.

> **ಕಾರ್ಖಾನೆಗಳ ಧೋರಣೆಯಿಂದ ಕಬ್ಬು ಕಟಾವು ವಿಳಂಬವಾಗುತ್ತಿದೆ. ವಿಳಂಬದ ಅವಧಿಗೆ ಶೇ 15ರಷ್ಟು ಬಡ್ಡಿ ಸೇರಿಸಿ ಕಾರ್ಖಾನೆಗಳು ಹೆಚ್ಚುವರಿ ಹಣ ನೀಡಬೇಕು**
> **ಕುರುಬೂರು ಶಾಂತಕುಮಾರ್**
> ಅಧ್ಯಕ್ಷ, ರಾಜ್ಯ ರೈತ ಸಂಘಟನೆಗಳ ಒಕ್ಕೂಟ

ಉತ್ತರ ಕನ್ನಡ ಜಿಲ್ಲಾ ಅಧ್ಯಕ್ಷ ಕುಮಾರ್ ಬುಬಾಟಿ, ಧಾರವಾಡ ಜಿಲ್ಲಾ ಅಧ್ಯಕ್ಷ ನಿಜಗುಣ ಕೆಲಗೇರಿ, ರಾಜ್ಯ ಉಪಾಧ್ಯಕ್ಷ ಸುರೇಶ್ ಮ. ಪಾಟೀಲ, ಉಳುವಪ್ಪ ಬಳಗೇರಿ, ನಿಂಗನಗೌಡ, ಬೆಳಗಾವಿ ಜಿಲ್ಲಾ ಅಧ್ಯಕ್ಷ ಗುರುಸಿದ್ದಪ್ಪ ಕೂಟಗಿ, ಎಸ್.ಡಿ ಸಿದ್ನಾಳ, ಬಾಗಲಕೋಟೆ ಜಿಲ್ಲಾ ಉಪಾಧ್ಯಕ್ಷ ಕಲ್ಲಪ್ಪ ಬಿರಾದಾರ, ಜಿ.ವಿ. ಲಕ್ಷ್ಮಿದೇವಿ, ಮಂಜುಳಾ ಪಾಟೀಲ್, ಪಿ.ಸೋಮಶೇಖರ್, ಮೈಸೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಬರಡನಪುರ ನಾಗರಾಜ್, ಕಿರಗಸೂರ್ ಶಂಕರ, ಹಾಡ್ಯರವಿ ಹಾಜರಿದ್ದರು.

1 ಕೆ.ಜಿ. ಚಿನ್ನ ಬಹುಮಾನ ಪಡೆದ ಸಾಂತ್ರಾ ಇಗ್ನೇಷಿಯಸ್!

ಬೆಂಗಳೂರು: ಜುವೆಲ್ಲರಿ ಅಸೋಸಿಯೇಷನ್ ಬೆಂಗಳೂರು (ಜೆಎಬಿ) ಆಯೋಜಿಸಿದ್ದ ‘ಬೆಂಗಳೂರು ಗೋಲ್ಡ್ ಶಾಪಿಂಗ್ ಫೆಸ್ಟಿವಲ್ – 2022’ ಸಂದರ್ಭದಲ್ಲಿ ನಡೆದ ಲಕ್ಕಿ ಡ್ರಾದಲ್ಲಿ ಬಂಪರ್ ಬಹುಮಾನ ಗೆದ್ದುಕೊಂಡಿರುವ ಸಾಂತ್ರಾ ಇಗ್ನೇಷಿಯಸ್ ಅವರಿಗೆ ಬಹುಮಾನವನ್ನು ಬುಧವಾರ ನೀಡಲಾಯಿತು.

ಬಹುಮಾನವು 1 ಕೆ.ಜಿ. ಚಿನ್ನವನ್ನು ಹೊಂದಿದೆ! ಬಹುಮಾನ ನೀಡುವ ಕಾರ್ಯಕ್ರಮವು ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಕಂಪನಿಯ ಎಂ.ಜಿ. ರಸ್ತೆ ಶಾಖೆಯಲ್ಲಿ ಬುಧವಾರ ಆಯೋಜಿಸಲಾಗಿತ್ತು. ಸಾಂತ್ರಾ ಅವರು ಮಲಬಾರ್ ಗೋಲ್ಡ್‌ನ ಕಮ್ಮನಹಳ್ಳಿ ಶಾಖೆಯಲ್ಲಿ ಚಿನ್ನಾಭರಣ ಖರೀದಿಸಿ, ಲಕ್ಕಿ ಡ್ರಾ ಕೂಪನ್ ಪಡೆದುಕೊಂಡಿದ್ದರು ಎಂದು ಪ್ರಕಟಣೆ ತಿಳಿಸಿದೆ.

ಜೆಎಬಿ ಅಧ್ಯಕ್ಷ ಪ್ರಶಾಂತ್ ಮೆಹ್ತಾ, ಮಲಬಾರ್ ಗೋಲ್ಡ್‌ನ ಪ್ರಾದೇಶಿಕ ಮುಖ್ಯಸ್ಥ ಫಿಲ್ಸರ್ ಬಾಬು ಬಹುಮಾನ ಹಸ್ತಾಂತರಿಸಿದರು. ಸೆಪ್ಟೆಂಬರ್ 26ರಿಂದ ನವೆಂಬರ್ 1ವರೆಗೆ ನಡೆದ ಶಾಪಿಂಗ್ ಫೆಸ್ಟಿವಲ್‌ನಲ್ಲಿ 127ಕ್ಕೂ ಹೆಚ್ಚು ಆಭರಣ ವ್ಯಾಪಾರಿಗಳು ಭಾಗಿಯಾಗಿದ್ದರು.

ಎಸ್‌ಡಿಪಿಐ ಕಚೇರಿ ತೆರವಿಗೆ ಅರ್ಜಿ: ಹೈಕೋರ್ಟ್‌ನಿಂದ ನೋಟಿಸ್ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾಗೆ (ಎಸ್‌ಡಿಪಿಐ) ಸೇರಿದ ಸ್ಥಳಗಳ ಮೇಲೆ ದಾಳಿ ನಡೆಸಿ, ಜಪ್ತಿ ಮಾಡಿರುವ ಸ್ವತ್ತುಗಳಿಗೆ ಹಾಕಲಾದ ಸೀಲು (ಮೊಹರು) ತೆರವುಗೊಳಿಸಲು ನಿರ್ದೇಶಿಸಬೇಕು’ ಎಂದು ಕೋರಲಾಗಿರುವ ರಿಟ್ ಅರ್ಜಿಗೆ ಸಂಬಂಧಿಸಿದಂತೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಎಸ್‌ಡಿಪಿಐ ಪ್ರಧಾನ ಕಾರ್ಯದರ್ಶಿ ಅನ್ವರ್ ಸಾದತ್ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ, ಮಂಗಳೂರು ನಗರ ಪೊಲೀಸ್ ಹಾಗೂ ಪೊಲೀಸ್ ವರಿಷ್ಠಾಧಿಕಾರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಡಿಸೆಂಬರ್ 6ಕ್ಕೆ ಮುಂದೂಡಿದೆ.

‘ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಎಸ್‌ಡಿಪಿಐಗೆ ಸೇರಿದ 200ಕ್ಕೂ ಅಧಿಕ ಚುನಾಯಿತ ಜನಪ್ರತಿನಿಧಿಗಳಿದ್ದು, ಅವರಿಗೆ ರಾಜಕೀಯ ಚಟುವಟಿಕೆ ನಡೆಸಲು ಕಚೇರಿಯ ಅಗತ್ಯವಿದೆ. ಆದ್ದರಿಂದ, ಕಚೇರಿಗಳಿಗೆ ಹಾಕಲಾಗಿರುವ ಸೀಲು ತೆರವುಗೊಳಿಸಲು ಜಿಲ್ಲಾಧಿಕಾರಿಗೆ ನಿರ್ದೇಶಿಸಬೇಕು’ ಎಂದು ಅರ್ಜಿಯಲ್ಲಿ ಮನವಿ ಮಾಡಲಾಗಿದೆ.

ಅರ್ಜಿಯಲ್ಲಿ ಏನಿದೆ?: ‘ಎಸ್‌ಡಿಪಿಐ, ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಜತೆ ಯಾವುದೇ ಸಂಪರ್ಕ ಹೊಂದಿಲ್ಲ. ಪಿಎಫ್‌ಐ ಮತ್ತದರ ಸಂಸ್ಥೆಗಳನ್ನು ನಿಷೇಧಿಸುವ ಸಂದರ್ಭದಲ್ಲಿ ಗೃಹ ಸಚಿವಾಲಯ ಎಸ್‌ಡಿಪಿಐ ಹೆಸರು ಸೇರಿಸಿಲ್ಲ. ಆದರೂ ಪ್ರತಿವಾದಿಗಳು ಪಕ್ಷಕ್ಕೆ ಸೇರಿದ ಸ್ಥಳಗಳ ಮೇಲೆ ಅಕ್ರಮವಾಗಿ ದಾಳಿ ನಡೆಸಿ, ಜಪ್ತಿ ಮಾಡಿದ್ದಾರೆ’ ಎಂದು ಅರ್ಜಿಯಲ್ಲಿ ಆಕ್ಷೇಪಿಸಲಾಗಿದೆ.

‘ಪ್ರಜಾಪ್ರತಿನಿಧಿ ಕಾಯ್ದೆ-1951ರ ಅಡಿ ನೋಂದಾಯಿತ ರಾಜಕೀಯ ಪಕ್ಷವಾಗಿರುವ ಎಸ್‌ಡಿಪಿಐ, ತುಳಿತಕ್ಕೊಳಗಾದ ಸಮುದಾಯಗಳ ಪರವಾಗಿ ಕೆಲಸ ಮಾಡುತ್ತಿದೆ. ಇದೇ ಕಾರಣಕ್ಕೆ ಪಕ್ಷವು ಕೆಲ ವಿಭಜನಕಾರಿ ಶಕ್ತಿಗಳ ಕೆಂಗಣ್ಣಿಗೆ ಗುರಿಯಾಗಿದೆ. ಪಕ್ಷದ ಬಗ್ಗೆ ಸಾರ್ವಜನಿಕ ವಲಯದಲ್ಲಿ ದುರಭಿಪ್ರಾಯ ಮೂಡಿಸಲು ಸರ್ಕಾರಿ ಸಂಸ್ಥೆಗಳ ಮೇಲೆ ಒತ್ತಡ ಹಾಕಲಾಗುತ್ತಿದೆ’ ಎಂದು ಆರೋಪಿಸಲಾಗಿದೆ.

‘ಮಂಗಳೂರಿನ ಬೆಂಗ್ರೆ ಎಸ್‌ಡಿಪಿಐ ಮಾಹಿತಿ ಮತ್ತು ಸೇವಾ ಕೇಂದ್ರ, ಬಂಟ್ವಾಳ, ಅಡ್ಡೂರು, ಕುದ್ರೋಳಿ, ಪಾವೂರು, ಸುರತ್ಕಲ್‌ನ ಚೊಕ್ಕಬೆಟ್ಟು, ಪರಂಗಿಪೇಟೆ, ಕಾಟಿಪಳ್ಳ, ಬಂಟ್ವಾಳದ ಮಂಚಿ, ಮಂಗಳೂರಿನ ನೆಲ್ಲಿಕಾಯಿ ರಸ್ತೆಯಲ್ಲಿರುವ ಕಚೇರಿ, ತಲಪಾಡಿಯ ಕೆ.ಸಿ. ರಸ್ತೆ, ಮಂಗಳೂರಿನ ಉಳ್ಳಾಲದಲ್ಲಿನ ಕಚೇರಿಗಳ ಮೇಲೆ ಅಕ್ರಮವಾಗಿ ದಾಳಿ ನಡೆಸಿ ಅವುಗಳಿಗೆ ಸೀಲು ಹಾಕಲಾಗಿದೆ’ ಎಂದು ಅರ್ಜಿದಾರರು ದೂರಿದ್ದಾರೆ.

ಭೂತಕೋಲ: ಚೇತನ್ ಅರ್ಜಿ ವಜಾ

ಎಫ್‌ಐಆರ್ ರದ್ದುಪಡಿಸಬೇಕು ಎಂದು ಕೋರಿದ್ದ ನಟ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಕಾಂತಾರ ಚಲನಚಿತ್ರದ ಭೂತಕೋಲ ಕುರಿತು ಚೇತನ್ ಟ್ವೀಟ್
- ಕೋಲ ಕುರಿತ ಟ್ವೀಟ್ ಅವಹೇಳನಕಾರಿಯಾಗಿದೆ ಎಂದು ದೂರು
- ಟ್ವೀಟ್‌ನಿಂದ ಯಾರಿಗೂ ತೊಂದರೆಯಾಗಿಲ್ಲ ಎಂದ ಚೇತನ್ ಪರ ವಕೀಲರು

ಬೆಂಗಳೂರು: ‘ಕಾಂತಾರ ಚಲನಚಿತ್ರದಲ್ಲಿನ ಭೂತಕೋಲ ಹಿಂದೂ ಸಂಸ್ಕೃತಿಗೆ ಸೇರುತ್ತದೆ ಎಂದು ಹೇಳಿರುವುದು ನಿಜವಲ್ಲ’ ಎಂಬ ನಟ ಚೇತನ್ ಟ್ವೀಟ್ ಆಕ್ಷೇಪಿಸಿ ದಾಖಲಿಸಲಾಗಿರುವ ಎಫ್‌ಐಆರ್ ರದ್ದುಗೊಳಿಸಲು ಹೈಕೋರ್ಟ್ ನಿರಾಕರಿಸಿದೆ.

‘ನನ್ನ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು’ ಎಂದು ಕೋರಿ ಚೇತನ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಐ. ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ಚೇತನ್, ಟ್ವಿಟರ್‌ನಲ್ಲಿ ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ. ಇದರಿಂದ ಯಾರಿಗೂ ತೊಂದರೆಯಾಗಿಲ್ಲ ಅಥವಾ ಸಮಾಜದಲ್ಲಿ ಅಶಾಂತಿಯೂ ಉಂಟಾಗಿಲ್ಲ. ಆದರೂ, ಅವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದ್ದು, ಅದನ್ನು ರದ್ದುಗೊಳಿಸಬೇಕು’ ಎಂದು ಕೋರಿದರು.

ಇದಕ್ಕೆ ಬಲವಾದ ಆಕ್ಷೇಪ ವ್ಯಕ್ತಪಡಿಸಿದ ಸರ್ಕಾರಿ ವಕೀಲರು, ‘ಅರ್ಜಿದಾರರು ಉದ್ದೇಶಪೂರ್ವಕ ವಾಗಿಯೇ ಹೇಳಿಕೆ ನೀಡಿ ವಿವಾದ ಎಬ್ಬಿಸಿದ್ದಾರೆ. ಪೊಲೀಸರು ಪ್ರಕರಣದ ತನಿಖೆ ಆರಂಭಿಸಿದ್ದು, ಈ ಹಂತದಲ್ಲಿ ಎಫ್‌ಐಆರ್ ರದ್ದುಗೊಳಿಸಬಾರದು. ಅರ್ಜಿ ವಜಾಗೊಳಿಸಿ ತನಿಖೆ ಎದುರಿಸುವಂತೆ ಆದೇಶಿಸಬೇಕು’ ಎಂದು ಮನವಿ ಮಾಡಿದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, ‘ಪ್ರಕರಣ ಇನ್ನೂ ತನಿಖಾ ಹಂತದಲ್ಲಿ ಇರುವಾಗ ಕೋರ್ಟ್ ಹಸ್ತಕ್ಷೇಪ ಮಾಡಬಾರದು’ ಎಂಬ ಸುಪ್ರೀಂಕೋರ್ಟ್ ತೀರ್ಪುಗಳನ್ನು ಉಲ್ಲೇಖಿಸಿ ಚೇತನ್ ಅರ್ಜಿಯನ್ನು ತಿರಸ್ಕರಿಸಿತು.

ಪ್ರಕರಣವೇನು?: ಕಾಂತಾರದ ಯಶಸ್ಸಿಗೆ ಪ್ರತಿಕ್ರಿಯಿಸುತ್ತಾ ಚೇತನ್ ಕಳೆದ ಅಕ್ಟೋಬರ್ 18ರಂದು ಟ್ವೀಟ್ ಮಾಡುವ ಮೂಲಕ, ‘ಪಂಬದ, ಪರವರ, ನಲಿಕೆ ಬಹುಜನ ಸಂಪ್ರದಾಯಗಳು. ಹಿಂದೂ ಧರ್ಮಕ್ಕಿಂತ ಹಿಂದಿನಿಂದಲೂ ಇವೆ. ಮೂಲನಿವಾಸಿ ಸಂಸ್ಕೃತಿಗಳನ್ನು ಪರದೆಯ ಮೇಲೆಯಾಗಲಿ, ಅದರಾಚೆಯಾಗಲಿ, ಸತ್ಯ ಸಂಗತಿಗಳೊಂದಿಗೆ ತೋರಿಸಬೇಕೆಂದು ನಾವು ಕೇಳುತ್ತೇವೆ’ ಎಂದು ಟ್ವೀಟ್ ಮಾಡಿದ್ದರು.

‘ಈ ಟ್ವೀಟ್ ಅವಹೇಳನಕಾರಿಯಾಗಿದೆ’ ಎಂದು ಆರೋಪಿಸಿ ಬಜರಂಗದಳ ಕಾರ್ಯಕರ್ತ ಶಿವಕುಮಾರ್ ಅಕ್ಟೋಬರ್ 22ರಂದು ಶೇಷಾದ್ರಿಪುರ ಠಾಣೆಯಲ್ಲಿ ದೂರು ದಾಖಲಿಸಿ, ‘ಚೇತನ್, ಕಾಂತಾರ ಚಿತ್ರದಲ್ಲಿನ ದೈವದ ಬಗೆಗಿನ ನಂಬಿಕೆ ಕುರಿತು ಅವಹೇಳನಕಾರಿ ಹೇಳಿಕೆ ನೀಡುವ ಮೂಲಕ ಸಮಾಜದಲ್ಲಿ ಅಶಾಂತಿ ಮೂಡಿಸಿದ್ದಾರೆ.

ಆದ್ದರಿಂದ ಭಾರತೀಯ ದಂಡ ಸಂಹಿತೆ–1860ರ ಕಲಂ 505ರ ಅಡಿ ಎಫ್‌ಐಆರ್ ದಾಖಲಿಸಿ ಕ್ರಮ ಕೈಗೊಳ್ಳಬೇಕು’ ಎಂದು ಕೋರಿದ್ದರು.

ಪ್ರಕರಣದಿಂದ ಕೈಬಿಡಲು ಲಂಚ: ಕಾನ್‌ಸ್ಟೆಬಲ್ ಸೆರೆ

ವಿಜಯಪುರ (ಬೆಂ.ಗ್ರಾಮಾಂತರ): ವ್ಯಕ್ತಿಯೊಬ್ಬರ ಹೆಸರನ್ನು ಅಪರಾಧ ಪ್ರಕರಣದಿಂದ ಕೈಬಿಡಲು ₹ 30 ಸಾವಿರ ಲಂಚ ಪಡೆದ ಆರೋಪದ ಮೇಲೆ ಪಟ್ಟಣದ ಪೊಲೀಸ್ ಠಾಣೆಯ ಕಾನ್‌ಸ್ಟೆಬಲ್ ಚಂದ್ರಶೇಖರ್ ಅವರನ್ನು ಲೋಕಾಯುಕ್ತ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಚಿಕ್ಕತತ್ತಮಂಗಲ ಗ್ರಾಮದ ಮಂಜುನಾಥ್ ಎಂಬುವರಿಂದ ಲಂಚ ಪಡೆಯುತ್ತಿದ್ದ ವೇಳೆ ಕಾನ್‌ಸ್ಟೆಬಲ್ ಚಂದ್ರಶೇಖರ್ ಅವರನ್ನು ಲೋಕಾಯುಕ್ತ ಪೊಲೀಸರು ಹಣದ ಸಮೇತ ವಶಕ್ಕೆ ಪಡೆದರು.

ಮಂಡಿಬೆಲೆ ಗ್ರಾ.ಪಂ. ವ್ಯಾಪ್ತಿಯ ಚಿಕ್ಕತತ್ತಮಂಗಲದ ಮಂಜುನಾಥ್ ಮತ್ತು ಅವರ ಸಹೋದರಿ ನಡುವೆ ಹಣಕಾಸಿನ ವಿಚಾರವಾಗಿ ಠಾಣೆಯಲ್ಲಿ ದೂರು ದಾಖಲಾಗಿತ್ತು. ಮಂಜುನಾಥ್ ಅವರನ್ನು ವಿಚಾರಣೆಗಾಗಿ ಠಾಣೆಗೆ ಕರೆದುಕೊಂಡು ಬಂದು ಸೆಲ್‌ನಲ್ಲಿ ಕೂರಿಸಿದ್ದರು. ಠಾಣೆಯಿಂದ ಬಿಡುಗಡೆ ಮಾಡಲು ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎನ್ನಲಾಗಿದೆ.

ಠಾಣೆಯ ಸಬ್ ಇನ್‌ಸ್ಪೆಕ್ಟರ್ ಈರಮ್ಮ ಅವರು, ಕಾನ್‌ಸ್ಟೆಬಲ್ ಮೂಲಕ ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ ಎಂದು ಪ್ರಕರಣ ಎದುರಿಸುತ್ತಿರುವ ಮಂಜುನಾಥ್, ಲೋಕಾಯುಕ್ತದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ವಿಭಾಗಕ್ಕೆ ದೂರು ನೀಡಿದ್ದರು. ದೂರುದಾರರಿಂದ ಮೊದಲ ಕಂತಿನಲ್ಲಿ ₹ 30 ಸಾವಿರ ಲಂಚ ಪಡೆಯುತ್ತಿದ್ದಾಗ ದಾಳಿ ಮಾಡಿದ ಲೋಕಾಯುಕ್ತ ಪೊಲೀಸರು ಚಂದ್ರಶೇಖರ್ ಅವರನ್ನು ಬಂಧಿಸಿದರು. ಈರಮ್ಮ ಅವರನ್ನೂ ವಶಕ್ಕೆ ಪಡೆದಿರುವ ತನಿಖಾ ತಂಡ, ಅವರ ಪಾತ್ರದ ಕುರಿತು ವಿಚಾರಣೆ ನಡೆಸುತ್ತಿದೆ.

ಲೋಕಾಯುಕ್ತದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಎಸ್.ಪಿ ಶ್ರೀನಾಥ್ ಜೋಶಿ ಮಾರ್ಗದರ್ಶನದಲ್ಲಿ ಡಿವೈಎಸ್‌ಪಿ ರೇಣುಕಾಪ್ರಸಾದ್ ಮತ್ತು ಇನ್‌ಸ್ಪೆಕ್ಟರ್ ಅಮರೇಶ್ ಗೌಡ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿದೆ.

₹ 3 ಲಕ್ಷಕ್ಕೆ ಬೇಡಿಕೆ: ದೂರುದಾರ ಮಂಜುನಾಥ್ ಮಾತನಾಡಿ, ‘ಗಲಾಟೆ ಪ್ರಕರಣದಲ್ಲಿ ನನ್ನನ್ನು ಕರೆದುಕೊಂಡು ಬಂದು ಮಧ್ಯಾಹ್ನ 12 ಗಂಟೆಯಿಂದ ಸಂಜೆವರೆಗೂ ಠಾಣೆಯ ಸೆಲ್‌ನಲ್ಲಿ ಕೂರಿಸಿದ್ದರು. ಹೊರಗೆ ಬಿಡಲು ₹ 3 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು’ ಎಂದರು.

ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಕಾಂತರಾಜು ಅಭಿಮತ

‘ಸಮಾಜಕ್ಕೆ ಬೇಕು ದಾರಿತೋರುವ ಬರಹಗಳು’

ಪ್ರಜಾವಾಣಿ ವಾರ್ತೆ

ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ‘ಡಾ. ರಾಜ್ ಆ 108 ದಿನಗಳು’ ‘ಸುಡು ಬಯಲು’ ಪುಸ್ತಕಗಳನ್ನು ಬಿಡುಗಡೆ ಮಾಡಿದರು. ಡಿ. ಉಮಾಪತಿ, ಆರ್‌.ಪಿ. ಸಾಂಬ ಸದಾಶಿವ ರೆಡ್ಡಿ, ಪದ್ಮಾ ನಾಗರಾಜ್, ಕಾಂತರಾಜು, ಎಸ್‌.ನಾಗಣ್ಣ, ಎಂ.ಎಸ್‌.ಮಣಿ, ಎಚ್‌.ಎಂ. ರೇವಣ್ಣ, ಪ್ರಕಾಶ್ ರಾಥೋಡ್ ಇದ್ದಾರೆ ಪ್ರಜಾವಾಣಿ ಚಿತ್ರ

ಬೆಂಗಳೂರು: ಸಮಕಾಲೀನ ಸಮಾಜವನ್ನು ಎಚ್ಚರಿಸುವ, ಭವಿಷ್ಯದ ಬದುಕಿಗೆ ದಾರಿ ತೋರುವ ಬರಹಗಳು ಇಂದಿನ ಅಗತ್ಯ ಎಂದು ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಕಾಂತರಾಜು ಹೇಳಿದರು.

ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಆರ್‌.ಪಿ. ಸಾಂಬಸದಾಶಿವ ರೆಡ್ಡಿ ಅವರ ‘ಡಾ.ರಾಜ್ ಆ 108 ದಿನಗಳು’ ಹಾಗೂ ಡಾ.ಎಂ.ಎಸ್‌.ಮಣಿ ಅವರ ‘ಸುಡು ಬಯಲು’ ಕೃತಿಗಳ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಕೆಲ ವಿಷಯಗಳನ್ನು ಬಹಿರಂಗವಾಗಿ ಹೇಳಿದರೆ ಸಮಸ್ಯೆಗಳು ಹೆಚ್ಚಾಗುತ್ತವೆ. ಸಮಾಜವೇ ತೊಂದರೆಗೆ ಸಿಲುಕುತ್ತದೆ. ರಾಜ್‌ಕುಮಾರ್ ಅಪಹರಣವಾದಾಗ ಅವರಿದ್ದ ಸ್ಥಿತಿಗತಿಯ ಚಿತ್ರಣ, ಬಿಡುಗಡೆಗೆ ನಡೆದ ಪ್ರಯತ್ನಗಳನ್ನು ಸಂಪೂರ್ಣವಾಗಿ ಬಹಿರಂಗ ಮಾಡುವುದು ಕಷ್ಟವಾಗಿತ್ತು. ಅಂತಹ ಸೂಕ್ಷ್ಮ ವಿಷಯಗಳ ಕುರಿತು ರೆಡ್ಡಿ ಅವರ ಕೃತಿ ಬೆಳಕು ಚೆಲ್ಲಿದೆ ಎಂದು ವಿವರಿಸಿದರು.

‘ಸುಡು ಬಯಲು’ ಕೃತಿ ಸಮಾಜದ ವಾಸ್ತವಗಳ ಚಿತ್ರಣ. ಮೌಢ್ಯಗಳ ವಿರೋಧಿ ಮನೋಭಾವ, ಜನರನ್ನು ಸಂಕಷ್ಟದ ಸಮಯದಲ್ಲಿ ಜಾಗೃತಿಗೊಳಿಸುವ ಲೇಖನಗಳು ಗಮನ ಸೆಳೆಯುತ್ತವೆ ಎಂದರು.

ಪತ್ರಕರ್ತ ಡಿ.ಉಮಾಪತಿ, ರಾಜ್ ಅಪಹರಣ ಪ್ರಕರಣದ ಎಲ್ಲ ವಾಸ್ತವಗಳು ಹೊರಗೆ ಬಂದಿಲ್ಲ. ಅಂದು ಸಮಾಜದ ಹಿತದೃಷ್ಟಿ ಮುಖ್ಯವಾಗಿತ್ತು. ರೆಡ್ಡಿ ಅವರು ಹಲವು ಸತ್ಯಸಂಗತಿಗಳನ್ನು ಬೆಳಕಿಗೆ ತಂದರೂ, ಇನ್ನೂ ಕುತೂಹಲ ಉಳಿದಿವೆ. ಕನ್ನಡದಲ್ಲಿ ಸುಡು ಬಯಲಿನಂತಹ ಕೃತಿಗಳು ವಿರಳ ಎಂದು ಹೇಳಿದರು.

‘ಡಾ.ರಾಜ್’ ಕೃತಿ ಕುರಿತು ಸಂಪಾದಕ ಎಸ್‌.ನಾಗಣ್ಣ, ‘ಸುಡು ಬಯಲು’ ಕುರಿತು ಕರ್ನಾಟಕ ಮಾಧ್ಯಮ ಅಕಾಡೆಮಿ ಮಾಜಿ ಅಧ್ಯಕ್ಷ ಎಂ.ಸಿದ್ದರಾಜು ಮಾತನಾಡಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಎಂ.ಬಿ. ಪಾಟೀಲ, ಮಾಜಿ ಸಚಿವ ಎಚ್‌.ಎಂ.ರೇವಣ್ಣ, ಮಾಜಿ ಸಭಾಪತಿ ವಿ.ಆರ್‌. ಸುದರ್ಶನ್, ವಿಧಾನ ಪರಿಷತ್ ಸದಸ್ಯ ಪ್ರಕಾಶ್ ರಾಥೋಡ್, ಬೆಂಗಳೂರು ಪ್ರೆಸ್‌ಕ್ಲಬ್ ಅಧ್ಯಕ್ಷ ಶ್ರೀಧರ್, ಪತ್ರಕರ್ತರಾದ ಗಂಗಾಧರ ಮೊದಲಿಯಾರ್, ಐ.ಎಚ್‌.ಸಂಗಮದೇವ, ಪದ್ಮಾ ನಾಗರಾಜ್, ಲೇಖಕರಾದ ಎಂ.ಎಸ್‌.ಮಣಿ, ಸಾಂಬಸದಾಶಿವ ರೆಡ್ಡಿ, ನೀಲಕಂಠ ಉಪಸ್ಥಿತರಿದ್ದರು.

ಕೃತಿಗಳ ಕುರಿತು
- **ಕೃತಿ:** ಡಾ.ರಾಜ್ ಆ 108 ದಿನಗಳು
- **ಲೇಖಕರು:** ಆರ್‌.ಪಿ.ಸಾಂಬಸದಾಶಿವ ರೆಡ್ಡಿ
- **ಪ್ರಕಾಶನ:** ಲಾವಣ್ಯ ಪ್ರಕಾಶನ
- **ಪುಟಗಳು:** 132
- **ಬೆಲೆ:** 150
- **ಕೃತಿ:** ಸುಡು ಬಯಲು
- **ಲೇಖಕರು:** ಡಾ.ಎಂ.ಎಸ್‌.ಮಣಿ
- **ಪ್ರಕಾಶನ:** ಐಎಚ್‌ಎಸ್ ಪ್ರಕಾಶನ
- **ಪುಟಗಳು:** 364
- **ಬೆಲೆ:** 375

ಸಂಕ್ಷಿಪ್ತ ಸುದ್ದಿ

ವಿ.ಎಸ್. ಕೃಷ್ಣಯ್ಯರ್ ಅವರ ಜನ್ಮ ಶತಮಾನೋತ್ಸವ ಸಮಾರಂಭ: ಸಾನ್ನಿಧ್ಯ: ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಅಧ್ಯಕ್ಷತೆ: ವಿ. ಸೋಮಣ್ಣ, ಉದ್ಘಾಟನೆ: ಪಿ.ಜಿ. ಆರ್. ಸಿಂಧ್ಯಾ, ಉಪಸ್ಥಿತಿ: ಸುಮಿತ್ರ. ವಿ.ಎಸ್. ಕಷ್ಣಯ್ಯರ್, ಅತಿಥಿಗಳು: ಬಸವರಾಜ ಹೊರಟ್ಟಿ, ಬಿ.ಎಲ್. ಶಂಕರ್, ಎಲ್.ಎ. ರವಿಸುಬ್ರಹ್ಮಣ್ಯ, ಯು.ಬಿ. ವೆಂಕಟೇಶ್, ಆಯೋಜನೆ: ವಿ.ಎಸ್. ಕೃಷ್ಣಯ್ಯರ್ ಜನ್ಮಶತಮಾನೋತ್ಸವ ಸಮಿತಿ, ಸ್ಥಳ: ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5.30

ಅಖಿಲ ಭಾರತ ಅಗರಬತ್ತಿ ಉತ್ಪಾದಕರ ಸಂಘದ (ಎಐಎಎಂಎ) ಎಕ್ಸ್‌ಪೊ: ಅತಿಥಿಗಳು: ಬಸವರಾಜ ಬೊಮ್ಮಾಯಿ, ಮುರುಗೇಶ್ ನಿರಾಣಿ, ಅಧ್ಯಕ್ಷತೆ: ಅರ್ಜುನ ರಂಗಾ, ಸ್ಥಳ: ತ್ರಿಪುರ ವಾಸಿನಿ, ಅರಮನೆ ಮೈದಾನ, ಬೆಳಿಗ್ಗೆ 9.30

ಅಂತರರಾಷ್ಟ್ರೀಯ ರಬ್ಬರ್ ಸಮ್ಮೇಳನ: ಉದ್ಘಾಟನೆ: ಡಾ.ಸಿ. ಎನ್. ಅಶ್ವತ್ಥನಾರಾಯಣ, ಸ್ಥಳ: ಸ್ಕಾರ್‌ಲೆಟ್ ಹಾಲ್, ಶೆರಾಟನ್ ಗ್ರ್ಯಾಂಡ್, ಬೆಂಗಳೂರು, ವೈಟ್‌ಫೀಲ್ಡ್,ಬೆಳಿಗ್ಗೆ 9.30

ಎಂಜಿನಿಯರಿಂಗ್ ವಿಜ್ಞಾನದಲ್ಲಿ ಅನ್ವಯಿಕ ಸಂಶೋಧನೆಯ ಅಂತರರಾಷ್ಟ್ರೀಯ ಸಮ್ಮೇಳನ: ಅತಿಥಿಗಳು: ಪಿ. ಬಲರಾಮ್, ಗುರುರಾಜ ಕರಜಗಿ, ಅಧ್ಯಕ್ಷತೆ: ಎಂ.ಆರ್. ಸೀತಾರಾಮ್, ಆಯೋಜನೆ ಮತ್ತು ಸ್ಥಳ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಎಂ.ಎಸ್. ರಾಮಯ್ಯನಗರ, ಬೆಳಿಗ್ಗೆ 10.30

ಬಿಜಿಎಸ್ ಸಂಸ್ಥಾಪಕ ದಿನಾಚರಣೆ, ಉತ್ಸವ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಪ್ರಕಾಶನಾಥ ಸ್ವಾಮೀಜಿ, ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ಆರ್. ಅಶೋಕ, ಅತಿಥಿಗಳು: ಎಸ್.ಟಿ. ಸೋಮಶೇಖರ್, ರಮ್ಯಾ, ಆಯೋಜನೆ ಮತ್ತು ಸ್ಥಳ: ಬಿಜಿಎಸ್ ಹೆಲ್ತ್ ಆ್ಯಂಡ್ ಎಜುಕೇಷನ್ ಸಿಟಿ ಕ್ಯಾಂಪಸ್, ಕೆಂಗೇರಿ, ಬೆಳಿಗ್ಗೆ 10.30

ನನ್ನ ನಗರ ನನ್ನ ಬಜೆಟ್: ಆಯೋಜನೆ ಮತ್ತು ಸ್ಥಳ: ಬಿಬಿಎಂಪಿ ಕೇಂದ್ರ ಕಚೇರಿ, ಹಡ್ಸನ್ ವೃತ್ತ, ಬೆಳಿಗ್ಗೆ 10.30

ಎಸ್‌ಎಫ್‌ಐ ರಾಜ್ಯಮಟ್ಟದ ಸಮಾವೇಶ: ಉದ್ಘಾಟನೆ: ವಿ.ಪಿ. ನಿರಂಜನ್ ಆರಾಧ್ಯ, ಅತಿಥಿಗಳು: ನಿತೀಶ್ ನಾರಾಯಣ್, ವಾಸುದೇವ ರೆಡ್ಡಿ ಕೆ., ಅಧ್ಯಕ್ಷತೆ: ಅಮರೇಶ ಕಡಗದ, ಉಪಸ್ಥಿತಿ: ಶಿವಕುಮಾರ್ ಮ್ಯಾಗಳಮನಿ, ಗಾಯತ್ರಿ, ಭೀಮನ್ ಗೌಡ, ಆಯೋಜನೆ: ಎಸ್‌ಎಫ್‌ಐ, ಸ್ಥಳ: ಅಲ್ಯುಮ್ನಿ ಅಸೋಸಿಯೇಷನ್ ಹಾಲ್, ಕೆ.ಆರ್. ಸರ್ಕಲ್, ಬೆಳಿಗ್ಗೆ 11

ಆಧುನಿಕ ಭೌತಚಿಕಿತ್ಸೆ ಮತ್ತು ಶ್ವಾಸಕೋಶ ಪುನರ್ವಸತಿ ಕೇಂದ್ರದ ಉದ್ಘಾಟನೆ: ಡಾ.ಕೆ. ಸುಧಾಕರ್, ಅಧ್ಯಕ್ಷತೆ: ಉದಯ್. ಬಿ. ಗರುಡಾಚಾರ್, ಅತಿಥಿಗಳು: ತೇಜಸ್ವಿ ಸೂರ್ಯ, ನವೀನ್ ರಾಜ್ ಸಿಂಗ್, ಅನಿಲ್ ಕುಮಾರ್, ಸುಜಾತ ರಾಥೋಡ್, ಶ್ರೀನಿ ಮಾಡಾಳಿ, ರಾಜೇಂದ್ರ ಖುರಾಡಿ, ಆಯೋಜನೆ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸ್ಥಳ: ಎಸ್‌ಡಿಎಸ್ ಟಿಆರ್‌ಸಿ ಮತ್ತು ರಾಜೀವಗಾಂಧಿ ಎದೆರೋಗಗಳ ಸಂಸ್ಥೆಯ ಆವರಣ, ಮಧ್ಯಾಹ್ನ 1

ಪದವಿ ಸಮಾರಂಭ: ಅತಿಥಿಗಳು: ನಿರಂಜನ ವಾನಳ್ಳಿ, ಅಧ್ಯಕ್ಷತೆ: ಟಿ. ಸೋಮಶೇಖರ್, ಆಯೋಜನೆ ಮತ್ತು ಸ್ಥಳ: ಇಂಡಿಯನ್ ಅಕಾಡೆಮಿ ಪದವಿ ಕಾಲೇಜು, ಕಲ್ಯಾಣನಗರ, ಮಧ್ಯಾಹ್ನ 2.30

ಕನ್ನಡದ ಅಂಗಳದಲ್ಲಿ ತಿಂಗಳ ಬೆಳಕು, ಕನ್ನಡ ರಾಜ್ಯೋತ್ಸವ ಒಕ್ಕೂಟದ ವಾರ್ಷಿಕೋತ್ಸವ ಸಮಾರಂಭ: ಉದ್ಘಾಟನೆ: ಬಸವರಾಜಯ್ಯ, ಅಧ್ಯಕ್ಷತೆ: ಎಂ. ತಿಮ್ಮಯ್ಯ, ಅಭಿನಂದನೆ: ಎಚ್.ಎಲ್. ಪುಷ್ಪಾ, ಅತಿಥಿಗಳು: ಶಾಂತರಾಜು, ಆಯೋಜನೆ: ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ, ಸ್ಥಳ: ಬಿಎಂಶ್ರೀ ಕಲಾಭವನ, ಬಿ.ಎಂ. ಶ್ರೀ ಪ್ರತಿಷ್ಠಾನ ರಸ್ತೆ, ನರಸಿಂಹರಾಜ ಕಾಲೊನಿ, ಸಂಜೆ 5

‘ರಾಧಾನಿವಾಸ’ ನಾಟಕ ಪ್ರದರ್ಶನ: ಅತಿಥಿಗಳು: ನೀಲಮ್ಮ, ಗಜೇಂದ್ರ, ರವಿ, ಜಯರಾಮಯ್ಯ, ರಾಘವೇಂದ್ರ, ಆಯೋಜನೆ: ಕಾವೇರಿ ಕಲಾ ಸಂಘ, ಸ್ಥಳ: ಲಾಸ್ಯರಂಜಿನಿ ಕಲಾಕ್ಷೇತ್ರ, ಲಿಂಗರಾಜಪುರ, ಸಂಜೆ 6

ಸ್ಮಶಾನ ಕುರುಕ್ಷೇತ್ರ ನಾಟಕದ ವಿಶ್ಲೇಷಣೆ: ಉಪನ್ಯಾಸಕರು: ಕಾಂತ್ರಾಜ್ ಕಸ್ತೂರಿ ತಿಮ್ಮನಹಳ್ಳಿ, ಅತಿಥಿಗಳು: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘ, ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಸಿ.ವಿ. ರಾಮನ್ ನಗರದಲ್ಲಿ 'ಹೈಟೆಕ್' ಅಭಿವೃದ್ಧಿ ಕಂಡ ಬೈರಸಂದ್ರ ಕೆಳಗಿನ ಕೆರೆ

ನಾಗರಿಕರ ಒತ್ತಾಸೆ: ಕೆರೆಗೆ ಶುಕ್ರದೆಸೆ

● ಆರ್. ಮಂಜುನಾಥ್

ಬೆಂಗಳೂರು: ಸುತ್ತಮುತ್ತಲು ಗಗನಚುಂಬಿ ಕಟ್ಟಡಗಳು. ಹೈಟೆಕ್ ರಸ್ತೆ. ಅದರ ಮಧ್ಯಭಾಗದಲ್ಲಿ ಕೊಳಕಿನ ತಾಣ... ಹೀಗಿದ್ದ ಸ್ಥಿತಿ ಇದೀಗ ಬದಲಾಗಿದೆ. ಕೊಳಕು, ಕಲ್ಮಶ, ಕೆಸರು ಎಲ್ಲವೂ ಮಾಯ. ಸ್ವಚ್ಛ ನೀರಿನ ತಾಣವಾಗಿ, ಆಹ್ಲಾದಕರ ಪರಿಸರದಿಂದ ಸ್ಥಳೀಯರ ಮನಸೆಳೆಯುತ್ತಿದೆ ಈ ಕೆರೆ.

ಇದು ಬೈರಸಂದ್ರದ ಕೆಳಗಿನ ಕೆರೆಯ ಚಿತ್ರಣ. ಸುತ್ತಲೂ ಐಟಿ–ಬಿಟಿ ಕಂಪನಿಗಳ ಕಟ್ಟಡಗಳ ಸೊಬಗು ಹೊಂದಿರುವ ಈ ಕೆರೆ ತನ್ನೆಲ್ಲ ಕಲ್ಮಶವನ್ನು ಕಳೆದುಕೊಂಡು ಸಿಂಗಾರಗೊಂಡು ಸಿದ್ಧಗೊಂಡಿದೆ. ಮಕ್ಕಳು ಸೇರಿ ಎಲ್ಲ ವಯೋಮಾನದವರ ನೆಚ್ಚಿನ ತಾಣವಾಗಿದೆ.

ಬೈರಸಂದ್ರದ ಕೆಳಗಿನ ಕೆರೆ ವಿಸ್ತೀರ್ಣದಲ್ಲಿ ದೊಡ್ಡದಾಗಿದ್ದರೂ ಕೆಲವು ವರ್ಷಗಳ ಹಿಂದೆ ಕಲ್ಮಶದ ತಾಣವಾಗಿತ್ತು. ಐಟಿ–ಬಿಟಿ ಕಂಪನಿಗಳ ನಡುವಿದ್ದ ಈ ಕೆರೆ ಅಭಿವೃದ್ಧಿಗೆ ಆಗೀಗ ಒಂದಷ್ಟು ಕೆಲಸ ನಡೆದಿದ್ದರೂ ಸಮಗ್ರ ಅಭಿವೃದ್ಧಿ ಸಾಧ್ಯವಾಗಿರಲಿಲ್ಲ. ಒಳಚರಂಡಿ ನೀರೇ ತುಂಬಿಹೋಗಿತ್ತು. ಮೀನು ಸಾಕಣೆಗೆ ಅವಕಾಶ ಮಾಡಿಕೊಡಲಾಗಿತ್ತಾದರೂ ಸ್ವಚ್ಛತೆ ಮರೀಚಿಕೆಯಾಯಿತು.

ಸಿ.ವಿ. ರಾಮನ್ ನಗರ ವಿಧಾನಸಭೆ ಕ್ಷೇತ್ರದಲ್ಲಿ ಇರುವುದೇ ಐದು ಕೆರೆ. ಆ ಪೈಕಿ ಎರಡು ರಕ್ಷಣಾ ಇಲಾಖೆಯ ಅಧೀನದಲ್ಲಿವೆ. ಹೀಗಾಗಿ ಬೈರಸಂದ್ರ ಕೆಳಗಿನ ಕೆರೆ ಉಳಿಸಿ, ರಕ್ಷಿಸಬೇಕು ಎಂಬುದು ಸ್ಥಳೀಯರ ಆಗ್ರಹವಾಗಿತ್ತು. ಸರ್ಕಾರದ ಅನುದಾನ ಹಾಗೂ ಸ್ಥಳೀಯ ಶಾಸಕರ ನಿಧಿಯಿಂದ 2019ರಲ್ಲಿ ಕೆರೆಯ ಅಭಿವೃದ್ಧಿ ಕಾರ್ಯ ಆರಂಭವಾಯಿತು. ಕೋವಿಡ್ ಕಾಲದಲ್ಲಿ ಹಲವು ತಿಂಗಳು ಕೆಲಸಗಳು ನಿಂತಿದ್ದರಿಂದ ಕಾಮಗಾರಿ ಒಂದಷ್ಟು ವಿಳಂಬವಾಯಿತು.

'ಕೆಲಸ ಮುಗಿದಾಗ ಅಥವಾ ಬಿಡುವು ಸಿಕ್ಕಾಗ ಈ ಕೆರೆಯ ದಂಡೆಯ ಮೇಲೆ ಸಹೋದ್ಯೋಗಿಗಳೆಲ್ಲ ಒಂದು ಸುತ್ತು ಹಾಕುತ್ತೇವೆ. ಕೆಲಸದ ಒತ್ತಡವೆಲ್ಲ ಕಳೆದುಹೋಗುತ್ತದೆ. ಕೆರೆಯ ಅಭಿವೃದ್ಧಿಗೆ ಹಸಿರಿನ ತಾಣವಾಗಿರುವುದು ನಮ್ಮೆಲ್ಲರಿಗೂ ಹೆಮ್ಮೆ' ಎಂದು ಐಟಿ ಕಂಪನಿ ಉದ್ಯೋಗಿಗಳಾದ ರಮೇಶ್ ರಾಜು, ಶಂಕರ್, ರೋಹಿತ್ ಹೇಳಿದರು.

ಗಗನಚುಂಬಿ ಕಟ್ಟಡಗಳ ನಡುವೆ ಬೈರಸಂದ್ರ ಕೆಳಗಿನ ಕೆರೆ ಆಕರ್ಷಣೆ

ಬೈರಸಂದ್ರ ಕೆಳಗಿನ ಕೆರೆಯ ಹಿಂದಿನ ಚಿತ್ರಣ

ಮೊದಲು ಕೆರೆಯ ಸಮೀಪ ಓಡಾಡಲೂ ಸಾಧ್ಯವಾಗುತ್ತಿರಲಿಲ್ಲ. ದುರ್ವಾಸನೆಯಿಂದ ಕೂಡಿತ್ತು. ಇದೀಗ ನಿತ್ಯವೂ ವಾಯುವಿಹಾರದ ತಾಣವಾಗಿದೆ

ಸರಸ್ವತಿ ಬಾಬು, ಕಾವೇರಿ ಬಡಾವಣೆ

ಇತ್ತೀಚಿನ ದಿನಗಳಲ್ಲಿ ಬೈರಸಂದ್ರ ಕೆರೆಯ ಸ್ವಚ್ಛ ನೀರು ನೋಡುತ್ತಾ, ಹಸಿರ ಪರಿಸರದಲ್ಲಿ ವಾಯುವಿಹಾರ ಮಾಡಿದರೆ ಒಂದು ಸುತ್ತು ಹೆಚ್ಚೇ ನಡೆಯುತ್ತೇನೆ.

ಆನಂದ, ಹೊಸ ತಿಪ್ಪಸಂದ್ರ

ಈ ಹಿಂದೆ ಯಾರೂ ಇತ್ತ ಸುಳಿಯುತ್ತಿರಲಿಲ್ಲ. ಇದೀಗ ಐಟಿ, ಬಿಟಿ ಕಂಪನಿಗಳ ನಡುವಿರುವ ಈ ಕೆರೆ ಇದೀಗ ಎಲ್ಲರಿಗೂ ನೆಚ್ಚಿನ ತಾಣವಾಗಿದೆ.

ಸುನೀಲ್ ಗೌಡ, ಜೀವನ್‌ಬಿಮಾನಗರ

ಬೈರಸಂದ್ರ ಕೆಳಗಿನ ಕೆರೆ ಮಾಹಿತಿ	
ಸರ್ವೆ ನಂ. 112	12 ಎಕರೆ 21 ಗುಂಟೆ
ನೀರ ಸಂಗ್ರಹ ತಾಣ	7 ಎಕರೆ 1 ಗುಂಟೆ
ಅಭಿವೃದ್ಧಿ ವೆಚ್ಚ	₹4.9 ಕೋಟಿ
ಏರಿ ಉದ್ದ	1.5 ಕಿ.ಮೀ

ಸೌಲಭ್ಯಗಳು: ಕೆರೆಗೆ ಒಳಚರಂಡಿ ಹರಿಯದಂತೆ ತಡೆ, ಎಸ್‌ಟಿಪಿ ಅಳವಡಿಕೆ, ಆಕರ್ಷಕ ಹುಲ್ಲುಹಾಸಿನ ನಡುವೆ ಕಲ್ಲಿನ ಆಸನ, ಕೆರೆಯ ಸುತ್ತಲು ಬೇಲಿಯ ಜೊತೆ ಬೃಹತಾಗಿ ಬೆಳೆಯುವ ಸಸಿಗಳು, ಅದಕ್ಕೆ ರಕ್ಷಾಕವಚ, ಮಕ್ಕಳಿಗೆ ಆಟದ ಸಲಕರಣೆಗಳು, ನಿರ್ವಹಣೆ, ಭದ್ರತಾ ಕೊಠಡಿ.

ಸ್ಥಳೀಯರ ಆಶಯದಂತೆ ಅಭಿವೃದ್ಧಿ...

ಬೈರಸಂದ್ರ ಕೆಳಗಿನ ಕೆರೆಯ ಪರಿಸ್ಥಿತಿ ಕಂಡು ಸಾಕಷ್ಟು ಮಂದಿ ಇದರ ಅಭಿವೃದ್ಧಿಗೆ ಒತ್ತಾಯ ಮಾಡಿದ್ದರು. ಅದಷ್ಟು ಬೇಗ ಅದನ್ನು ಪುನರುಜ್ಜೀವನಗೊಳಿಸಿ ಎಂದು ಆಗ್ರಹಿಸಿದ್ದರು. ಈ ಕೆರೆಯ ಅಭಿವೃದ್ಧಿ ಯೋಜನೆ ಹಲವು ವರ್ಷಗಳಿಂದ ಇತ್ತು. ಹೂಳೂ ತುಂಬಿದ್ದು, ಒಂದಿಷ್ಟು ಒತ್ತುವರಿಯೂ ಆಗಿತ್ತು. ರಾಜಕಾಲುವೆಯನ್ನು ನಿರ್ಮಿಸಬೇಕಿತ್ತು. ಕಲ್ಮಶ ಹರಿಯದಂತೆ ತಡೆಹಾಕಬೇಕಿತ್ತು. ನಂತರವಷ್ಟೇ ಅಭಿವೃದ್ಧಿ ಕಾರ್ಯ ಎಂಬ ಗುರಿ ಹೊಂದಲಾಯಿತು. ಅದರಂತೆ ಸಮಸ್ಯೆಗಳೆಲ್ಲವನ್ನು ನಿವಾರಿಸಿ, ಕೆರೆಯನ್ನು ಇದೀಗ ಸಮಗ್ರವಾಗಿ ಅಭಿವೃದ್ಧಿ ಮಾಡಲಾಗಿದೆ. ಸದ್ಯದಲ್ಲಿಯೇ ಅಧಿಕೃತವಾಗಿ ಉದ್ಘಾಟನೆಯನ್ನೂ ಮಾಡಲಾಗುತ್ತದೆ ಎಂದು ಸಿ.ವಿ. ರಾಮನ್ ನಗರ ವಿಧಾನಸಭೆ ಕ್ಷೇತ್ರದ ಶಾಸಕ ಎಸ್. ರಘು ಹೇಳಿದರು.

ಬಿಬಿಎಂಪಿ ಚುನಾವಣೆ: ಮತ್ತೆ 3 ತಿಂಗಳ ಕಾಲಾವಕಾಶ ಕೋರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) 243 ವಾರ್ಡ್‌ಗಳಿಗೆ ನವೆಂಬರ್ 30 ರೊಳಗೆ ಮೀಸಲಾತಿ ನಿಗದಿಪಡಿಸಬೇಕು ಹಾಗೂ ಡಿಸೆಂಬರ್ 31ರೊಳಗೆ ಚುನಾವಣೆ ನಡೆಸಬೇಕು' ಎಂದು ಹೈಕೋರ್ಟ್ ಸೆಪ್ಟೆಂಬರ್ 30ರಂದು ನೀಡಿರುವ ಆದೇಶ ಪಾಲನೆಗೆ ಮೂರು ತಿಂಗಳ ಕಾಲ ಅವಧಿ ವಿಸ್ತರಿಸುವಂತೆ ಕೋರಿ ನಗರಾಭಿವೃದ್ಧಿ ಇಲಾಖೆ ಹೈಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದೆ.

ಪ್ರಮಾಣ ಪತ್ರದಲ್ಲೇನಿದೆ?: ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸುವ ಸಂಬಂಧ ನ್ಯಾಯಮೂರ್ತಿ ಭಕ್ತವತ್ಸಲ ಆಯೋಗ ವರದಿ ಸಲ್ಲಿಸಿತ್ತು. ಆದರೆ, ಹೈಕೋರ್ಟ್ ನಿರ್ದೇಶನಗಳ ಆಧಾರದಲ್ಲಿ ವರದಿಯನ್ನು ಪುನರ್ ಪರಿಶೀಲಿಸಿ ಪರಿಷ್ಕೃತ ವರದಿ ಸಲ್ಲಿಸಲು ನ್ಯಾಯಮೂರ್ತಿ ಭಕ್ತವತ್ಸಲ ಆಯೋಗಕ್ಕೆ ಮನವಿ ಮಾಡಲಾಗಿತ್ತು. ಅದರಂತೆ, ಅಕ್ಟೋಬರ್ 31ಕ್ಕೆ ಪೂರಕ ವರದಿ ಸಲ್ಲಿಸಿದ ಆಯೋಗ, 'ಈ ಹಿಂದೆ ಸಲ್ಲಿಸಿದ್ದ ವರದಿ ಕಾನೂನುಬದ್ಧವಾಗಿದ್ದು, ಬದಲಾವಣೆಯ ಅವಶ್ಯಕತೆ ಇಲ್ಲ' ಎಂದು ಸ್ಪಷ್ಟಪಡಿಸಿತ್ತು.

'243 ವಾರ್ಡ್‌ಗಳಲ್ಲಿ ಎಸ್ಸಿ, ಎಸ್ಟಿ ವರ್ಗಗಳಿಗೆ ಮೀಸಲಾತಿ ನಿಗದಿಪಡಿಸಿದ ಬಳಿಕ ಹಿಂದುಳಿದ ವರ್ಗ ಎ ಮತ್ತು ಬಿ ಗೆ ಮೀಸಲಾತಿ ನಿಗದಿಪಡಿಸಲು ಇರುವ ವಿಧಾನವೇನು?, ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ನ ನಿರ್ದೇಶನದ ಪ್ರಕಾರ ರಾಜಕೀಯ ಮೀಸಲಾತಿಗೆ ಅರ್ಹರಿರುವ ಹಿಂದುಳಿದ ವರ್ಗಗಳ ವಿವರವಾದ ಪಟ್ಟಿಯನ್ನು ಸಲ್ಲಿಸುವಂತೆ ಹಾಗೂ ಪೂರಕ ವರದಿಯಲ್ಲಿ ಸಲ್ಲಿಸಲಾಗಿರುವ ಹಿಂದುಳಿದ ವರ್ಗಗಳ ಜನಸಂಖ್ಯೆಯ ವಾಸ್ತವ ದತ್ತಾಂಶದ (ಎಂಪೆರಿಕಲ್ ಡಾಟಾ) ದೃಢೀಕರಣವೇನು? ಎಂಬ ಅಂಶಗಳನ್ನು ಪರಿಶೀಲಿಸುವಂತೆ ನವೆಂಬರ್ 17 ರಂದು ಆಯೋಗಕ್ಕೆ ಪತ್ರ ಬರೆಯಲಾಗಿದೆ. ಇದನ್ನು ಪರಿಶೀಲಿಸಿ ಆದಷ್ಟು ಬೇಗ ಪ್ರತಿಕ್ರಿಯಿಸುವುದಾಗಿ ಆಯೋಗ ಹೇಳಿದೆ.

ಈ ಎಲ್ಲಾ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಹೊಸದಾಗಿ ಮೀಸಲಾತಿ ನಿಗದಿಪಡಿಸಬೇಕೇ ಬೇಡವೇ ಎಂಬ ತೀರ್ಮಾನಕ್ಕೆ ಬರಲು ಆಯೋಗದ ನಿಲುವು ಮುಖ್ಯವಾಗಿದೆ. ತದನಂತರವಷ್ಟೇ ಅರ್ಹ ಹಿಂದುಳಿದ ವರ್ಗಗಳಿಗೆ ನ್ಯಾಯಸಮ್ಮತ ಮೀಸಲಾತಿ ಒದಗಿಸಲು ಸರ್ಕಾರಕ್ಕೆ ಸಾಧ್ಯವಾಗಲಿದೆ' ಎಂದು ಪ್ರಮಾಣಪತ್ರದಲ್ಲಿ ವಿವರಿಸಲಾಗಿದೆ.

3,673 ಪೌರ ಕಾರ್ಮಿಕರ ಸೇವೆ ಕಾಯಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ 3,673 ಪೌರಕಾರ್ಮಿಕರನ್ನು ನೇಮಕಾತಿ ಪ್ರಕ್ರಿಯೆ ಮೂಲಕ ಕಾಯಂಗೊಳಿಸಲು ರಾಜ್ಯ ಸರ್ಕಾರ ಬುಧವಾರ ಅಧಿಸೂಚನೆ ಹೊರಡಿಸಿದೆ.

ಸದ್ಯ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಈ ಕಾರ್ಮಿಕರನ್ನು ಕಾಯಂಗೊಳಿಸಿ ತಿಂಗಳಿಗೆ ₹17,000–₹28,950 ವೇತನ ಶ್ರೇಣಿಗೆ ತರಲು ಸರ್ಕಾರ ಮುಂದಾಗಿದೆ.

ಒಟ್ಟಾರೆ 18 ಸಾವಿರ ಪೌರಕಾರ್ಮಿಕರ ಪೈಕಿ ಅನುಭವ ಆಧರಿಸಿ ಜೇಷ್ಠತಾ ಪಟ್ಟಿ ಸಿದ್ಧಪಡಿಸಲು ಪಾಲಿಕೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅಧ್ಯಕ್ಷತೆಯಲ್ಲಿ ಸಮಿತಿ ರಚನೆಯಾಗಿತ್ತು. ಗರಿಷ್ಠ ವಯೋಮಿತಿಯನ್ನು 55 ವರ್ಷಗಳಿಗೆ ಮಿತಿಗೊಳಿಸಲಾಗಿದೆ. ಕನಿಷ್ಠ ಎರಡು ವರ್ಷ ಕೆಲಸ ಮಾಡಿದ್ದಕ್ಕೆ ಮತ್ತು ವೇತನ ಪಡೆದಿರುವುದಕ್ಕೆ ದಾಖಲೆಗಳನ್ನು ಕಾರ್ಮಿಕರು ಒದಗಿಸಬೇಕು ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಸಾಮಾನ್ಯ ವರ್ಗ ಅಥವಾ ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳು ಇಲ್ಲದಿದ್ದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ಪರಿಗಣಿಸಲು ಅವಕಾಶ ಕಲ್ಪಿಸಿ ಷರತ್ತು ಸಡಿಲಿಸಲಾಗಿದೆ ಎಂದು ಅಧಿಸೂಚನೆಯಲ್ಲಿ ವಿವರಿಸಲಾಗಿದೆ.

'ರಸ್ತೆ ಗುಂಡಿ ಉಳಿದಿದ್ದರೆ ಮಾಹಿತಿ ನೀಡಿ'

ಬೆಂಗಳೂರು: ಬಿಬಿಎಂಪಿ ದಕ್ಷಿಣ ವಲಯದಲ್ಲಿ ಎಲ್ಲ ರಸ್ತೆ ಗುಂಡಿಗಳನ್ನು ಮುಚ್ಚಲಾಗಿದೆ. ನಾಗರಿಕರಿಗೆ ಗುಂಡಿ ಕಂಡುಬಂದರೆ ಅಧಿಕಾರಿಗಳ ಗಮನಕ್ಕೆ ತಂದರೆ ಕ್ರಮ ಕೈಗೊಳ್ಳಲಾಗುತ್ತದೆ ಎಂದು ದಕ್ಷಿಣ ವಲಯ ಆಯುಕ್ತ ಜಯರಾಮ್ ರಾಯಪುರ ಹೇಳಿದ್ದಾರೆ.

ದಕ್ಷಿಣ ವಲಯ ವ್ಯಾಪ್ತಿಯ ಜಯನಗರ, ಬಿಟಿಎಂ ಲೇಔಟ್, ಪದ್ಮನಾಭನಗರ, ಬಸವನಗುಡಿ, ವಿಜಯನಗರ, ಚಿಕ್ಕಪೇಟೆ ವಿಧಾನಸಭೆ ಕ್ಷೇತ್ರಗಳಲ್ಲಿ 48 ಹೊಸ ವಾರ್ಡ್‌ಗಳಿವೆ. ಎಲ್ಲ ಮುಖ್ಯ, ಉಪಮುಖ್ಯ ಮತ್ತು ವಾರ್ಡ್ ರಸ್ತೆಗಳಲ್ಲಿ ಇದ್ದ ರಸ್ತೆ ಗುಂಡಿಗಳನ್ನು ಮುಚ್ಚಲಾಗಿರುತ್ತದೆ. ಹೀಗಿದ್ದರೂ ರಸ್ತೆ ಗುಂಡಿಗಳು ಕಂಡುಬಂದಲ್ಲಿ ದಕ್ಷಿಣ ವಲಯದ ನಿಯಂತ್ರಣ ಕೊಠಡಿ 26566362/22975703ಗೆ ಸಾರ್ವಜನಿಕರು ದೂರು ನೀಡಬಹುದು. ಅಲ್ಲದೇ, ದಕ್ಷಿಣ ವಲಯದ ನಿಯಂತ್ರಣ ಕೊಠಡಿಯ ವಾಟ್ಸ್ ಆ್ಯಪ್ 9480685704ಗೆ ಜಿಯೋ ಲೊಕೇಷನ್/ವಿಳಾಸ ಇರುವ ರಸ್ತೆ ಗುಂಡಿಗಳ ಚಿತ್ರಗಳನ್ನು ಕಳುಹಿಸಬಹುದು ಎಂದು ಜಯರಾಮ್ ತಿಳಿಸಿದ್ದಾರೆ.

ಗಡಿ ವಿವಾದ: ಸಲಹಾ ಸಮಿತಿ ರಚನೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಳಗಾವಿ ಗಡಿ ವಿವಾದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ವಿರೋಧ ಪಕ್ಷಗಳ ನಾಯಕರನ್ನೂ ಸೇರಿಸಿಕೊಂಡು ತಕ್ಷಣವೇ ಸಲಹಾ ಸಮಿತಿ ರಚಿಸಬೇಕು' ಎಂದು ವಿಧಾನ ಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

'ಸುಪ್ರೀಂ ಕೋರ್ಟ್‌ನಲ್ಲಿ ವಾದ ಮಂಡಿಸಲು ರಾಜ್ಯದ ವಕೀಲರ ತಂಡವನ್ನು ಸನ್ನದ್ಧಗೊಳಿಸಬೇಕು. ಗಡಿ ವ್ಯಾಜ್ಯದ ಮೇಲುಸ್ತುವಾರಿಯನ್ನು ಹಿರಿಯ ಸಚಿವರೊಬ್ಬರಿಗೆ ಒಪ್ಪಿಸಬೇಕು. ಅಲ್ಲದೆ, ನಿಷ್ಕ್ರಿಯಗೊಂಡಿರುವ ಗಡಿ ಸಂರಕ್ಷಣಾ ಸಮಿತಿಯನ್ನು ಪುನರ್ ರಚಿಸಬೇಕು' ಎಂದು ಮುಖ್ಯಮಂತ್ರಿಯವರನ್ನು ಅವರು ಒತ್ತಾಯಿಸಿದ್ದಾರೆ.

ಕರ್ನಾಟಕ- ಮಹಾರಾಷ್ಟ್ರ ಗಡಿ ವಿವಾದಕ್ಕೆ ಸಂಬಂಧಿಸಿದ ವ್ಯಾಜ್ಯದ ಬಗ್ಗೆ ಮಹಾರಾಷ್ಟ್ರ ಸರ್ಕಾರ ಇತ್ತೀಚೆಗೆ ಅತೀವ ಆಸಕ್ತಿ ತೋರುತ್ತಿರುವ ಹಿನ್ನೆಲೆಯಲ್ಲಿ ಇತ್ತೀಚೆಗೆ ಹೇಳಿಕೆ ನೀಡಿದ್ದ ಸಿದ್ದರಾಮಯ್ಯ, ವಿರೋಧ ಪಕ್ಷಗಳನ್ನು ವಿಶ್ವಾಸಕ್ಕೆ ಪಡೆದುಕೊಂಡು ರಾಜ್ಯದ ಕಾರ್ಯತಂತ್ರವನ್ನು ರೂಪಿಸಬೇಕು ಎಂದೂ ಸಿಎಂಗೆ ಸಲಹೆ ನೀಡಿದ್ದರು.

'ಕೇಂದ್ರ ಸರ್ಕಾರ ನೇಮಿಸಿರುವ ಮಹಾಜನ ಆಯೋಗದ ವರದಿಯೇ ಅಂತಿಮ ಎನ್ನುವುದು ಈವರೆಗಿನ ಎಲ್ಲ ರಾಜ್ಯ ಸರ್ಕಾರಗಳ ನಿಲುವು. ಗಡಿ ವಿವಾದವನ್ನು ತೀರ್ಮಾನಿಸಬೇಕಾಗಿರುವುದು ಕೇಂದ್ರ ಸರ್ಕಾರವೇ ಹೊರತು, ನ್ಯಾಯಾಲಯ ಅಲ್ಲ ಎನ್ನುವುದು ಕರ್ನಾಟಕ ಸರ್ಕಾರದ ನಿಲುವು. ಕರ್ನಾಟಕಕ್ಕೆ ಸೇರಿರುವ 865 ಗ್ರಾಮಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಮಹಾರಾಷ್ಟ್ರ ಸರ್ಕಾರ ಸುಪ್ರೀಂ ಕೋರ್ಟ್‌ನ ಮೊರೆ ಹೋದ ದಿನದಿಂದ ಇದು ನಮ್ಮ ನಿಲುವಾಗಿದೆ. ನೆಲ-ಜಲ-ಭಾಷೆಯ ರಕ್ಷಣೆಗಾಗಿ ರಾಜ್ಯ ಸರ್ಕಾರ ಕೈಗೊಳ್ಳುವ ನ್ಯಾಯಬದ್ಧವಾದ ಎಲ್ಲ ಕ್ರಮಗಳನ್ನು ಕಾಂಗ್ರೆಸ್ ಬೆಂಬಲಿಸಲಿದೆ' ಎಂದಿದ್ದಾರೆ.

ಮೊರ್ಬಿ ಸೇತುವೆ ದುರಂತ: ಜಾಮೀನು ಅರ್ಜಿ ವಜಾ

ಮೊರ್ಬಿ, ಗುಜರಾತ್ (ಪಿಟಿಐ): ತೂಗು ಸೇತುವೆ ಕುಸಿತ ಪ್ರಕರಣದಲ್ಲಿ ಬಂಧಿಸಲಾಗಿರುವ ಒಂಬತ್ತು ಆರೋಪಿಗಳ ಪೈಕಿ ಎಂಟು ಜನರ ಜಾಮೀನು ಅರ್ಜಿಗಳನ್ನು ಇಲ್ಲಿನ ಕೋರ್ಟ್ ಬುಧವಾರ ತಿರಸ್ಕರಿಸಿತು.

ಅರ್ಜಿಗಳ ವಿಚಾರಣೆ ನಡೆಸಿದ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಪಿ.ಸಿ.ಜೋಶಿ, 'ಒಂಬತ್ತನೇ ಆರೋಪಿ ದೇವಾಂಗ ಪರ್ಮಾರ ಅವರ ಜಾಮೀನು ಅರ್ಜಿ ಕುರಿತು ಗುರುವಾರ (ನ.24) ಆದೇಶ ಹೊರಡಿಸಲಾಗುವುದು' ಎಂದು ಹೇಳಿದರು.

'ಮತದಾರ ಪಟ್ಟಿ ತಡೆಹಿಡಿದು ಪರಿಷ್ಕರಿಸಬೇಕು'

ಬೆಂಗಳೂರು: 'ಮುಂದಿನ ವಿಧಾನಸಭೆ ಚುನಾವಣೆ ಮುಕ್ತ, ನ್ಯಾಯಸಮ್ಮತವಾಗಿ ನಡೆಯಬೇಕಾದರೆ ಮತದಾರರ ದತ್ತಾಂಶ ಕಳವು ಪ್ರಕರಣದ ಸರಿಯಾದ ತನಿಖೆ ಆಗಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಚುನಾವಣಾ ಆಯೋಗದವರು ಈಗ ಪ್ರಕಟಿಸಿರುವ ಮತದಾರ ಪಟ್ಟಿಯನ್ನು ತಡೆಹಿಡಿದು ಪರಿಷ್ಕರಿಸಬೇಕು' ಎಂದು ಒತ್ತಾಯಿಸಿದರು.

'ಮತದಾರರ ದತ್ತಾಂಶ ಕಳವು ಪ್ರಕರಣದ ಬಗ್ಗೆ ಚುನಾವಣಾ ಆಯೋಗಕ್ಕೆ ನಾವು ದೂರು ಕೊಟ್ಟಿದ್ದೇವೆಂದು ಬಿಜೆಪಿಯವರೂ ದೂರು ಕೊಟ್ಟಿದ್ದಾರೆ. ಅದಕ್ಕೆ ಏನಾ ದರೂ ಅರ್ಥ ಇದೆಯೇ. ಅವರು ಹೀಗೆ ಮಾಡಿದರೆ ಮುಕ್ತ ಚುನಾವಣೆ ಬಗ್ಗೆ ಆತಂಕ ಉಂಟಾಗುವುದಿಲ್ಲವೇ' ಎಂದು ಪ್ರಶ್ನಿಸಿದರು.

'ಬಿಜೆಪಿಯವರು ಈ ರೀತಿ ಮಾಡುವುದನ್ನು ನೋಡಿದರೆ ಮುಕ್ತ ಚುನಾವಣೆ ನಡೆಯಲಿದೆಯೆ ಅನಿಸುತ್ತದೆಯೇ? ಅಧಿಕಾರದಲ್ಲಿ ಇರುವವರು ಯಾರು? ಮಾತೆತ್ತಿದರೆ ನಿಮ್ಮ ಅವಧಿಯಲ್ಲಿ ಆಗಿರಲಿಲ್ಲವೇ ಎಂದು ಹೇಳುತ್ತಾರೆ. ಪ್ರಕರಣದ ತೀವ್ರತೆ ಗಂಭೀರವಾಗಿದ್ದರೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಲಘುವಾಗಿ ಮಾತನಾಡುತ್ತಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಂಕ್ಷಿಪ್ತ ಸುದ್ದಿ

'ಡಿಜಿಟಲ್ ಮಾಧ್ಯಮ ನಿಯಂತ್ರಣಕ್ಕೆ ಮಸೂದೆ'

ಜೈಪುರ (ಪಿಟಿಐ): ಡಿಜಿಟಲ್ ಮಾಧ್ಯಮವನ್ನು ನಿಯಂತ್ರಿಸುವ ಸಂಬಂಧ ಮಸೂದೆಯನ್ನು ಸಿದ್ಧಪಡಿಸಲಾಗುತ್ತಿದೆ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಬುಧವಾರ ಇಲ್ಲಿ ಹೇಳಿದರು.

ಹಿಂದಿ ದೈನಿಕ ಮಹಾನಗರ್ ಟೈಮ್ಸ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಡಿಜಿಟಲ್ ಮಾಧ್ಯಮವು ಅವಕಾಶಗಳನ್ನು ನೀಡುವ ಜೊತೆಗೆ ಸವಾಲುಗಳನ್ನು ಒಡ್ಡುತ್ತಿದೆ. ಸಮತೋಲನ ಕಾಪಾಡಿಕೊಳ್ಳುವ ಸಲುವಾಗಿ ಯಾವ ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ಸರ್ಕಾರ ಚಿಂತನೆ ನಡೆಸುತ್ತಿದೆ' ಎಂದರು.

'ಅಗ್ನಿ–3' ಕ್ಷಿಪಣಿ: ತರಬೇತಿ ಉಡಾವಣೆ ಯಶಸ್ವಿ

ಭುವನೇಶ್ವರ (ಪಿಟಿಐ): ಒಡಿಶಾ ಕರಾವಳಿ ಬಳಿಯ ಎ.ಪಿ. ಜೆ.ಅಬ್ದುಲ್ ಕಲಾಂ ದ್ವೀಪದಿಂದ ಬುಧವಾರ ಮಧ್ಯಂತರ ವ್ಯಾಪ್ತಿಯ ಬ್ಯಾಲಿಸ್ಟಿಕ್ ಕ್ಷಿಪಣಿ 'ಅಗ್ನಿ–3'ರ ಉಡಾವಣೆ ಯಶಸ್ವಿಯಾಯಿತು ಎಂದು ಡಿಆರ್‌ಡಿಒ ತಿಳಿಸಿದೆ.

ತರಬೇತಿ ಉದ್ದೇಶದಿಂದ ಈ ಕ್ಷಿಪಣಿ ಉಡಾವಣೆ ಪರೀಕ್ಷೆಯನ್ನು ನೆರವೇರಿಸಲಾಯಿತು. ಪೂರ್ವ ನಿರ್ಧರಿತ ಗುರಿಯನ್ನು ಧ್ವಂಸಗೊಳಿಸುವ ಮೂಲಕ ಕ್ಷಿಪಣಿ ವ್ಯವಸ್ಥೆಯ ಕಾರ್ಯಾಚರಣೆಗೆ ಸಂಬಂಧಿಸಿದ ಎಲ್ಲ ಅಂಶಗಳು ಕ್ರಮಬದ್ಧವಾಗಿವೆ ಎಂಬುದನ್ನು ಈ ಪರೀಕ್ಷೆ ಸಾಬೀತುಪಡಿಸಿತು ಎಂದು ಮೂಲಗಳು ಹೇಳಿವೆ.

28ರಿಂದ ದ್ವಿಲೋಹ ಪ್ರತಿಮಾಶಾಸ್ತ್ರ ಕಾರ್ಯಾಗಾರ

ಬೆಂಗಳೂರು: ಇಲ್ಲಿನ ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರವು ಇದೇ 28ರಿಂದ ಮೂರು ತಿಂಗಳು ದ್ವಿಲೋಹ ಪ್ರತಿಮಾಶಾಸ್ತ್ರ ಕಲೆಯ ಕಾರ್ಯಾಗಾರ ಹಮ್ಮಿಕೊಂಡಿದೆ.

ಮಲ್ಲತ್ತಹಳ್ಳಿಯಲ್ಲಿರುವ ಕೇಂದ್ರದಲ್ಲಿ ಕಾರ್ಯಾಗಾರ ನಡೆಯಲಿದ್ದು, ಸಾಂಪ್ರದಾಯಿಕ ಶಿಲ್ಪ ಗುರುಕುಲಗಳ ಕಲಾ ಕೇಂದ್ರದ ಡೀನ್ ಜ್ಞಾನಾನಂದ ಕಾರ್ಯಾಗಾರ ಉದ್ಘಾಟಿಸಲಿದ್ದಾರೆ. ಸಾಂಪ್ರದಾಯಿಕ ದ್ವಿಲೋಹ ಪ್ರತಿಮಾಶಾಸ್ತ್ರ ನಶಿಸುತ್ತಿರುವ ಕಲೆಯಾಗಿದೆ. ಆದ್ದರಿಂದ ಕೇಂದ್ರವು ಈ ಕಲೆಯ ಬಗ್ಗೆ ಕಾರ್ಯಾಗಾರ ಆಯೋಜಿಸುತ್ತಿದೆ. ಈ ಕಾರ್ಯಾಗಾರದಲ್ಲಿ ಅರ್ಧನಾರೀಶ್ವರ ಹಾಗೂ ನಾಟ್ಯ ಸರಸ್ವತಿ ದೇವಿಯ ಲೋಹದ ಪ್ರತಿಮೆಗಳನ್ನು ಸಾಂಪ್ರದಾಯಿಕ ಪದ್ಧತಿಯಲ್ಲಿ ಎರಕ ಹೊಯ್ದು ರಚಿಸಲಾಗುತ್ತದೆ ಎಂದು ಬೆಂಗಳೂರು ಕೇಂದ್ರದ ನಿರ್ದೇಶಕ ಡಿ. ಮಹೇಂದ್ರ ತಿಳಿಸಿದ್ದಾರೆ.

ಈ ದ್ವಿಲೋಹ ಪದ್ಧತಿಯನ್ನು ಶಿಲ್ಪಿ ಎನ್.ಪಿ. ಶ್ರೀನಿವಾಸಾಚಾರ್ಯ ಅವರು ಆಚರಣೆಗೆ ತಂದಿದ್ದಾರೆ. ಅವರು ಎರಡು ಬಾರಿ ರಾಷ್ಟ್ರ ಪ್ರಶಸ್ತಿಗೆ ಭಾಜನರಾಗಿದ್ದಾರೆ. ವಿಶ್ವ ವಿಖ್ಯಾತ ಮೈಸೂರು ದಸರಾದ ಚಾಮುಂಡೇಶ್ವರಿ ಉತ್ಸವ ಮೂರ್ತಿ ರಚನೆಯ ಹಿರಿಮೆ ಇವರದ್ದಾಗಿದೆ ಎಂದು ಹೇಳಿದ್ದಾರೆ. 'ಭಾರತೀಯರು ಲೋಹಶಾಸ್ತ್ರ ಹಾಗೂ ವಿಜ್ಞಾನ ತಂತ್ರಗಾರಿಕೆಯ ಸಾಂಪ್ರದಾಯಿಕ ರಚನೆಯ ವಿಧಾನವನ್ನು ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ತಿಳಿಸಿಕೊಡುವುದು ನಮ್ಮ ಕರ್ತವ್ಯ. ಪಾರಂಪರಿಕ ಕಲೆ ಉಳಿಸಿ ಬೆಳೆಸಬೇಕು' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಸ್ರೊದ 'ಆರ್‌ಎಚ್‌200' ರಾಕೆಟ್ ಯಶಸ್ವಿ ಉಡಾವಣೆ

ಬೆಂಗಳೂರು (ಪಿಟಿಐ): ತಿರುವನಂತಪುರ ಬಳಿಯ ಉಡ್ಡಯನ ಕೇಂದ್ರದಿಂದ ಇಸ್ರೊದ 'ಆರ್‌ಎಚ್‌200' ರಾಕೆಟ್ ಅನ್ನು ಬುಧವಾರ ಯಶಸ್ವಿಯಾಗಿ ಉಡಾವಣೆ ಮಾಡಲಾಯಿತು.

'ಇದು ಈ ಸರಣಿಯಲ್ಲಿ ಸಂಸ್ಥೆಯು ನೆರವೇರಿಸಿರುವ 200ನೇ ಉಡ್ಡಯನವಾಗಿದೆ. ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್, ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ಅವರು ಈ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾದರು' ಎಂದು ಸಂಸ್ಥೆ ಹೇಳಿದೆ.

'ಆರ್‌ಎಚ್‌200' ಎಂಬುದು ಹವಾಮಾನವಿಜ್ಞಾನ, ಖಗೋಳವಿಜ್ಞಾನದಲ್ಲಿ ಸಂಶೋಧನೆಗೆ ಸಂಬಂಧಿಸಿದ ಪ್ರಯೋಗಗಳನ್ನು ನಡೆಸಲು ಬಳಸುವ ರಾಕೆಟ್ ಆಗಿದೆ.

ಪದಾಧಿಕಾರಿಗಳ ಆಯ್ಕೆ

ಯಲಹಂಕ: 'ದಿ ನ್ಯೂ ಟೌನ್ ಕ್ಲಬ್'ನ ನೂತನ ಅಧ್ಯಕ್ಷರಾಗಿ ಬಿ.ಸಿ. ಆಂಜನೇಯಲು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಎ.ಸಿ.ಮುನಿಕೃಷ್ಣಪ್ಪ, ಕಾರ್ಯದರ್ಶಿ -ಎಚ್.ವಿ.ರಾಜಪ್ಪ, ಜಂಟಿ ಕಾರ್ಯದರ್ಶಿ-ಕೆ.ಸತೀಶ್, ಖಜಾಂಚಿ -ವೈ.ಆರ್.ಶ್ರೀಧರ್, ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಎ.ಜಿ.ಅರುಣ್, ಎಸ್.ಕೆ.ಅಶೋಕ್, ಡಾ.ಎಚ್.ಎಂ.ಜಯಪ್ರಕಾಶ, ಬಿ.ಆರ್.ಪರಮೇಶ್, ಆರ್.ರಮೇಶ್ ಹಾಗೂ ಎನ್.ಸಿ.ಶಿವಣ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಇವರ ಅಧಿಕಾರದ ಅವಧಿಯು ಎರಡು ವರ್ಷಗಳಾಗಿರುತ್ತದೆ.

ವಿದ್ಯುತ್ ದರ ನಿಗದಿ: ನಿಯಮ ರೂಪಿಸಿ

ನವದೆಹಲಿ (ಪಿಟಿಐ): ವಿದ್ಯುತ್ ದರ ನಿಗದಿ ಕುರಿತ ಷರತ್ತುಗಳಿಗೆ ಸಂಬಂಧಿಸಿದಂತೆ ಮೂರು ತಿಂಗಳೊಳಗೆ ನಿರ್ದಿಷ್ಟ ನಿಯಮಾವಳಿಗಳನ್ನು ರೂಪಿಸುವಂತೆ ಸುಪ್ರೀಂ ಕೋರ್ಟ್ ಬುಧವಾರ ಎಲ್ಲಾ ರಾಜ್ಯಗಳ ವಿದ್ಯುತ್ ನಿಯಂತ್ರಣ ಆಯೋಗಗಳಿಗೆ ನಿರ್ದೇಶಿಸಿದೆ.

ಮಹಾರಾಷ್ಟ್ರ ರಾಜ್ಯ ವಿದ್ಯುತ್ ನಿಯಂತ್ರಣ ಆಯೋಗವು (ಎಂಇಆರ್‌ಸಿ) ಅದಾನಿ ಎಲೆಕ್ಟ್ರಿಸಿಟಿ ಮುಂಬೈ ಇನ್ಫ್ರಾ ಲಿಮಿಟೆಡ್‌ಗೆ (ಎಇಎಂಐಎಲ್) ವಿದ್ಯುತ್ ಪ್ರಸರಣ ಪರವಾನಗಿ ಮಂಜೂರು ಮಾಡಿತ್ತು. ಇದನ್ನು ಪ್ರಶ್ನಿಸಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಟ್ರಾನ್ಸ್‌ಮಿಷನ್ (ಟಿಪಿಸಿ–ಟಿ) ವಿದ್ಯುತ್ ಮೇಲ್ಮನವಿ ನ್ಯಾಯಮಂಡಳಿಗೆ (ಎಪಿಟಿಇಎಲ್) ಅರ್ಜಿ ಸಲ್ಲಿಸಿತ್ತು. ಅದನ್ನು ಎಪಿಟಿಇಎಲ್ ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಟಾಟಾ ಪವರ್ ಕಂಪನಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು.

ಬುಧವಾರ ಇದರ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಎ. ಎಸ್.ಬೋಪಣ್ಣ ಮತ್ತು ಜೆ.ಬಿ.ಪಾರ್ದಿವಾಲಾ ಅವರನ್ನೊಳಗೊಂಡ ತ್ರಿಸದಸ್ಯ ನ್ಯಾಯಪೀಠವು ಎಪಿಟಿಇಎಲ್ ತೀರ್ಪನ್ನು ಎತ್ತಿಹಿಡಿಯಿತು. ಟಾಟಾ ಪವರ್ ಕಂಪನಿಯ ಮೇಲ್ಮನವಿ ವಜಾಗೊಳಿಸಿತು.

'ನ್ಯಾಯಾಲಯವು ತೀರ್ಪು ಪ್ರಕಟಿಸಿದ ದಿನದಿಂದ (ಬುಧವಾರ) ಮೂರು ತಿಂಗಳೊಳಗೆ ವಿದ್ಯುತ್ ಕಾಯ್ದೆಯ ಸೆಕ್ಷನ್ 181ರ ಅಡಿಯಲ್ಲಿ ನಿಗದಿತ ನಿಯಮಾವಳಿಗಳನ್ನು ರೂಪಿಸುವಂತೆ ಎಲ್ಲಾ ವಿದ್ಯುತ್ ನಿಯಂತ್ರಣ ಆಯೋಗಗಳಿಗೆ ನಾವು ನಿರ್ದೇಶಿಸುತ್ತಿದ್ದೇವೆ' ಎಂದು ನ್ಯಾಯಪೀಠ ಹೇಳಿತು.

ಚಿತ್ರಾವಳಿ

ಯಲಹಂಕ ವಿಧಾನಸಭಾ ಕ್ಷೇತ್ರದ ಹೆಸರಘಟ್ಟ ವ್ಯಾಪ್ತಿಯ ಅರಕೆರೆ, ಸೊಣ್ಣೇನಹಳ್ಳಿ, ಹುರುಳಿಚಿಕ್ಕನಹಳ್ಳಿ, ಕಸಘಟ್ಟಪುರ, ಶಿವಕೋಟೆ ಸೇರಿ ವಿವಿಧ ಗ್ರಾಮಗಳಲ್ಲಿ ₹68 ಕೋಟಿ ವೆಚ್ಚದ ಜಲ ಜೀವನ ಮಿಷನ್ ಕಾಮಗಾರಿಗೆ ಬಿಡಿಎ ಅಧ್ಯಕ್ಷ ಎಸ್‌.ಆರ್. ವಿಶ್ವನಾಥ್ ಬುಧವಾರ ಭೂಮಿ ಪೂಜೆ ನೆರವೇರಿಸಿದರು.

ಉಲ್ಲಾಳ ಮುಖ್ಯರಸ್ತೆಯ 10ನೇ ಕ್ರಾಸ್‌ನ ರಸ್ತೆಯ ಬದಿಯಲ್ಲಿ ಕಸ ಸುರಿಯುವುದನ್ನು ತಪ್ಪಿಸಲು ಪಾಲಿಕೆ ಸಿಬ್ಬಂದಿ ಪುನೀತ್ ರಾಜ್‌ಕುಮಾರ್ ಚಿತ್ರ ಹಾಕಿ, ರಂಗೋಲಿ ಬಿಡಿಸಿರುವುದು.

ಯಡಿಯೂರು ಜಯನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕರ್ನಾಟಕ ವಿದ್ಯಾರ್ಥಿ ಕೂಟದ ವತಿಯಿಂದ ಬುಧವಾರ ಆಯೋಜಿಸಲಾಗಿದ್ದ ರಕ್ತದಾನ ಜಾಗೃತಿ ಕಾರ್ಯಕ್ರಮದಲ್ಲಿ 125 ಬಾರಿ ರಕ್ತದಾನ ಮಾಡಿರುವ ವೈ. ಅಮ್ಜದ್ ಪಾಷಾ ಅವರನ್ನು ನಿವೃತ್ತ ಐಎಎಸ್ ಅಧಿಕಾರಿ ಟಿ. ತಿಮ್ಮೇಗೌಡರು ಅಭಿನಂದಿಸಿದರು. ದಿವ್ಯ ಕೆ ಮೂರ್ತಿ, ಡಾ ವೆಂಕಟೇಶ್, ಎಲ್‌. ಹರ್ಷ, ಶಾಂತಾ ರಾಮಸ್ವಾಮಿ ಇದ್ದರು.

ಕುಕ್ಕೆ ಸುಬ್ರಹ್ಮಣ್ಯದ ಚಂಪಾ ಷಷ್ಠಿ ಸಂದರ್ಭದಲ್ಲಿ ಹಿಂದೂಯೇತರ ವರ್ತಕರು ವ್ಯಾಪಾರ ನಡೆಸುವುದನ್ನು ನಿಷೇಧಿಸಿ ಕುಮಾರಧಾರ ಬಳಿ ಬ್ಯಾನರ್ ಅಳವಡಿಸಲಾಗಿದೆ

ಚಂಪಾಷಷ್ಠಿ– ಹಿಂದೂಯೇತರ ವರ್ತಕರಿಗೆ ನಿಷೇಧ?

ಸುಬ್ರಹ್ಮಣ್ಯ: ಪ್ರಸಿದ್ಧ ಯಾತ್ರಾ ಸ್ಥಳವಾದ ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಚಂಪಾಷಷ್ಠಿ ಸಂದರ್ಭದಲ್ಲಿ ಹಿಂದೂಯೇತರ ವರ್ತಕರು ವ್ಯಾಪಾರ ವಹಿವಾಟು ನಡೆಸುವುದನ್ನು ನಿಷೇಧಿಸುವ ಬ್ಯಾನರ್ ಕಾಣಿಸಿಕೊಂಡಿದೆ.

ಸುಬ್ರಹ್ಮಣ್ಯ ಸಮೀಪದ ಕುಮಾರಧಾರ ಬಳಿಯ ದೇವಸ್ಥಾನದ ಪ್ರವೇಶ ದ್ವಾರದ ಸಮೀಪ ಹಿಂದೂ ಜಾಗರಣ ವೇದಿಕೆ ಸುಬ್ರಹ್ಮಣ್ಯ ಘಟಕ ಹೆಸರಿನಲ್ಲಿ ಈ ಬ್ಯಾನರ್ ಅಳವಡಿಸಲಾಗಿದೆ.

ಕುಕ್ಕೆ ಸುಬ್ರಹ್ಮಣ್ಯದಲ್ಲಿ ಜಾತ್ರಾ ಸಂದರ್ಭದಲ್ಲಿ ಹಿಂದೂಯೇತರರಿಗೆ ವ್ಯಾಪಾರಕ್ಕೆ ಅವಕಾಶ ನೀಡದಂತೆ ಸುಬ್ರಹ್ಮಣ್ಯ ಠಾಣೆಗೆ ಹಿಂದೂ ಜಾಗರಣ ವೇದಿಕೆಯ ಸುಬ್ರಹ್ಮಣ್ಯ ಘಟಕದ ವತಿಯಿಂದ ದೂರು ನೀಡಲಾಗಿದೆ.

ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನವು ಮುಜರಾಯಿ ಇಲಾಖೆಗೆ ಸೇರಿದೆ. ಇಲ್ಲಿ ಇದೇ 29ರಂದು ಚಂಪಾ ಷಷ್ಠಿ ಹಾಗೂ ಬ್ರಹ್ಮರಥೋತ್ಸವ ನಡೆಯಲಿದೆ. ಈ ದೇವಸ್ಥಾನದ ಜಾತ್ರೆಗಳಲ್ಲಿ ಹಿಂದೂಯೇತರ ಧರ್ಮಗಳ ವರ್ತಕರೂ ವ್ಯಾಪಾರ ನಡೆಸುತ್ತಿದ್ದರು.

ಕಲ್ಯಾಣ ಮಂಟಪ ಮುಜರಾಯಿ ಸ್ವಾಧೀನಕ್ಕೆ

ಪ್ರಜಾವಾಣಿ ವಾರ್ತೆ

ಗುಡಿಬಂಡೆ: ತಾಲ್ಲೂಕಿನ ಬ್ರಾಹ್ಮಣರ ಹಳ್ಳಿಯ ಪರಿಶಿಷ್ಟ ಜಾತಿಯ ಜನರಿಗೆ ಕಲ್ಯಾಣ ಮಂಟಪ ನಿರಾಕರಣೆ ಪ್ರಕರಣದ ಹಿನ್ನೆಲೆಯಲ್ಲಿ ದೇಗುಲಗಳಿಗೆ ಸೇರಿದ ಅಕ್ರಮ ಕಟ್ಟಡಗಳನ್ನು ಸುಪರ್ದಿಗೆ ಪಡೆಯಲು ಮುಜರಾಯಿ ಇಲಾಖೆ ಮುಂದಾಗಿದೆ.

ಬ್ರಾಹ್ಮಣರಹಳ್ಳಿಯ ಪ್ರಕರಣಕ್ಕೆ ಸಂಬಂಧಿಸಿದಂತೆ 'ಪ್ರಜಾವಾಣಿ'ಯಲ್ಲಿ ಸರಣಿಯಾಗಿ ವರದಿಗಳು ಪ್ರಕಟವಾಗಿದ್ದವು.

ದೇಗುಲಗಳ ಜಮೀನಿನಲ್ಲಿ ಸಂಘ ಸಂಸ್ಥೆಗಳು ಅಕ್ರಮವಾಗಿ ಕಟ್ಟಡಗಳನ್ನು ನಿರ್ಮಿಸಿಕೊಂಡಿದ್ದರೆ ಅವುಗಳನ್ನು ವಶಕ್ಕೆ ಪಡೆಯುವಂತೆ ಜಿಲ್ಲಾಧಿಕಾರಿ ಸೂಚಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಮುಜರಾಯಿ ಇಲಾಖೆ ಕ್ರಮಕ್ಕೆ ಮುಂದಾಗಿದೆ.

'ಮೈಸೂರು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ನಡೆ ಸ್ವಾಗತಾರ್ಹ'

'ಒಡನಾಡಿ' ಮಕ್ಕಳ ಆಪ್ತಸಮಾಲೋಚನೆ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಒಡನಾಡಿ ಸೇವಾ ಸಂಸ್ಥೆಯ 'ಮಡಿಲು' ಕೇಂದ್ರದಲ್ಲಿರುವ 18 ವರ್ಷದೊಳಗಿನ ಮಕ್ಕಳನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಸರ್ಕಾರಿ ಬಾಲಮಂದಿರ, ಬಾಲಕರ ವೀಕ್ಷಣಾಲಯ ಹಾಗೂ 'ಸಖಿ' ಒನ್ ಸ್ಟಾಪ್ ಕೇಂದ್ರದ ಆಪ್ತಸಮಾಲೋಚಕರು ಬುಧವಾರ ಆಪ್ತಸಮಾಲೋಚನೆಗೆ ಒಳಪಡಿಸಿದರು.

'ಮುರುಘಾ ಮಠದ ಶಿವಮೂರ್ತಿ ಶರಣರ ವಿರುದ್ಧ ಪೋಕ್ಸೊ ಪ್ರಕರಣ ದಾಖಲಿಸುವಂತೆ ವಿದ್ಯಾರ್ಥಿನಿಯರನ್ನು ಪ್ರಚೋದಿಸಲಾಗಿದ್ದು, ಈ ಕುರಿತು ತನಿಖೆ ನಡೆಸಬೇಕು' ಎಂದು ಮಠದ ಉಸ್ತುವಾರಿ ಬಸವಪ್ರಭು ಸ್ವಾಮೀಜಿ ಚಿತ್ರದುರ್ಗದ ಗ್ರಾಮಾಂತರ ಠಾಣೆಯಲ್ಲಿ ಸಲ್ಲಿಸಿದ್ದ ದೂರು ಆಧರಿಸಿ ಆಪ್ತಸಮಾಲೋಚನೆ ನಡೆದಿದೆ. ಅವರಿಗೆ ಸಂಸ್ಥೆಯವರು ಸಹಕಾರ ನೀಡಿದರು' ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ಮೈಸೂರು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ನಡೆಯನ್ನು ನಾವು ಸ್ವಾಗತಿಸುತ್ತೇವೆ. ಚಿತ್ರದುರ್ಗ ಜಿಲ್ಲೆಯ ಮಕ್ಕಳ ರಕ್ಷಣಾ ಘಟಕದವರೂ ಇದೇ ರೀತಿಯಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕು. ಮಠದಲ್ಲಿದ್ದ ಮಕ್ಕಳನ್ನು ರಾತ್ರೋರಾತ್ರಿ ಹೊರ ಕಳುಹಿಸಿದ ಪ್ರಕರಣವನ್ನೂ ಗಂಭೀರವಾಗಿ ಪರಿಗಣಿಸಬೇಕು' ಎಂದು ಸಂಸ್ಥೆಯ ನಿರ್ದೇಶಕ ಪರಶುರಾಮ್ ಆಗ್ರಹಿಸಿದರು.

'ನಮ್ಮ ವಿರುದ್ಧ ಪ್ರಕರಣ ದಾಖಲಿಸುವ ಮೂಲಕ, ಸಂತ್ರಸ್ತರಾದವರು ಯಾವ ಸಂಸ್ಥೆಯನ್ನೂ ಅವಲಂಬಿಸಬಾರದು ಎಂಬ ಸಂದೇಶವನ್ನು ನೀಡಲಾಗುತ್ತಿದೆ. ಇದು ಸರಿಯಲ್ಲ. ನ್ಯಾಯಸಮ್ಮತವಾಗಿ ನಡೆಯುವವರಿಗೆ ತೊಂದರೆ ಕೊಡಬಾರದು' ಎಂದು ಪ್ರತಿಪಾದಿಸಿದರು.

'ಚಿತ್ರದುರ್ಗದಿಂದ ಬಂದಿದ್ದ ಸಂತ್ರಸ್ತ ಮಕ್ಕಳನ್ನು ಮಕ್ಕಳ ಕಲ್ಯಾಣ ಸಮಿತಿ ಹಾಗೂ ನ್ಯಾಯಾಧೀಶರ ಎದುರು ನಾವು ಹಾಜರುಪಡಿಸಿದ್ದೆವು. ಇದು, ಅಪರಾಧವೇ? ಈ ಬಗ್ಗೆ ನ್ಯಾಯಾಧೀಶರ ಸುಪರ್ದಿಯಲ್ಲಿ ಉನ್ನತ ಮಟ್ಟದ ತನಿಖೆ ನಡೆಸುವಂತೆ ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ಗೂ ಪತ್ರ ಬರೆದಿದ್ದೇವೆ. ರಾಷ್ಟ್ರಪತಿಗಳ ಕಚೇರಿಗೂ ಬರೆಯಲಾಗಿದೆ. ಲೋಕಾಯುಕ್ತಕ್ಕೂ ದೂರು ನೀಡಲು ನಿರ್ಧರಿಸಲಾಗಿದೆ' ಎಂದು ಅವರು ಹೇಳಿದರು.

'ಬಾಲಕಿಯರ ವಿಚಾರಣೆ ನಡೆಸುವುದಕ್ಕೆ ಪೊಲೀಸರು, ಚಿತ್ರದುರ್ಗದಿಂದ ಅವರ ತಾಯಿಯನ್ನು ಒಡನಾಡಿಗೆ ಕರೆತಂದಿದ್ದರು' ಎಂದೂ ಮೂಲಗಳು ತಿಳಿಸಿವೆ.

ಹರಿಹರ ವಿಧಾನಸಭಾ ಬಿಜೆಪಿ ಟಿಕೆಟ್ ಆಕಾಂಕ್ಷಿಗಳಾದ ಮಾಜಿ ಶಾಸಕ ಬಿ.ಪಿ. ಹರೀಶ್, ಮುಖಂಡರಾದ ಚಂದ್ರಶೇಖರ ಪೂಜಾರ್, ವೀರೇಶ ಹನಗವಾಡಿ ಅವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 'ಒಗ್ಗಟ್ಟು ಕಾಯ್ದುಕೊಳ್ಳುತ್ತೇವೆ' ಎಂದು ಪ್ರಮಾಣವಚನ ಬೋಧಿಸಿದರು

ಹರಿಹರ: ಟಿಕೆಟ್ ಆಕಾಂಕ್ಷಿಗಳಿಂದ ಪ್ರಮಾಣ ಮಾಡಿಸಿದ ಸಿಎಂ

ಹರಿಹರ (ದಾವಣಗೆರೆ ಜಿಲ್ಲೆ): ಇಲ್ಲಿ ಬುಧವಾರ ನಡೆದ ಬಿಜೆಪಿಯ ಜನ ಸಂಕಲ್ಪ ಯಾತ್ರೆಯಲ್ಲಿ ಟಿಕೆಟ್ ಆಕಾಂಕ್ಷಿಗಳ ಬೆಂಬಲಿಗರು ತಮ್ಮ ನಾಯಕರ ಪೋಟೊ ತೋರಿಸಿ ಶಕ್ತಿ ಪ್ರದರ್ಶಿಸಲು ಮುಂದಾಗಿದ್ದರಿಂದ ಸಿಟ್ಟಿಗೆದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಹರಿಹರ ಕ್ಷೇತ್ರದ ಮೂವರು ಆಕಾಂಕ್ಷಿಗಳಿಂದ 'ಒಗ್ಗಟ್ಟು ಪ್ರದರ್ಶಿಸುತ್ತೇವೆ' ಎಂದು ಪ್ರಮಾಣ ಮಾಡಿಸಿದರು.

ಬಿಜೆಪಿಯ ಮಾಜಿ ಶಾಸಕ ಬಿ.ಪಿ. ಹರೀಶ್ ಹಾಗೂ ಮುಖಂಡ ಚಂದ್ರಶೇಖರ ಪೂಜಾರ್ ಬೆಂಬಲಿಗರು ಶಕ್ತಿ ಪ್ರದರ್ಶಿಸಲು ಪೈಪೋಟಿಗೆ ಇಳಿದಿದ್ದರಿಂದ ಮುಖ್ಯಮಂತ್ರಿ ವೇದಿಕೆಗೆ ಬರುತ್ತಿದ್ದಂತೆ ಮುಜುಗರಕ್ಕೆ ಒಳಗಾದರು.

ತಕ್ಷಣವೇ ಬಿ.ಪಿ. ಹರೀಶ್ ಹಾಗೂ ಚಂದ್ರಶೇಖರ ಪೂಜಾರ್ ಜೊತೆಗೆ ಇನ್ನೊಬ್ಬ ಆಕಾಂಕ್ಷಿಯಾಗಿರುವ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ವೀರೇಶ್ ಹನಗವಾಡಿ ಅವರನ್ನೂ ತಮ್ಮ ಬಳಿ ಕರೆಸಿಕೊಂಡರು. 'ಯಾರಿಗೆ ಟಿಕೆಟ್ ಕೊಟ್ಟರೂ ಪಕ್ಷವನ್ನು ಗೆಲ್ಲಿಸಲು ಒಗ್ಗಟ್ಟಿನಿಂದ ಕೆಲಸ ಮಾಡುತ್ತೇವೆ' ಎಂದು ಮೂವರು ನಾಯಕರಿಗೂ ಕಾರ್ಯಕರ್ತರ ಎದುರಿಗೇ ಪ್ರಮಾಣ ಮಾಡಿಸಿದರು.

ಮುರುಘಾ ಮಠ ಆಡಳಿತ ವೈಖರಿ: ಸರ್ಕಾರ ಶೀಘ್ರ ಕ್ರಮ- ಸಿ.ಎಂ ಬೊಮ್ಮಾಯಿ

ಚಿತ್ರದುರ್ಗ: ಮುರುಘಾ ಮಠದ ಆಡಳಿತಾತ್ಮಕ ಕಾರ್ಯವೈಖರಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ನೀಡಿದ ವರದಿ ಕಾನೂನು ಇಲಾಖೆಗೆ ತಲುಪಿದೆ. ಈ ಬಗ್ಗೆ ಸರ್ಕಾರ ಅತಿ ಶೀಘ್ರ ಕ್ರಮ ಕೈಗೊಳ್ಳಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಬುಧವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು 'ಮುರುಘಾ ಮಠದ ಶಿವಮೂರ್ತಿ ಶರಣರ ವಿರುದ್ಧ ಪಿತೂರಿ ನಡೆದಿದೆ ಎನ್ನಲಾದ ಪ್ರಕರಣವನ್ನು ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಈ ಹಂತದಲ್ಲಿ ಪ್ರತಿಕ್ರಿಯೆ ನೀಡುವುದಿಲ್ಲ' ಎಂದರು.

ಸಮೀಕ್ಷಾ ಆ್ಯಪ್‌ನಲ್ಲಿ 'ಅಕ್ರಮ'ದ ಮಾಹಿತಿ • ಬಿಬಿಎಂಪಿಯ 45 ಅಧಿಕಾರಿಗಳ ವಿಚಾರಣೆ

'ಚಿಲುಮೆ': ಆ್ಯಪ್ ಲಾಕ್ ತೆರೆದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ವೈಯಕ್ತಿಕ ಮಾಹಿತಿ ಕಳವು ಹಾಗೂ ದುರ್ಬಳಕೆ ಮಾಡಿಕೊಂಡಿದ್ದ ಆರೋಪ ಹೊತ್ತಿರುವ 'ಚಿಲುಮೆ' ಸಂಸ್ಥೆಯ 'ಸಮೀಕ್ಷಾ ಆ್ಯಪ್'ನಲ್ಲಿ ಅಕ್ರಮದ ಹಲವು ಮಾಹಿತಿಗಳಿದ್ದು, ಕೊನೆಗೂ ಅದರ ಲಾಕ್ ತೆರೆಯುವಲ್ಲಿ ತನಿಖಾ ತಂಡ ಯಶಸ್ವಿ ಆಗಿದೆ.

ಸಂಜೀವ್ ಶೆಟ್ಟಿ ಎಂಬುವರು ಈ ಸಮೀಕ್ಷಾ ಆ್ಯಪ್ ಅಭಿವೃದ್ಧಿ ಪಡಿಸಿದ್ದರು. ಸಂಸ್ಥೆ ವಿರುದ್ಧ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವಿಶೇಷ ಆಯುಕ್ತರಾದ ರಂಗಪ್ಪ ದೂರು ನೀಡುತ್ತಿದ್ದಂತೆ ಸಂಜೀವ್ ಶೆಟ್ಟಿ ಆ್ಯಪ್ ಅನ್ನು ಲಾಕ್ ಮಾಡಿಕೊಂಡು ಪರಾರಿಯಾಗಿದ್ದರು. ಅವರನ್ನು ಈಗ ಪೊಲೀಸರು ವಶಕ್ಕೆ ಪಡೆದಿದ್ದರೂ ಆ್ಯಪ್‌ನ ಲಾಕ್ ತೆರೆಯಲು ಸಾಧ್ಯವಾಗಿರಲಿಲ್ಲ. ತಾಂತ್ರಿಕ ಪರಿಣತರ ಸಹಾಯದಿಂದ ಪೊಲೀಸರು ಆ್ಯಪ್ ಲಾಕ್ ತೆರೆದಿದ್ದು, ಪರಿಶೀಲನೆ ಮುಂದುವರಿಸಿದ್ದಾರೆ.

'ವಿಧಾನಸಭೆ ಕ್ಷೇತ್ರವಾರು ಸಮೀಕ್ಷೆ ನಡೆಸಿದ ವಿವರ, ದತ್ತಾಂಶ ಮಾರಾಟ, ದತ್ತಾಂಶ ಖರೀದಿಸಿದ್ದ ರಾಜಕಾರಣಿಗಳ ವಿವರ, ಮತದಾರರ ಹೆಸರು ಅಳಿಸಿ ಹಾಕಿರುವವರ ಸಂಖ್ಯೆ ಸೇರಿ ಹಲವು ಅಕ್ರಮಗಳ ಮಾಹಿತಿ ಈ ಆ್ಯಪ್‌ನಲ್ಲಿಯೇ ಅಡಕವಾಗಿದೆ. ಚಿಲುಮೆ ಸಂಸ್ಥೆಯ ವೆಬ್‌ಸೈಟ್ ರೂಪಿಸಿದ್ದ ದಿವ್ಯಾ ಅವರ ವಿಚಾರಣೆ ಬಾಕಿಯಿದೆ. ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ದಿವ್ಯಾ ಆ್ಯಪ್ ಅಭಿವೃದ್ಧಿಪಡಿಸಲೂ ನೆರವು ನೀಡಿದ್ದರು' ಎಂದು ಮೂಲಗಳು ಹೇಳಿವೆ.

ಬಂಧಿತ ಆರೋಪಿ ಸಂಸ್ಥೆಯ ಮುಖ್ಯಸ್ಥ ರವಿಕುಮಾರ್ ಅವರ ಕಲ್ಲನಾಯನಹಳ್ಳಿಯ ಮನೆ, ಅಲ್ಲಿನ ತೋಟದ ಮನೆ, ನಗರದ ಮಲ್ಲೇಶ್ವರದ 18ನೇ ಕ್ರಾಸ್‌ನಲ್ಲಿನ ಮೂರು ಅಂತಸ್ತಿನ ಕಟ್ಟಡ, ನೆಲಮಂಗಲದ ಮನೆಯ ಮೇಲೆ ಪೊಲೀಸರು ದಾಳಿ ನಡೆಸಿ ಶೋಧಿಸಿದರು. ಕಂಪ್ಯೂಟರ್ ಸೇರಿ ಕೆಲವೊಂದು ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ. ರವಿಕುಮಾರ್ ಪತ್ನಿ ಐಶ್ವರ್ಯಾ ಅವರ ವಿಚಾರಣೆ ಮುಂದುವರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ನ್ಯಾಯಾಲಯದ ಅನುಮತಿ ಮೇರೆಗೆ ಹೆಚ್ಚಿನ ವಿಚಾರಣೆಗೆ ವಶಕ್ಕೆ ಪಡೆದಿದ್ದ ಆರೋಪಿಗಳಾದ ಕೆಂಪೇಗೌಡ, ಕೆ.ಎಂ.ಲೋಕೇಶ್, ರೇಣುಕಾ ಪ್ರಸಾದ್, ಧರ್ಮೇಶ್ ಅವರಿಗೆ ತನಿಖಾ ತಂಡವು ಬುಧವಾರ ಹಲವು ಪ್ರಶ್ನೆಗಳನ್ನು ಕೇಳಿ ಮಾಹಿತಿ ಕಲೆಹಾಕಿದೆ.

ಬಿಬಿಎಂಪಿಯ ಕಂದಾಯ ವಿಭಾಗದ 45 (ಇಆರ್‌ಒ ಹಾಗೂ ಎಇಆರ್‌ಒ) ಅಧಿಕಾರಿಗಳನ್ನು ಬುಧವಾರ ಹಲಸೂರು ಗೇಟ್ ಪೊಲೀಸರು ವಿಚಾರಣೆ ನಡೆಸಿದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬೊಮ್ಮಾಯಿ ವಿರುದ್ಧ ಎಫ್‌ಐಆರ್: ಕಾಂಗ್ರೆಸ್ ನಿಯೋಗ ಪಟ್ಟು

ನವದೆಹಲಿ: ಮತದಾರರ ಪಟ್ಟಿಯ ಪರಿಷ್ಕರಣೆಯ ನೆಪದಲ್ಲಿ ಮತದಾರರ ಮಾಹಿತಿ ಕಳವು ಮಾಡಿರುವ ಪ್ರಕರಣದಲ್ಲಿ ಕರ್ನಾಟಕದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿರುದ್ಧ ಎಫ್‌ಐಆರ್ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಕಾಂಗ್ರೆಸ್ ನಿಯೋಗವು ಕೇಂದ್ರ ಚುನಾವಣಾ ಆಯೋಗದ ಕದ ತಟ್ಟಿದೆ.

ಕಾಂಗ್ರೆಸ್ ಕರ್ನಾಟಕ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಪ್ರಚಾರ ಸಮಿತಿಯ ಅಧ್ಯಕ್ಷ ಎಂ.ಬಿ.ಪಾಟೀಲ, ಶಾಸಕ ಪ್ರಿಯಾಂಕ್ ಖರ್ಗೆ, ವಿಧಾನ ಪರಿಷತ್ ಸದಸ್ಯ ನಜೀರ್ ಅಹ್ಮದ್ ಅವರನ್ನು ಒಳಗೊಂಡ ನಿಯೋಗವು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಹಾಗೂ ಇತರ ಚುನಾವಣಾ ಆಯುಕ್ತರನ್ನು ಬುಧವಾರ ಭೇಟಿ ಮಾಡಿ ಮನವಿ ಸಲ್ಲಿಸಿತು. ಈ ನಾಚಿಕೇಡಿನ ಚುನಾವಣಾ ಅಕ್ರಮ ಪ್ರಕರಣದಲ್ಲಿ ಆಯೋಗವು ಕೂಡಲೇ ಮಧ್ಯಪ್ರವೇಶಿಸಿ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ನಿಯೋಗ ಒತ್ತಾಯಿಸಿತು.

'ಮುಖ್ಯಮಂತ್ರಿ ಬೊಮ್ಮಾಯಿ, ಬಿಬಿಎಂಪಿಯ ಹಿರಿಯ ಅಧಿಕಾರಿಗಳು ಹಾಗೂ ರಾಜ್ಯ ಸರ್ಕಾರದ ಸಹಕಾರ ಹಾಗೂ ಕೃಪಾಕಟಾಕ್ಷದಿಂದ ಚಿಲುಮೆ ಸಂಸ್ಥೆ ಈ ಅಕ್ರಮ ಎಸಗಿದೆ. ಬೊಮ್ಮಾಯಿ ಜತೆಗೆ ಬಿಬಿಎಂಪಿ ಅಧಿಕಾರಿಗಳು ಹಾಗೂ ರಾಜ್ಯ ಸರ್ಕಾರದ ಅಧಿಕಾರಿಗಳ ವಿರುದ್ಧವೂ ಎಫ್‌ಐಆರ್ ದಾಖಲಿಸಬೇಕು' ಎಂದು ದೂರಿನಲ್ಲಿ ಒತ್ತಾಯಿಸಲಾಗಿದೆ.

ಡಿ.ಕೆ. ಶಿವಕುಮಾರ್ ಮಾತನಾಡಿ, 'ಬಿಜೆಪಿ ಸೋಲಿನ ಸುಳಿಯಲ್ಲಿ ಸಿಕ್ಕಿದೆ. ಹೀಗಾಗಿ, ಹೇಗಾದರೂ ಮಾಡಿ ಗೆಲ್ಲಬೇಕು ಎಂಬ ಹತಾಶೆಯಿಂದ ಈ ಅಕ್ರಮ ಎಸಗಿದೆ' ಎಂದು ಆರೋಪಿಸಿದರು.

ಇನ್ನೂ ಸಿಗದ ಚಿರತೆ: ಬೃಂದಾವನ ಬಂದ್- ₹ 50 ಲಕ್ಷ ನಷ್ಟ

ಪ್ರಜಾವಾಣಿ ವಾರ್ತೆ

ಪ್ರವಾಸಿಗರಿಲ್ಲದೇ ಬಿಕೋ ಎನ್ನುತ್ತಿರುವ ಬೃಂದಾವನ

ಶ್ರೀರಂಗಪಟ್ಟಣ: ಕೆಆರ್‌ಎಸ್ ಬೃಂದಾವನದಲ್ಲಿ ಚಿರತೆ ಕಾಣಿಸಿಕೊಂಡಿರುವುದರಿಂದ ಉದ್ಯಾನ ನ.6ರಿಂದ ಅನಿರ್ದಿಷ್ಟಾವಧಿವರೆಗೆ ಬಂದ್ ಆಗಿದ್ದು, ಕಾವೇರಿ ನೀರಾವರಿ ನಿಗಮಕ್ಕೆ ಈವರೆಗೆ ₹ 50 ಲಕ್ಷಕ್ಕೂ ಹೆಚ್ಚು ನಷ್ಟ ಉಂಟಾಗಿದೆ.

ಅ.21ರಿಂದ ನಾಲ್ಕು ಬಾರಿ ಚಿರತೆ ಕಾಣಿಸಿಕೊಂಡಿದ್ದು, ಅದನ್ನು ಸೆರೆ ಹಿಡಿಯುವವರೆಗೂ ಪ್ರವಾಸಿಗರ ಪ್ರವೇಶಕ್ಕೆ ನಿರ್ಬಂಧ ಹೇರಲಾಗಿದೆ. ಬೃಂದಾವನಕ್ಕೆ ವಾರದ ದಿನಗಳಲ್ಲಿ 3 ಸಾವಿರಕ್ಕೂ ಹೆಚ್ಚು ಪ್ರವಾಸಿಗರು ಭೇಟಿ ನೀಡುತ್ತಾರೆ. ವಾರಾಂತ್ಯ, ಸರ್ಕಾರಿ ರಜಾ ದಿನಗಳಲ್ಲಿ 5 ಸಾವಿರಕ್ಕೂ ಹೆಚ್ಚು ಮಂದಿ ಭೇಟಿ ನೀಡುತ್ತಾರೆ. ₹ 50 ಪ್ರವೇಶ ಶುಲ್ಕ ನಿಗದಿಪಡಿಸಲಾಗಿದೆ. 16 ದಿನಗಳಿಂದ ಪ್ರವೇಶ ಬಂದ್ ಆಗಿರುವ ಕಾರಣ ನಿಗಮಕ್ಕೆ ಆದಾಯ ನಷ್ಟ ಉಂಟಾಗಿದೆ.

ವ್ಯಾಪಾರಿಗಳಿಗೂ ನಷ್ಟ: ಕೆಆರ್‌ಎಸ್‌ನ ಬೃಂದಾವನದಲ್ಲಿ ಪ್ರವಾಸಿಗರನ್ನೇ ನೆಚ್ಚಿಕೊಂಡಿರುವ ನೂರಾರು ವ್ಯಾಪಾರಿಗಳು ಸಂಕಷ್ಟ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಹಣ್ಣಿನ ಅಂಗಡಿ, ತಂಪುಪಾನೀಯ, ಕರಕುಶಲ ವಸ್ತು ಮಾರಾಟ ಸೇರಿದಂತೆ ನೂರಾರು ಅಂಗಡಿಗಳಿವೆ. ಬೃಂದಾವನದ ಒಳಗಿರುವ ರಾಯಲ್ ಆರ್ಕಿಡ್, ಮಯೂರ ಹೋಟೆಲ್‌ಗಳು ಕೂಡ ಪ್ರವಾಸಿಗರಿಲ್ಲದೇ ನಷ್ಟ ಅನುಭವಿಸುತ್ತಿವೆ.

'ನಾಡದೇವತೆ ಚಿತ್ರ: ಅಭಿಪ್ರಾಯ ಸಂಗ್ರಹಿಸಿ ಅಧಿಕೃತಗೊಳಿಸಿ'

ಗದಗ: 'ಏಕೀಕರಣದ ರೂವಾರಿ ಅಂದಾನಪ್ಪ ದೊಡ್ಡಮೇಟಿ ಅವರ ಪರಿಕಲ್ಪನೆಯಂತೆ ಕಲಾವಿದ ಸಿ.ಎನ್. ಪಾಟೀಲರು 1953ರಲ್ಲಿ ರಚಿಸಿದ ಭುವನೇಶ್ವರಿ ತೈಲವರ್ಣದ ಚಿತ್ರದ ಬಗ್ಗೆ ಮುಖ್ಯಮಂತ್ರಿ ಬೊಮ್ಮಾಯಿ ಅವರಿಗೆ ಸಾಕಷ್ಟು ಮಾಹಿತಿ ಇದೆ. ಆ ಚಿತ್ರರಚನೆಯ ಹಿಂದಿನ ಭಾವನೆಗಳ ಅರಿವು ಕೂಡ ಇದೆ. ಏಕೀಕರಣ ಚಳವಳಿಗೆ ವಿವಿಧ ಸ್ತರಗಳಲ್ಲಿ ಸ್ಫೂರ್ತಿ ತುಂಬಿದ ಈ ಚಿತ್ರವನ್ನೇ ಸರ್ಕಾರ ಅಧಿಕೃತಗೊಳಿಸಬೇಕು' ಎಂದು ಗದುಗಿನ ಸಾಹಿತಿಗಳು, ಚಿತ್ರಕಲಾವಿದರು ಹಾಗೂ ಸಂಸ್ಕೃತಿ ಚಿಂತಕರು ಆಗ್ರಹಿಸಿದ್ದಾರೆ.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಾಡಿನ ಅಸ್ಮಿತೆಯ ಸಂಕೇತಗಳನ್ನು ಪ್ರಮಾಣೀಕರಿಸಬೇಕು ಎಂಬ ಸರ್ಕಾರದ ನಡೆಯನ್ನು ಸ್ವಾಗತಿಸುತ್ತೇವೆ. ಆದರೆ, ಅದು ಸಾರ್ವತ್ರಿಕವಾಗಿ ಬಂದರೆ ಇನ್ನಷ್ಟು ಅರ್ಥಪೂರ್ಣವಾಗಿರುತ್ತದೆ' ಎಂದು ಪ್ರತಿಪಾದಿಸಿದರು.

ಮಕ್ಕಳ ಸಾಹಿತಿ ಹಾಗೂ ಜಿಲ್ಲಾ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ, 'ಐದು ಮಂದಿ ಕಲಾವಿದರ ಸಮಿತಿ ರಚಿಸಿದ ನಾಡದೇವತೆ ಚಿತ್ರವನ್ನು ಅಧಿಕೃತಗೊಳಿಸಲು ಸರ್ಕಾರಕ್ಕೆ ಶಿಫಾರಸು ಮಾಡಿರುವ ವಿಷಯ ಕೇಳಿ ಅಚ್ಚರಿಯಾಯಿತು. ಕನ್ನಡ ಹಾಗೂ ಏಕೀಕರಣದ ಇತಿಹಾಸ ಗೊತ್ತಿರುವವರಿಗೆಲ್ಲರಿಗೂ ಇದು ಆಘಾತಕಾರಿ ವಿಷಯ' ಎಂದರು.

'ಇದು ಕಾಲ್ಪನಿಕವಲ್ಲ; ಪರಂಪರೆಯ ತಳಹದಿಯ ಮೇಲೆ ನಿರ್ಮಿತವಾದ ಪಾರಂಪರಿಕ ಚಿತ್ರ. ಇದನ್ನೇ ಅಧಿಕೃತಗೊಳಿಸಬೇಕು' ಎಂದು ಕಲಾವಿದ ಅನ್ನದಾನಿ ಹಿರೇಮಠ ಒತ್ತಾಯಿಸಿದರು.

ಸಾಹಿತಿ ಡಾ.ಜಿ.ಬಿ.ಪಾಟೀಲ ಮಾತನಾಡಿ, 'ನಾಡದೇವತೆ ಚಿತ್ರವನ್ನು ಅಧಿಕೃತಗೊಳಿಸುವ ವಿಚಾರ ಹೋರಾಟದ ಸ್ವರೂಪಕ್ಕೆ ಹೋಗಬಾರದು ಎಂಬುದು ನಮ್ಮ ಇಚ್ಛೆ. ಹಾಗಾಗಿ, ಭುವನೇಶ್ವರಿ ಚಿತ್ರದ ಬಗ್ಗೆ ಚೆನ್ನಾಗಿ ಅರಿವಿರುವ ಮುಖ್ಯಮಂತ್ರಿ ಬೊಮ್ಮಾಯಿ ಅವರು ಸಾರ್ವಜನಿಕ ಚರ್ಚೆ ನಡೆಸಿ, ಅಭಿಪ್ರಾಯ ಸಂಗ್ರಹಿಸಿ ನಿರ್ಣಯ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

'ನಾಡು, ಸಂಸ್ಕೃತಿಗೆ ತಾಳೆಯಾಗದ ಪಾಟೀಲರ ತೈಲವರ್ಣ ಚಿತ್ರ'



ಡಿ. ಮಹೇಂದ್ರ

ಬೆಂಗಳೂರು: 'ಗದಗಿನ ಕಲಾವಿದ ಸಿ.ಎಸ್. ಪಾಟೀಲ ಅವರು 1953ರಲ್ಲಿ ರಚಿಸಿದ ಭುವನೇಶ್ವರಿಯ ತೈಲವರ್ಣ ಚಿತ್ರದ ಹಲವು ಅಂಶಗಳು ಕನ್ನಡ ನಾಡು, ಸಂಸ್ಕೃತಿಗೆ ತಾಳೆಯಾಗುತ್ತಿಲ್ಲ' ಎಂದು ನಾಡದೇವಿ ರಚನಾ ಸಮಿತಿ ಅಧ್ಯಕ್ಷ ಡಿ. ಮಹೇಂದ್ರ ತಿಳಿಸಿದ್ದಾರೆ.

ಈ ಚಿತ್ರದ ಬಗ್ಗೆ ಸ್ಪಷ್ಟನೆ ನೀಡಿರುವ ಅವರು, 'ಚಿತ್ರವು ಸಾಹಿತ್ಯ ಹಿನ್ನೆಲೆಯುಳ್ಳವರ ಕಲ್ಪನೆಗಳಿಗೆ ರೂಪ ನೀಡಿದೆ. ಕಲಾವಿದನ ಪ್ರತಿಭೆ ಹಾಗೂ ಕ್ರಿಯಾ ಶೀಲತೆಗೆ ಅವಕಾಶ ಇಲ್ಲವಾಗಿದೆ. ಚಿತ್ರ ದಲ್ಲಿ ಕಿರೀಟವು ಉತ್ತರ ಭಾರತದ ಶೈಲಿಯಲ್ಲಿದೆ. ಪಾರ್ಸಿ ಪೌರಾಣಿಕ ನಾಟಕಗಳನ್ನು ಹೋಲುತ್ತದೆ' ಎಂದು ಹೇಳಿದ್ದಾರೆ.

'ಬಿಳಿ ಬಣ್ಣದ ಸೀರೆಯ ಸಂಕೇತದಲ್ಲೂ ಸ್ಪಷ್ಟತೆಯಿಲ್ಲ. ನಾಡದೇವಿಯ ಶರೀರ ಅಂಗಾಗಗಳ ರಚನೆಯಲ್ಲಿಯೂ ಪ್ರಬುದ್ಧತೆ ಇಲ್ಲ. ಒಂದು ಕೈ ಕೆಳಗೆ, ಇನ್ನೊಂದು ಕೈ ಮೇಲೆ ಇದೆ. ಕಾಲುಗಳು ಮರೆಯಾಗಿವೆ. ಕರ್ನಾಟಕ ನಕಾಶೆಯ ತಳಕ್ಕೆ ಸಮುದ್ರ ಅಲೆಗಳ ರಚನೆಯಿರುವುದು ವಾಸ್ತವಿಕತೆಗೆ ದೂರವಾಗಿದೆ' ಎಂದು ತಿಳಿಸಿದ್ದಾರೆ.

'ಕರ್ನಾಟಕ ನಕಾಶೆಯೂ ಸಮರ್ಪಕವಾಗಿ ಚಿತ್ರಿತವಾಗಿಲ್ಲ. ಕನ್ನಡದ ಧ್ವಜವೇ ಈ ಚಿತ್ರದಲ್ಲಿ ಇಲ್ಲ. ನಾಡದೇವಿಯ ಸುತ್ತಲಿನ ಚಿತ್ರಣಗಳು ಬಹಳ ಸಂಖ್ಯೆಯಲ್ಲಿದ್ದು, ನಾಡದೇವಿ ಚಿತ್ರದ ಪ್ರತಿಯನ್ನು ನಕಲಿಸಲು ಮತ್ತು ಮುದ್ರಣಕ್ಕೆ ಬಳಸಲು ಕಷ್ಟಕರವಾಗಲಿದೆ' ಎಂದು ಸ್ಪಷ್ಟಪಡಿಸಿದ್ದಾರೆ.

'ಈ ಎಲ್ಲ ಅಂಶಗಳು ಹಾಗೂ ಕಲಾರಚನೆ ಸೂಕ್ಷ್ಮಗಳನ್ನು ಗಮನದಲ್ಲಿರಿಸಿಯೇ ಸಮಿತಿ ನಾಡದೇವಿಯ ಚಿತ್ರವನ್ನು ಶಿಫಾರಸು ಮಾಡಿದೆ. ಕಲಾವಿದ ಬಿ.ಕೆ.ಎಸ್. ವರ್ಮಾ ಸೇರಿ ಹಲವು ಕಲಾವಿದರನ್ನು ಸಂಪರ್ಕಿಸಿ, ಚಿತ್ರ ರಚನೆಗೆ ಮುಂದಾಗಿದ್ದೇವೆ. ನಾಡದೇವಿಯ ವಸ್ತ್ರಾಭರಣವನ್ನು ಗದುಗಿನವರೇ ಆದ ಚೂಡಾಮಣಿ ನಂದಗೋಪಾಲ ನಿರೂಪಿಸಿದ್ದಾರೆ' ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

ಪ್ರೊ. ಆರ್. ಇಂದಿರಾಗೆ ಜೀವಮಾನ ಸಾಧನೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮೈಸೂರು: ಭಾರತೀಯ ಸಮಾಜವಿಜ್ಞಾನ ಸಂಘದ 'ಜೀವಮಾನ ಸಾಧನೆ' ಪ್ರಶಸ್ತಿಗೆ ಮೈಸೂರು ವಿಶ್ವವಿದ್ಯಾಲಯದ ಮಾನಸ ಗಂಗೋತ್ರಿಯ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಪೀಠದ ಸಂದರ್ಶಕ ಪ್ರಾಧ್ಯಾಪಕಿ ಆರ್.ಇಂದಿರಾ ಆಯ್ಕೆಯಾಗಿದ್ದಾರೆ.

ಸಮಾಜವಿಜ್ಞಾನದ ಅಭಿವೃದ್ಧಿಗೆ ನೀಡಿದ ಅಸಾಧಾರಣ ಕೊಡುಗೆಯನ್ನು ಪರಿಗಣಿಸಿ ಸಂಘದಿಂದ ಕೊಡುವ ಅತ್ಯುನ್ನತ ಪ್ರಶಸ್ತಿ ಇದು. ಮೇಘಾಲಯದಲ್ಲಿ ಡಿಸೆಂಬರ್‌ನಲ್ಲಿ ನಡೆಯಲಿರುವ 47ನೇ ಭಾರತೀಯ ಸಮಾಜವಿಜ್ಞಾನ ಸಮ್ಮೇಳನದಲ್ಲಿ ಪ್ರದಾನ ಮಾಡಲಾಗುವುದು. 50 ವರ್ಷಗಳ ವೃತ್ತಿ ಜೀವನದಲ್ಲಿ ಮೈಸೂರು ವಿ.ವಿ ಸಮಾಜವಿಜ್ಞಾನ ವಿಭಾಗದಲ್ಲಿ 42 ವರ್ಷಗಳವರೆಗೆ ಅಧ್ಯಾಪಕಿಯಾಗಿ, ಮುಖ್ಯಸ್ಥರಾಗಿ, ಅಂತರರಾಷ್ಟ್ರೀಯ ಕೇಂದ್ರ ಮತ್ತು ಮಹಿಳಾ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದಾರೆ.

ಸ್ಫೋಟಕ್ಕೆ 4 ದಿನ ಮೊದಲು ಎಫ್‌ಐಆರ್ ದಾಖಲು

ಮೊಹಮ್ಮದ್ ಶಾರಿಕ್

ಶಿವಮೊಗ್ಗ: ಇಲ್ಲಿನ ಪುರಲೆ ಬಳಿ ತುಂಗಾ ನದಿ ದಡದಲ್ಲಿ ಪ್ರಾಯೋಗಿಕವಾಗಿ ನಡೆಸಿದ್ದ ಬಾಂಬ್ ಸ್ಫೋಟ ಹಾಗೂ ರಾಷ್ಟ್ರಧ್ವಜ ಸುಟ್ಟು ಹಾಕಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ತೀರ್ಥಹಳ್ಳಿಯ ಮೊಹಮ್ಮದ್ ಶಾರಿಕ್ ಸೇರಿದಂತೆ ಮೂವರ (ಶಿವಮೊಗ್ಗದ ಸೈಯದ್ ಯಾಸಿನ್ ಹಾಗೂ ಮಂಗಳೂರಿನ ಮಾಜ್ ಮುನೀರ್ ಅಹಮದ್) ವಿರುದ್ಧ ರಾಷ್ಟ್ರೀಯ ತನಿಖಾ ದಳ (ಎನ್ಐಎ) ಎಫ್‌ಐಆರ್ ದಾಖಲಿಸಿದ ನಾಲ್ಕು ದಿನಗಳಲ್ಲಿ ಶಾರಿಕ್ ಸಾಗಿಸುತ್ತಿದ್ದ ಕುಕ್ಕರ್ ಬಾಂಬ್ ಸ್ಫೋಟಗೊಂಡಿದೆ.

ತಾವು ಸಿದ್ಧಪಡಿಸಿದ್ದ ಬಾಂಬ್ ಎಷ್ಟರ ಮಟ್ಟಿಗೆ ಪರಿಣಾಮಕಾರಿಯಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಆರೋಪಿಗಳು ಪ್ರಾಯೋಗಿಕ ಸ್ಫೋಟ ನಡೆಸಿದ್ದರು. ನಂತರ ರಾಷ್ಟ್ರಧ್ವಜ ಸುಟ್ಟು ಘಟನೆಗಳನ್ನು ಮೊಬೈಲ್ ಕ್ಯಾಮೆರಾದಲ್ಲಿ ಚಿತ್ರೀಕರಿಸಿದ್ದರು. ಸೆಪ್ಟೆಂಬರ್ 20ರಂದು ಇಲ್ಲಿನ ಗ್ರಾಮಾಂತರ ಠಾಣೆ ಪೊಲೀಸರು ಸೈಯದ್ ಯಾಸಿನ್ ಹಾಗೂ ಮಾಜ್ ಮುನೀರ್ ಅಹಮದ್ ಅವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದಾಗ ಪ್ರಕರಣ ಬಯಲಾಗಿತ್ತು. ಅದೇ ವೇಳೆ ಶಾರಿಕ್ ನಾಪತ್ತೆಯಾಗಿದ್ದ.

ಕರ್ನಾಟಕ ಸರ್ಕಾರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಯಲಬುರ್ಗಾ-583236,

ಟೆಂಡರ್ ವೇಳಾಪಟ್ಟಿ

1.ಟೆಂಡರ್ ಉಲ್ಲೇಖ ಸಂಖ್ಯೆ:CDPO/YLB/EGG/TENDER/2022-23/CALL-2 ದಿನಾಂಕ: 19.11.2022. 2.ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ನಿಂದ ಟೆಂಡರ್ ದಸ್ತಾವೇಜಿನ ಡೌನ್‌ಲೋಡ್ ಪ್ರಾರಂಭದ ದಿನಾಂಕ_: ಪ್ರಾರಂಭ ದಿನಾಂಕ: 19/11/2022. 3.ಪೂರ್ವ ಬಿಡ್ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ: 28.11.2022ರಿಂದ 10:00 AM ಶಿಶು ಅಭಿವೃದ್ಧಿ ಯೋಜನೆ ಯಲಬುರ್ಗಾ ಕಛೇರಿಯಲ್ಲಿ, 4.ಇ- ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆನ್‌ಲೈನ್ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ:29.11.2022ರಿಂದ 05:00 PM ವರೆಗೆ. 5.ಇ-ಟೆಂಡರ್‌ಅನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ:19.12.2022 ರಂದು 5:00 PM ರವರೆಗೆ. 6. ತಾಂತ್ರಿಕ ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ತೆರೆಯುವ ದಿನಾಂಕ ಮತ್ತು ಸಮಯ:21.12.2022, 11:00 AM ಅನಂತರ 7.ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ:ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಲಾಗುವುದು ದಿನಾಂಕ :27.12.2022 ಬೆಳಿಗ್ಗೆ 11.00 ಗಂಟೆಗೆ 8.ಟೆಂಡರ್‌ಗಳನ್ನು ತೆರೆಯುವ ಸ್ಥಳ: ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ 9.ಸಂವಹನಕ್ಕಾಗಿ ವಿಳಾಸ:ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮುಧೋಳ ರಸ್ತೆ, ಯಲಬುರ್ಗಾ, ಕೊಪ್ಪಳ ಜಿಲ್ಲೆ ದೂರವಾಣಿ: +91 8105729581-08534-267270, ಇಮೇಲ್: ylb_cdpo@yahoo.in

ಸಹಿ/- ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ಯಲಬುರ್ಗಾ

ವಾ.ಸಾ.ಇ/ಕೊಪ್ಪಳ/456/2022-23/ದೇಶಪಾಂಡೆಪಬ್ಲಿಸಿಟಿ

ಪೊಲೀಸ್ ಇಲಾಖೆ
ನಿರ್ದೇಶಕರವರ ಕಛೇರಿ, ನ್ಯಾಯ ವಿಜ್ಞಾನ ಪ್ರಯೋಗಾಲಯಗಳು,
ಮಡಿವಾಳ, ಬೆಂಗಳೂರು-560 068

ಸಂಖ್ಯೆ: ಸಿಬ್ಬಂದಿ(1)/07/ನ್ಯಾ.ವಿ.ಪ್ರ/2020 ದಿನಾಂಕ: 22-11-2022

ರಾಜ್ಯ ನ್ಯಾಯ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು ಇಲ್ಲಿ ಖಾಲಿ ಇರುವ ಉಪ ನಿರ್ದೇಶಕರ, ಸಹಾಯಕ ನಿರ್ದೇಶಕರ, ಹಿರಿಯ ವೈಜ್ಞಾನಿಕ ಅಧಿಕಾರಿ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ಅರ್ಜಿಯನ್ನು ಸಲ್ಲಿಸುವ ಕುರಿತು

ನ್ಯಾಯ ವಿಜ್ಞಾನ ಪ್ರಯೋಗಾಲಯ ಘಟಕದಲ್ಲಿ ಖಾಲಿ ಇರುವ 1 ಉಪ ನಿರ್ದೇಶಕರ ಹುದ್ದೆ, 6 ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಮತ್ತು 20 ಹಿರಿಯ ವೈಜ್ಞಾನಿಕ ಅಧಿಕಾರಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗಿದ್ದು, ಈ ಕೆಳಕಂಡ ವಿದ್ಯಾರ್ಹತೆಗಳನ್ನು/ಅನುಭವ ಹೊಂದಿರುವ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಉಪ ನಿರ್ದೇಶಕರ
1. ವಯೋಮಿತಿ :- ಕನಿಷ್ಠ 18, ಗರಿಷ್ಠ 65 ವರ್ಷ
2. ವಿದ್ಯಾರ್ಹತೆ :- ಡಾಕ್ಟರೇಟ್ ಪದವಿಯನ್ನು ಭೌತಶಾಸ್ತ್ರ / ರಸಾಯನಶಾಸ್ತ್ರ / ಜೈವಿಕ ತಂತ್ರಜ್ಞಾನ / ಫಾರೆನ್ಸಿಕ್ ಸೈನ್ಸ್ / ಜೀವ ರಸಾಯನಶಾಸ್ತ್ರ / ಫಾರ್ಮಕಾಲಜಿ / ಸಸ್ಯಶಾಸ್ತ್ರ / ಪ್ರಾಣಿಶಾಸ್ತ್ರ / ಸೂಕ್ಷ್ಮ ಜೀವಿ ವಿಜ್ಞಾನ / ಜೀವ ವಿಜ್ಞಾನ ವಿಷಯದಲ್ಲಿ ಪಡೆದಿರಬೇಕು.
3. ಕೆಲಸ ಅನುಭವ :- ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಸ್ಥಾಪಿಸಲಾಗಿರುವ ಸರ್ಕಾರಿ ನ್ಯಾಯ ವಿಜ್ಞಾನ ಪ್ರಯೋಗಾಲಯದಲ್ಲಿ ಅಥವಾ ಕೇಂದ್ರ / ರಾಜ್ಯ ಸರ್ಕಾರದಿಂದ ಅಂಗೀಕೃತವಾಗಿರುವ ಸಂಶೋದನಾ ಸಂಸ್ಥೆಯಲ್ಲಿ ಕನಿಷ್ಠ 2 ವರ್ಷ ಕೆಲಸದ ಅನುಭವವನ್ನು ಸಹಾಯಕ ನಿರ್ದೇಶಕರು ಅಥವಾ ತತ್ಸಮಾನ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿರಬೇಕು.

ಸಹಾಯಕ ನಿರ್ದೇಶಕರ ಹುದ್ದೆಗೆ
1. ವಯೋಮಿತಿ :- ಕನಿಷ್ಠ 18 ವರ್ಷ, ಗರಿಷ್ಠ 65 ವರ್ಷ
2. ವಿದ್ಯಾರ್ಹತೆ :- ಡಾಕ್ಟರೇಟ್ ಪದವಿಯನ್ನು ರಸಾಯನಶಾಸ್ತ್ರ / ಸೂಕ್ಷ್ಮ ಜೀವವಿಜ್ಞಾನ / ಫಾರ್ಮಕಾಲಜಿ / ಫಾರೆನ್ಸಿಕ್ ಸೈನ್ಸ್ / ಭೌತಶಾತ್ರ / ಸಮಾನಾಂತರ ವಿದ್ಯಾರ್ಹತೆಯನ್ನು ಪಡೆದಿರಬೇಕು.
3. ಕೆಲಸ ಅನುಭವ :- ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಸ್ಥಾಪಿಸಲಾಗಿರುವ ಸರ್ಕಾರಿ ನ್ಯಾಯ ವಿಜ್ಞಾನ ಪ್ರಯೋಗಾಲಯದಲ್ಲಿ ಅಥವಾ ಕೇಂದ್ರ / ರಾಜ್ಯ ಸರ್ಕಾರದಿಂದ ಅಂಗೀಕೃತವಾಗಿರುವ ಸಂಶೋದನಾ ಸಂಸ್ಥೆಯಲ್ಲಿ ಕನಿಷ್ಠ 2 ವರ್ಷ ಕೆಲಸದ ಅನುಭವವನ್ನು ಹಿರಿಯ ವೈಜ್ಞಾನಿಕ ಅಧಿಕಾರಿ ಅಥವಾ ತತ್ಸಮಾನ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿರಬೇಕು.

ಹಿರಿಯ ವೈಜ್ಞಾನಿಕ ಅಧಿಕಾರಿ ಹುದ್ದೆಗೆ
1. ವಯೋಮಿತಿ :- ಕನಿಷ್ಠ 18 ವರ್ಷ, ಗರಿಷ್ಠ 65 ವರ್ಷ
2. ವಿದ್ಯಾರ್ಹತೆ :- ಸ್ನಾತಕೋತರ ಪದವಿಯನ್ನು ಸಸ್ಯಶಾಸ್ತ್ರ / ಪ್ರಾಣಿಶಾಸ್ತ್ರ / ಜೀವ ರಸಾಯನಶಾಸ್ತ್ರ / ಸೂಕ್ಷ್ಮ ಜೀವವಿಜ್ಞಾನ / ಜೀವ ವಿಜ್ಞಾನ ರಸಾಯನಶಾಸ್ತ್ರ / ಫಾರ್ಮಕಲಾಜಿ / ಫಾರೆನ್ಸಿಕ್ ಸೈನ್ಸ್ / ಭೌತಶಾಸ್ತ್ರ / ಕಂಪ್ಯೂಟರ್ ವಿಜ್ಞಾನ / ಎಲೆಕ್ಟ್ರಾನಿಕ್ಸ್ / ಮಾಹಿತಿ ವಿಜ್ಞಾನ / ಸಮಾನಾಂತರ ವಿದ್ಯಾರ್ಹತೆಯನ್ನು ಶೇಖಡ 55% ಅಂಕಗಳನ್ನು ಪಡೆದಿರಬೇಕು.
3. ಕೆಲಸ ಅನುಭವ :- ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಸ್ಥಾಪಿಸಲಾಗಿರುವ ಸರ್ಕಾರಿ ನ್ಯಾಯ ವಿಜ್ಞಾನ ಪ್ರಯೋಗಾಲಯದಲ್ಲಿ ಅಥವಾ ಕೇಂದ್ರ / ರಾಜ್ಯ ಸರ್ಕಾರದಿಂದ ಅಂಗೀಕೃತವಾಗಿರುವ ಸಂಶೋದನಾ ಸಂಸ್ಥೆಯಲ್ಲಿ ಕನಿಷ್ಠ 2 ವರ್ಷ ಕೆಲಸದ ಅನುಭವವನ್ನು ವೈಜ್ಞಾನಿಕ ಅಧಿಕಾರಿ ಅಥವಾ ತತ್ಸಮಾನ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿರಬೇಕು.

ಈ ಗುತ್ತಿಗೆ ನೇಮಕಾತಿಯು ಪ್ರಾರಂಭಿಕವಾಗಿ ಒಂದು ವರ್ಷದ ಅವಧಿಯದಾಗಿದ್ದು, ಒಂದು ವರ್ಷದ ವಿಸ್ತರಣೆಗೆ ಅವಕಾಶವಿರುತ್ತದೆ. ಸದರಿ ಹುದ್ದೆಯಲ್ಲಿ ಗುತ್ತಿಗೆ ಮೇರೆಗೆ ಕರ್ತವ್ಯ ನಿರ್ವಹಿಸಲು ಇಚ್ಛೆಯುಳ್ಳ ಅರ್ಹ ಅಭ್ಯರ್ಥಿಗಳು ಈ ಜಾಹೀರಾತು ಪ್ರಕಟಗೊಂಡ 15 ದಿನಗಳ ಒಳಗಾಗಿ ಸದಸ್ಯ ಕಾರ್ಯದರ್ಶಿ ಮತ್ತು ನಿರ್ದೇಶಕರು, ನ್ಯಾಯ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು ಮತ್ತು ಹಿರಿಯ ವೈಜ್ಞಾನಿಕ ಅಧಿಕಾರಿ ಗುತ್ತಿಗೆ ಹುದ್ದೆಗಳ ನೇಮಕಾತಿ ಸಮಿತಿ, ಮಡಿವಾಳ, ಬೆಂಗಳೂರು-560068 ಇಲ್ಲಿಗೆ ತಮ್ಮ ಸೇವಾ ವಿವರಗಳೊಂದಿಗೆ ಅರ್ಜಿಯನ್ನು ಸಲ್ಲಿಸುವಂತೆ ಕೋರಲಾಗಿದೆ.

ಸಹಿ/-
ನಿರ್ದೇಶಕರು
ನ್ಯಾಯ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು

DIPR/CP/VCPL/3226/2022-23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ರಾಜರಾಜೇಶ್ವರಿನಗರ ವಲಯ, ಚೌಡೇಶ್ವರಿ ಬಸ್ ನಿಲ್ದಾಣದ ಬಳಿ, ಜೆ.ಪಿ ಪಾರ್ಕ್, ಮತ್ತೀಕೆರೆ, ಬೆಂಗಳೂರು-560 054

ಸಂಖ್ಯೆ: ಕಾಪಾಅ/ರಾರಾನವಿ/ಟೆಂಡರ್/10/2022-23 ದಿನಾಂಕ: 22.11.2022

ಟೆಂಡರ್ ಮುಂದೂಡಿಕೆ ಪ್ರಕಟಣೆ-1

ಉಲ್ಲೇಖ: ಈ ಕಚೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ: ಕಾಪಾಅ/ರಾರಾನವಿ/ಟೆಂಡರ್ /10/2022-23, ದಿನಾಂಕ: 07.11.2022

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈ ಕಚೇರಿಯಿಂದ ಹೊರಡಿಸಲಾದ ಉಲ್ಲೇಖಿತ ಟೆಂಡರ್ ಪ್ರಕಟಣೆಯಂತೆ ಆಹ್ವಾನಿಸಲಾಗಿದ್ದ ಟೆಂಡರ್ ಅನ್ನು ತಾಂತ್ರಿಕ ಕಾರಣಗಳಿಂದ ಮುಂದೂಡಲಾಗಿರುತ್ತದೆ. ಕಾರಣಾಂತರಗಳಿಂದ ಟೆಂಡರ್‌ಗೆ ಸಂಬಂಧಿಸಿದ ದಿನಾಂಕಗಳನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗಿರುತ್ತದೆ. ಉಳಿದಂತೆ ಯಾವುದೇ ಬದಲಾವಣೆಗಳಿರುವುದಿಲ್ಲ.

ಮಾರ್ಪಾಡಾದ ಟೆಂಡರ್ ವೇಳಾಪಟ್ಟಿ

1	ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್ -ಮೆಂಟ್ ಪೋರ್ಟಲ್‌ನಲ್ಲಿ ಡೌನ್‌ಲೋಡ್ ಮಾಡುವ ದಿನಾಂಕ	28.11.2022 ರಿಂದ
2	ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ	01.12.2022
3	ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ	07.12.2022ರ ಸಂಜೆ 4:00 ಗಂಟೆಗೆ
4	ಬಿಡ್ ಪೂರ್ವಭಾವಿ ಸಭೆಯನ್ನು 02.12.2022ರ ಸಂಜೆ 4:00 ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ, ರಾರಾನಗರ ವಲಯ, ರಾರಾನಗರ ಇಲ್ಲಿ ನಡೆಸಲಾಗುವುದು.	
5	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	08.12.2022ರ ಸಂಜೆ 4:30 ಗಂಟೆಗೆ

ಸಹಿ/- ಕಾರ್ಯಪಾಲಕ ಅಭಿಯಂತರರು,
ರಾಜರಾಜೇಶ್ವರಿನಗರ ವಿಭಾಗ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.

ಐ.ಎಫ್.ಟಿ. ಸಂ: ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/8443/2022-23/4848
ದಿನಾಂಕ:22.11.2022

ಅಲ್ಪಾವಧಿ ಟೆಂಡರ ಅವಧಿ ವಿಸ್ತರಣೆ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್)

ಉಲ್ಲೇಖ:- ಈ ಕಚೇರಿ ಐ.ಎಫ್.ಟಿ. (ಟೆಂಡರ್) ಸಂ. ಕಾ.ನಿ.ಇಂ./ಲೋ.ಇ/ ವಿ.ಜೆ.ಪಿ/ಪಿ.ಬಿ/8443/2022-23/3520 ದಿ: 27.09.2022

ಉಲ್ಲೇಖಿತ ಪ್ರಕಟಣೆಯಲ್ಲಿ ಅಹ್ವಾನಿಸಲಾದ ಟೆಂಡರ ಕಾಮಗಾರಿಯ ದಿನಾಂಕಗಳನ್ನು ಕಾರಣಾಂತರಗಳಿಂದ ಮುಂದೂಡಿ, ಈ ಕೆಳಗಿನಂತೆ ನಿಗದಿಪಡಿಸಲಾಗಿದೆ.

1) ಗುತ್ತಿಗೆದಾರರ ಪೂರ್ವ ಭಾವಿ ಸಭೆ ದಿನಾಂಕ: 03.12.2022 ರ ಮುಂಜಾನೆ 11.00 ಗಂಟೆಗೆ
2) ತುಂಬಿದ ಮೊಹರ ಬಂದ ಟೆಂಡರಗಳನ್ನು ಸ್ವೀಕರಿಸುವ ದಿನಾಂಕ: 09.12.2022 ಸಂಜೆ 4:30 ಗಂಟೆಗೆ
3) ಗುತ್ತಿಗೆಗಳನ್ನು ತೆರೆಯುವ ದಿನಾಂಕ (ತಾಂತ್ರಿಕ್ ಬೀಡ್) 12.12.2022 ಮುಂಜಾನೆ 11.00 ಗಂಟೆಗೆ
4) ಗುತ್ತಿಗೆಗಳನ್ನು ತೆರೆಯುವ ದಿನಾಂಕ (ಆರ್ಥಿಕ ಬೀಡ್) 13.12.2022 ಮುಂಜಾನೆ 11.00 ಗಂಟೆಗೆ

ಇನ್ನುಳಿದ ನಿಬಂಧನೆಗಳು / ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವದಿಲ್ಲ.

ವಾಸಾಸಂಇ/ವಿಜಯಪುರ/ 601/ಎಂಸಿಎ/2022-23
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ವಿಜಯಪುರ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹೊಳಲ್ಕೆರೆ-577526
ಚಿತ್ರದುರ್ಗ ಜಿಲ್ಲೆ Email:apmcholalkere@gmail.com

ಸಂ:ಕೃಮಾಇ/ಕೃಉಮಾಸ(ಹೊಳ):ಅಭಿಕೆ/ಟೆಂಡರ್/392/2022-23 ದಿ:21-11-2022

ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ

ಹೊಳಲ್ಕೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ 2022-23 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ಮಂಜೂರಾದ ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕ ಅಧಿನಿಯಮ-1999 ನಿಯಮಗಳು 2020 ರ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದನ್ವಯ ಐಟಂವಾರು ಟೆಂಡರ್‌ಗಳನ್ನು ಇ-ಪ್ರಕ್ಯೂರ್‌ಮೆಂಟ್ ಮೂಲಕ ಏಕ ಲಕೋಟೆ ಹಾಗೂ ದ್ವಿ ಲಕೋಟೆ ಪದ್ಧತಿಯಲ್ಲಿ ಪ್ರತ್ಯೇಕವಾಗಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳಿಗಾಗಿ ರಜಾ ದಿನಗಳನ್ನು ಹೊರತುಪಡಿಸಿ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.ಕಛೇರಿ ದೂರವಾಣಿ ಸಂಖ್ಯೆ:08191-275113 ಹಾಗೂ ಇ-ಪೋರ್ಟಲ್ ಸಹಾಯವಾಣಿ ಸಂಖ್ಯೆ:080-22485867 ಅಥವಾ http//epro.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.

ಕ್ರ.ಸಂ	ಕಾಮಗಾರಿ ವಿವರ	ಟೆಂಡರ್‌ಗಿಟ್ಟ ಮೊತ್ತ	ಷರಾ
1.	APMC/2022-23/OW/ WORK_INDENT 5296	16,92,421.71	ಏಕ ಲಕೋಟೆ KW-1
2.	APMC/2022-23/OW/ WORK_INDENT 5297	50,17,259.57	ದ್ವಿ ಲಕೋಟೆ KW-3
3.	APMC/2022-23/OW/ WORK_INDENT 5318	4,31,752.29	ಏಕ ಲಕೋಟೆ KW-1
4.	APMC/2022-23/OW/ WORK_INDENT 5316	31,15,979.82	ಏಕ ಲಕೋಟೆ KW-2

ವೇಳಾಪಟ್ಟಿ:-1) ಭರ್ತಿ ಮಾಡಿದ ಟೆಂಡರ್ ಸಲ್ಲಿಸುವ ಕೊನೆಯ ದಿ:05-12-2022 ಸಂಜೆ 4:00 ಘಂಟೆಗೆ 2) ತಾಂತ್ರಿಕ ಬಿಡ್ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ (ಸಾಧ್ಯವಾದಲ್ಲಿ) 07-12-2022 ಸಂಜೆ 4.00 ಘಂಟೆಗೆ ಕ್ರ.ಸಂ(2) ರ ಕಾಮಗಾರಿಯ ಆರ್ಥಿಕ ಬಿಡ್ ತೆರೆಯುವ ದಿನಾಂಕ:(ಸಾಧ್ಯವಾದಲ್ಲಿ) 09-12-2022 ಸಂಜೆ 4.00 ಘಂಟೆಗೆ

ಸಹಿ/- ಕಾರ್ಯದರ್ಶಿ, ಕೃ.ಉ.ಮಾ.ಸ., ಹೊಳಲ್ಕೆರೆ. ಸಹಿ/- ಆಡಳಿತಾಧಿಕಾರಿಗಳು, ಕೃ.ಉ.ಮಾ.ಸ., ಹೊಳಲ್ಕೆರೆ.

RO.No.711:DIPR/CTA/MCA/2022-23

ಮೈಸೂರು ಮಹಾನಗರಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ವಾವಿನೀಸ&ಒಚ (ಪೂರ್ವ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು.

ಸಂಖ್ಯೆ: ಮೈನಪಾ/ಕಾಇಂ/ವಾವಿನೀಸ&ಒಚ(ಪೂರ್ವ)/ಟಿಎನ್-09/1116/2022-23 ದಿನಾಂಕ : 22-11-2022

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಲೆಕ್ಕ ಶೀರ್ಷಿಕೆಗಳಾದ ನಗರಪಾಲಿಕೆ ಸಾಮಾನ್ಯ ನಿಧಿ ಅನುದಾನದಡಿ ಹಾಗೂ 15ನೇ ಹಣಕಾಸು ಅನುದಾನದಡಿ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ಒಟ್ಟು ಕಾಮಗಾರಿಗಳು	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಸಂಜೆ 5.30 ಗಂಟೆಗೆ: ಇ-ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಸಂಜೆ 5.30 ಗಂಟೆಗೆ: ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಸಂಜೆ 5.45ರ ನಂತರ: ಟೆಂಡರ್‌ನ ತಾಂತ್ರಿಕ/ ಆರ್ಥಿಕ ಬಿಡ್ ತೆರೆಯುವ ದಿನಾಂಕ
1	12	130.76	28.11.2022	15.12.2022	16.12.2022
2	1	25.00	24.11.2022	02.12.2022	03.12.2022
3	ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ ದೇವನೂರು ಕೆರೆಯಿಂದ ಉದಯಗಿರಿ, ಶಾಂತಿನಗರ ಮಾರ್ಗವಾಗಿ ಕೆ.ಎನ್.ಪುರ ಬಡಾವಣೆಯ ಹರಿಶ್ಚಂದ್ರಘಾಟ್ ರಸ್ತೆಯವರೆಗೆ ಮತ್ತು ಶಾಂತಿನಗರ ಬಡಾವಣೆ ಇಂದಿರಾಗಾಂಧಿ ರಸ್ತೆಯಿಂದ ಗೌಸಿಯಾನಗರ "ಸಿ" ಬ್ಲಾಕ್ ಮಾರ್ಗವಾಗಿ ಅಜೀಜ್ ಸೇಠ್ ನಗರ ಅಮೀನ್ ಮಸೀದಿ ರಸ್ತೆಯವರೆಗೆ ತ್ಯಾಜ್ಯ ನೀರು ನಿರ್ವಹಣೆಗಾಗಿ ಮುಖ್ಯ ಒಳಚರಂಡಿ ಕೊಳವೆಮಾರ್ಗ ಅಳವಡಿಸುವ ಕಾಮಗಾರಿ.	480.00	30.11.2022	31.12.2022	02.01.2023
4	8 ಪ್ಯಾಕೇಜ್‌ಗಳ ಶೌಚಾಲಯ ನಿರ್ವಹಣೆ ಸೇವಾ ಟೆಂಡರ್	–	28.11.2022	15.12.2022	16.12.2022

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/- ಕಾರ್ಯಪಾಲಕ ಅಭಿಯಂತರರು
ವಾವಿನೀಸ&ಒಚ(ಪೂರ್ವ) ವಿಭಾಗ, ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ - ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ
ಮುಖ್ಯ ಯೋಜನಾಧಿಕಾರಿರವರ ಕಛೇರಿ, ಯೋಜನಾ ಅನುಷ್ಠಾನ ಘಟಕ, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಲೋಕೋಪಯೋಗಿ ಇಲಾಖೆ ಅನೆಕ್ಸ್ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು -560001
ವೆಬ್ ಸೈಟ್: www.shdpkar.in ಇಮೇಲ್: cepiushdp@gmail.com

ಸಂ: ಮುಯೋಅ/ರಾಹೆಅಯೋ/ಹಂತ-4(ಘಟ್ಟ-2)ಪ್ಯಾಕೇಜ್-606/2022-23 ದಿನಾಂಕ: 22.11.2022

ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಹಂತ-4 (ಘಟ್ಟ-2) ರಡಿಯಲ್ಲಿ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಯ ಅಭಿವೃದ್ಧಿಗಾಗಿ ಅಲ್ಪಾವಧಿ ಟೆಂಡರ್ ಪ್ರಕಟಣೆ.

ಅಲ್ಪಾವಧಿ ಟೆಂಡರ್ ಪ್ರಕಟಣೆ-ಸಂ: 05/2022-23 ದಿನಾಂಕ: 24-11-2022

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಮುಖ್ಯ ಇಂಜಿನಿಯರ್, ಯೋಜನಾ ಅನುಷ್ಠಾನ ಘಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಬೆಂಗಳೂರು. ಇವರಿಂದ ಸರ್ಕಾರದ ಆದೇಶ ಸಂಖ್ಯೆ: ಲೋಇ ಇ-188 ಇಎಪಿ 2020 ಬೆಂಗಳೂರು, ದಿನಾಂಕ: 03.01.2022 ಮತ್ತು ಲೋಇ ಇ-20 ಇಎಪಿ 2022, ದಿನಾಂಕ: 13.01.2022 ರಲ್ಲಿ ಅನುಮೋದಿಸಲಾಗಿರುವ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಹಂತ-4 (ಘಟ್ಟ-2) ರಡಿಯಲ್ಲಿ ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ತಾ॥ ಕೆ.ಆರ್‌ಪೇಟೆ-ಶ್ರವಣಬೆಳಗೋಳ ಜಿಲ್ಲಾ ಮುಖ್ಯ ರಸ್ತೆಯನ್ನು ಅಭಿವೃದ್ಧಿ ಪಡಿಸುವ ಕಾಮಗಾರಿಯು ರೂ.10.00 ಕೋಟಿಗೂ ಕಡಿಮೆ ಮೊತ್ತದ ಈ ಕೆಳಕಂಡ ಪ್ಯಾಕೇಜ್ ಕಾಮಗಾರಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ (KW-4) ಹಾಗೂ ಎಸ್.ಹೆಚ್.ಡಿ.ಪಿ ನಿಯಮಗಳಾನುಸಾರವಾಗಿ ದ್ವಿಲಕೋಟೆ ಪದ್ದತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿ ವಿವರ	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ. ಲಕ್ಷಗಳಲ್ಲಿ)	ಅರ್ಹ ಗುತ್ತಿಗೆದಾರರ ದರ್ಜೆ	ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ
1	5054 ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಸುಧಾರಣೆ (ಯೋಜನೆ) ಪ್ಯಾಕೇಜು ಸಂಖ್ಯೆ:606	ಪ್ಯಾಕೇಜ್‌ನ ಟೆಂಡರ್‌ಗಿಟ್ಟ ಮೊತ್ತದ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆದುಕೊಳ್ಳಬಹುದು	ಪ್ಯಾಕೇಜ್‌ನ ಇಒಅ ಮೊತ್ತದ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆದುಕೊಳ್ಳಬಹುದು	1ನೇ ದರ್ಜೆ ಮತ್ತು ಮೇಲ್ಪಟ್ಟು	11ತಿಂಗಳು/ (ಮಳೆಗಾಲ ಸೇರಿ)

ಟೆಂಡರ್ ಪ್ರಕ್ರಿಯೆ ವಿವರಗಳು: (1) ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ದಾಖಲಾತಿಗಳನ್ನು ದಿನಾಂಕ: 30.11.2022 ರಿಂದ ದಿನಾಂಕ: 09.12.2022ರ ವರೆಗೆ ಸಮಯ 13.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ (2) ಟೆಂಡರ್‌ಗೆ ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಪ್ರೀ-ಬಿಡ್ ಮೀಟಿಂಗ್ ದಿನಾಂಕ ಮತ್ತು ವೇಳೆ ದಿನಾಂಕ: 03.12.2022 ರಂದು 11-30 ಗಂಟೆಗೆ (ಮುಖ್ಯ ಯೋಜನಾಧಿಕಾರಿ, ಎಸ್.ಹೆಚ್.ಡಿ.ಪಿ ಬೆಂಗಳೂರು ರವರ ಕಛೇರಿ) (3) ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ 09.12.2022 17-30 ಗಂಟೆ ವರೆಗೆ (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: 12.12.2022, 11-30 ಗಂಟೆಗೆ (5) ಅರ್ಹ ಟೆಂಡರ್‌ಗಳ ಆರ್ಥಿಕ ಬಿಡ್‌ಗಳನ್ನು ತೆರೆಯುವ ಸಂಭಾವನೀಯ ದಿನಾಂಕ ಮತ್ತು ವೇಳೆ: 19.12.2022 ಬೆಳಿಗ್ಗೆ 11-30 ಗಂಟೆಗೆ. (6) ತಿದ್ದುಪಡಿ ಪ್ರಕಟಣೆಗಳು, ಮಾರ್ಪಾಡುಗಳ ಪ್ರಕಟಣೆಗಳು ಮತ್ತು ಪ್ರಕಟಣೆಯಲ್ಲಿ ಯಾವುದಾದರೂ ಬದಲಾವಣೆಗಳಿದ್ದಲ್ಲಿ ಅವುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಲೋಕೋಪಯೋಗಿ ಇಲಾಖೆ ಮತ್ತು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿತ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ಟೆಂಡರ್ ಆಹ್ವಾನಿಸಿರುವ ಕಾಮಗಾರಿಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಮುಖ್ಯ ಯೋಜನಾಧಿಕಾರಿರವರ ಕಛೇರಿ, ಯೋಜನಾ ಅನುಷ್ಠಾನ ಘಟಕ, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಬೆಂಗಳೂರುರವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಮೂಲಕ: www.eproc.karnataka.gov.in and SHDP Website: www.shdpkar.in ರಲ್ಲಿಯೂ ಸಹ ಪಡೆಯಬಹುದಾಗಿದೆ. ಇ-ಸಂಗ್ರಹಣೆ ಪೋರ್ಟಲ್‌ನ ಸಹಾಯವಾಣಿ ದೂರವಾಣಿ ಸಂಖ್ಯೆಗಳು: 080-23010900 & 080-38013000.

ಸಹಿ/- ಮುಖ್ಯ ಇಂಜಿನಿಯರ್,
ಯೋಜನಾ ಅನುಷ್ಠಾನ ಘಟಕ, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ,
ಕೆ.ಆರ್. ವೃತ್ತ, ಬೆಂಗಳೂರು.

ವಾಸಾಸಂಇ/ವಾಪ್ರ/3220/2022-23

ಏನಿದು ಯುಎಪಿಎ?

ಯುಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ- 2, ಕೆಪಿಎಸ್‌ಸಿ –ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-2 ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಚಲಿತ ಮಾಹಿತಿ ನೀಡಿದ್ದಾರೆ **ಯು.ಟಿ. ಆಯಿಶ ಫರ್ಝಾನ**

ಕೇಂದ್ರ ಸರ್ಕಾರ, ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯಡಿ (Unlawful Activities Prevention Act- UAPA) ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಂಘಟನೆಯನ್ನು ಐದು ವರ್ಷಗಳ ಕಾಲ ನಿಷೇಧಿಸಿ ಆದೇಶ ಹೊರಡಿಸಿದೆ.

ಈ ಸಂಘಟನೆಯನ್ನು ನಿಷೇಧಿಸಿರುವ ಹಿಂದೆ ಸೂಕ್ತ ಕಾರಣಗಳು, ಸರಿಯಾದ ಸಾಕ್ಷ್ಯಗಳಿವೆಯೇ ಎಂಬುದನ್ನು ಪರಿಶೀಲಿಸಲು ಕೇಂದ್ರ ಸರ್ಕಾರ ನ್ಯಾಯಾಧಿಕರಣ /ನ್ಯಾಯಮಂಡಳಿ (ಟ್ರಿಬ್ಯುನಲ್) ರಚಿಸಿದ್ದು, ಅದರ ಮುಖ್ಯಸ್ಥರನ್ನಾಗಿ ದೆಹಲಿಯ ಹೈಕೋರ್ಟ್ ನ್ಯಾಯಮೂರ್ತಿ ದಿನೇಶ್ ಕುಮಾರ್ ಶರ್ಮಾ ಅವರನ್ನು ನೇಮಿಸಲಾಗಿದೆ. ದೆಹಲಿ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎಸ್.ಸಿ.ಶರ್ಮ ಅವರು, ದಿನೇಶ್ ಕುಮಾರ್ ಅವರನ್ನು ಈ ಟ್ರಿಬ್ಯುನಲ್‌ಗೆ ನೇಮಕ ಮಾಡಿದ್ದರು.

ನ್ಯಾಯಾಧಿಕರಣ ಎಂದರೆ ಏನು ?

- ಯುಎಪಿಎ ಕಾಯ್ದೆ ಅಡಿ ಯಾವುದೇ ಒಂದು ಸಂಘಟನೆಯನ್ನು ನಿಷೇಧಿಸಿದಾಗ, ಈ ಪ್ರಕ್ರಿಯೆ ಸರಿಯಾದ ಕಾರಣಗಳಿಗಾಗಿ ನಡೆದಿದೆಯೇ ಎಂಬುದನ್ನು ಪರಿಶೀಲಿಸಲು ಕಾಯಿದೆಯ ಪ್ರಕಾರ ಒಂದು ನ್ಯಾಯಾಧಿಕರಣ ಅಥವಾ ನ್ಯಾಯಮಂಡಳಿಯನ್ನು ಸ್ಥಾಪಿಸಲಾಗುತ್ತದೆ.
- ಹೈಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ಈ ನ್ಯಾಯಾಧಿಕರಣದ ಚಟುವಟಿಕೆಗಳು ನಡೆಯುತ್ತವೆ. ಜೊತೆಗೆ, ಅವಶ್ಯಕತೆಯಿದ್ದಲ್ಲಿ ಕೇಂದ್ರ ಸರ್ಕಾರ ಹೆಚ್ಚಿನ ಸಹಾಯಕರನ್ನೂ ನೇಮಿಸುತ್ತದೆ.
- ಕೇಂದ್ರ ಸರ್ಕಾರ ಯುಎಪಿಎ ಕಾಯ್ದೆಯ ಸೆಕ್ಷನ್ 4ರ ಪ್ರಕಾರ ಯಾವುದೇ ಒಂದು ಸಂಸ್ಥೆ ಅಥವಾ ಸಂಘಟನೆಯನ್ನು ಕಾನೂನುಬಾಹಿರ ಎಂದು ಘೋಷಿಸಿದ ನಂತರ, 30 ದಿನಗಳ ಒಳಗೆ, ಆ ರೀತಿ ನಿಷೇಧಿಸಲು ಸಾಕಷ್ಟು ಸಾಕ್ಷ್ಯಗಳು ಮತ್ತು ಕಾರಣಗಳಿವೆಯೇ ಎಂದು ಪರಿಶೀಲಿಸಿ ದೃಢೀಕರಿಸಲು ನ್ಯಾಯಾಧಿಕರಣವನ್ನು ರಚಿಸಬೇಕು. ಹಾಗೆಯೇ, ಆ ನ್ಯಾಯಾಧಿಕರಣ ನೀಡುವ ತೀರ್ಪಿನ ಪ್ರಕಾರ ಸಂಘಟನೆಯ ನಿಷೇಧದ ಊರ್ಜಿತತೆಯ ಬಗ್ಗೆ ತೀರ್ಮಾನ ಕೈಗೊಳ್ಳಲಾಗುತ್ತದೆ.

ನ್ಯಾಯಾಧಿಕರಣದ ಕಾರ್ಯ: ಕೋಡ್ ಆಫ್ ಸಿವಿಲ್ ಪ್ರೊಸೀಜರ್ 1908ರ ಪ್ರಕಾರ ಸಿವಿಲ್ ಕೋರ್ಟ್‌ಗಳಿಗೆ ಇರುವಂತಹ ಅಧಿಕಾರವನ್ನೇ ನ್ಯಾಯಾಧಿಕರಣವು ಹೊಂದಿರುತ್ತದೆ.

ನಿಷೇಧ ದೃಢೀಕರಿಸುವ ವಿಧಾನಗಳು ಯಾವುವು?

- ರಚನೆಯಾದ ನ್ಯಾಯಮಂಡಳಿಯು 'ನಿಮ್ಮ ಸಂಘಟನೆಯನ್ನು ಕಾನೂನುಬಾಹಿರವೆಂದು ಏಕೆ ಘೋಷಿಸಬಾರದು' ಎಂದು ಕಾರಣ ಕೇಳಿ ಸಂಬಂಧಿಸಿದ ಸಂಘಟನೆಗೆ ನೋಟಿಸ್ ನೀಡುತ್ತದೆ. 30 ದಿನಗಳಲ್ಲಿ ಆ ನೋಟಿಸ್‌ಗೆ ಉತ್ತರಿಸುವಂತೆ ಸೂಚಿಸುತ್ತದೆ.
- ಸಂಘಟನೆ ಅಥವಾ ಅದರ ಪದಾಧಿಕಾರಿಗಳು ನೋಟಿಸ್‌ಗೆ ನೀಡುವ ಉತ್ತರ / ಕಾರಣಗಳನ್ನು ಪರಿಗಣಿಸುವ ನ್ಯಾಯಮಂಡಳಿ, ನಂತರ ವಿಚಾರಣೆ ನಡೆಸುತ್ತದೆ.
- ಈ ಕಾರಣಗಳ ಜೊತೆಗೆ ಹೆಚ್ಚಿನ ಮಾಹಿತಿಯ ಅಗತ್ಯವಿದ್ದರೆ, ಕೇಂದ್ರ ಸರ್ಕಾರ ಅಥವಾ ಯಾವುದೇ ಪದಾಧಿಕಾರಿಗಳು ಅಥವಾ ಸಂಘದ ಸದಸ್ಯರನ್ನು ಕರೆಸಿ ವಿಚಾರಣೆ ನಡೆಸುತ್ತದೆ. ನಂತರ ಸಂಘಟನೆಯನ್ನು ಕಾನೂನುಬಾಹಿರವೆಂದು ಘೋಷಿಸಲು ಸಾಕಷ್ಟು ಕಾರಣಗಳಿವೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸಿ ನ್ಯಾಯಮಂಡಳಿಯು ನಿರ್ಧರಿಸಿ, ಆರುತಿಂಗಳ ಅವಧಿಯೊಳಗೆ ಆ ನಿರ್ಧಾರವನ್ನು ಘೋಷಿಸುತ್ತದೆ.
- ಯುಎಪಿಎ ಸೆಕ್ಷನ್ 6 ರ ಪ್ರಕಾರ, ಕೇಂದ್ರ ಸರ್ಕಾರವು ಸ್ವಯಂ ಇಚ್ಛೆಯಿಂದ ಅಥವಾ ಯಾವುದೇ ಸಂಬಂಧಿತ ವ್ಯಕ್ತಿಯ ಅರ್ಜಿಯ ಆಧಾರದಲ್ಲಿ ಅಧಿಸೂಚನೆಯನ್ನು ರದ್ದುಗೊಳಿಸಬಹುದು. ನ್ಯಾಯ ಮಂಡಳಿಯ ದೃಢೀಕರಣವನ್ನು ಲೆಕ್ಕಿಸದೆಯೂ ಸರ್ಕಾರ ಈ ತೀರ್ಮಾನವನ್ನು ತೆಗೆದುಕೊಳ್ಳಬಹುದು.
- ಆದರೆ ಆ ಸಂಸ್ಥೆಯು ಕಾನೂನುಬಾಹಿರವಾಗಿದೆ ಎಂದು ನ್ಯಾಯಮಂಡಳಿಯು ದೃಢೀಕರಿಸಿದರೆ, ಅಧಿಸೂಚನೆ ಜಾರಿಗೆ ಬಂದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಕೇಂದ್ರದ ನಿರ್ಧಾರವೇ ಜಾರಿಯಲ್ಲಿರುತ್ತದೆ.

ಯುಎಪಿಎಗೆ ತಿದ್ದುಪಡಿ

- 'ಕಾನೂನುಬಾಹಿರ ಚಟುವಟಿಕೆಗಳ (ತಡೆ) ತಿದ್ದುಪಡಿ ಕಾಯ್ದೆ – 2019' ಅನ್ನು ಲೋಕಸಭೆ ಮತ್ತು ರಾಜ್ಯಸಭೆಯು 2019 ರಲ್ಲಿ ಅಂಗೀಕರಿಸಿತು. 'ಕಾನೂನುಬಾಹಿರ ಚಟುವಟಿಕೆಗಳ ತಡೆಗಟ್ಟುವಿಕೆ ಕಾಯಿದೆ -1967'ರಲ್ಲಿರುವ ಅಂಶಗಳನ್ನು ತಿದ್ದುಪಡಿ ಮಾಡಿ, ಈ ಕಾಯ್ದೆಯನ್ನು ರೂಪಿಸಲಾಗಿದೆ.
- ದೇಶದಲ್ಲಿ ಭಯೋತ್ಪಾದಕ ಚಟುವಟಿಕೆಗಳನ್ನು ನಿಯಂತ್ರಿಸಲು ವಿಶೇಷ ಕಾರ್ಯವಿಧಾನಗಳನ್ನು ಒದಗಿಸುವುದು ಈ ಕಾಯ್ದೆಯ ಮುಖ್ಯ ಉದ್ದೇಶವಾಗಿದೆ.
- ಯುಎಪಿಎ, ದೇಶದ ಸಮಗ್ರತೆ ಮತ್ತು ಸಾರ್ವಭೌಮತೆಗೆ ಹಾನಿಯನ್ನುಂಟುಮಾಡುವ ಕಾನೂನುಬಾಹಿರ ಚಟುವಟಿಕೆಗಳನ್ನು ತಡೆಯುವ ಕಾನೂನಾಗಿದೆ.

ಯುಎಪಿಎ ತಿದ್ದುಪಡಿ ಕಾಯ್ದೆ ಈ ಕೆಳಗಿನಂತಿದೆ;

- ಈ ಹಿಂದಿನ ಕಾಯ್ದೆ ಪ್ರಕಾರ, ಯಾವುದೇ ಸಂಘಟನೆಯು ಭಯೋತ್ಪಾದನಾ ಕೃತ್ಯಗಳಲ್ಲಿ ಭಾಗವಹಿಸಿದ್ದರೆ, ಅದನ್ನು ಉತ್ತೇಜಿಸಿದರೆ ಅಥವಾ ಸ್ವಯಂ ಭಯೋತ್ಪಾದನೆಯಲ್ಲಿ ತೊಡಗಿದ್ದರೆ, ಅಂಥ ಸಂಘಟನೆಯನ್ನು ಕೇಂದ್ರ ಸರ್ಕಾರ ಭಯೋತ್ಪಾದಕ ಸಂಘಟನೆ ಎಂದು ಘೋಷಿಸಬಹುದಿತ್ತು. ಈಗ ತಿದ್ದುಪಡಿಯಾಗಿರುವ ಕಾಯ್ದೆ, ಈ ಮೇಲೆ ತಿಳಿಸಿರುವ ಕಾರಣಗಳನ್ನು ಆಧರಿಸಿ 'ವ್ಯಕ್ತಿ'ಗಳನ್ನೂ 'ಭಯೋತ್ಪಾದಕ' ಎಂದು ಘೋಷಿಸುವ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ನೀಡುತ್ತದೆ.

ಎನ್‌ಐಎ (National Investigation Agency) ಯಿಂದ ಆಸ್ತಿಯ ವಶ

- ಈ ಹಿಂದಿನ ಕಾಯ್ದೆ ಪ್ರಕಾರ, ಭಯೋತ್ಪಾದನೆ ಸಂಘಟನೆ ಜೊತೆ ಸಂಪರ್ಕ ಹೊಂದಿರುವವರ ಆಸ್ತಿಗಳನ್ನು ವಶಪಡಿಸಿಕೊಳ್ಳಲು, ಸಂಬಂಧಿಸಿದ ತನಿಖಾಧಿಕಾರಿಯು ಪೊಲೀಸ್ ಮಹಾನಿರ್ದೇಶಕರ ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿತ್ತು. ಈಗ ತಿದ್ದುಪಡಿ ಕಾಯ್ದೆಯು, ರಾಷ್ಟ್ರೀಯ ತನಿಖಾ ಸಂಸ್ಥೆಯ (NIA) ಅಧಿಕಾರಿಗಳು ಭಯೋತ್ಪಾದಕ ಸಂಘಟನೆಯೊಂದಿಗೆ ಸಂಪರ್ಕವಿರುವವರ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲು ಎನ್‌ಐಎ ಸಂಸ್ಥೆಯ ಮಹಾನಿರ್ದೇಶಕರ ಅನುಮೋದನೆ ಪಡೆಯಬೇಕು ಎಂದು ಸೂಚಿಸುತ್ತದೆ.
- ಈ ಹಿಂದೆ ಭಯೋತ್ಪಾದನಾ ಸಂಬಂಧಿತ ಪ್ರಕರಣಗಳಲ್ಲಿ ಡಿವೈಎಸ್‌ಪಿ ಅಥವಾ ಎಸಿಪಿ ದರ್ಜೆಗಿಂತ ಕೆಳಗಿರುವ ಯಾವುದೇ ಅಧಿಕಾರಿಯು ತನಿಖೆ ನಡೆಸುವಂತಿಲ್ಲ ಎಂಬ ನಿಯಮವಿತ್ತು.
- ಆದರೆ ಈಗ ತಿದ್ದುಪಡಿಯ ಪ್ರಕಾರ ಕಾಯ್ದೆಯ ಪ್ರಕರಣಗಳನ್ನು ತನಿಖೆ ಮಾಡುವ ಅಧಿಕಾರವನ್ನು ಇನ್‌ಸ್ಪೆಕ್ಟರ್ ಅಥವಾ ಅದಕ್ಕಿಂತ ಹೆಚ್ಚಿನ ಶ್ರೇಣಿಯ ಎನ್‌ಐಎ ಅಧಿಕಾರಿಗಳಿಗೆ ನೀಡುತ್ತದೆ.

EXAM DH ಪ್ರಜಾವಾಣಿ MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

ಮತ್ತಷ್ಟು ಮಾಹಿತಿಗಾಗಿ

ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾಯ್ದೆ(Unlawful Activities Prevention Act- UAPA) ಕುರಿತ ವಿಸ್ತೃತ ಮಾಹಿತಿ ಹಾಗೂ ನಾಗರಿಕ ಸೇವಾ ಪರೀಕ್ಷೆಗಳಿಗೆ ಅಗತ್ಯವಾದ ಇಂಥ ಪ್ರಚಲಿತ ವಿದ್ಯಮಾನಗಳು ಕುರಿತ ಮಾಹಿತಿ ಹಾಗೂ ವಿಡಿಯೊಗಳಿಗಾಗಿ 'ಪ್ರಜಾವಾಣಿ – ಡೆಕ್ಕನ್‌ಹೆರಾಲ್ಡ್ ಪತ್ರಿಕೆಯ' ಮಾಸ್ಟರ್ ಮೈಂಡ್' ಇ–ಪತ್ರಿಕೆಗೆ ಚಂದಾದಾರರಾಗಿ. ಚಂದಾಕ್ಕಾಗಿ ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

www.exammastermind.com

ಸಂದರ್ಶನ

ಅಭ್ಯರ್ಥಿಗಳ ನೈಜ ಪರೀಕ್ಷೆ

ಸಂದರ್ಶನದಲ್ಲಿ ಅಭ್ಯರ್ಥಿಯ ಉತ್ತರಗಳಿಗಿಂತ ಅವನ(ಳ) ನಡತೆ ಪರೀಕ್ಷೆಗೊಳಪಡುತ್ತದೆ. ಎಂಥಾ ಪರಿಸ್ಥಿತಿ ಯಲ್ಲೂ ತಾಳ್ಮೆಗೆಡದೆ ನಗುಮುಖದಿಂದ, ಸೌಜನ್ಯದಿಂದ ಉತ್ತರಿಸುವುದು ಸಕಾರಾತ್ಮಕ ಅಂಶ. ಒಂದು ಕ್ಷಣದ ಸಿಟ್ಟು ಈವರೆಗಿನ ಎಲ್ಲಾ ಸಾಧನೆಗಳನ್ನೂ ಅಳಿಸಿ ಹಾಕಿಬಿಡಬಹುದು.

ಡಾ. ನಿರಂಜನ ವಾನಳ್ಳಿ

ಸಂಶೋಧನೆಯಿಂದ ಹಿಡಿದು ಎಲ್ಲಾ ಮುಖ್ಯ ಪರೀಕ್ಷೆಗಳ ಕೊನೆಗೆ ಸಂದರ್ಶನಕ್ಕೆ ಕರೆಬರುತ್ತದೆ. ಸಂದರ್ಶನ ಸಾಮಾನ್ಯವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳ ಅವಿಭಾಜ್ಯ ಅಂಗವಾಗಿದೆ. ಯಾವುದೇ ಕೆಲಸಕ್ಕೆ ಸೇರುವುದಿದ್ದರೂ ಸಂದರ್ಶನ ಅಧಿಕೃತವಾಗಿಯೋ ಅನಧಿಕೃತವಾಗಿಯೋ ನಡೆಯುತ್ತದೆ. ಬರವಣಿಗೆಯ ಪರಿಕ್ಷೆಯಲ್ಲಿ ಪಾಸಾಯ್ತು, ಸಂದರ್ಶನದಲ್ಲಿ ಫೇಲಾಯ್ತು ಎಂಬುದು ಬಹಳ ಅಭ್ಯಥಿಗಳ ಕೊರಗು. ಅದಕ್ಕೆ ಬಾಹ್ಯ ಕಾರಣಗಳಿದ್ದರೆ ನಾವು ಹೊಣೆಯಲ್ಲ. ಆದರೆ ಸಂದರ್ಶನಕ್ಕೆ ನಾವು ತಯಾರಾಗುವುದು ಹಾಗೂ ಸಂದರ್ಶನವು ನಮ್ಮತನದ ನಿಜದರ್ಶನವಾಗುವಂತೆ ನೋಡಿಕೊಳ್ಳುವುದು ಸಂದರ್ಶನಕ್ಕೆ ಹಾಜರಾಗುವವರ ಜವಾಬ್ದಾರಿ. ಹೀಗಾಗಿ ಸಂದರ್ಶನದ ಸೋಲು ಗೆಲುವು ಬಹುಪಾಲು ನಮ್ಮ ಸಂವಹನದ ಚಾಕಚಕ್ಯತೆಯ ಮೇಲೆ ನಿಂತಿದೆ ಎಂಬುದನ್ನು ಅಲ್ಲಗಳೆಯಲಾಗದು.



ಸಂದರ್ಶನ ನಿರ್ಣಾಯಕ ಹಂತ

ಪರೀಕ್ಷಾ ಉತ್ತರಗಳ ಬರವಣಿಗೆಯಲ್ಲಿ ನಮ್ಮ ಸಂವಹನ ಸಾಧ್ಯತೆಗಳು ಮುಖ್ಯವಾಗುವ ಹಾಗೆ ಸಂದರ್ಶನದಲ್ಲೂ ನಮ್ಮ ಸಂವಹನವು ನಿರ್ಣಾಯಕವಾಗುತ್ತದೆ. ಪರೀಕ್ಷೆಯಲ್ಲಿ ಗೊತ್ತಿಲ್ಲದ ಪರೀಕ್ಷಕನ ಜೊತೆ ಸಂವಹನ ಮಾಡಬೇಕಿದೆ. ಸಂದರ್ಶನದಲ್ಲಿ ಎದುರು ಕುಳಿತ ವ್ಯಕ್ತಿಗೆ ಸಂವಹನ ಮಾಡಿ ಸೈ ಅನಿಸಿಕೊಳ್ಳಬೇಕು. ಎರಡೂ ಕಷ್ಟವೇ. ಒಂದರಲ್ಲಿ ಫಲಿತಾಂಶ ತಡವಾದರೆ ಇನ್ನೊಂದರಲ್ಲಿ ಫಲಿತಾಂಶ ನೇರಾ ನೇರ. ಸಂದರ್ಶನ ಮುಗಿಸಿ ಹೊರಬರುವಾಗಲೇ ಸಂದರ್ಶಿತ ವ್ಯಕ್ತಿಗೆ ಒಂದು ಸಂಜ್ಞೆ ಸಿಕ್ಕಿರುತ್ತದೆ! ತನ್ನ ಸಂದರ್ಶನದ ಫಲದ ಕಲ್ಪನೆ ಅವನಿಗೆ ದೊರಕುತ್ತದೆ!

'ಸಂದರ್ಶನ' - ಹೆಸರೇ ಸೂಚಿಸುವ ಹಾಗೆ ಅಭ್ಯರ್ಥಿಯನ್ನು ಮುಖತಃ ನೋಡುವ ಅವನ(ಳ)ನ್ನು ಮಾತನಾಡಿಸುವ ವ್ಯವಸ್ಥೆ. ಇಲ್ಲಿ ಸಂದರ್ಶಿಸಲ್ಪಡುವ ಅಭ್ಯರ್ಥಿ ಒಬ್ಬ, ಆದರೆ ಸಂದರ್ಶಕರು ಹಲವರಿರಬಹುದು. ಒಬ್ಬೊಬ್ಬರಾಗಿ ಪ್ರಶ್ನೆ ಕೇಳಬಹುದು ಅಥವಾ ಒಬ್ಬರು ಕೇಳುವಾಗಲೇ ಇನ್ನೊಬ್ಬರು ಮೂಗುತೂರಿಸಿ ತಬ್ಬಿಬ್ಬು ಮಾಡಬಹುದು. ಏಕೆಂದರೆ, ಸಂದರ್ಶನ ಹೀಗೇ ಇರಬೇಕು, ಈ ರೀತಿಯ ಪ್ರಶ್ನೆಗಳನ್ನೇ ಕೇಳಬೇಕು ಎಂಬ ಷರತ್ತೇನೂ ಇಲ್ಲ. ಹೀಗಾಗಿ 'ಸಂದರ್ಶನದಲ್ಲಿ ಏನು ಕೇಳಬಹುದು ಎಂಬ ಪ್ರಶ್ನೆಗೆ ಏನು ಬೇಕಾದರೂ ಕೇಳಬಹುದು' ಎಂಬುದೇ ಸಮಂಜಸ ಉತ್ತರವಾದೀತು. ಕೆಲವು ಬಾರಿ ನಿರೀಕ್ಷಿತ ಪ್ರಶ್ನೆಗಳು ಇದ್ದರೆ ಇನ್ನು ಕೆಲವೊಮ್ಮೆ ಅಸಂಬದ್ಧ ಪ್ರಶ್ನೆಗಳೂ ಇರಬಹುದು. ಪ್ರಶ್ನೆ ಕೇಳುವವರಲ್ಲಿ ಅಪ್ರಸ್ತುತ ಪ್ರಸಂಗಿಗಳೂ ಇರಬಹುದು. ಬೇಕಂತಲೇ ತಲೆಹರಟೆ ಮಾಡುವವರು, ತಾನೊಬ್ಬನೇ ಬುದ್ಧಿವಂತ ಎಂದು ತಿಳಿದಿರುವವರೂ ಇರಬಹುದು, ಆದರೆ ಅಭ್ಯರ್ಥಿ ಪಡೆಯುವ ಕೊನೆ (receiving end) ಯಲ್ಲಿರುವುದರಿಂದ ಅವೆಲ್ಲವನ್ನೂ ಸಹಿಸಿಕೊಳ್ಳಬೇಕು.

ಅಭ್ಯರ್ಥಿಯ ನಡತೆ ಪರೀಕ್ಷೆ

ಸಂದರ್ಶನದಲ್ಲಿ ಅಭ್ಯರ್ಥಿಯ ಉತ್ತರಗಳಿಗಿಂತ ಅವನ(ಳ) ನಡತೆ ಪರೀಕ್ಷೆಗೊಳಪಡುತ್ತದೆ. ಎಂಥಾ ಪರಿಸ್ಥಿತಿ ಯಲ್ಲೂ ತಾಳ್ಮೆಗೆಡದೆ ನಗುಮುಖದಿಂದ, ಸೌಜನ್ಯದಿಂದ ಉತ್ತರಿಸುವುದು ಸಕಾರಾತ್ಮಕ ಅಂಶ. ಒಂದು ಕ್ಷಣದ ಸಿಟ್ಟು ಈವರೆಗಿನ ಎಲ್ಲಾ ಸಾಧನೆಗಳನ್ನೂ ಅಳಿಸಿಹಾಕಿಬಿಡಬಹುದು. ಸಂದರ್ಶನದ ಸಮಯದಲ್ಲಿ ನಮ್ಮ ನಡತೆಯೇ ನಿರ್ಣಾಯಕ. ಸಂದರ್ಶಕರು ಕೇಳುವ ಎಲ್ಲ ಪ್ರಶ್ನೆಗಳಿಗೂ ಉತ್ತರ ಗೊತ್ತಿರುವುದು ಸಾಧ್ಯವಿಲ್ಲ. ಯಾಕೆಂದರೆ ಉತ್ತರಿಸುವವರೂ ಮನುಷ್ಯರು, ಕಪ್ಯೂಟರ್ ಅಲ್ಲ. ಉತ್ತರ ಗೊತ್ತಿಲ್ಲದ ಪ್ರಶ್ನೆಗಳಿಗೆ ತಪ್ಪು ಉತ್ತರ ಕೊಟ್ಟು ನಗೆಪಾಟಲಿಗೆ ಈಡಾಗುವುದಕ್ಕಿಂತ 'ಗೊತ್ತಿಲ್ಲ' ಎಂದು ಒಪ್ಪಿಕೊಳ್ಳುವುದು ಒಳಿತು. ಅದರಲ್ಲಿ ಅವಮಾನ ವೇನೂ ಇಲ್ಲ. ಬದಲು ತಪ್ಪನ್ನೇ ಸಾಧಿಸ ಹೊರಟರೆ, ಖಂಡಿತಾ ಕೈಕೊಡುತ್ತದೆ. ಯಾವ ಕಾರಣಕ್ಕೂ ಸಂದರ್ಶಕರೊಂದಿಗೆ ಜಗಳಕ್ಕೆ ಇಳಿಯಬಾರದು. ಅನಗತ್ಯ ವಾದ-ವಿವಾದಕ್ಕೆ ಆಸ್ಪದ ಕೊಡಬಾರದು.

ವಾಸ್ತವತೆಯಿರಲಿ

ಸಂದರ್ಶನದ ಸಮಯದಲ್ಲಿ ನಾವು ನಾವಾಗಿರುವುದು ಕ್ಷೇಮಕರ. ನಾವಲ್ಲದ ನಾವನ್ನು ತೋರಿಸಹೊರಟರೆ ಕೋಗಿಲೆಯನ್ನು ಅನುಕರಿಸಲು ಹೊರಟ ಕಾಗೆಯಂತಾದೀತು. ಸಾಮಾನ್ಯವಾಗಿ ಮೊದಲಿಗೆ ನಿಮ್ಮನ್ನು ಪರಿಚಯಿಸಿಕೊಳ್ಳಿ ಅನ್ನುತ್ತಾರೆ. ಆಗ ನಿಮ್ಮನ್ನು ಪ್ರಾಮಾಣಿಕವಾಗಿ ಪರಿಚಯಿಸಿಕೊಳ್ಳಿ. ನಿಮ್ಮ ಈವರೆಗಿನ ಸಾಧನೆಗಳನ್ನೂ ಸೋಲುಗಳನ್ನೂ ಹೇಳುವುದರಲ್ಲಿ ವಾಸ್ತವತೆಯಿರಲಿ. ಯಾಕೆಂದರೆ ನಿಮ್ಮ ಸ್ವ-ವಿವರ ಆಗಲೇ ಅವರ ಬಳಿ ಇರುತ್ತದೆ. ಅದಕ್ಕಿಂತ ಹೆಚ್ಚಿನದನ್ನೇನಾದರೂ ಹೇಳುವುದಿದ್ದರೆ ಸೇರಿಸಿ. ಎಲ್ಲಿಯೂ ಅತಿಯಾಗಿ ಅಭ್ಯರ್ಥಿಯು ತನ್ನನ್ನು ತಾನು ಹೊಗಳಿಕೊಳ್ಳುತ್ತಿದ್ದಾನೆ ಎಂದು ಸಂದರ್ಶಕರಿಗೆ ಅನಿಸಬಾರದು. ಹಾಗಂತ ಅದು ನಿಮ್ಮನ್ನು ಇರುವುದಕ್ಕಿಂತ ಕಡಿಮೆಯಾಗಿಯೂ ಕಲ್ಪಿಸಲು ಅವಕಾಶವಾಗಬಾರದು. ಒಟ್ಟಾರೆ ಸ್ವಯಂ ಪರಿಚಯ ನಿಮ್ಮನ್ನು ಸಂದರ್ಶಿಸುವ ಮಂಡಳಿಗೆ ಒಳ್ಳೆಯ ಅಭಿಪ್ರಾಯ ಮೂಡಲು ಕಾರಣವಾಗಬೇಕು. ಒಂದು 'ಧನಾತ್ಮಕ ಇಮೇಜ್' ಸೃಷ್ಟಿಸಬೇಕು.

ಸಂದರ್ಶನದ ವೇಳೆ ಪುಂಖಾನುಪುಂಖವಾಗಿ ನಿಮ್ಮತ್ತ ಪ್ರಶ್ನೆಗಳ ಸುರಿಮಳೆಯಾದರೆ ಅಧೀರರಾಗಬೇಕಿಲ್ಲ. ಅವರು ಕುಳಿತಿರುವುದೇ ಪ್ರಶ್ನೆಕೇಳುವುದಕ್ಕೆ ಹಾಗೂ ಉತ್ತರಿಸಬೇಕಾದ್ದು ಅಭ್ಯರ್ಥಿಯ ಧರ್ಮ. ಎಚ್ಚರಿಕೆ ಇರಬೇಕಾದ್ದು ನಾವು ಕೊಡುವ ಉತ್ತರಗಳಲ್ಲಿ. ಅದು ಒಂದು ಚಿಂತನಾ ಎಳೆಯನ್ನು ಹೊಂದಿರಬೇಕು. ಎಲ್ಲಿಯೂ ಪರಸ್ಪರ ವೈರುಧ್ಯವಿರುವಂತೆ ಕಾಣಬಾರದು. ನಮ್ಮ ಉತ್ತರಗಳು ನಿಜವಾದ ನಮ್ಮನ್ನು ತೋರಿಸಬೇಕೇ ವಿನಾ ನಮ್ಮ ಬಗ್ಗೆ ಸಂಶಯಗಳು ಉಕ್ಕುವುದಕ್ಕೆ ಕಾರಣವಾಗಬಾರದು. ಹೇಳಿದ್ದಕ್ಕಿಂತ ಮುಚ್ಚಿಟ್ಟಿದ್ದೇ ಹೆಚ್ಚು ಅಂತ ಮಂಡಳಿಗೆ ಅನಿಸಿದರೆ ಸಂದರ್ಶನ ನಮ್ಮ ಪರವಾಗಿ ಫಲಗೂಡುವುದು ಕಷ್ಟ.

ಸಂದರ್ಶನಗಳ ಬಗ್ಗೆ ಹೇಳಬೇಕಾದ ಇನ್ನೊಂದು ಸತ್ಯವೆಂದರೆ ನೀವು ಸಂದರ್ಶನದಲ್ಲಿ ಏನು ಹೇಳುತ್ತೀರಿ ಎಂಬುದು ಮುಖ್ಯ. ಆದರೆ ಹೇಗೆ ಹೇಳುತ್ತೀರಿ ಎಂಬುದು ಅದಕ್ಕಿಂತ ಮುಖ್ಯ. ಅದೇ ನಿಮ್ಮ ಸಂವಹನ ಕೌಶಲ.

(ಲೇಖಕರು: ಸಂವಹನ ಪ್ರಾಧ್ಯಾಪಕರು ಮತ್ತು ಕುಲಪತಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ)

ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿರುವ 'ಸಾಮಾನ್ಯ ಜ್ಞಾನ' ವಿಷಯ ಕುರಿತ ಮಾದರಿ ಪ್ರಶ್ನೋತ್ತರಗಳು ಇಲ್ಲಿವೆ

ಮಾದರಿ ಪ್ರಶ್ನೋತ್ತರ

ಸಾಮಾನ್ಯ ಜ್ಞಾನ

1) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ಸುಪ್ರೀಂ ಕೋರ್ಟ್‌ನ 150ನೇ ಮುಖ್ಯ ನ್ಯಾಯಮೂರ್ತಿಯಾಗಿ ಡಿ ವೈ ಚಂದ್ರಚೂಡ್ ಅಧಿಕಾರ ಸ್ವೀಕರಿಸಿದ್ದಾರೆ.

2) ಡಿ ವೈ ಚಂದ್ರಚೂಡ್ ಅವರು 1998ರಲ್ಲಿ ಮುಂಬೈ ಹೈಕೋರ್ಟ್‌ನಲ್ಲಿ ವಕೀಲರಾಗಿ ಕಾರ್ಯ ಆರಂಭಿಸಿದರು. 1998-2000ರ ಅವಧಿಯಲ್ಲಿ ಭಾರತದ ಸಾಲಿಸಿಟರ್ ಜನರಲ್ ಅಗಿ ನೇಮಕಗೊಂಡಿದ್ದರು. ನಂತರದ ದಿನಗಳಲ್ಲಿ ಅಲಹಾಬಾದ್ ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿಯಾಗಿ ಅಗಿ ನೇಮಕಗೊಂಡಿದ್ದರು. 2016ರಲ್ಲಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ಅಧಿಕಾರ ಸ್ವೀಕರಿಸಿದ್ದರು.

ಉತ್ತರ ಸಂಕೇತಗಳು:

ಎ) ಹೇಳಿಕೆ 2 ಮಾತ್ರ ಸರಿಯಾಗಿದೆ
ಬಿ) ಹೇಳಿಕೆ 1 ಮತ್ತು 2 ಎಲ್ಲವೂ ತಪ್ಪಾಗಿವೆ
ಸಿ) ಹೇಳಿಕೆ 1 ಮತ್ತು 2 ಎಲ್ಲವೂ ಸರಿಯಾಗಿವೆ
ಡಿ) ಹೇಳಿಕೆ 1 ಮಾತ್ರ ಸರಿಯಾಗಿದೆ

ಉತ್ತರ: ಸಿ

2) ಅಕ್ಟೋಬರ್ 31 ಅನ್ನು ರಾಷ್ಟ್ರೀಯ ಏಕತಾ ದಿನ ಎಂದು ಆಚರಿಸಲಾಗುತ್ತದೆ. ಹಾಗಾದರೆ ಈ ದಿನ ಯಾರ ಜನ್ಮದಿನವಾಗಿದೆ?

ಎ) ಸರ್ದಾರ್ ವಲ್ಲಭಭಾಯಿ ಪಟೇಲ್
ಬಿ) ಜವಾಹರ ಲಾಲ್ ನೆಹರು
ಸಿ) ಇಂದಿರಾ ಗಾಂಧಿ
ಡಿ) ಅಟಲ್ ಬಿಹಾರಿ ವಾಜಪೇಯಿ

ಉತ್ತರ: ಎ

3) ಮೀನು ತ್ಯಾಜ್ಯದಿಂದ ಬಯೋಡೀಸೆಲ್ ಉತ್ಪಾದಿಸುವ ಯೋಜನೆಯನ್ನು ಎಲ್ಲಿ ಜಾರಿಗೆ ತರಲಾಗುತ್ತಿದೆ?

ಎ) ಮೂಲ್ಕಿ ಬಿ) ಸುರತ್ಕಲ್
ಸಿ) ಕಾರವಾರ ಡಿ) ತದಡಿ

ಉತ್ತರ: ಎ

ಇನ್ನಷ್ಟು ಪ್ರಶ್ನೋತ್ತರಗಳಿಗಾಗಿ https://www.prajavani.net/education-career ನೋಡಿ

ನುಡಿ–ಕಿಡಿ

ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರ ಮುಖವು ಇರಾಕ್ ಸರ್ವಾಧಿಕಾರಿಯಾಗಿದ್ದ ಸದ್ದಾಂ ಹುಸೇನ್ ಅವರಂತೆ ಕಾಣುತ್ತಿದೆ. ಇದರ ಬದಲಿಗೆ ಸರ್ದಾರ್ ಪಟೇಲ್, ಜವಾಹರಲಾಲ್ ನೆಹರೂ ಅಥವಾ ಮಹಾತ್ಮ ಗಾಂಧಿ ಅವರ ಹಾಗೆ ರಾಹುಲ್ ಕಾಣಿಸಿದರೆ ಒಳ್ಳೆಯದಿತ್ತು

ಹಿಮಂತಾ ಬಿಸ್ವಾ
ಅಸ್ಸಾಂ ಮುಖ್ಯಮಂತ್ರಿ

ನಾನು ಪ್ರತಿಕ್ರಿಯೆ ನೀಡುವ ಮೂಲಕ ಇದನ್ನು ವಿಮರ್ಶೆಗೆ ಒಳಪಡಿಸಲು ಹೋಗುವುದಿಲ್ಲ. ಸಾರ್ವಜನಿಕವಾಗಿ ಮಾತನಾಡುವಾಗ ಘನತೆಯಿಂದ ಕೂಡಿದ ಮಾತುಗಳನ್ನು ಆಡಬೇಕು. ಆದರೆ ಅಸ್ಸಾಂ ಮುಖ್ಯಮಂತ್ರಿಯು ಇಂತಹ ಕ್ಷುಲ್ಲಕ ಮಾತುಗಳನ್ನು ಹೆಣೆದಿರುವುದು ದುರದೃಷ್ಟಕರ

ಮನೀಶ್ ತಿವಾರಿ
ಕಾಂಗ್ರೆಸ್ ಮುಖಂಡ

ಪಾದಯಾತ್ರೆಯಲ್ಲಿ ಮೇಧಾ ಪಾಟ್ಕರ್ ಅವರ ಜೊತೆ ರಾಹುಲ್ ಗಾಂಧಿ ಹೆಜ್ಜೆ ಹಾಕಿದ್ದು ಗುಜರಾತ್ ಜನರಿಗೆ ಮಾಡಿದ ಅಪಮಾನ. ಈ ಮೂಲಕ ರಾಜ್ಯದ ಜನರ ಗಾಯದ ಮೇಲೆ ಉಪ್ಪು ಸವರಲಾಗಿದೆ. ಈ ಬಗ್ಗೆ ಜನರು ಕಾಂಗ್ರೆಸ್‌ನಿಂದ ಉತ್ತರ ನಿರೀಕ್ಷಿಸುತ್ತಿದ್ದಾರೆ

ಅಮಿತ್ ಶಾ
ಕೇಂದ್ರ ಗೃಹಸಚಿವ

ಗುಜರಾತ್ ವಿಧಾನಸಭೆ ಚುನಾವಣೆ: ಎಂಟನೇ ಬಾರಿ ಕಣಕ್ಕಿಳಿದ ಮೂವರು ಶಾಸಕರು

ಹಲವರಿಗೆ ಮತ್ತೆ ಗೆಲ್ಲುವ ಹುಮ್ಮಸ್ಸು

ಅಹಮದಾಬಾದ್ (ಪಿಟಿಐ): ಐದು ಹಾಗೂ ಅದಕ್ಕಿಂತಲೂ ಹೆಚ್ಚು ಬಾರಿ ಗೆದ್ದಿರುವ ಏಳು ಶಾಸಕರು ಗುಜರಾತ್ ವಿಧಾನಸಭಾ ಚುನಾವಣೆಗೆ ಮತ್ತೆ ಧುಮುಕಿದ್ದು, ಇನ್ನೊಂದು ಬಾರಿ ಅದೃಷ್ಟ ಪರೀಕ್ಷೆಗೆ ಮುಂದಾಗಿದ್ದಾರೆ.

ಹೀಗೆ ಹೆಚ್ಚು ಬಾರಿ ಗೆದ್ದಿರುವ ಐವರು ಶಾಸಕರಿಗೆ ಬಿಜೆಪಿ ಈ ಬಾರಿ ಮತ್ತೆ ಟಿಕೆಟ್ ನೀಡಿದೆ. ಮಂಜಾಲ್‌ಪುರ ಕ್ಷೇತ್ರದಿಂದ ಯೋಗೇಶ್ ಪಟೇಲ್, ನಾದಿಯಾಡ್‌ನಿಂದ ಪಂಕಜ್ ದೇಸಾಯಿ, ದ್ವಾರಕಾದಿಂದ ಪಬುಭಾ ಮನೆಕ್, ಗರಿಯಾಧರ್‌ನಿಂದ ಕೇಶು ನಕ್ರಾಣಿ, ಭಾವನಗರ ಗ್ರಾಮೀಣ ಕ್ಷೇತ್ರದಿಂದ ಪುರುಷೋತ್ತಮ ಸೋಳಂಕಿ ಅವರು ಸ್ಪರ್ಧಿಸುತ್ತಿದ್ದಾರೆ.

ಭಾರತೀಯ ಟ್ರೈಬಲ್ ಪಾರ್ಟಿಯ (ಬಿಟಿಪಿ) ಸಂಸ್ಥಾಪಕ ಛೋಟು ವಾಸವ ಮತ್ತು ಬಿಜೆಪಿಯಿಂದ ಟಿಕೆಟ್ ವಂಚಿತರಾಗಿರುವ ಮಧು ಶ್ರೀವಾಸ್ತವ್ ಅವರು ಪಕ್ಷೇತರರಾಗಿ ಕಣಕ್ಕಿಳಿದಿದ್ದಾರೆ. ಇವರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ದಶಕಗಳಿಂದ ಬಲಿಷ್ಠ ಬೆಂಬಲಿಗರ ಪಡೆ ಹೊಂದಿದ್ದಾರೆ.

ಈ ಪೈಕಿ ಯೋಗೇಶ್ ಪಟೇಲ್, ಮನೆಕ್ ಹಾಗೂ ವಾಸವ ಅವರು 7 ಬಾರಿ ಚುನಾವಣೆಯಲ್ಲಿ ಗೆದ್ದಿದ್ದು, ಎಂಟನೇ ಬಾರಿ ಮತ್ತೆ ಶಾಸಕರಾಗುವ ಹೊಸ್ತಿಲಲ್ಲಿದ್ದಾರೆ. ನಕ್ರಾಣಿ ಮತ್ತು ಶ್ರೀವಾಸ್ತವ ಅವರು ತಲಾ 6 ಬಾರಿ ಜಯ ದಾಖಲಿಸಿದ್ದಾರೆ. ದೇಸಾಯಿ ಮತ್ತು ಸೋಳಂಕಿ ಅವರು ಐದು ಬಾರಿ ಗೆದ್ದಿದ್ದಾರೆ.

ತಳಮಟ್ಟದಲ್ಲಿ ಜನರ ಜೊತೆ ಬೆರೆಯುವ ಹಾಗೂ ವಿಶ್ವಾಸಾರ್ಹ ಕಾರ್ಯಕರ್ತರ ಪಡೆಯನ್ನು ಹೊಂದಿರುವುದರಿಂದಲೇ ಇವರು ಮತ್ತೆ ಮತ್ತೆ ವಿಧಾನಸಭೆಗೆ ಆಯ್ಕೆಯಾಗುತ್ತಿದ್ದಾರೆ ಎಂದು ಅಹಮದಾಬಾದ್‌ನ ರಾಜಕೀಯ ವಿಶ್ಲೇಷಕ ಶಿರೀಶ್ ಕಾಶಿಕರ್ ಅವರು ಅಭಿಪ್ರಾಯಪಟ್ಟಿದ್ದಾರೆ.

75 ವರ್ಷ ದಾಟಿದವರಿಗೆ ಟಿಕೆಟ್ ನೀಡುವುದಿಲ್ಲ ಎಂಬ ನಿಯಮವನ್ನು ಬಿಜೆಪಿ ಪಾಲಿಸುತ್ತಿದ್ದರೂ, 76 ವರ್ಷ ವಯಸ್ಸಿನ ಯೋಗೇಶ್ ಪಟೇಲ್ ಅವರಿಗೆ ಈ ಬಾರಿ ಸ್ಪರ್ಧಿಸಲು ಅವಕಾಶ ನೀಡಿದೆ. ಇವರು ಪಕ್ಷದ ಅತ್ಯಂತ ಹಿರಿಯ ಅಭ್ಯರ್ಥಿ ಎನಿಸಿದ್ದಾರೆ. ಜನಸಂಘದ ಕಾಲದಿಂದಲೂ ಅವರು ಬಿಜೆಪಿ ಜೊತೆಗಿದ್ದಾರೆ. ಪಟೇಲ್ ಅವರು ಎಂದೂ ಪಕ್ಷಾಂತರ ಮಾಡಿದವರಲ್ಲ.

ಒಂದೇ ಪಕ್ಷದ ಜೊತೆಗಿರುವ, ತಳಮಟ್ಟದಲ್ಲಿ ಜನರ ಜೊತೆ ಬೆರೆಯುವ ಕೆಲವು ಅಂಶಗಳು ಅಭ್ಯರ್ಥಿಗಳ ಮೇಲೆ ಜನರ ನಂಬಿಕೆಯನ್ನು ಹೆಚ್ಚಿಸುತ್ತವೆ ಎಂದು ವಿಶ್ಲೇಷಿಸಲಾಗಿದೆ.

ಗುಜರಾತ್‌ನ ಮೆಹ್ಸಾನಾದಲ್ಲಿ ಬುಧವಾರ ನಡೆದ ಬಿಜೆಪಿ ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಮುಖವಾಡ ಧರಿಸಿದ್ದ ಬೆಂಬಲಿಗರೊಬ್ಬರು ಕಾಣಿಸಿಕೊಂಡಿದ್ದು ಹೀಗೆ —ಪಿಟಿಐ ಚಿತ್ರ

ಪ್ರಜಾ ಮತ
ಜನತಂತ್ರದ ಹಬ್ಬ 2022

ಜನರ ಮಧ್ಯೆ ಬಿರುಕು ಮೂಡಿಸುವ ಕಾಂಗ್ರೆಸ್: ಪ್ರಧಾನಿ ಮೋದಿ

ಮೆಹ್ಸಾನಾ: ಗುಜರಾತ್‌ನ ಮೆಹ್ಸಾನಾದಲ್ಲಿ ಬುಧವಾರ ಚುನಾವಣಾ ಪ್ರಚಾರ ನಡೆಸಿದ ಪ್ರಧಾನಿ ನರೇಂದ್ರ ಮೋದಿ, ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು. 'ಕಾಂಗ್ರೆಸ್ ಮಾದರಿ ಎಂದರೆ ಭ್ರಷ್ಟಾಚಾರ, ವಂಶಾಡಳಿತ, ಜಾತೀವಾದ, ಒಡೆದಾಳುವುದು ಎಂದರ್ಥ. ಮತಬ್ಯಾಂಕ್ ರಾಜಕಾರಣದಲ್ಲಿ ತೊಡಗಿರುವ ಪಕ್ಷವು ಜನರ ಮಧ್ಯೆ ಬಿರುಕು ಮೂಡಿಸುವ ಕೆಲಸ ಮಾಡುತ್ತದೆ' ಎಂದು ಆರೋಪಿಸಿದರು.

ಬಿಜೆಪಿ ಎಂದೂ ಸಹ ಪಕ್ಷಪಾತ ಮತ್ತು ತಾರತಮ್ಯ ಮಾಡಿಲ್ಲ. ಹೀಗಾಗಿಯೇ ಪಕ್ಷದ ಮೇಲೆ ಯುವಜನತೆ ನಂಬಿಕೆ ಇರಿಸಿದ್ದಾರೆ ಎಂದು ಪ್ರಧಾನಿ ಹೇಳಿದರು. 'ಮೆಹ್ಸಾನಾ ಜಿಲ್ಲೆ ಬರಪೀಡಿತ ಎನಿಸಿಕೊಂಡಿತ್ತು. ನೀರು ಹಾಗೂ ವಿದ್ಯುತ್ ಕೊರತೆ ಎದುರಿಸುತ್ತಿತ್ತು. ಆದರೆ ಬಿಜೆಪಿ ಸರ್ಕಾರ ಬಂದ ಮೇಲೆ ಈ ಸಮಸ್ಯೆಗಳು ನಿವಾರಣೆಯಾಗಿವೆ. ಪ್ರತಿಪಕ್ಷಗಳಿಗೆ ಚುನಾವಣೆಗೆ ವಿಷಯಗಳೇ ಇಲ್ಲದಂತಾಗಿದೆ' ಎಂದು ಪ್ರಧಾನಿ ಹೇಳಿದರು.

ಅದಕ್ಷ, ದುರಹಂಕಾರಿ ಸರ್ಕಾರ: ತಿವಾರಿ

ಅಹಮದಾಬಾದ್: ಗುಜರಾತ್‌ನ ಆಡಳಿತಾರೂಢ ಬಿಜೆಪಿ ಸರ್ಕಾರ ಎಷ್ಟು ಅದಕ್ಷ ಎಂಬುದಕ್ಕೆ ಇತ್ತೀಚಿನ ವರ್ಷಗಳಲ್ಲಿ ಸರಣಿಯಂತೆ ಮಾಡಲಾದ ಮುಖ್ಯಮಂತ್ರಿಗಳ ಬದಲಾವಣೆಗಿಂತ ದೊಡ್ಡ ಪುರಾವೆ ಬೇಕಿಲ್ಲ ಎಂದು ಕಾಂಗ್ರೆಸ್ ಮುಖಂಡ ಮನೀಶ್ ತಿವಾರಿ ಹೇಳಿದ್ದಾರೆ.

'ರಾಜ್ಯ ಸರ್ಕಾರದ ದುರಹಂಕಾರಕ್ಕೆ ಮೊರ್ಬಿ ಸೇತುವೆ ದುರಂತವೇ ಸಾಕ್ಷಿ. 135 ಜನರನ್ನು ಬಲಿ ಪಡೆದಿದ್ದರೂ, ಯಾರೂ ಏಕೆ ರಾಜೀನಾಮೆ ನೀಡಲಿಲ್ಲ. ಕಾಮಗಾರಿ ಗುತ್ತಿಗೆ ನೀಡಿದವರನ್ನು ಏಕೆ ಬಂಧಿಸಿಲ್ಲ' ಎಂದು ಪ್ರಶ್ನಿಸಿದ್ದಾರೆ.

ಸುದ್ದಿ 2 ನಿಮಿಷ

ಸೊಲ್ಲಾಪುರ, ಅಕ್ಕಲಕೋಟೆ ಕರ್ನಾಟಕಕ್ಕೆ ಸೇರಲಿ: ಬೊಮ್ಮಾಯಿ

ಬೆಂಗಳೂರು: 'ಮಹಾರಾಷ್ಟ್ರದ ಸೊಲ್ಲಾಪುರ ಮತ್ತು ಅಕ್ಕಲಕೋಟೆ ಕರ್ನಾಟಕದ ಭಾಗವಾಗಬೇಕು ಎಂಬುದು ನಮ್ಮ ಆಗ್ರಹ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಕರ್ನಾಟಕ– ಮಹಾರಾಷ್ಟ್ರ ಗಡಿ ವಿವಾದದ ಕುರಿತು ಮಹಾರಾಷ್ಟ್ರ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಹೇಳಿಕೆ ಕುರಿತು ಬುಧವಾರ ಟ್ವಿಟರ್‌ನಲ್ಲಿ ಪ್ರತಿಕ್ರಿಯಿಸಿರುವ ಅವರು, 'ಫಡಣವೀಸ್ ಅವರು ಪ್ರಚೋದನಕಾರಿ ಹೇಳಿಕೆ ನೀಡಿದ್ದು, ಅವರ ಕನಸು ಎಂದಿಗೂ ನನಸಾಗುವುದಿಲ್ಲ. ರಾಜ್ಯದ ನೆಲ, ಜಲ, ಗಡಿ ರಕ್ಷಿಸಲು ನಮ್ಮ ಸರ್ಕಾರ ಕಟಿಬದ್ಧವಾಗಿದೆ' ಎಂದು ಹೇಳಿದ್ದಾರೆ.

'ರಾಜ್ಯದ ಒಂದಿಂಚು ಜಾಗವನ್ನೂ ಬಿಟ್ಟು ಕೊಡುವ ಪ್ರಶ್ನೆಯೇ ಇಲ್ಲ. ಮಹಾರಾಷ್ಟ್ರದಲ್ಲಿರುವ ಕನ್ನಡ ಭಾಷಿಕರು ಹೆಚ್ಚಿನ ಸಂಖ್ಯೆಯಲ್ಲಿರುವ ಪ್ರದೇಶಗಳನ್ನು ಕರ್ನಾಟಕಕ್ಕೆ ಸೇರಿಸಬೇಕು ಎಂಬುದು ನಮ್ಮ ಆಗ್ರಹ. ಮಹಾರಾಷ್ಟ್ರ ಸರ್ಕಾರವು ಗಡಿ ವಿಚಾರದಲ್ಲಿ ಕ್ಯಾತೆ ತೆಗೆದು 2004 ರಿಂದಲೂ ದಾವೆಗಳನ್ನು ಹೂಡುತ್ತಿದೆ. ಈವರೆಗೂ ಯಶಸ್ವಿಯಾಗಿಲ್ಲ. ಮುಂದೆಯೂ ಆಗುವುದಿಲ್ಲ' ಎಂದು ಪ್ರತಿಕ್ರಿಯಿಸಿದ್ದಾರೆ.

ಮಧ್ಯಪ್ರದೇಶ ಪ್ರವೇಶಿಸಿದ ಯಾತ್ರೆ

ಬೋದರ್ಲಿ (ಮಧ್ಯಪ್ರದೇಶ) (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ 'ಭಾರತ್ ಜೋಡೊ' ಯಾತ್ರೆಯು ಬುಧವಾರ ಬೆಳಿಗ್ಗೆ ಮಹಾರಾಷ್ಟ್ರದಿಂದ ಮಧ್ಯಪ್ರದೇಶದ ಬುರ್ಹಾನ್‌ಪುರ ಜಿಲ್ಲೆಯ ಬೋದರ್ಲಿ ಗ್ರಾಮ ಪ್ರವೇಶಿಸಿದೆ.

'ಈ ಅಭಿಯಾನವು ಸಮಾಜದಲ್ಲಿ ಹರಡುತ್ತಿರುವ ದ್ವೇಷ, ಹಿಂಸೆ ಮತ್ತು ಭಯದ ವಿರುದ್ಧವಾಗಿದೆ' ಎಂದು ರಾಹುಲ್ ಗಾಂಧಿ ಹೇಳಿದರು.

ಮಹಾರಾಷ್ಟ್ರ ಕಾಂಗ್ರೆಸ್ ಅಧ್ಯಕ್ಷ ನಾನಾ ಪಟೋಲೆ ಅವರು ಮಧ್ಯಪ್ರದೇಶ ಪಕ್ಷದ ಮುಖ್ಯಸ್ಥ ಕಮಲ್ ನಾಥ್ ಅವರಿಗೆ ತ್ರಿವರ್ಣ ಧ್ವಜವನ್ನು ಹಸ್ತಾಂತರಿಸಿದರು. ಸುಮಾರು 6 ಸಾವಿರ ಜನಸಂಖ್ಯೆ ಇರುವ ಬೋದರ್ಲಿ ಗ್ರಾಮವನ್ನು ಬಾಳೆ ಎಲೆಗಳಿಂದ ಅಲಂಕರಿಸಲಾಗಿತ್ತು. ಈ ಗ್ರಾಮವು ಬಾಳೆಹಣ್ಣಿನ ಕೃಷಿಗೆ ಪ್ರಸಿದ್ಧಿಯಾಗಿದೆ.

ಸಾವರ್ಕರ್ ಹೇಳಿಕೆ ಮುಗಿದ ಅಧ್ಯಾಯ (ಬುರ್ಹಾನ್‌ಪುರ): 'ಸಾವರ್ಕರ್ ಅವರ ಕುರಿತು ರಾಹುಲ್ ಗಾಂಧಿ ಅವರು ನೀಡಿರುವ ಹೇಳಿಕೆಯು ಮುಗಿದ ಅಧ್ಯಾಯವಾಗಿದೆ. ಬಿಜೆಪಿ ಮತ್ತು ಆರ್‌ಎಸ್‌ಎಸ್ ಯಾವಾಗ ನಮ್ಮ ನಾಯಕರ ವಿರುದ್ಧ ಸುಳ್ಳು ಹೇಳುವುದನ್ನು ನಿಲ್ಲಿಸುತ್ತದೆಯೋ, ನಾವು ಕೂಡಾ ಅವರ ನಾಯಕರ ವಿರುದ್ಧ ಸತ್ಯ ಹೇಳುವುದನ್ನು ನಿಲ್ಲಿಸುತ್ತೇವೆ' ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಜೈರಾಂ ರಮೇಶ್ ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

ಡಿ.ಕೆ. ಶಿವಕುಮಾರ್ ಅರ್ಜಿಗೆ ಇ.ಡಿ. ಆಕ್ಷೇಪ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಕ್ರಮ ಆಸ್ತಿ ಸಂಪಾದನೆ ಪ್ರಕರಣದಲ್ಲಿ ತಮ್ಮ ವಿರುದ್ಧ ತನಿಖಾ ಸಂಸ್ಥೆ ಆರಂಭಿಸಿರುವ ತನಿಖೆಯನ್ನು ಪ್ರಶ್ನಿಸಿ ದೆಹಲಿ ಹೈಕೋರ್ಟ್‌ನಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸಲ್ಲಿಸಿರುವ ಅರ್ಜಿಯನ್ನು ಜಾರಿ ನಿರ್ದೇಶನಾಲಯ (ಇ.ಡಿ.) ಬುಧವಾರ ವಿರೋಧಿಸಿದೆ.

ಈ ಸಂಬಂಧ ಹೈಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿರುವ ಇ.ಡಿ ಅರ್ಜಿಯನ್ನು ವಜಾಗೊಳಿಸುವಂತೆ ಮನವಿ ಮಾಡಿದೆ. 'ಶಿವಕುಮಾರ್ ಅವರ ಅರ್ಜಿ ಆತುರದಿಂದ ಕೂಡಿದೆ ಹಾಗೂ ಅಪಕ್ವವಾದುದು. ಇವರ ಯಾವುದೇ ಮೂಲಭೂತ ಹಕ್ಕುಗಳ ಉಲ್ಲಂಘನೆ ಆಗಿಲ್ಲ' ಎಂದು ತಿಳಿಸಿದೆ.

'ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ 2018ರಲ್ಲಿ ಪ್ರಕರಣ ದಾಖಲಿಸಿ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದೆ. ಈ ಪ್ರಕರಣದ ವಿಚಾರಣೆ ನ್ಯಾಯಾಲಯದಲ್ಲಿ ನಡೆಯುತ್ತಿದೆ. ಇದೇ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯವು 2020ರಲ್ಲಿ ತನಿಖಾ ಪ್ರಕ್ರಿಯೆ ಆರಂಭಿಸಿದೆ. ಜಾರಿ ನಿರ್ದೇಶನಾಲಯವು ಇದೇ ಪ್ರಕರಣದಲ್ಲಿ ಮರು ತನಿಖೆ (ಇಸಿಐಆರ್) ನಡೆಸುತ್ತಿದೆ' ಎಂದು ಆರೋಪಿಸಿ ಶಿವಕುಮಾರ್ ಅವರು ದೆಹಲಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

'ಶಿವಕುಮಾರ್ ವಿರುದ್ಧ 2018 ಹಾಗೂ 2020ರಲ್ಲಿ ದಾಖಲಿಸಿರುವ ಪ್ರಕರಣಗಳು ವಿಭಿನ್ನ ಅಪರಾಧಗಳಿಗೆ ಸಂಬಂಧಿಸಿದವು. ಆದಾಯ ತೆರಿಗೆ ಇಲಾಖೆಯ ದೂರಿನ ಮೇರೆಗೆ ಮೊದಲ ಪ್ರಕರಣ (ಅಪಾರ್ಟ್‌ಮೆಂಟ್‌ನಲ್ಲಿ ₹8.59 ಕೋಟಿ ಪತ್ತೆ ಪ್ರಕರಣ) ದಾಖಲಿಸಲಾಗಿತ್ತು. ಶಿವಕುಮಾರ್ 2013ರ ಏಪ್ರಿಲ್ 1ರಿಂದ 2018ರ ಏಪ್ರಿಲ್ 30ರ ಅವಧಿಯಲ್ಲಿ ಅಕ್ರಮ ಆಸ್ತಿ ಸಂಪಾದಿಸಿರುವ ಆರೋಪದ ಮೇಲೆ 2020ರ ಮಾರ್ಚ್‌ನಲ್ಲಿ ಸಿಬಿಐ ಪ್ರಾಥಮಿಕ ವಿಚಾರಣೆ ಆರಂಭಿಸಿತ್ತು. ₹ 74.93 ಕೋಟಿ ಅಕ್ರಮ ಆಸ್ತಿ ಹೊಂದಿರುವ ಆರೋಪದ ಮೇಲೆ ಎಫ್‌ಐಆರ್ ದಾಖಲಿಸಿತ್ತು. ಈ ಪ್ರಕರಣದಲ್ಲಿ ಇ.ಡಿ. ಇಸಿಐಆರ್ ದಾಖಲಿಸಿದೆ. ಸಿಬಿಐ ಪ್ರಾಥಮಿಕ ತನಿಖೆ ನಡೆಸಿದ ಬಳಿಕವಷ್ಟೇ ಇದನ್ನು ದಾಖಲಿಸಲಾಗಿದೆ. ಇವೆರಡು ಪ್ರತ್ಯೇಕ ಪ್ರಕರಣಗಳು. ಇದನ್ನು ಮರು ತನಿಖೆ ಎಂಬಂತೆ ಬಿಂಬಿಸುವುದು ಸರಿಯಲ್ಲ' ಎಂದೂ ತನಿಖಾ ಸಂಸ್ಥೆ ಹೇಳಿದೆ.

ಇ.ಡಿ.ಪರ ವಕೀಲರು, 'ಶಿವಕುಮಾರ್ ವಿರುದ್ಧ ಸದ್ಯಕ್ಕೆ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ' ಎಂದು ಸ್ಪಷ್ಟಪಡಿಸಿದರು. ವಿಚಾರಣೆಯನ್ನು ಡಿ. 2ಕ್ಕೆ ಮುಂದೂಡಲಾಯಿತು.

ಜ.18ಕ್ಕೆ ವಿಚಾರಣೆ

ನವದೆಹಲಿ: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಇತರ ನಾಲ್ವರು ಆರೋಪಿಗಳು ಭಾಗಿಯಾಗಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣದ ವಿಚಾರಣೆಯನ್ನು ಇಲ್ಲಿನ ಚುನಾಯಿತ ಪ್ರತಿನಿಧಿಗಳ ಪ್ರಕರಣಗಳ ವಿಶೇಷ ನ್ಯಾಯಾಲಯ (ಇ.ಡಿ. ನ್ಯಾಯಾಲಯ) 2023ರ ಜನವರಿ 18ಕ್ಕೆ ಮುಂದೂಡಿದೆ.

ಬುಧವಾರ ನಡೆದ ವಿಚಾರಣೆಯ ವೇಳೆ ಆರೋಪಿಗಳ ಪರ ವಕೀಲರು, 'ಆರೋಪಪಟ್ಟಿಯ ಪ್ರತಿಯನ್ನು ನೀಡುವಂತೆ ಇ.ಡಿ. ಅಧಿಕಾರಿಗಳಿಗೆ ಈ ಹಿಂದೆ ಮನವಿ ಮಾಡಲಾಗಿತ್ತು. ಕೆಲವೇ ದಿನಗಳಲ್ಲಿ ನೀಡುವುದಾಗಿ ಅಧಿಕಾರಿಗಳು ಹೇಳಿದ್ದರು. ಆದರೆ, ಈ ದಾಖಲೆಗಳನ್ನು ಸಮರ್ಪಕವಾಗಿ ನೀಡಿಲ್ಲ. ಹೀಗಾಗಿ, ಪ್ರತಿ ವಾದ ಮಂಡಿಸಲು ಇನ್ನಷ್ಟು ಸಮಯ ಬೇಕು' ಎಂದರು. ಮನವಿಯನ್ನು ಮಾನ್ಯ ಮಾಡಿದ ನ್ಯಾಯಾಲಯ ವಿಚಾರಣೆಯನ್ನು ಮುಂದೂಡಿತು.

ಇದೇ ವೇಳೆ, ದುಬೈಗೆ ತೆರಳಲು ಅನುಮತಿ ನೀಡಬೇಕು ಎಂದು ಶಿವಕುಮಾರ್ ಮನವಿ ಮಾಡಿದರು. ಇದಕ್ಕೆ ಸೂಕ್ತ ದಾಖಲೆಗಳನ್ನು ಸಲ್ಲಿಸಬೇಕು ಎಂದು ಸೂಚಿಸಿದ ನ್ಯಾಯಾಲಯ, ನವೆಂಬರ್ 26ರಂದು ವಿಚಾರಣೆ ನಡೆಸುವುದಾಗಿ ತಿಳಿಸಿತು.

ಅಸ್ಸಾಂ: ಅರಣ್ಯ ಕಚೇರಿ ಧ್ವಂಸ, ವಾಹನ ಸಂಚಾರ ನಿರ್ಬಂಧ

ಗುವಾಹಟಿ/ಶಿಲ್ಲಾಂಗ್ (ಪಿಟಿಐ): ಅಸ್ಸಾಂ ಮತ್ತು ಮೇಘಾಲಯ ರಾಜ್ಯಗಳ ವಿವಾದಿತ ಗಡಿ ಪ್ರದೇಶದಲ್ಲಿ ಹಿಂಸಾಚಾರ ಸಂಭವಿಸಿ ಆರು ಜನರು ಮೃತಪಟ್ಟ ಬೆನ್ನಲ್ಲೆ ಗ್ರಾಮಸ್ಥರ ಗುಂಪೊಂದು ಮಂಗಳವಾರ ರಾತ್ರಿ ಅಸ್ಸಾಂನ ಪಶ್ಚಿಮ ಕರ್ಬಿ ಆಂಗ್ಲಾಂಗ್ ಜಿಲ್ಲೆಯ ಅರಣ್ಯ ಕಚೇರಿ ಧ್ವಂಸಗೊಳಿಸಿ, ಸುಟ್ಟು ಹಾಕಿದೆ ಎಂದು ಅಧಿಕಾರಿಗಳು ಬುಧವಾರ ಹೇಳಿದ್ದಾರೆ.

ಮೇಘಾಲಯದ ಪಶ್ಚಿಮ ಜೈನ್ತಿಯಾ ಹಿಲ್ಸ್ ಜಿಲ್ಲೆಯ ಮುಕ್ರೋಹ್ ಗ್ರಾಮದ ನಿವಾಸಿಗಳು ಅಸ್ಸಾಂನ ಖರೋನಿ ಅರಣ್ಯ ವಲಯದ ಬೀಟ್ ಕಚೇರಿ ಮುಂದೆ ಜಮಾಯಿಸಿ, ಅಂತರರಾಜ್ಯ ಗಡಿ ಭಾಗದ ಕಟ್ಟಡಕ್ಕೆ ಬೆಂಕಿ ಹಚ್ಚಿದರು. ಅರಣ್ಯ ಕಚೇರಿ ಧ್ವಂಸಗೊಳಿಸಿ, ಸಂಕೀರ್ಣದಲ್ಲಿದ್ದ ಪೀಠೋಪಕರಣಗಳು, ದಾಖಲೆಗಳು ಮತ್ತು ಮೋಟಾರ್ ಸೈಕಲ್‌ಗಳಿಗೆ ಬೆಂಕಿ ಹಚ್ಚಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪೊಲೀಸರು ಮತ್ತು ಭದ್ರತಾ ಸಿಬ್ಬಂದಿ ಸ್ಥಳಕ್ಕೆ ತಲುಪುವ ಮೊದಲು ಗ್ರಾಮಸ್ಥರು ಅಲ್ಲಿಂದ ಹೊರಟು ಹೋಗಿದ್ದರು ಎಂದು ಅಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದರು.

'ಪರಿಸ್ಥಿತಿ ಸಂಪೂರ್ಣ ಸಹಜ ಸ್ಥಿತಿಗೆ ಬರುವವರೆಗೆ ಮೇಘಾಲಯಕ್ಕೆ ತೆರಳದಂತೆ ಜನರಿಗೆ ಸಲಹೆ ನೀಡಲಾಗಿದೆ. ದುಷ್ಕರ್ಮಿಗಳು ವಾಹನಗಳನ್ನು ಗುರಿಯಾಗಿಸಿಕೊಂಡಿರುವ ಕಾರಣ ಖಾಸಗಿ ಮತ್ತು ಸಣ್ಣ ಕಾರು ಮಾಲೀಕರಿಗೆ ಪ್ರಯಾಣಿಸದಂತೆ ಮನವಿ ಮಾಡಲಾಗಿದೆ. ವಾಣಿಜ್ಯ ವಾಹನಗಳಿಗೆ ನಿರ್ಬಂಧ ವಿಧಿಸಿಲ್ಲ' ಎಂದು ಗುವಾಹಟಿ ಪೊಲೀಸ್ ಉಪ ಆಯುಕ್ತ (ಪೂರ್ವ) ಸುಧಾಕರ್ ಸಿಂಗ್ ಹೇಳಿದ್ದಾರೆ.

'ಸಿಬಿಐಗೆ ವಹಿಸಲು ನಿರ್ಧಾರ': 'ಅಸ್ಸಾಂ ಮತ್ತು ಮೇಘಾಲಯ ನಡುವಿನ ವಿವಾದಿತ ಗಡಿ ಪ್ರದೇಶದಲ್ಲಿ ನಡೆದ ಹಿಂಸಾಚಾರ ಕುರಿತ ತನಿಖೆಯನ್ನು ಸಿಬಿಐಗೆ ವಹಿಸಲು ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ' ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಾಂತ ಬಿಸ್ವ ಶರ್ಮಾ ತಿಳಿಸಿದ್ದಾರೆ.

'ಬೊಮ್ಮಾಯಿ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿಲ್ಲ'

ಮುಂಬೈ: 'ಕರ್ನಾಟಕಕ್ಕೆ ಸೇರಬೇಕೆಂದು ಬಯಸಿರುವ ಮಹಾರಾಷ್ಟ್ರದ ಜತ್ ತಾಲ್ಲೂಕಿನ ವಿಚಾರವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸುತ್ತದೆ' ಎಂದು ಕರ್ನಾಟಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದ, ಬೆನ್ನಲ್ಲೇ ಮಹಾರಾಷ್ಟ್ರ ಸರ್ಕಾರ ಮತ್ತು ವಿರೋಧ ಪಕ್ಷಗಳ ಮೈತ್ರಿಕೂಟ 'ಮಹಾ ವಿಕಾಸ ಆಘಾಡಿ'ಯು (ಎಂವಿಎ) ಬೊಮ್ಮಾಯಿ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಬೇಕಿಲ್ಲ ಎಂದು ಬುಧವಾರ ಹೇಳಿವೆ.

ಮಹಾರಾಷ್ಟ್ರದ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಪ್ರತಿಕ್ರಿಯಿಸಿ, 'ನಾವು ಈ ಹಿಂದೆ ಅಧಿಕಾರಕ್ಕೆ ಬಂದಾಗ ಕರ್ನಾಟಕ ಸರ್ಕಾರದ ಜತೆ ಮಾತುಕತೆ ನಡೆಸಿ ಎರಡೂ ಕಡೆಯ ನೀರಿನ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸಿದ್ದೆವು' ಎಂದಿದ್ದಾರೆ.

ಅಮ್ರಿತ್ ಜಾಮೀನು ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮದ ಪ್ರಮುಖ ಆರೋಪಿಯೂ ಆಗಿರುವ ಐಪಿಎಸ್ ಅಧಿಕಾರಿ ಅಮ್ರಿತ್ ಪೌಲ್ ಅವರಿಗೆ ಜಾಮೀನು ನೀಡಲು ಲೋಕಾಯುಕ್ತ ವಿಶೇಷ ನ್ಯಾಯಾಲಯ ಬುಧವಾರ ನಿರಾಕರಿಸಿದೆ.

ನ್ಯಾಯಾಧೀಶ ಲಕ್ಷ್ಮೀನಾರಾಯಣ ಭಟ್ ಅವರು ಪೌಲ್ ಜಾಮೀನು ಅರ್ಜಿ ವಜಾಗೊಳಿಸಿದರು.

'ಆರೋಪಿಗೆ ಜಾಮೀನು ನೀಡಿದರೆ ಸಮಾಜಕ್ಕೆ ಕೆಟ್ಟ ಸಂದೇಶ ರವಾನಿಸಿದಂತಾಗಲಿದೆ' ಎಂದು ಸರ್ಕಾರಿ ವಕೀಲ ಪಿ.ಪ್ರಸನ್ನ ಕುಮಾರ್ ವಾದ ಮಂಡಿಸಿದರು. 'ನೇಮಕಾತಿ ಪರೀಕ್ಷೆಯ ಒಎಂಆರ್ ಪ್ರತಿಗಳನ್ನು ಇರಿಸಿದ್ದ ಭದ್ರತಾ ಕೊಠಡಿಯ ಕೀ ಅನ್ನು ಪೌಲ್ ಕೆಳಗಿನ ಅಧಿಕಾರಿಗಳಿಗೆ ಯಾಕೆ ನೀಡಿದ್ದರು ಎಂಬುದಕ್ಕೆ ಸ್ಪಷ್ಟ ವಿವರಣೆ ನೀಡಿಲ್ಲ. ಪೌಲ್ ಹಿರಿಯ ಐಪಿಎಸ್ ಅಧಿಕಾರಿ. ಜಾಮೀನು ಲಭಿಸಿದರೆ ಪ್ರಭಾವ ಬಳಸಿ ಸಾಕ್ಷ್ಯ ನಾಶ ಮಾಡುವ ಸಾಧ್ಯತೆ ಇದೆ' ಎಂದು ಹೇಳಿದರು.

ಅಡ್ಡಂಡ ಸಿ. ಕಾರ್ಯಪ್ಪ ವಿರಚಿತ 'ಟಿಪ್ಪು ನಿಜಕನಸುಗಳು' ಕೃತಿ

ಮಾರಾಟಕ್ಕೆ ಸಿವಿಲ್ ಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೈಸೂರು ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ವಿರಚಿತ, 'ಟಿಪ್ಪು ನಿಜಕನಸುಗಳು' ಕೃತಿ ಮಾರಾಟ ಮತ್ತು ಈ ಕೃತಿಯನ್ನು ಆಧರಿಸಿದ ನಾಟಕ ಪ್ರದರ್ಶಿಸದಂತೆ ಶಾಶ್ವತ ತಡೆ ನೀಡಬೇಕು' ಎಂದು ಕೋರಲಾದ ಮನವಿಗೆ ಸಂಬಂಧಿಸಿದಂತೆ ಕೃತಿಯ ಮಾರಾಟಕ್ಕೆ ನಗರದ 14ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ತಾತ್ಕಾಲಿಕ ತಡೆ ನೀಡಿದೆ.

ಈ ಸಂಬಂಧ ಜಿಲ್ಲಾ ವಕ್ಫ್ ಬೋರ್ಡ್ ಸಮಿತಿಯ ಮಾಜಿ ಅಧ್ಯಕ್ಷ ಹಾಗೂ ಬೆಂಗಳೂರಿನ ನಿವಾಸಿ ಬಿ.ಎಸ್. ರಫೀವುಲ್ಲಾ ದಾಖಲಿಸಿರುವ ಅಸಲು ದಾವೆಯನ್ನು ನ್ಯಾಯಾಧೀಶ ಜೆ.ಆರ್. ಮೆಂಡೋನ್ಕಾ ಅವರು ಪ್ರತಿವಾದಿಗಳ ಗೈರು ಹಾಜರಿಯಲ್ಲಿ ಏಕಪಕ್ಷೀಯ ಮನವಿ ಆಲಿಸಿದ ಬಳಿಕ ತಾತ್ಕಾಲಿಕ ತಡೆಯಾಜ್ಞೆ ನೀಡಿ ಆದೇಶಿಸಿದ್ದಾರೆ.

ಮುಂದಿನ ವಿಚಾರಣೆಯನ್ನು ಡಿ. 3ಕ್ಕೆ ನಿಗದಿಪಡಿಸಲಾಗಿದ್ದು, ಅಲ್ಲಿಯವರೆಗೂ ಈ ನಾಟಕ ಕೃತಿಯನ್ನು ಎಲ್ಲೂ ಮಾರಾಟ ಮಾಡಬಾರದು. ಆನ್‌ಲೈನ್ ತಾಣಗಳಲ್ಲಿಯೂ ವಿತರಣೆ ಅಥವಾ ಮಾರಾಟ ಮಾಡಬಾರದು ಎಂದು ಆದೇಶಿಸಿರುವ ನ್ಯಾಯಾಧೀಶರು, ಪ್ರತಿವಾದಿಗಳಾದ ಲೇಖಕ ಅಡ್ಡಂಡ ಸಿ.ಕಾರ್ಯಪ್ಪ, ಪ್ರಕಾಶಕರಾದ ಅಯೋಧ್ಯಾ ಪ್ರಕಾಶನ ಹಾಗೂ ಮುದ್ರಣಕಾರರಾದ ರಾಷ್ಟ್ರೋತ್ಥಾನ ಮುದ್ರಣಾಲಯಕ್ಕೆ ಸಮನ್ಸ್ ಜಾರಿಗೊಳಿಸಲು ಆದೇಶಿಸಿದ್ದಾರೆ.

ಅಂತೆಯೇ, 'ದಾವೆದಾರರು ಈ ಆದೇಶದ ದುರ್ಬಳಕೆ ಮಾಡಿಕೊಳ್ಳಬಾರದು' ಎಂದು ಎಚ್ಚರಿಸಲಾಗಿದ್ದು, 'ಮುದ್ರಣಕಾರರು ಮುಂದೊದಗಬಹುದಾದ ಯಾವುದೇ ಪರಿಣಾಮಗಳನ್ನು ಎದುರಿಸುವ ಸ್ವಯಂ ಜವಾಬ್ದಾರಿಯ ಮೇಲೆ ಪುಸ್ತಕವನ್ನು ಮುದ್ರಿಸಬಹುದು ಹಾಗೂ ಸಂಗ್ರಹಿಸಿ ಇಟ್ಟುಕೊಳ್ಳಬಹುದು' ಎಂದು ಸ್ವಾತಂತ್ರ್ಯ ನೀಡಿದ್ದಾರೆ.

ದಾವೆಯಲ್ಲಿ ಏನಿದೆ?

- ಈ ಪುಸ್ತಕದಲ್ಲಿ ಮುಸ್ಲಿಂ ಸಮುದಾಯದ ವಿರುದ್ಧ ತಪ್ಪು ಮಾಹಿತಿಗಳನ್ನು ಹರಡಲಾಗಿದೆ.
- ಕೃತಿಯಲ್ಲಿ ಉಲ್ಲೇಖಿಸಿರುವ ಅಂಶಗಳಿಗೆ ಇತಿಹಾಸದ ಸಮರ್ಥನೆ ಅಥವಾ ಆಧಾರಗಳಿಲ್ಲ.
- ಇತಿಹಾಸದ ತಿಳಿವಳಿಕೆ ಇಲ್ಲದೆ ಈ ಕೃತಿಯನ್ನು ರಚಿಸಲಾಗಿದೆ.
- ಮುಸ್ಲಿಂ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ರೀತಿಯಲ್ಲಿ ಆಜಾನ್ ಅನ್ನು ಚಿತ್ರಿಸಲಾಗಿದೆ.
- ಮುಸ್ಲಿಮರನ್ನು ತುರುಕರು ಎಂದು ಅವಹೇಳನಕಾರಿಯಾಗಿ ಕರೆಯಲಾಗಿದೆ.
- ಈ ಕೃತಿಯ ಸತ್ಯಾಂಶಗಳನ್ನು ಆಧರಿಸಿ ರಚಿಸಲಾಗಿದೆ ಎಂದು ಮುನ್ನುಡಿಯಲ್ಲಿ ಕಾಣಿಸಲಾಗಿದೆ.
- ಶಾಲೆಗಳಲ್ಲಿ ಕಲಿಸುವ ಪಠ್ಯಪುಸ್ತಕಗಳಲ್ಲಿ ಟಿಪ್ಪು ಬಗ್ಗೆ ವಿವರಿಸುವ ಅಂಶಗಳು ಸುಳ್ಳು ಎಂದು ಪ್ರತಿಪಾದಿಸಲಾಗಿದೆ.
- ಟಿಪ್ಪು ಸುಲ್ತಾನನ ವ್ಯಕ್ತಿತ್ವದ ನೈಜ ಅನಾವರಣ ಈ ಕೃತಿಯಲ್ಲಿದೆ ಎಂದು ಹೇಳಲಾಗಿದೆ.
- ಕೃತಿಕಾರರು ಮುಸ್ಲಿಂ ಸಮುದಾಯದ ಭಾವನೆಗಳಿಗೆ ಧಕ್ಕೆ ಉಂಟು ಮಾಡಿದ್ದಾರೆ.
- ಕೃತಿ ಸಾರ್ವಜನಿಕ ಶಾಂತಿಯನ್ನು ಕದಡಿ ಕೋಮು ಸೌಹಾರ್ದತೆಗೆ ಧಕ್ಕೆ ಉಂಟು ಮಾಡುತ್ತದೆ.

ಲಕ್ಷದೀಪೋತ್ಸವ

ಪುತ್ತೂರು ಮಹಾಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಲಕ್ಷದೀಪೋತ್ಸವದ ಅಂಗವಾಗಿ ರಂಗೋಲಿ ಬಿಡಿಸಿ, ಹಣತೆ ಬೆಳಗಿರುವ ದೃಶ್ಯ

ಕಾಡಾನೆ ದಾಳಿಗೆ ಗಾಯಗೊಂಡಿದ್ದ ಗೋಪಾಲಸ್ವಾಮಿ

ಭವಿಷ್ಯದ ಅಂಬಾರಿ ಆನೆ ಇನ್ನಿಲ್ಲ

ಪ್ರಜಾವಾಣಿ ವಾರ್ತೆ

ಹುಣಸೂರು (ಮೈಸೂರು ಜಿಲ್ಲೆ): ನಾಗರಹೊಳೆ ರಾಷ್ಟ್ರೀಯ ಉದ್ಯಾನದಲ್ಲಿ ಮಂಗಳವಾರ ಕಾಡಾನೆ ದಾಳಿಗೆ ಈಡಾಗಿ ತೀವ್ರವಾಗಿ ಗಾಯಗೊಂಡಿದ್ದ, 'ಭವಿಷ್ಯದ ಅಂಬಾರಿ ಆನೆ' ಎಂದೇ ಬಿಂಬಿತವಾಗಿದ್ದ 'ಗೋಪಾಲಸ್ವಾಮಿ' (39) ಬುಧವಾರ ಮೃತಪಟ್ಟಿತು. 'ಮತ್ತಿಗೋಡು ಆನೆ ಶಿಬಿರ'ದಲ್ಲಿದ್ದ ಆನೆಯು 2012ರಿಂದ ದಸರಾ ಜಂಬೂಸವಾರಿಯಲ್ಲಿ ಭಾಗವಹಿಸುತ್ತಿತ್ತು.

'ಮೇಯುವ ಸಲುವಾಗಿ ನೇರಳಕುಪ್ಪೆ 'ಬಿ' ಹಾಡಿಯ ಕ್ಯಾಂಪಿನಿಂದ ಬಿಟ್ಟಿದ್ದ ವೇಳೆಯಲ್ಲಿ, ಮಸ್ತಿಯಲ್ಲಿದ್ದ ಕಾಡಾನೆಯು ಗೋಪಾಲಸ್ವಾಮಿ ಮೇಲೆ ದಾಳಿ ಮಾಡಿ ಮುಂಗಾಲಿನ ಮೂಳೆ ಮುರಿದಿತ್ತು. ಹಿಂಭಾಗಕ್ಕೂ ತೀವ್ರವಾಗಿ ಗಾಯಗೊಳಿಸಿತ್ತು' ಎಂದು ನಾಗರಹೊಳೆ ಹುಲಿ ಯೋಜನಾ ನಿರ್ದೇಶಕ ಹರ್ಷಕುಮಾರ್ ಚಿಕ್ಕನರಗುಂದ 'ಪ್ರಜಾವಾಣಿ'ಗೆ ತಿಳಿಸಿದರು.

'ಕಾದಾಟದಲ್ಲಿ ಇದ್ದಾಗಲೇ ಗೋಪಾಲಸ್ವಾಮಿ ಮಾವುತ ಮತ್ತು ಅರಣ್ಯ ಸಿಬ್ಬಂದಿ ಕಾಡಾನೆಯನ್ನು ಹಿಮ್ಮೆಟ್ಟಿಸಲು ಪ್ರಯತ್ನಿಸಿದರೂ ಫಲಕಾರಿಯಾಗಲಿಲ್ಲ' ಎಂದರು.

'ಮೈಸೂರು ಮೃಗಾಲಯದ ವೈದ್ಯ ಡಾ.ಮದನ್, ಇಲಾಖೆಯ ಪಶುವೈದ್ಯರಾದ ಡಾ.ರಮೇಶ್ ಮತ್ತು ಡಾ.ಚಿಟ್ಟಿಯಪ್ಪ ಮಂಗಳವಾರ ಮಧ್ಯಾಹ್ನದಿಂದಲೂ ಚಿಕಿತ್ಸೆ ನೀಡಿದ್ದರು. ಸ್ಪಂದಿಸದೇ ಬುಧವಾರ ಮಧ್ಯಾಹ್ನ 2 ಗಂಟೆ ವೇಳೆಗೆ ಮೃತಪಟ್ಟಿತು' ಎಂದು ಮಾಹಿತಿ ನೀಡಿದರು.

ತುಂಬಲಾರದ ನಷ್ಟ: 'ಮೂರು ವರ್ಷದ ನಂತರ 'ಅಭಿಮನ್ಯು' (67) ಆನೆಗೆ ಅಂಬಾರಿ ಹೊರಿಸುವಂತಿಲ್ಲ. ಗೋಪಾಲಸ್ವಾಮಿ ಅಭಿಮನ್ಯುವಿನ ಸ್ಥಾನ ತುಂಬಲಿದ್ದ. ಸೌಮ್ಯ ಸ್ವಭಾವದ ಬಲಾಢ್ಯ ಆನೆಯನ್ನು ಕಳೆದುಕೊಂಡಂತಾಗಿದೆ' ಎಂದು ಡಿಸಿಎಫ್ ಡಾ.ವಿ.ಕರಿಕಾಳನ್ ವಿಷಾದಿಸಿದರು.

ಸಕಲ ಗೌರವದೊಂದಿಗೆ ಧಾರ್ಮಿಕ ವಿಧಿವಿಧಾನದಂತೆ ಅಂತ್ಯ ಸಂಸ್ಕಾರವನ್ನು ನಡೆಸಲಾಯಿತು. ಡಿಸಿಎಫ್ ಹರ್ಷಕುಮಾರ್ ಚಿಕ್ಕನರಗುಂದ, ಎಸಿಎಫ್ ದಯಾನಂದ್ ಇದ್ದರು.

ಎರಡು ತಿಂಗಳ ಹಿಂದೆ ಮೈಸೂರಿನ ದಸರಾಗೆ ಆಗಮಿಸಿದ್ದಾಗ ನಡೆದ 'ತೂಕ ಪರೀಕ್ಷೆ'ಯಲ್ಲಿ 'ಗೋಪಾಲಸ್ವಾಮಿ' (ಸಂಗ್ರಹ ಚಿತ್ರ)

ಕೈವಾರ ತಾತಯ್ಯ ಅಧ್ಯಯನ ಪೀಠ ರಚನೆಗೆ ಸಿಎಂ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಲಜ್ಞಾನಿ ಕೈವಾರ ನಾರೇಯಣ ತಾತಯ್ಯ ಅವರ ಹೆಸರಿನಲ್ಲಿ ರಾಜ್ಯದ ವಿಶ್ವವಿದ್ಯಾಲಯವೊಂದರಲ್ಲಿ ಅಧ್ಯಯನ ಪೀಠ ರಚಿಸಬೇಕೆಂಬ ಕರ್ನಾಟಕ ಬಲಿಜ ಮಹಾಸಭಾ ಬೇಡಿಕೆಯನ್ನು ಮಾನ್ಯ ಮಾಡಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಈ ಸಂಬಂಧ ಆದೇಶ ಹೊರಡಿಸುವಂತೆ ಅಧಿಕಾರಿಗಳಿಗೆ ಬುಧವಾರ ಆದೇಶಿಸಿದ್ದಾರೆ.

ಸಂಸದ ಪಿ.ಸಿ. ಮೋಹನ್ ನೇತೃತ್ವದಲ್ಲಿ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿದ ಕರ್ನಾಟಕ ಬಲಿಜ ಮಹಾಸಭಾ ಮುಖಂಡರ ನಿಯೋಗ, ಹಲವು ಬೇಡಿಕೆಗಳುಳ್ಳ ಮನವಿ ಪತ್ರ ಸಲ್ಲಿಸಿತು. ಕೈವಾರ ತಾತಯ್ಯ ಅವರ

ಹೆಸರಿನಲ್ಲಿ ಅಧ್ಯಯನ ಪೀಠ ರಚನೆಗೆ ಆದೇಶ ಹೊರಡಿಸುವಂತೆ ತಕ್ಷಣವೇ ನಿರ್ದೇಶನ ನೀಡಿದರು.

'ಮುಖ್ಯಮಂತ್ರಿಯವರು ಅಧ್ಯಯನ ಪೀಠ ರಚನೆಗೆ ಸಮ್ಮತಿಸಿರುವುದರ ಜತೆಗೆ ಬಲಿಜ ಸಮುದಾಯದ ಕುಲಶಾಸ್ತ್ರೀಯ ಅಧ್ಯಯನಕ್ಕೆ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ. ಬಲಿಜ ಸಮುದಾಯವನ್ನು ಹಿಂದುಳಿದ ವರ್ಗಗಳ ಪ್ರವರ್ಗ 3ಎ ಪಟ್ಟಿಯಿಂದ 2ಎ ಪಟ್ಟಿಗೆ ಸೇರಿಸಿ ಆದೇಶ ಹೊರಡಿಸುವಂತೆಯೂ ಬೇಡಿಕೆ ಸಲ್ಲಿಸಲಾಗಿದೆ. ಈ ಕುರಿತು ಸೂಕ್ತ ಸಂದರ್ಭದಲ್ಲಿ ನಿರ್ಧಾರ ಕೈಗೊಳ್ಳುವ ಭರವಸೆಯನ್ನು ಬೊಮ್ಮಾಯಿ ನೀಡಿದ್ದಾರೆ' ಎಂದು ಮೋಹನ್ ತಿಳಿಸಿದ್ದಾರೆ.

'ದಕ್ಷಿಣ ರಾಜ್ಯಗಳ ಸಮನ್ವಯ ಅಗತ್ಯ'

ಹಾಸನ: 'ಭಯೋತ್ಪಾದನೆ ತಡೆಗಟ್ಟಲು ಸಂಘಟಿತ ಪ್ರಯತ್ನ ಅಗತ್ಯವಾಗಿದ್ದು, ಈ ನಿಟ್ಟಿನಲ್ಲಿ ಸಮನ್ವಯ ಸಾಧಿಸಲು ದಕ್ಷಿಣ ಭಾರತದ ಮುಖ್ಯಮಂತ್ರಿಗಳಿಗೆ ಪತ್ರ ಬರೆಯಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಜಿಲ್ಲೆಯ ಮಾಯಗೊಂಡನಹಳ್ಳಿ ಹೆಲಿಪ್ಯಾಡ್‌ನಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ದುಷ್ಕರ್ಮಿಗಳು ಒಂದು ರಾಜ್ಯದಲ್ಲಿ ಕೃತ್ಯ ನಡೆಸಿ, ಇನ್ನೊಂದು ರಾಜ್ಯಕ್ಕೆ ಸಲೀಸಾಗಿ ಹೋಗುತ್ತಾರೆ. ಅದನ್ನು ತಡೆಯಲು ದಕ್ಷಿಣದ ರಾಜ್ಯಗಳು ಕಠಿಣ ನಿಗಾ ವಹಿಸಬೇಕು. ಪರಸ್ಪರ ಸಹಕಾರ ನೀಡಬೇಕು' ಎಂದರು.

ದಾವಣಗೆರೆಯಲ್ಲಿ ಶನಿವಾರ, ಮಂಡ್ಯದಲ್ಲಿ ಭಾನುವಾರ

ಇಪಿಎಸ್–95 ನಿವೃತ್ತ ನೌಕರರ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 1995ರ ನೌಕರರ ಪಿಂಚಣಿ ಯೋಜನೆಯ(ಇಪಿಎಸ್-95) ನಿವೃತ್ತ ನೌಕರರ ಪ್ರತಿಭಟನಾ ಸಮಾವೇಶ ದಾವಣಗೆರೆ ಮತ್ತು ಮಂಡ್ಯದಲ್ಲಿ ಕ್ರಮವಾಗಿ ನ.26 ಮತ್ತು 27ರಂದು ನಡೆಯಲಿದೆ.

ರಾಷ್ಟ್ರೀಯ ಸಂಘರ್ಷ ಸಮಿತಿ-(ಎನ್‌ಎಸಿ) ನೇತೃತ್ವದಲ್ಲಿ ಹೋರಾಟ ನಡೆಯಲಿದ್ದು, ಪಿಂಚಣಿ ಯೋಜನೆ ಬಗ್ಗೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಬಗ್ಗೆ ವಿಶ್ಲೇಷಣೆ, ಕನಿಷ್ಠ ಪಿಂಚಣಿ ₹7,500 ಮತ್ತು ಡಿ.ಎ (ತುಟ್ಟಿಭತ್ಯೆ), ವೈದ್ಯಕೀಯ ಸೌಲಭ್ಯ, ಪಿಂಚಣಿ ವಂಚಿತರಿಗೆ ಕನಿಷ್ಠ ₹5 ಸಾವಿರ ಪಿಂಚಣಿ ನೀಡುವ ವಿಷಯಗಳ ಬಗ್ಗೆ ಸಮಾವೇಶದಲ್ಲಿ ಚರ್ಚೆಗಳು ನಡೆಯಲಿವೆ ಎಂದು ಎನ್‌ಎಸಿ ತಿಳಿಸಿದೆ.

'ನೌಕರರ ಭವಿಷ್ಯ ನಿಧಿ ಸಂಘಟನೆಯು(ಇಪಿಎಫ್‌ಒ) ಸಲ್ಲದ ಪ್ರಕರಣಗಳನ್ನು ನ್ಯಾಯಾಲಯಗಳಲ್ಲಿ ಉದ್ದೇಶಪೂರ್ವಕವಾಗಿ ದಾಖಲಿಸಿ ಲಕ್ಷಾಂತರ ಜನರ ಜೀವನದ ಜತೆ ಚೆಲ್ಲಾಟವಾಡುತ್ತಿದೆ. ಅದೆಷ್ಟೋ ನೌಕರರು ಮತ್ತು ನಿವೃತ್ತ ನೌಕರರು ಇಂದಿಗೂ ಇಪಿಎಫ್‌ಒ ನಡೆಯನ್ನು ಶಪಿಸುತ್ತಿದ್ದಾರೆ. ಅಡ್ಡ ಕಾನೂನು ಬಳಸಿ ಪಿಂಚಣಿದಾರರನ್ನು ಬೆದರಿಸಲು ಸಾಧ್ಯವಿಲ್ಲ. ಎಲ್ಲರಿಗೂ ಪಿಂಚಣಿ ಸೌಲಭ್ಯ ದೊರಕಬೇಕು. ಅಲ್ಲಿಯ ತನಕ ಹೋರಾಟ ನಿಲ್ಲುವುದಿಲ್ಲ' ಎಂದು ಎನ್‌ಎಸಿ ಹೇಳಿದೆ.

ಈ ಎಲ್ಲಾ ವಿಷಯಗಳನ್ನು ಚರ್ಚಿಸಲು ಸಮಾವೇಶ ನಡೆಸಲಾಗುತ್ತಿದ್ದು, ಎನ್‌ಎಸಿ ಅಧ್ಯಕ್ಷ ಕಮಾಂಡರ್ ಅಶೋಕ್ ರಾವ್, ಕಾರ್ಯದರ್ಶಿ ನರೇಂದ್ರ ಸಿಂಗ್ ಭಾಗವಹಿಸಲಿದ್ದಾರೆ. ದಾವಣಗೆರೆಯಲ್ಲಿ ರೈಲು ನಿಲ್ದಾಣದ ಬಳಿ ಇರುವ ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾದಲ್ಲಿ, ಮಂಡ್ಯದಲ್ಲಿ ಆರ್‌ಎಪಿಸಿಎಂಎಸ್ ರೈತ ಸಭಾಂಗಣದಲ್ಲಿ ನಡೆಯಲಿದೆ. ಇಪಿಎಸ್-95 ವ್ಯಾಪ್ತಿಗೆ ಬರುವ ನಿವೃತ್ತ ನೌಕರರು ಸಮಾವೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಮನವಿ ಮಾಡಿದೆ.

ತಳಮಟ್ಟದ ಕುಶಲಕರ್ಮಿಗಳಿಗೆ ಸರ್ಕಾರದಿಂದ ನೆರವಿನ ಹಸ್ತ

ಒಂದನೇ ಪುಟದಿಂದ...

ಸಾಲ ಮಂಜೂರಾದ ಬಳಿಕ ಸಹಾಯಧನದ ಕ್ಲೈಮ್ ಸ್ವೀಕರಿಸಿ ಬ್ಯಾಂಕುಗಳಿಗೆ ಸಾಲದ ಮೇಲೆ ಶೇ 30ರಷ್ಟು (ಗರಿಷ್ಠ ₹ 15 ಸಾವಿರ) ಸಹಾಯಧನವನ್ನು ಸರ್ಕಾರ ಬಿಡುಗಡೆ ಮಾಡಲಿದೆ. ಕುಶಲ ಕರ್ಮಿಗಳಿಗೆ ಬ್ಯಾಂಕುಗಳಿಂದ ಪ್ರಕ್ರಿಯೆ ಶುಲ್ಕ, ದಾಖಲಾತಿ ಶುಲ್ಕ, ಮುಂಗಡ ಶುಲ್ಕಗಳಿಂದ ವಿನಾಯಿತಿ ಸಿಗಲಿದ್ದು, ಇಡೀ ಯೋಜನೆಯ ಅನುಷ್ಠಾನ, ಅನುದಾನ ಬಿಡುಗಡೆ ಮತ್ತು ಉಸ್ತುವಾರಿಯನ್ನು ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ (ಎಂಎಸ್‌ಎಂಇ) ನಿರ್ದೇಶಕರು ನಿರ್ವಹಿಸಲಿದ್ದಾರೆ.

ಅರ್ಹ ಕುಶಲಕರ್ಮಿ ವೃತ್ತಿ ಯಾವುವು?

ಕಮ್ಮಾರಿಕೆ, ಬುಟ್ಟಿ ಹೆಣೆಯುವವರು, ಗೋಲ್ಡ್ ಸ್ಮಿತ್ (ಆಭರಣ ತಯಾರಿಕೆ), ಶ್ರೀಗಂಧ ಕ್ರಾಫ್ಟ್, ಮೈಸೂರು ರೋಸ್‌ವುಡ್ ಕೆತ್ತನೆ, ಚನ್ನಪಟ್ಟಣ ಆಟಿಕೆಗಳು, ಬಿದ್ರಿವೇರ್, ಕಿನ್ನಾಳ್ ಆಟಿಕೆಗಳು, ನವಲಗುಂದ ರತ್ನಗಂಬಳಿಗಳು, ಮುಂಡಗೋಡು ಫೈಲ್ ಕಾರ್ಪೆಟ್‌ಗಳು, ಕಲ್ಲಿನ ಕೆತ್ತನೆ, ಮರದ ಕೆತ್ತನೆಗಳು, ಮೈಸೂರು ಸಾಂಪ್ರದಾಯಿಕ ಚಿತ್ರಕಲೆ, ಗಂಜಿಫಾ ಕಲೆ, ಕುಂಬಾರಿಕೆ/ ಟೆರಾಕೋಟ/ ಮಣ್ಣಿನ ವಿಗ್ರಹ ತಯಾರಿಕೆ, ಲೋಹದ ಕರಕುಶಲ, ಬೆತ್ತ ಮತ್ತು ಬಿದಿರು, ಸಂಡೂರು ಲಂಬಾಣಿ ಕಸೂತಿ, ಕಸೂತಿ ಕಲೆ, ಕೋಕೋನಟ್ ಶೆಲ್ ಕ್ರಾಫ್ಟ್, ಕಂಬಳಿ ನೇಯುವವರು, ಚಾಪೆ ಹೆಣೆಯುವುದು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ನೀವು ಹೆಚ್ಚು ಹೆಚ್ಚು ತಿಳಿದುಕೊಂಡಷ್ಟೂ ನಿಮಗೆ ಹೆಚ್ಚು ತಿಳಿದಿಲ್ಲ ಎಂಬುದು ನಿಮ್ಮ ಅನುಭವಕ್ಕೆ ಬರುತ್ತದೆ.

–ಅರಿಸ್ಟಾಟಲ್

ಚಿಲುಮೆ: ಚುನಾವಣಾ ಪ್ರಕ್ರಿಯೆಯ ಪಾವಿತ್ರ್ಯದ ಮೇಲೆ ಕರಿನೆರಳು

ಚಿಲುಮೆ ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯು ಬೆಂಗಳೂರು ನಗರದ ಕೆಲವು ಭಾಗಗಳ ಮತದಾರರ ಮಾಹಿತಿಗಳನ್ನು ಕಳವು ಮಾಡಿರುವ ಆರೋಪಕ್ಕೆ ಸಂಬಂಧಿಸಿದ ಪ್ರಕರಣವು ದಿನ ಕಳೆದಂತೆಲ್ಲಾ ನಿಗೂಢವಾಗುತ್ತಿದೆ. ಸಮಗ್ರ, ನಿಷ್ಪಕ್ಷಪಾತ ಮತ್ತು ಸ್ವತಂತ್ರವಾದ ತನಿಖೆಯಿಂದ ಮಾತ್ರವೇ ಈ ಹಗರಣದ ಆಳವನ್ನು ಅರಿಯಲು ಸಾಧ್ಯ. ಈ ಪ್ರಕ್ರಿಯೆಯಿಂದ ಲಾಭ ಪಡೆಯಲು ಯತ್ನಿಸಿರುವ ರಾಜಕೀಯ ಪಕ್ಷಗಳ ಜತೆ ಬಿಬಿಎಂಪಿ ಅಧಿಕಾರಿಗಳೂ ಶಾಮೀಲಾಗಿದ್ದಾರೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕೂ ಅಂತಹ ತನಿಖೆ ಅಗತ್ಯ. ಮತದಾರರಲ್ಲಿ ಜಾಗೃತಿ ಮೂಡಿಸುವುದು ಮತ್ತು ಮತದಾರರ ಗುರುತಿನ ಚೀಟಿಯ ಜೊತೆ ಆಧಾರ್ ಸಂಖ್ಯೆಯನ್ನು ಜೋಡಿಸುವ ಜವಾಬ್ದಾರಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) ಚಿಲುಮೆ ಸಂಸ್ಥೆಗೆ ನೀಡಿತ್ತು. ಆದರೆ, ಷರತ್ತುಗಳನ್ನು ಉಲ್ಲಂಘಿಸಿರುವ ಈ ಸರ್ಕಾರೇತರ ಸಂಸ್ಥೆಯು ಮತದಾರರ ಜಾತಿ, ವಯಸ್ಸು, ಲಿಂಗ, ವೃತ್ತಿ, ಶಿಕ್ಷಣಕ್ಕೆ ಸಂಬಂಧಿಸಿದ ಸೂಕ್ಷ್ಮ ಮಾಹಿತಿಗಳು ಹಾಗೂ ವೈಯಕ್ತಿಕ ಗುರುತಿನ ದಾಖಲೆಗಳನ್ನೂ ಸಂಗ್ರಹಿಸಿರುವ ಆರೋಪವಿದೆ. ಕೆಲವೆಡೆ ಮತದಾರರ ಒಲವು-ನಿಲುವು, ಹಾಲಿ ಶಾಸಕರ ಸಾಧನೆಗೆ ಸಂಬಂಧಿಸಿದ ಅಭಿಪ್ರಾಯವನ್ನೂ ಕಲೆಹಾಕಿರುವ ದೂರುಗಳಿವೆ. ಸಂಸ್ಥೆಯು ಮತದಾರರ ಮೇಲೆ ನಿರ್ದಿಷ್ಟ ಬಗೆಯಲ್ಲಿ ಪ್ರಭಾವ ಬೀರಲು ಯತ್ನಿಸಿರಬಹುದು. ತಾನು ಸಮೀಕ್ಷೆ ನಡೆಸಿದ ಸ್ಥಳಗಳಲ್ಲಿ ಸಂಸ್ಥೆಯು ಬೂತ್ ಅಧಿಕಾರಿಗಳ ಗುರುತಿನ ಚೀಟಿ ಕೂಡ ಬಳಸಿಕೊಂಡಿದೆ ಎಂಬ ಆರೋಪವಿದೆ. ಈ ಮಾಹಿತಿಯನ್ನು ಚುನಾವಣಾ ಅಕ್ರಮಗಳಿಗೆ ಬಳಕೆ ಮಾಡಿಕೊಳ್ಳುವ ಸಾಧ್ಯತೆ ಇರುತ್ತದೆ. ಬಿಬಿಎಂಪಿ ಈಗ ಚಿಲುಮೆ ಸಂಸ್ಥೆಯ ವಿರುದ್ಧ ವಂಚನೆ, ನಂಬಿಕೆ ದ್ರೋಹ ಮತ್ತು ನಕಲಿ ದಾಖಲೆ ಸೃಷ್ಟಿಗೆ ಸಂಬಂಧಿಸಿದಂತೆ ದೂರು ದಾಖಲಿಸಿದೆ. ಆದರೆ, ಸಮೀಕ್ಷೆ ನಡೆಸುವ ಚಿಲುಮೆ ಸಂಸ್ಥೆಯ ಕಾರ್ಯಕರ್ತರಿಗೆ ಬಿಬಿಎಂಪಿ ಅಧಿಕಾರಿಗಳು 'ಮತಗಟ್ಟೆ ಹಂತದ ಅಧಿಕಾರಿಗಳು' (ಬಿಎಲ್‌ಒ) ಎಂದು ನಮೂದಿಸಿರುವ ಗುರುತಿನ ಚೀಟಿಗಳನ್ನೂ ನೀಡಿದ್ದಾರೆ ಎಂಬ ಸಂಗತಿಯು ಇಡೀ ಪ್ರಕ್ರಿಯೆಯಲ್ಲಿ ಬಿಬಿಎಂಪಿ ಒಳಗಿನವರು ಶಾಮೀಲಾಗಿರುವುದನ್ನು ಹಾಗೂ ಇಡೀ ಪ್ರಕ್ರಿಯೆ ಹಿಂದೆ ರಾಜಕೀಯ ಉದ್ದೇಶ ಇದ್ದುದನ್ನು ತೋರಿಸುತ್ತಿದೆ. ಹಿರಿಯ ಅಧಿಕಾರಿಗಳ ಆದೇಶದಂತೆ ಚಿಲುಮೆ ಸಂಸ್ಥೆಯ ಕಾರ್ಯಕರ್ತರಿಗೆ ಬಿಬಿಎಂಪಿ ಹೆಸರಿನಲ್ಲಿ ಗುರುತಿನ ಚೀಟಿ ವಿತರಿಸಿರುವುದಾಗಿ ಕೆ. ಚಂದ್ರಶೇಖರ್ ಎಂಬ ಮತದಾರರ ನೋಂದಣಿ ಅಧಿಕಾರಿ ಒಪ್ಪಿಕೊಂಡಿದ್ದಾರೆ. ಚಿಲುಮೆ ಸಂಸ್ಥೆಯ ಚಟುವಟಿಕೆಗಳ ಕುರಿತು ಯಾವೆಲ್ಲ ಅಧಿಕಾರಿಗಳಿಗೆ ಗೊತ್ತಿತ್ತು, ಸಂಸ್ಥೆಯ ಹಿಂದೆ ಯಾರೆಲ್ಲ ಇದ್ದರು?

ಪ್ರಕರಣದ ಕುರಿತು ಸಮಗ್ರವಾಗಿ ತನಿಖೆ ನಡೆಸಿ, ಸತ್ಯಾಂಶ ಬಯಲಿಗೆ ಎಳೆಯಬೇಕು

ಆಡಳಿತಾರೂಢ ಬಿಜೆಪಿಯು ಚಿಲುಮೆ ಸಂಸ್ಥೆಯ ಕಾರ್ಯಕರ್ತರನ್ನು ದುರ್ಬಳಕೆ ಮಾಡಿಕೊಂಡು ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ಹಸ್ತಕ್ಷೇಪ ಮಾಡಿದೆ ಎಂದು ಕಾಂಗ್ರೆಸ್ ಆರೋಪ ಮಾಡಿದೆ. ಬಿಜೆಪಿಗೆ ಮತ ಚಲಾಯಿಸಲು ಆಸಕ್ತಿ ಹೊಂದಿಲ್ಲದ ಸಾವಿರಾರು ಜನರ ಹೆಸರುಗಳನ್ನು ಮತದಾರರ ಪಟ್ಟಿಯಿಂದಲೇ ಕೈಬಿಡಲಾಗಿದೆ ಅಥವಾ ಬೇರೊಂದು ಕ್ಷೇತ್ರಕ್ಕೆ ಸ್ಥಳಾಂತರ ಮಾಡಲಾಗಿದೆ ಎಂದು ವಿರೋಧ ಪಕ್ಷದ ಮುಖಂಡರು ದೂರಿದ್ದಾರೆ. ಈ ಆರೋಪದ ಕುರಿತು ತನಿಖೆಯಾಗಬೇಕಿದೆ. ಮತದಾರರ ಜಾಗೃತಿ ಕಾರ್ಯಕ್ರಮ ನಡೆಸಲು ಸರ್ಕಾರೇತರ ಸಂಸ್ಥೆಗಳನ್ನು ನೇಮಿಸಿಕೊಳ್ಳಲು ಚುನಾವಣಾ ಆಯೋಗದ ಮಾರ್ಗಸೂಚಿಗಳಲ್ಲಿ ಅವಕಾಶವಿದೆ. ಆದರೆ, ಅಂತಹ ಸಂಸ್ಥೆಗಳು ಯಾವುದೇ ರಾಜಕೀಯ ಪಕ್ಷದ ಜತೆ ನಂಟು ಹೊಂದಿರಬಾರದು. ಮತದಾರರ ಪಟ್ಟಿಗೆ ಸಂಬಂಧಿಸಿದ ಮಾಹಿತಿಯನ್ನು ದುರ್ಬಳಕೆ ಮಾಡಿಕೊಳ್ಳುವುದಕ್ಕೂ ಅವಕಾಶವಿಲ್ಲ. ಈ ಎರಡೂ ವಿಚಾರಗಳಲ್ಲೂ ಚಿಲುಮೆ ಸಂಸ್ಥೆಯು ಚುನಾವಣಾ ಆಯೋಗದ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವುದು ಸ್ಪಷ್ಟ. 2018ರ ವಿಧಾನಸಭಾ ಚುನಾವಣೆಯಲ್ಲಿ ತಾವು ಸ್ಪರ್ಧಿಸಿದ್ದ ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದ ಮತದಾರರ ಸಮೀಕ್ಷೆ ನಡೆಸಲು ₹ 18 ಲಕ್ಷವನ್ನು ಚಿಲುಮೆ ಸಂಸ್ಥೆಗೆ ಪಾವತಿಸಿರುವುದಾಗಿ ಬಿಜೆಪಿಯ ಮಾಜಿ ಶಾಸಕ ಎನ್.ಎಸ್. ನಂದೀಶ್ ರೆಡ್ಡಿ ಒಪ್ಪಿಕೊಂಡಿದ್ದಾರೆ. ಈ ಸಂಸ್ಥೆಯು ಸಂಗ್ರಹಿಸಿದ ಮತದಾರರ ಮಾಹಿತಿಯನ್ನು ತನ್ನದೇ ಸಮೂಹ ಸಂಸ್ಥೆಯೊಂದರ ಡಿಜಿಟಲ್ ಆ್ಯಪ್‌ನಲ್ಲಿ ಅಪ್‌ಲೋಡ್ ಮಾಡಿರುವುದೂ ತನಿಖೆಯಲ್ಲಿ ಪತ್ತೆಯಾಗಿದೆ. ಈ ಸಂಸ್ಥೆಯು ಮತದಾರರ ದತ್ತಾಂಶವನ್ನು ರಾಜಕೀಯ ಪಕ್ಷಗಳಿಗೆ ಹಾಗೂ ಮುಖಂಡರಿಗೆ ನೀಡಿತ್ತೇ ಎಂಬುದು ಕೂಡ ತನಿಖೆಯಿಂದ ಬಹಿರಂಗವಾಗಬೇಕಿದೆ. ಈ ಹಿಂದಿನ ಕಾಂಗ್ರೆಸ್ ನೇತೃತ್ವದ ಸರ್ಕಾರ ಕೂಡ ಚಿಲುಮೆ ಸಂಸ್ಥೆಯನ್ನು ಕೆಲಸಕ್ಕೆ ನಿಯೋಜಿಸಿತ್ತು ಎಂದು ಬಿಜೆಪಿ ಆರೋಪ ಮಾಡಿದೆ. ಮತದಾರರ ಜಾಗೃತಿ ಹಾಗೂ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಭಾಗಿಯಾದ ಕಾರ್ಯಕರ್ತರಿಗೆ ವೇತನ, ಭತ್ಯೆ ನೀಡಲು ದೊಡ್ಡ ಮೊತ್ತ ಬೇಕಾಗುತ್ತದೆ. ಆದರೆ, ಉಚಿತವಾಗಿ ಈ ಪ್ರಕ್ರಿಯೆಯನ್ನು ನಡೆಸಿಕೊಡುವುದಾಗಿ ಚಿಲುಮೆ ಸಂಸ್ಥೆಯು ಬಿಬಿಎಂಪಿಗೆ ವಾಗ್ದಾನ ನೀಡಿತ್ತು. ಇಷ್ಟೊಂದು ದೊಡ್ಡ ಮೊತ್ತದ ವೆಚ್ಚಕ್ಕೆ ಹಣ ಒದಗಿಸಿದವರು ಯಾರು ಎಂಬುದು ನಿಗೂಢವಾಗಿಯೇ ಉಳಿದಿದೆ.

ಈ ಪ್ರಕರಣದ ತನಿಖೆಯಲ್ಲಿ ತ್ವರಿತವಾಗಿ ಕಾರ್ಯಾಚರಣೆ ನಡೆಸಿರುವ ಪೊಲೀಸರು, ಹಲವು ಆರೋಪಿಗಳನ್ನು ಬಂಧಿಸಿದ್ದಾರೆ. ಬಿಬಿಎಂಪಿಯು ಕೆಲವು ಅಧಿಕಾರಿಗಳನ್ನು ಅಮಾನತು ಮಾಡಿದೆ. ಪ್ರಕರಣದ ಕುರಿತು ವಿಚಾರಣೆಯನ್ನು ತಾನು ಮಾತ್ರ ನಡೆಸಬಹುದು ಎಂದು ರಾಜ್ಯ ಚುನಾವಣಾ ಆಯೋಗ ಹೇಳಿದೆ. ಆದರೆ, ಈ ಪ್ರಕ್ರಿಯೆಯ ಕುರಿತು ಆಯೋಗಕ್ಕೆ ಮೊದಲು ಅರಿವೇ ಇರಲಿಲ್ಲವೆ ಎಂಬ ಪ್ರಶ್ನೆ ಉದ್ಭವಿಸಿದೆ. ಪ್ರಕರಣದ ಕುರಿತು ಸಮಗ್ರವಾಗಿ ತನಿಖೆ ನಡೆಸಿ, ಸತ್ಯಾಂಶ ಬಯಲಿಗೆಳೆದು ಚುನಾವಣಾ ಪ್ರಕ್ರಿಯೆ ಕುರಿತು ಸಾರ್ವಜನಿಕರಲ್ಲಿನ ವಿಶ್ವಾಸ ಮರುಸ್ಥಾಪಿಸಬೇಕು. ಚುನಾವಣಾ ಆಯೋಗವು ತನ್ನ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿಕೊಳ್ಳಬೇಕು. ರಾಜ್ಯ ವಿಧಾನಸಭೆಗೆ ಚುನಾವಣೆ ಇನ್ನು ಕೆಲವೇ ತಿಂಗಳುಗಳಲ್ಲಿ ನಡೆಯಲಿದೆ. ಈ ಸಂದರ್ಭದಲ್ಲಿ ಇಡೀ ಚುನಾವಣಾ ಪ್ರಕ್ರಿಯೆಯ ಪಾವಿತ್ರ್ಯವೇ ಅಪಾಯಕ್ಕೆ ಸಿಲುಕಿದೆ.

ದಿನದ ಟ್ವೀಟ್

ಎಂತಹ ವೈರುಧ್ಯ!

ಆರ್‌ಬಿಐ ಪ್ರಕಾರ, 2021-22ರಲ್ಲಿ ಕೇರಳದಲ್ಲಿ ನಿರ್ಮಾಣ ಕಾರ್ಮಿಕರ ದಿನಗೂಲಿ ₹ 837ರಷ್ಟಿದೆ. ರಾಜ್ಯದ 59 ವಲಯಗಳ ಕಾರ್ಮಿಕರು ಕನಿಷ್ಠ ವೇತನ ಕಾಯ್ದೆಯ ಅಡಿಯಲ್ಲಿ ರಕ್ಷಣೆ ಪಡೆದಿದ್ದಾರೆ. ಗುಜರಾತ್‌ನ ತಲಾವಾರು ಆದಾಯ ಹೋಲಿಕೆ ಮಾಡಿದರೆ, ಕೂಲಿ ಕೇವಲ ₹ 296 ಇದೆ! ಮರುಹಂಚಿಕೆಯಲ್ಲಿ ಅದೆಂತಹ ವೈರುಧ್ಯ!

ಥಾಮಸ್ ಐಸಾಕ್, ಸಿಪಿಎಂ ಕೇಂದ್ರ ಸಮಿತಿ ಸದಸ್ಯ

ಕಿಡಿನುಡಿ

ವಿಶ್ವದ ಬೃಹತ್ ನಗರಗಳಲ್ಲಿ ಒಂದಾಗಿರುವ ಬೆಂಗಳೂರಿನಲ್ಲಿ ಚುನಾವಣೆ ನಡೆಸದಿರಲು ಕರ್ನಾಟಕ ಸರ್ಕಾರವು ಒಂದರ ನಂತರ ಒಂದು ನೆಪವನ್ನು ಹೇಳುತ್ತಿರುವುದು ಅತ್ಯಂತ ದುರದೃಷ್ಟಕರ. ಇದು, ಸ್ಥಳೀಯ ಸರ್ಕಾರವನ್ನು ಹೊಂದುವ ಬೆಂಗಳೂರಿನ ನಾಗರಿಕರ ಸಾಂವಿಧಾನಿಕ ಹಕ್ಕುಗಳನ್ನು ನಿರಾಕರಿಸಿದಂತೆಯೇ ಸರಿ.

ಶ್ರೀನಿವಾಸ್ ಅಲವಿಲ್ಲಿ, ಸದಸ್ಯ, ಜನಾಗ್ರಹ ಸಂಸ್ಥೆ

25 ವರ್ಷಗಳ ಹಿಂದೆ

ಸೋಮವಾರ, 24-11-1997

- **ಕೇಸರಿ ಕೈ ಸೇರದ ರಂಗದ ಪತ್ರ: ಕಾಂಗ್ರೆಸ್ ಪಕ್ಷ ಇಕ್ಕಟ್ಟಿನಲ್ಲಿ**

ನವದೆಹಲಿ, ನ. 23– ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿ ಅವರ ಪತ್ರಕ್ಕೆ ಉತ್ತರ ಕೊಡುವ ಗೋಜಿಗೆ ಸಂಯುಕ್ತ ರಂಗ ಇಂದು ಸಹ ಹೋಗಲಿಲ್ಲ. ಲೋಕಸಭೆಯಲ್ಲಿ ವಾರಾಂತ್ಯದ ಗದ್ದಲದ ಸಮಾವೇಶ ಸೋಮವಾರವೂ ಮುಂದುವರಿಯುವ ನಿರೀಕ್ಷೆ ಇದೆ.

ಸಂಯುಕ್ತ ರಂಗ ಸರ್ಕಾರ ಮತ್ತು ಕಾಂಗ್ರೆಸ್ ನಡುವೆ ಉದ್ಭವಿಸಿರುವ ಬಿಕ್ಕಟ್ಟನ್ನು ಬಗೆಹರಿಸಲು ಹಲವಾರು ಮಟ್ಟದಲ್ಲಿ ಅನೌಪಚಾರಿಕ ಮಾತುಕತೆಗಳು ಮುಂದುವರಿದಿವೆ. ಕೇಂದ್ರ ಸಚಿವರಾದ ರಾಂ ವಿಲಾಸ್ ಪಾಸ್ವಾನ್ ಮತ್ತು ಕಮಲಾ ಸಿನ್ಹಾ ಅವರು ಇಂದು ರಾತ್ರಿ ಸಂಯುಕ್ತ ರಂಗದ ನಿರ್ಣಾಯಕ ಸಮಿತಿ ಸಭೆಗೆ ಮೊದಲು ಕೇಸರಿ ಅವರನ್ನು ಭೇಟಿ ಮಾಡಿ ಸಂಧಾನಕ್ಕೆ ಯತ್ನಿಸಿದರು. ಆದರೆ ಅವರು ಅಧಿಕೃತವಾಗಿ ಪ್ರಧಾನಿಯವರ ಪತ್ರವನ್ನು ಕೇಸರಿ ಅವರಿಗೆ ನೀಡಿದ ಬಗ್ಗೆ ಪ್ರತಿಕ್ರಿಯೆ ನೀಡಲಿಲ್ಲ.

50 ವರ್ಷಗಳ ಹಿಂದೆ

ಶುಕ್ರವಾರ, 24-11-1972

- **ಮೈಸೂರು–ಮಹಾರಾಷ್ಟ್ರ ಗಡಿ ವಿವಾದ ಇತ್ಯರ್ಥಕ್ಕೆ ಕಾಲ ನಿಗದಿ ಅಸಾಧ್ಯ: ಪಂತ್**

ನವದೆಹಲಿ, ನ. 23– ಮೈಸೂರು–ಮಹಾರಾಷ್ಟ್ರ ಗಡಿ ವಿವಾದವನ್ನು ಪರಿಹರಿಸುವ ಸಲುವಾಗಿ ನಿಶ್ಚಿತ ಕಾಲಾವಧಿಯನ್ನು ಗೊತ್ತು ಮಾಡಲು ಸಾಧ್ಯವಿಲ್ಲ ಎಂದು ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಕೆ.ಸಿ.ಪಂತ್ ಅವರು, ಮರಾಠಿ ಮಾತನಾಡುವ ಜನ ಅಧಿಕವಾಗಿರುವ ಪ್ರದೇಶಗಳನ್ನು ಮಹಾರಾಷ್ಟ್ರದಲ್ಲಿ ವಿಲೀನಗೊಳಿಸಬೇಕು ಎಂದು ಒತ್ತಾಯಿಸಿದ ನಿಯೋಗವೊಂದಕ್ಕೆ ತಿಳಿಸಿದರೆಂದು ಗೊತ್ತಾಗಿದೆ.

- **'ವಂಶವೃಕ್ಷ' ವರ್ಷದ ಶ್ರೇಷ್ಠ ಚಿತ್ರ**

ಬೆಂಗಳೂರು, ನ. 23– ಗಿರೀಶ ಕಾರ್ನಾಡ ಮತ್ತು ಬಿ.ವಿ. ಕಾರಂತ ಅವರು ನಿರ್ದೇಶಿಸಿರುವ 'ವಂಶವೃಕ್ಷ' ಚಿತ್ರಕ್ಕೆ ರಾಜ್ಯ ಸರ್ಕಾರದ ಶ್ರೇಷ್ಠ ಚಿತ್ರ ಪ್ರಶಸ್ತಿ ದೊರಕಿದೆ.

1971ರಲ್ಲಿ ತಯಾರಾದ ಚಿತ್ರಗಳ ಪೈಕಿ ಎರಡನೆಯ ಬಹುಮಾನ 'ಬಂಗಾರದ ಮನುಷ್ಯ' ಚಿತ್ರಕ್ಕೂ, ಮೂರನೆಯ ಬಹುಮಾನ 'ಯಾವ ಜನ್ಮದ ಮೈತ್ರಿ' ಮತ್ತು 'ಸಿಪಾಯಿ ರಾಮು' ಚಿತ್ರಗಳಿಗೂ ಲಭಿಸಿದೆ.

ಸಂಶೋಧನಾ ಚಟುವಟಿಕೆಗೆ ಹಿನ್ನಡೆ ಆಗದಂತೆ ನೋಡಿಕೊಳ್ಳುವ ಹೊಣೆ ಸರ್ಕಾರದ ಮೇಲಿದೆ

ಸಂಶೋಧನೆಗೂ ತಟ್ಟುತ್ತಿದೆ ಜಿಎಸ್‌ಟಿ ಬಿಸಿ!

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ರಾಜ್ಯದ ಪ್ರತಿಷ್ಠಿತ ವಿಜ್ಞಾನ ಸಂಸ್ಥೆಯೊಂದರ ಭೌತವಿಜ್ಞಾನ ವಿಭಾಗದಲ್ಲಿ ಸಂಶೋಧನೆಯಲ್ಲಿ ನಿರತನಾಗಿರುವ ನನ್ನ ಗೆಳೆಯನೊಬ್ಬ ಫೋನ್ ಮಾಡಿ, 'ಇನ್ನಾರು ತಿಂಗಳು ನನಗೆ ಯಾವುದೇ ರಿಸರ್ಚ್ ಕೆಲಸವಿಲ್ಲ. ಯಾವುದಾದರೂ ಪಾರ್ಟ್‌ಟೈಮ್ ಟೀಚಿಂಗ್ ಜಾಬ್ ಸಿಗುತ್ತದೆಯೇ?' ಎಂದು ವಿಚಾರಿಸಿದ. 'ಯಾಕಪ್ಪ, ಏನಾಯಿತು? ರಿಸರ್ಚ್ ಮುಗೀತಾ ಇದೆ ಎಂದಿದ್ದೆಯಲ್ಲ, ಈಗೇನಾಯಿತು' ಎಂದದ್ದಕ್ಕೆ, 'ನಮ್ಮ ಡಿಪಾರ್ಟ್‌ಮೆಂಟಿನಿಂದ ಕೆಲವು ಉಪಕರಣಗಳಿಗೆ ಜೂನ್ ತಿಂಗಳಲ್ಲಿ ಆರ್ಡರ್ ಮಾಡಿದ್ದೆವು, ಈ ತಿಂಗಳಲ್ಲಿ ಬರಬೇಕಿತ್ತು. ಸರ್ಕಾರವು ಉಪಕರಣಗಳ ಮೇಲಿನ ಜಿಎಸ್‌ಟಿಯನ್ನು ಹೆಚ್ಚುಮಾಡಿದೆ. ಡಿಫರೆನ್ಸ್ ಹಣ ಕೊಡುವವರೆಗೂ ಎಕ್ವಿಪ್‌ಮೆಂಟ್ ಡೆಲಿವರಿ ಇಲ್ಲ ಎಂದಿದ್ದಾರೆ. ಆದ್ದರಿಂದ ನನ್ನ ರಿಸರ್ಚ್ ವರ್ಕ್ ತಡವಾಗಬಹುದು, ಅದಕ್ಕಾಗಿ ಈ ರಿಕ್ವೆಸ್ಟ್' ಎಂದ. 'ನಿಮಗೆ ಸರ್ಕಾರವೇ ಫಂಡ್ ಮಾಡುತ್ತದಲ್ಲವಾ? ಏನು ಯೋಚನೆ, ನಿಮ್ಮ ವಿಭಾಗ ಮುಖ್ಯಸ್ಥರನ್ನು ಕೇಳಿದರಾಯಿತು' ಎಂದೆ. 'ಅದನ್ನು ಮಾಡದೆ ಇರುತ್ತೇನೆಯೇ? ಹೆಚ್ಚಿನ ಗ್ರ್ಯಾಂಟ್ ಈಗಲೇ ಸಿಗುವುದಿಲ್ಲ, ಸ್ವಲ್ಪ ಕಾಯಬೇಕು ಎಂದರು' ಎಂದು ವಿವರಿಸಿದ.

ಹೌದು, ಮೊದಲೇ ತಮ್ಮ ಸಂಶೋಧನಾ ಕೆಲಸಗಳಿಗೆ ಬೇಕಾಗುವಷ್ಟು ಅನುದಾನ ದೊರೆಯುತ್ತಿಲ್ಲ ಎಂದು ಕೊರಗುತ್ತಿದ್ದ ದೇಶದ ವಿಜ್ಞಾನಿಗಳು ಈಗ ಜಿಎಸ್‌ಟಿ ಮಂಡಳಿಯ ತೀರ್ಮಾನದಿಂದಾಗಿ ಕಂಗಾಲಾಗಿದ್ದಾರೆ. ಜೂನ್‌ನಲ್ಲಿ ನಡೆದ ಜಿಎಸ್‌ಟಿ ಮಂಡಳಿಯ ಸಭೆಯಲ್ಲಿ, ಲ್ಯಾಬ್‌ಗಳಲ್ಲಿ ಬಳಸುವ ಉಪಕರಣ, ಸಲಕರಣೆ, ರಾಸಾಯನಿಕಗಳನ್ನು ಕೊಳ್ಳುವಾಗ ಅವುಗಳ ಮೇಲೆ ವಿಧಿಸಲಾಗುತ್ತಿದ್ದ ಶೇಕಡ 5ರಷ್ಟು ಜಿಎಸ್‌ಟಿ ಬದಲು ಹೆಚ್ಚಿನ ಪ್ರಮಾಣದ ತೆರಿಗೆಯನ್ನು ವಿಧಿಸಬೇಕೆಂದು ನಿರ್ಧರಿಸಲಾಯಿತು. ಅದು ಜುಲೈ ತಿಂಗಳಿನಿಂದಲೇ ಜಾರಿಯಾಗಿದೆ. ಈ ತೀರ್ಮಾನದಿಂದ ತಮ್ಮ ಸಂಶೋಧನಾ ಕೆಲಸಗಳಿಗೆ ಹಿನ್ನಡೆ ಉಂಟಾಗಿದೆ ಎಂಬುದು ವಿಜ್ಞಾನಿಗಳ ಪ್ರತಿಪಾದನೆ.

ಹೊಸ ತೀರ್ಮಾನ ಜಾರಿಗೆ ಬರುವವರೆಗೂ ವೈಜ್ಞಾನಿಕ ಉಪಕರಣಗಳ ಮೇಲೆ ಶೇ 5ರಷ್ಟು ಜಿಎಸ್‌ಟಿ ಇತ್ತು. ಹೊಸ ನಿಯಮದಂತೆ ಅದು ಶೇ 18ಕ್ಕೆ ಏರಿದೆ. ಹೊಸ ದರದಿಂದಾಗಿ ಸರ್ಕಾರಿ ಸ್ವಾಮ್ಯದ ಸಂಶೋಧನಾ ಸಂಸ್ಥೆಗಳಿಗೆ ಕೊಡಮಾಡಿದ ಅನುದಾನದಲ್ಲಿ ಗಣನೀಯ ಮೊತ್ತವು ತೆರಿಗೆ ಪಾವತಿಗೆ ಹೋಗುವಂತಾಗಿದೆ. ಸಂಶೋಧನಾ ಚಟುವಟಿಕೆಗಳಿಗೆ ಗೊತ್ತುಮಾಡಿದ್ದ ಮೊತ್ತದಲ್ಲಿ ಆ ಮಟ್ಟಿಗೆ ಹಣದ ಲಭ್ಯತೆ ಕಡಿಮೆ ಆಗಿದೆ ಎನ್ನುತ್ತಾರೆ ವಿಜ್ಞಾನಿಗಳು.

ದೆಹಲಿಯ ಸಿಎಸ್‌ಐಆರ್‌ನ ಮೈಕ್ರೊಬಿಯಲ್ ಟೆಕ್ನಾಲಜಿ ವಿಭಾಗದ ಹಿರಿಯ ವಿಜ್ಞಾನಿ ಡಾ. ಅಮಿತ್ ಟುಲಿ 'ನಮಗೆ ಸರ್ಕಾರದ ಅನುದಾನದ ಜೊತೆ ಹಲವು ಉದ್ಯಮ ಮತ್ತು ಕಾರ್ಪೊರೇಟ್ ಸಂಸ್ಥೆಗಳಿಂದಲೂ ಧನಸಹಾಯ ಬರುತ್ತದೆ. ತೆರಿಗೆ ಏರಿಕೆ ನಿರ್ಧಾರವನ್ನು ಹಿಂದಕ್ಕೆ ಪಡೆಯುವಂತೆ ಕೇಂದ್ರ ಸರ್ಕಾರವನ್ನು ಅವರೆಲ್ಲ ಒತ್ತಾಯಿಸಬೇಕು' ಎಂದಿದ್ದಾರೆ. ಇನ್ನೂ ಹಲವು ಹಿರಿಯ ವಿಜ್ಞಾನಿಗಳು 'ಈಗಿರುವ ಅನುದಾನವೇ ಕಡಿಮೆ, ಅದರಲ್ಲಿ ತೆರಿಗೆಗಾಗಿ ಎರಡು–ಮೂರು ಪಟ್ಟು ಹೆಚ್ಚಿಗೆ ವ್ಯಯ ಮಾಡುವುದರಿಂದ ಸಂಶೋಧನೆಗಳಿಗೆ ಹಣದ ತೀವ್ರ ಕೊರತೆ ಆಗುತ್ತದೆ. ಸಂಶೋಧನೆಗಳು ಸರಾಗವಾಗಿ ಸಾಗಬೇಕೆಂದರೆ ಅನುದಾನದ ಮೊತ್ತವನ್ನು ಹೆಚ್ಚಿಸುವುದಷ್ಟೇ ಪರಿಹಾರ' ಎಂದು ಅಭಿಪ್ರಾಯಪಟ್ಟಿದ್ದಾರೆ.

ಕೋವಿಡ್ ನಂತರದ ದಿನಗಳಲ್ಲಿ ಸಂಶೋಧನಾ ಚಟುವಟಿಕೆಗಳಿಗೆ ಹೆಚ್ಚಿನ ಧನಸಹಾಯ ಸಿಗಬಹುದು ಎಂದು ನಿರೀಕ್ಷಿಸಿದ್ದೆವು. ಆದರೆ ಅದಕ್ಕೆ ವ್ಯತಿರಿಕ್ತವಾದ ಬೆಳವಣಿಗೆಯಾಗುತ್ತಿದೆ, ಹೆಚ್ಚಿನ ತೆರಿಗೆಯಿಂದ ಸಂಶೋಧನಾ ಕೆಲಸಗಳು ಅಂದುಕೊಂಡ ವೇಗದಲ್ಲಿ ನಡೆಯುವುದಿಲ್ಲ ಮತ್ತು ವಿಜ್ಞಾನಿಗಳಲ್ಲಿ ಉತ್ಸಾಹ ಕಡಿಮೆಯಾಗುತ್ತಿದೆ ಎಂಬ ಮಾತು ಸಂಶೋಧನಾ ವಲಯದಲ್ಲಿ ಗಟ್ಟಿಯಾಗಿ ಕೇಳಿಬರುತ್ತಿದೆ. ಜಿಎಸ್‌ಟಿ ಇರಲಿ, ಇಲ್ಲದಿರಲಿ, ವೈದ್ಯಕೀಯ ಸಂಶೋಧನೆಗಳಿಗೆ ಹೆಚ್ಚಿನ ಅನುದಾನ ಬೇಕೇ ಬೇಕು ಎಂದಿರುವ ಇಂಡಿಯನ್ ಕೌನ್ಸಿಲ್ ಫಾರ್ ಮೆಡಿಕಲ್ ರಿಸರ್ಚ್‌ನ (ಐಸಿಎಂಆರ್) ಹಿರಿಯ ವಿಜ್ಞಾನಿಯೊಬ್ಬರು 'ಸಂಶೋಧನೆಗಳಿಗೆ ಸಂಬಂಧಿಸಿದ ಉಪಕರಣ ಕೊಳ್ಳಲು ಈಗಾಗಲೇ ಆರ್ಡರ್ ನೀಡಲಾಗಿದೆ. ಆದರೆ ಸರಬರಾಜು ಕಂಪನಿಗಳು ನೂತನ ತೆರಿಗೆ ದರವನ್ನು ಸೇರಿಸಿ ಹಣ ಸಂದಾಯ ಮಾಡಿದರೆ ಮಾತ್ರ ಸಲಕರಣೆ ನೀಡುವುದಾಗಿ ಪಟ್ಟು ಹಿಡಿದಿವೆ. ನಮಗೆ ಬಂದಿರುವ ಅನುದಾನದಲ್ಲಿ ಇದಕ್ಕೆ ಖರ್ಚು ಮಾಡಲು ಅವಕಾಶವಿಲ್ಲ' ಎಂದಿದ್ದಾರೆ.

2017ರ ನವೆಂಬರ್‌ನಲ್ಲಿ ಸಂಶೋಧನಾ ಉಪಕರಣ, ಸಾಮಗ್ರಿಗಳ ಮೇಲಿನ ತೆರಿಗೆಯನ್ನು ಶೇ 5ಕ್ಕೆ ನಿಗದಿಪಡಿಸಿದ್ದ ಸರ್ಕಾರ ಈಗ ಏಕಾಏಕಿ 18ಕ್ಕೆ ಏರಿಸಿದೆ. ಸಂಶೋಧನಾ ಉಪಕರಣಗಳಿಗೆ ತೆರಿಗೆಯ ಹೊರೆಯನ್ನು ಈ ಪರಿ ಹೊರಿಸುವುದು ಯಾವ ನ್ಯಾಯ? ಸೈಕಲ್‌ಗೆ ಬಳಸುವ ಟ್ಯೂಬಿಗೂ ಕೆಮಿಕಲ್ ಲ್ಯಾಬೊರೇಟರಿಯ ಮೈಕ್ರೊಪಿಪೆಟ್‌ಗೂ ವ್ಯತ್ಯಾಸವಿಲ್ಲವೆ? ಎಲ್ಲದಕ್ಕೂ ಒಂದೇ ಪ್ರಮಾಣದ ತೆರಿಗೆ ಎಂದಾದರೆ ದೇಶದ ವಿಜ್ಞಾನ ರಂಗ ತತ್ತರಿಸಿ ಹೋಗಲಿದೆ ಎಂದು ವಿಜ್ಞಾನಿಗಳು ಕಳವಳ ವ್ಯಕ್ತಪಡಿಸಿದ್ದಾರೆ.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ವಿಜ್ಞಾನಿ ಅರಿಂದಮ್ ಘೋಷ್, 'ನಮಗೆ ಸಿಗುತ್ತಿರುವ ಅನುದಾನವೇ ಕಡಿಮೆ, ಅಂಥದ್ದರಲ್ಲಿ ಹೆಚ್ಚಿನ ತೆರಿಗೆಯಿಂದಾಗಿ ಸಂಶೋಧನಾ ವಲಯಕ್ಕೆ ತೀವ್ರ ಪೆಟ್ಟು ಬೀಳಲಿದೆ' ಎಂದು ಟೀಕಿಸಿದ್ದಾರೆ. 'ಒಂದು ವೇಳೆ ಧನಸಹಾಯ ಹೆಚ್ಚಿಸಬೇಕೆಂದು ನಿರ್ಧರಿಸಿದರೂ, ನಮಗೆ ಬೇಕಾದ ಸಮಯಕ್ಕೆ ಅದು ಸಿಗುವುದು ಅನುಮಾನ' ಎನ್ನುವುದು ವಿಜ್ಞಾನಿಗಳ ನಿರಾಶೆಯ ನುಡಿ. ವಿಜ್ಞಾನಿಗಳ ಈ ಮಾತಿಗೆ ಪ್ರತಿಕ್ರಿಯಿಸಿರುವ ಐಸಿಎಂಆರ್‌ನ ನಿರ್ದೇಶಕರೊಬ್ಬರು, 'ಬಹುತೇಕ ಉಪಕರಣಗಳಿಗೆ ಸರ್ಕಾರವೇ ದುಡ್ಡು ಕೊಡುವುದರಿಂದ ತೆರಿಗೆ ಹೆಚ್ಚಾದರೆ ಅದನ್ನು ಸರ್ಕಾರವೇ ನೋಡಿಕೊಳ್ಳುತ್ತದೆ, ಅದಕ್ಕೆ ವಿಜ್ಞಾನಿಗಳೇಕೆ ತಲೆಕೆಡಿಸಿಕೊಳ್ಳಬೇಕು, ಅವರ ಕೆಲಸ ಅವರು ಮಾಡಿಕೊಂಡಿದ್ದರಾಯಿತು' ಎಂದಿದ್ದಾರೆ.

ಸಂಶೋಧನೆಗಳು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ಮಾತ್ರ ನಡೆಯುವುದಿಲ್ಲ. ಸಾವಿರಾರು ಖಾಸಗಿ ಸಂಸ್ಥೆ, ಉದ್ದಿಮೆ, ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆಗಳು ನಡೆಯುತ್ತಿವೆ. ತೆರಿಗೆ ಹೆಚ್ಚಳವು ಅವರನ್ನೂ ಬಾಧಿಸುತ್ತದೆ. ಅಲ್ಲಿಯೂ ನಿಯಮಿತ ಅನುದಾನ ಇರುತ್ತದೆ. ಏಕಾಏಕಿ ಹೆಚ್ಚಿನ ಹಣ ಹೊಂದಿಸುವುದು ಅವರಿಗೂ ಸಾಧ್ಯವಿಲ್ಲ. ಖಾಸಗಿ ಸಂಶೋಧನಾ ವಲಯಗಳಿಂದಲೂ ವಿಜ್ಞಾನಕ್ಕೆ ಬಹಳಷ್ಟು ಕೊಡುಗೆ ಸಿಗುತ್ತಿದೆ. ಕೋವಿಡ್‌ಗೆ ಲಸಿಕೆ ತಯಾರಿಸಿದ ಪುಣೆಯ ಸೀರಮ್ ಇನ್‌ಸ್ಟಿಟ್ಯೂಟ್, ಹೈದರಾಬಾದ್‌ನ ಭಾರತ್ ಬಯೊಟೆಕ್, ಅಹಮದಾಬಾದ್‌ನ ಕ್ಯಾಡಿಲಾ ಹೆಲ್ತ್ ಕೇರ್‌ನಂತಹವು ಖಾಸಗಿ ಸ್ವಾಮ್ಯದವು.

ವಿದೇಶಗಳ ಸಂಶೋಧನಾ ಸಂಸ್ಥೆಗಳಲ್ಲಿ ಪ್ರತೀ ಸಂಶೋಧನೆಗೂ ಹೆಚ್ಚುವರಿ ಹಣವನ್ನು ಮೀಸಲಾಗಿ ಇರಿಸಿರುತ್ತಾರೆ. ಹಣಕಾಸು ಮುಗ್ಗಟ್ಟಿನಿಂದ ಸಂಶೋಧನಾ ಕೆಲಸಕ್ಕೆ ಹಿನ್ನಡೆಯಾಗಬಾರದು ಎಂಬ ಕಾಳಜಿ ಅದರ ಹಿಂದೆ ಇರುತ್ತದೆ. ನಮ್ಮಲ್ಲಿ ಅಂತಹ ಪದ್ಧತಿ ಇಲ್ಲ. ಅಲ್ಲದೆ, ಒಂದು ಪ್ರಾಜೆಕ್ಟ್‌ಗೆ ಮಂಜೂರಾದ ಅನುದಾನದ ಮೊತ್ತವನ್ನು ಬ್ಯಾಂಕಿನಲ್ಲಿ ಇಟ್ಟಾಗ ದೊರೆಯುವ ಬಡ್ಡಿ ಹಣವನ್ನು ಸಂಶೋಧನೆಗೆ ಬಳಸಿಕೊಳ್ಳಲು ಅವಕಾಶವಿತ್ತು, ಈಗ ಅದೂ ರದ್ದಾಗಿದೆ. ಬಡ್ಡಿ ಹಣವನ್ನು ಸರ್ಕಾರಕ್ಕೆ ಹಿಂತಿರುಗಿಸಬೇಕಾಗಿದೆ ಎಂದು ನೊಂದು ನುಡಿಯುವ ಸಂಶೋಧನಾನಿರತರು, ಮುಂಬರುವ ದಿನಗಳಲ್ಲಿ ಸಂಶೋಧನಾ ಕ್ಷೇತ್ರದ ಪ್ರತಿಭಾಪಲಾಯನ ದೊಡ್ಡ ರೀತಿಯಲ್ಲಿ ನಡೆದರೆ ಆಶ್ಚರ್ಯವಿಲ್ಲ ಎಂದಿದ್ದಾರೆ.

ಸಮಸ್ಯೆಯು ಹೆಚ್ಚಿನ ಪ್ರಮಾಣದಲ್ಲಿ ವಿಧಿಸುವ ಜಿಎಸ್‌ಟಿಯದಷ್ಟೇ ಅಲ್ಲ. ಭಾರತದಲ್ಲಿ ತಯಾರಾಗುವ ಉಪಕರಣಗಳನ್ನೇ ಸಂಶೋಧನೆಗೆ ಬಳಸುವುದನ್ನು ಕೇಂದ್ರ ಸರ್ಕಾರ ಕಡ್ಡಾಯ ಮಾಡಿದೆ. ಎಷ್ಟೋ ಸಲ ಜೆಮ್ (ಜಿಇಎಮ್– ಗವರ್ನಮೆಂಟ್ ಇ ಮಾರ್ಕೆಟ್ ಪ್ಲೇಸ್) ಮೂಲಕ ಖರೀದಿಸಿದ ಉಪಕರಣಗಳ ಗುಣಮಟ್ಟ ಉತ್ತಮವಾಗಿ ಇರುವುದಿಲ್ಲ, ಅವುಗಳಿಂದ ನಿರೀಕ್ಷಿತ ಫಲಿತಾಂಶ ಸಿಗುತ್ತಿಲ್ಲ ಎಂಬ ದೂರುಗಳಿವೆ. ನಮ್ಮಲ್ಲಿ ಸಂಶೋಧನೆಗಳಿಗೆ ಬೇಕಾದ ಉನ್ನತ ಕಾರ್ಯಕ್ಷಮತೆಯ ಉಪಕರಣಗಳು ತಯಾರಾಗುವುದೇ ಇಲ್ಲ, ಹೀಗಾಗಿ ಹೊರಗಿನವರ ಉಪಕರಣ ಅವಲಂಬಿಸದೇ ವಿಧಿಯಿಲ್ಲ ಎಂದು ಕೆಲವು ವಿಜ್ಞಾನಿಗಳು ಹೇಳುತ್ತಾರೆ.

ಚುರುಮುರಿ



ಕಾಲೆಳೆಯೋ ಕ್ವಶ್ಚನ್

• ತುರುವೇಕೆರೆ ಪ್ರಸಾದ್

ಹರಟೆಕಟ್ಟೇಲಿ ಮಾಮೂಲಿ ಪಟಾಲಂ ನೆರೆದಿತ್ತು. 'ಲೇಯ್, ನನ್ನ ಎಲ್ಲಾ ಪ್ರಶ್ನೆಗಳಿಗೆ ಉತ್ರ ಹೇಳುದ್ರೆ ಸಾಯಂಕಾಲ ನಾನ್ ಪಾರ್ಟಿ ಕೊಡುಸ್ತೀನಿ, ಇಲ್ಲ ಅಂದ್ರೆ ನೀವು ಕೊಡುಸ್ಬೇಕು' ಎಂದ ಪರ್ಮೇಶಿ.

'ಆಯ್ತು, ಅದೇನ್ ಮಹಾ ಬೇತಾಳ ಪ್ರಶ್ನೆನಾ? ಕೇಳೇಬಿಡು ನೋಡ್ತೀವಿ' ಎಂದು ಎಲ್ಲಾ ಕಿವಿ ನೆಟ್ಟಗೆ ಮಾಡಿಕೊಂಡರು.

'ಒದ್ದುಬಿಡ್ತೀನಿ ಅಂತ ಅವಾಗವಾಗ ಹೇಳೋರು ಯಾರು?'

'ನಾವೇ ಭಾರತೀಯರು' ಎಂದ ಕಲ್ಲೇಶಿ.

'ಝಾಡಿಸಿ ಒದಿ ಅಂತ ಹಾಡು ಹೇಳಿರೋರು ಯಾರು?'

'ಇನ್ಯಾರು? ನಮ್ಮ ಆಟೊರಾಜ ಶಂಕರನಾಗ್' ಎಂದ ಭದ್ರ.

'ವೆರಿಗುಡ್, ಬೇರೆಯವರ ಹತ್ತಿರ ಇರೋದನ್ನ ಏನಾದರೂ ಮಾಡಿ ಕಿತ್ಕೊಬೇಕು ಅನ್ನೋ ಆಸೆ ಇರೋದು ಯಾರಿಗೆ?'

'ಆಫ್‌ಕೋರ್ಸ್, ನಮಗೇ' ಒಪ್ಪಿಕೊಂಡ ಗುದ್ಲಿಂಗ.

'ಯಾರಾದರೂ ಮುಂದೆ ಹೋಗ್ತಾರೆ ಅಂದ್ರೆ ತೊಡರುಗಾಲು ಹಾಕೋರು ಯಾರು?'

'ಅನುಮಾನನೇ ಇಲ್ಲ, ನಾವೇನೆ!'

'ಪದೇ ಪದೇ ತಪ್ಪು ಮಾಡಿ ಪೆನಾಲ್ಟಿ ಕಟ್ಟೋರು ಯಾರು?'

'ಒಂದು ರೀತೀಲಿ ನಾವೇನೆ!'

'ನಮ್ಮನ್ನ ಕಾರ್ನರ್ ಮಾಡಿದಾರೆ ಅಂತ ಹಳಹಳಿಸೋರು ಯಾರು?'

'ನಾವೇ!'

'ವ್ಯವಸ್ಥೆಯಲ್ಲಿ ಒದ್ ಆಡೋರು, ಪದೇ ಪದೇ ಅಲ್ಲಿಂದಿಲ್ಲಿಗೆ ಕಿಕ್ ಮಾಡ್ತಾರೆ ಅಂತ ಗೋಳಾಡೋದು ಯಾರು?'

'ನಮ್ಮ ಅಧಿಕಾರಶಾಹಿ'.

'ಸಿಕ್ಕಾಪಟ್ಟೆ ಗೋಲ್‌ಮಾಲ್ ಮಾಡೋರು ಯಾರು?'

'ನಮ್ಮ ರಾಜಕೀಯದವರು!'

'ಇಷ್ಟೆಲ್ಲಾ ಅರ್ಹತೆ ಇದ್ರೂ ನಾವ್ಯಾಕೆ ವಿಶ್ವಕಪ್ ಫುಟ್‌ಬಾಲ್ ಆಡಲ್ಲ?'

ಏನು ಹೇಳುವುದೋ ತೋಚದೆ ಎಲ್ಲಾ ಮುಖ ಮುಖ ನೋಡಿಕೊಂಡರು. ಪಾರ್ಟಿ ಕೊಡುಸ್ದಿದ್ರೆ ಪರ್ಮೇಶಿ ಫುಟ್‌ಬಾಲ್ ಆಡ್ಬಿಡ್ತಾನೆ ಅಂತ ಎಲ್ಲಾ ಹ್ಯಾಪ್‌ಮೋರೆ ಹಾಕಿಕೊಂಡು ಜೇಬಲ್ಲಿದ್ದ ದುಡ್ಡು ಮುಟ್ಟಿ ನೋಡಿಕೊಂಡರು.

ಸಂಗತ

ಸಬಲೆಯ ಕಡವಲು ನೂರಾರು ಹತಾರ

ಮಹಿಳೆಯರು ಹಿಂಸೆಯಿಂದ ಹೊರಬರಲು, ಭಾವನಾತ್ಮಕತೆಯನ್ನು ಬದಿಗಿಟ್ಟು ಪ್ರಾಯೋಗಿಕವಾಗಿ ಯೋಚನೆ ಮಾಡುವುದು ಅತ್ಯಗತ್ಯ

• ಡಾ. ಕೆ.ಎಸ್.ಪವಿತ್ರ

ಮನೋವೈದ್ಯೆಯಾಗಿ ದುಡಿಯುತ್ತ 17 ವರ್ಷಗಳೇ ಕಳೆದಿವೆ. ವಿವಿಧ ರೀತಿಯ ಹಿಂಸೆಗಳಿಗೆ ಒಳಗಾಗಿ, ಖಿನ್ನತೆಯಿಂದ ನರಳುತ್ತ ಬರುವ ಹೆಣ್ಣುಮಕ್ಕಳನ್ನು ನೋಡುತ್ತ, ನೋಡುತ್ತ ಉತ್ತರವಿರದ ಹಲವು ಪ್ರಶ್ನೆಗಳು ನನ್ನನ್ನು ಕಾಡುತ್ತವೆ. ವೃತ್ತಿಜೀವನದ ಆರಂಭದ ದಿನಗಳಲ್ಲಿ, 'ನನ್ನ ಗಂಡ ಹೊಡೆಯುತ್ತಾರೆ' ಎಂಬ ಮಾತನ್ನು ಕೇಳಿದಾಕ್ಷಣ ನಾನು ಅವರ ಪತಿಯನ್ನು ಕರೆಸುತ್ತಿದ್ದೆ. ಹಾಗೆ ಹೊಡೆದರೆ ಇರುವ ಕಾನೂನಿನ ಶಿಕ್ಷೆಯ ಬಗ್ಗೆ ಅವರಿಗೆ ವಿವರಿಸುತ್ತಿದ್ದೆ. ಕೆಲವರು ಕೇಳುತ್ತಿದ್ದರು, ಮತ್ತೆ ಕೆಲವರು ವಾಪಸ್ ಹೋಗಿ 'ಹೊರಗೆ ಬೇರೆ ಹೋಗಿ ಹೇಳ್ತೀಯಾ' ಎಂದು ಹೆಂಡತಿಗೆ ಮತ್ತೆರಡು ಬಾರಿಸುತ್ತಿದ್ದರು! ಆಪ್ತಸಲಹೆ-ಚಿಕಿತ್ಸೆಯು ಸಮಸ್ಯೆಗಳನ್ನು ಕಡಿಮೆ ಮಾಡುವ ಬದಲು ಮತ್ತಷ್ಟು ಹೆಚ್ಚಿಸುತ್ತಿತ್ತು. ಕ್ರಮೇಣ ಹೆಣ್ಣಿನ ಮೇಲಿನ ಹಿಂಸೆಯ ವಿವಿಧ ಆಯಾಮಗಳು ನನಗೆ ಅರಿವಾಗತೊಡಗಿದವು.

ನೀರಿನ ಮೇಲೆ ಕಾಣುವ ಮಂಜುಗಡ್ಡೆಯ ಬಹುಭಾಗ ನೀರಿನ ಕೆಳಗೆ ಅಡಗಿ ಕುಳಿತಿರುತ್ತದಷ್ಟೆ. ಹಾಗೆಯೇ ಹೆಣ್ಣಿಗೆ ಸಂಬಂಧಿಸಿದ ಹಿಂಸೆಯ ಬಹುಮುಖಗಳೂ!

ಮಹಿಳೆಯರು ದೈಹಿಕ ಹಿಂಸೆಯ ಬಗ್ಗೆ ಧ್ವನಿ ಎತ್ತುವುದು ಬಲು ತಡವಾಗಿ. ಸಹಿಸಲು ಇನ್ನು ಅಸಾಧ್ಯ ಎನ್ನುವ ಸಂದರ್ಭದಲ್ಲಿ ಮಾತ್ರ. ಆರ್ಥಿಕತೆ, ಶಿಕ್ಷಣ, ಕಾನೂನು ಇವುಗಳಲ್ಲಿ ಯಾವುದರ ಬಲ ಇದ್ದರೂ ಕೆಲವೊಮ್ಮೆ ಮೌನಕ್ಕೆ ಶರಣಾಗುತ್ತಾರೆ. ಕಾರಣಗಳು ನಾಚಿಕೆ, ಸಮಾಜದಲ್ಲಿ ತಾನು ಕಳಂಕದ ಹಣೆಪಟ್ಟಿ ಹೊತ್ತು ತಲೆ ತಗ್ಗಿಸಬೇಕಾಗಬಹುದು ಎಂಬ ಹೆದರಿಕೆ. ವಸ್ತು ಕಳೆದಾಗ ತಪ್ಪು ಮಾಡಿದ ಕಳ್ಳ ತಲೆತಗ್ಗಿಸುವ ಬದಲು, ಕಳೆದುಕೊಂಡವನು ನಾಚಿಕೆ, ಅವಮಾನದಿಂದ ಕುಗ್ಗಿದಂತೆ!

ಹೆಣ್ಣು ಹೀಗೆ ಮೌನವಾಗಿರುವುದಕ್ಕೆ ಪ್ರಮುಖ ಕಾರಣ 'ಮಕ್ಕಳ'. ಮಹಿಳೆಗೆ ತನ್ನ ಮಕ್ಕಳ ಭವಿಷ್ಯ ಎನ್ನುವುದು ಎಷ್ಟು ಮುಖ್ಯವೆಂದರೆ, ಅದಕ್ಕೆ ತನ್ನ ಸಂತಸ, ಆರೋಗ್ಯವನ್ನೂ ಬಲಿ ಕೊಡುವಷ್ಟು. ಮಕ್ಕಳ ಭವಿಷ್ಯದ ಸುರಕ್ಷತೆ, ಮಕ್ಕಳು ನಾಳೆ ಕೇಳಬಹುದಾದ ಪ್ರಶ್ನೆಗಳು, ಹೆಣ್ಣುಮಕ್ಕಳ ಮದುವೆ ಮಾಡುವಾಗ ತಾಯಿಯು ಗಂಡನ ಜೊತೆಗೆ ಇರದೇ ಹೋದರೆ ಎದುರಿಸಬೇಕಾದ ಪ್ರಶ್ನೆಗಳು- ಇವು, ಹಿಂಸೆಯನ್ನು ಸತತವಾಗಿ ಅನುಭವಿಸುತ್ತಿದ್ದರೂ ಮಹಿಳೆಯರು ಹೊರಬರಲು ಯೋಚಿಸುವಂತೆ, ಹೆದರುವಂತೆ ಮಾಡುತ್ತವೆ.

ವಿಚಿತ್ರವೆಂದರೆ, ಹೀಗೆ ಮಕ್ಕಳ ಸಲುವಾಗಿ ತನ್ನ ಅಸ್ತಿತ್ವವನ್ನೇ ತ್ಯಾಗ ಮಾಡುವ ತಾಯಿಯನ್ನು ಬೆಳೆದ ಮಕ್ಕಳು ಅರ್ಥ ಮಾಡಿಕೊಳ್ಳದಿರುವುದು! ಅಂದರೆ ಸಮಾಜದ ರೂಢಿಗತ ಧೋರಣೆಯನ್ನೇ ತಮ್ಮದಾಗಿಸಿಕೊಳ್ಳುವ ಮಕ್ಕಳು ಬೆಳೆದ ಮೇಲೆ ತಾಯಿಯ ನಡವಳಿಕೆಯನ್ನು ದೂರುವುದು, ತಂದೆಯಿಂದ ಆಗಿರಬಹುದಾದ ಹಿಂಸೆಯನ್ನು 'ಗಂಭೀರವಾದದ್ದೇನಲ್ಲ' ಎಂಬಂತೆ ತಳ್ಳಿಹಾಕುವುದು ಸಾಮಾನ್ಯ. ಇಂಥ ಸಂದರ್ಭದಲ್ಲಿ ತಾಯಿಯ ಗೊಂದಲ, ನೋವು ಹೇಳತೀರದ್ದು.

ಯಾವುದೇ ರೀತಿಯ ಹಿಂಸೆಗೆ ಒಳಗಾಗುವ ಮಹಿಳೆಯರು ಅದನ್ನು ಹೊರಗೆ ಹೇಳದೇ, ವಿವಿಧ ನೋವು, ಗ್ಯಾಸ್ಟ್ರಿಕ್, ಖಿನ್ನತೆಯಂತಹ ಸಮಸ್ಯೆಗಳಿಗೆ ಬೇರೆ ಬೇರೆ ವೈದ್ಯರನ್ನು ನೋಡುತ್ತಾ ಕಾಯಂ ರೋಗಿ ಆಗಿಬಿಡಬಹುದು. ಒಂದೊಮ್ಮೆ ಹೇಳಿದರೂ, ಇತರ ವೈದ್ಯರಿಗಾಗಲೀ ಕುಟುಂಬ ವೈದ್ಯರಿಗಾಗಲೀ ಅದಕ್ಕೆ ಮಾಡುವುದೇನೆಂದು ಗೊತ್ತಿಲ್ಲ! ಹೆಚ್ಚೆಂದರೆ ಪತಿಯನ್ನು ಕರೆದು ಒಂದಿಷ್ಟು ಬುದ್ಧಿ ಹೇಳಬಹುದು. ಮನೋವೈದ್ಯರು 'ಹಿಂಸೆ' ಎಂಬ ಪ್ರಕ್ರಿಯೆಯ ಬಗ್ಗೆ ಮಾಹಿತಿಯನ್ನೇನೋ ಹೊಂದಿರುತ್ತಾರೆ. ಆದರೆ ಅದನ್ನು ನಿಭಾಯಿಸುವ ಪ್ರಾಯೋಗಿಕ ವ್ಯವಸ್ಥೆ ನಮ್ಮ ಸಮಾಜದಲ್ಲಿ ಸರಳವಾಗಿಲ್ಲ. ಹಾಗಾಗಿ ಹೆಣ್ಣಿನ ತಂದೆ-ತಾಯಿ, ಪೊಲೀಸ್, ಕಾನೂನು, ಕೊನೆಗೆ ಇವರೊಂದಿಗೆ ವೈದ್ಯರು ಎಲ್ಲರೂ ಸೇರಿ ಹಿಂಸೆ ಅನುಭವಿಸುತ್ತಿರುವ ಹೆಣ್ಣಿಗೆ ಹೇಳುವ ಮಾತು 'ಹೊಂದಿಕೊಂಡು, ಸುಧಾರಿಸಿಕೊಂಡು ಹೋಗಬೇಕಮ್ಮಾ!'

ಹಾಗಿದ್ದರೆ ಹಿಂಸೆಯನ್ನು ತಡೆಯುವ, ಹೊರಬರುವ ದಾರಿಯೇ ಇಲ್ಲವೇ?! 'ಸಬಲತೆ' ಎನ್ನುವುದು ಮಹಿಳೆಯ ಒಳಗಿನಿಂದ ಬರಬೇಕು. ತತ್‌ಕ್ಷಣ ನಿಮಗೆ ಇಂಥದ್ದೇ ಪರಿಹಾರ ಎಂಬುದನ್ನು ಕೊಡಲು ಸಾಧ್ಯವಾಗದಿರಬಹುದು. ಆದರೆ 'ನಡೆಯುತ್ತಿರುವುದು ತಪ್ಪು' ಎಂಬುದನ್ನು ದೃಢವಾಗಿ ಹೇಳುವ ಕೆಲಸವನ್ನು ವೈದ್ಯರು- ಆತ್ಮೀಯರು- ಆಪ್ತ ಸಲಹಾಕಾರರು ಮಾಡಬೇಕು.

ಹಿಂಸೆಯ ವಾತಾವರಣದಲ್ಲಿ ಬೆಳೆಯುವ ಮಕ್ಕಳು ತಾವೂ ಹಿಂಸಾತ್ಮಕ ಪ್ರವೃತ್ತಿ ಅನುಸರಿಸಬಹುದು ಅಥವಾ ಮದುವೆಯ ಬಗ್ಗೆ ಒಂದು ರೀತಿಯ ನಕಾರಾತ್ಮಕ ಭಾವನೆ ಬೆಳೆಸಿಕೊಳ್ಳಬಹುದು ಎಂಬುದನ್ನು ತಾಯಿ ಅರಿತುಕೊಳ್ಳಬೇಕಾದುದು ಬಹುಮುಖ್ಯ. ಮೊದಲು ದೈಹಿಕ ಹಿಂಸೆಗೆ ಲಗಾಮು ಹಾಕಬೇಕು. ಪತಿ ಮದ್ಯವ್ಯಸನಿಯಾಗಿದ್ದರೆ ಮತ್ತು ಅದರಿಂದಾಗಿ ಹಿಂಸೆ ನೀಡುತ್ತಿದ್ದರೆ ಚಿಕಿತ್ಸೆ ಪಡೆಯಲು ಆಗ್ರಹಿಸಬೇಕು. ಚಿಕಿತ್ಸೆ ಸಾಧ್ಯವಾಗದಿದ್ದರೆ ಕ್ರಮೇಣ ತನ್ನ ಮನಸ್ಸನ್ನು ಗಟ್ಟಿಯಾಗಿ ರೂಪಿಸಿಕೊಂಡು, ಬೆಂಬಲವನ್ನು ಒಟ್ಟು ಹಾಕಿ ಹೊರಬರುವ ಪ್ರಯತ್ನ ಮಾಡಬೇಕು. ಈ ಹಂತದಲ್ಲಿ ಭಾವನಾತ್ಮಕತೆಯನ್ನು ಬದಿಗಿಟ್ಟು ಪ್ರಾಯೋಗಿಕವಾಗಿ ಯೋಚನೆ ಮಾಡಿ ಮಕ್ಕಳ ಭವಿಷ್ಯದ ಜೊತೆಗೆ ತನ್ನ ವೈಯಕ್ತಿಕ ಭವಿಷ್ಯವನ್ನೂ ಯೋಜಿಸಿಕೊಳ್ಳುವುದು ಅತ್ಯಗತ್ಯ. ಈ ದಿಸೆಯಲ್ಲಿ ಜಾಗೃತಿ ಮೂಡಿಸುವುದು, ಮಹಿಳೆಯರ ಮೇಲಿನ ದೌರ್ಜನ್ಯ ನಿರ್ಮೂಲನೆಗಾಗಿನ ಅಂತರರಾಷ್ಟ್ರೀಯ ದಿನಾಚರಣೆಯ (ನ. 25) ಮುಖ್ಯ ಉದ್ದೇಶ.

ಲೇಖಕಿ: ಮನೋವೈದ್ಯೆ

ವಾಚಕರ ವಾಣಿ

ಅಧಿಕಾರಿಗಳಿಗೆ ಬೇಡವೇ ಕೆರೆಯ ನೀರು?

ಯಾವುದೇ ಸಮಾವೇಶ ಅಥವಾ ಗ್ರಾಮ ವಾಸ್ತವ್ಯದಂತಹ ಕಾರ್ಯಕ್ರಮಗಳಿಗೆ ಶಾಸಕರು, ಅಧಿಕಾರಿಗಳು ಬರುತ್ತಾರೆಂದರೆ ಎಲ್ಲಿಲ್ಲದ ಉತ್ಸಾಹ ಕಂಡುಬರುತ್ತದೆ. ಅಲ್ಲಿ ಜನರು ಸಮಸ್ಯೆಗೆ ಪರಿಹಾರ ಕೇಳಿದಾಗ, ಅವರ ಕೆಲಸ ಖಂಡಿತ ಆಗುತ್ತದೆ ಎಂಬ ಭರವಸೆಯ ಮಾತುಗಳು ಕೇಳಿಬರುತ್ತವೆ. ಆದರೆ ಅವುಗಳಲ್ಲಿ ಕೆಲವು ಕಾರ್ಯರೂಪಕ್ಕೆ ಬಂದರೆ ಇನ್ನು ಕೆಲವು ಹಾಗೇ ಉಳಿದುಬಿಡುತ್ತವೆ.

ಬಾಗಲಕೋಟೆ ಜಿಲ್ಲೆಯ ಇಳಕಲ್ ತಾಲ್ಲೂಕಿನ ಚಿಕ್ಕ ಆದಾಪುರ ಗ್ರಾಮದಲ್ಲಿ 'ಡಿ.ಸಿ ನಡೆ ಹಳ್ಳಿ ಕಡೆ' ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಅವರಿಗೆ ಗ್ರಾಮಸ್ಥರು ಕೆರೆಯ ನೀರನ್ನು ಕುಡಿಯಲು ಕೊಟ್ಟಾಗ ಅವರು, 'ಇಲ್ಲ, ನಾನು ಬಿಸ್ಲೇರಿ ನೀರು ಕುಡಿದಿದ್ದೇನೆ' ಎಂದರು. ಏಕೆಂದರೆ, ಹಳ್ಳಿಯ ಕೆರೆಯ ನೀರು ಶುದ್ಧವಾಗಿರಲಿಲ್ಲ. ಹೀಗಿರುವಾಗ ಅಲ್ಲಿ ವಾಸಿಸುವ ಜನಸಾಮಾನ್ಯರ ಪರಿಸ್ಥಿತಿ ಹೇಗಿರಬಹುದು ಎಂಬುದನ್ನು ಯೋಚಿಸಬೇಕು. ಗ್ರಾಮಕ್ಕೆ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆಗೆ ಸ್ಥಳೀಯರು ಈ ಹಿಂದೆ ಬೇಡಿಕೆ ಇಟ್ಟಿದ್ದರು. ಆದರೂ ಪ್ರಯೋಜನವಾಗಿಲ್ಲ. ಇಂತಹ ಕಾರ್ಯಕ್ರಮಗಳು ದಿನದ ಸಡಗರವಾಗದೆ ಸ್ಥಳೀಯರ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದಕ್ಕೆ ಪೂರಕವಾಗಿ ಇರಬೇಕು.

ಆನಂದ ಜೇವೂರ್, ಕಲಬುರಗಿ

ಕೇಬಲ್ ಮಾಫಿಯಾ: ಇದೆ ದೂರು ಕೋಶ

ಕೇಬಲ್ ಮಾಫಿಯಾದ ಕಪಿಮುಷ್ಟಿ ಕುರಿತು ಮುಳ್ಳೂರು ಪ್ರಕಾಶ್ ಅವರು ಬರೆದಿದ್ದಾರೆ (ವಾ.ವಾ., ನ. 23). ಕೇಬಲ್ ಚಾನೆಲ್, ಸಂಸ್ಥೆಗಳು ಹಾಗೂ ಆಪರೇಟರ್‌ಗಳ ನಿಯಂತ್ರಣಕ್ಕೆ ಕೇಬಲ್ ಟೆಲಿವಿಷನ್ ನೆಟ್‌ವರ್ಕ್ (ರೆಗ್ಯುಲೇಷನ್) ಕಾಯ್ದೆ ಜಾರಿಯಲ್ಲಿದೆ. ಇದು ಟಿ.ವಿ ಚಾನೆಲ್‌ಗಳನ್ನು ಹೊಂದಿರುವ ಸಂಸ್ಥೆಗಳು ಹಾಗೂ ನಿರ್ವಾಹಕರ ಕಾರ್ಯವೈಖರಿಯನ್ನು ನಿಯಂತ್ರಿಸುತ್ತದೆ. ಈ ಕಾಯ್ದೆಯ ಅನುಷ್ಠಾನಕ್ಕೆ ಪ್ರತೀ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಮೇಲ್ವಿಚಾರಣಾ ಸಮಿತಿ ಇದೆ. ಆಯಾ ಜಿಲ್ಲೆಯ ವಾರ್ತಾ ಇಲಾಖೆಯ ಅಧಿಕಾರಿಗಳು ಈ ಸಮಿತಿಯ ಕಾರ್ಯದರ್ಶಿಯಾಗಿರುತ್ತಾರೆ.

ವಾರ್ತಾ ಇಲಾಖೆಯ ಜಿಲ್ಲಾ ಕಚೇರಿಗಳಲ್ಲಿ ಕೇಬಲ್ ಟಿ.ವಿ ದೂರು ಕೋಶ ಇದೆ. ಸಾರ್ವಜನಿಕರು ಕೇಬಲ್ ಚಾನೆಲ್, ಕೇಬಲ್ ಆಪರೇಟರ್, ಮಾಫಿಯಾಕ್ಕೆ ಸಂಬಂಧಿಸಿದ, ಅಧಿಕ ಶುಲ್ಕ ವಸೂಲಿ, ಉಚಿತ ಚಾನೆಲ್‌ಗಳನ್ನು ನೀಡದಿರುವುದು, ಸರಿಯಾದ ಸೇವೆ ನೀಡದಿರುವುದು, ಕೇಬಲ್ ಸಂಪರ್ಕ ಸರಿಯಾಗಿ ಇಲ್ಲದಿರುವುದು, ಕೇಬಲ್ ಸಮಸ್ಯೆಗಳಿಗೆ ಕೇಬಲ್ ಆಪರೇಟರ್‌ಗಳು ಸ್ಪಂದಿಸದಿರುವುದು ಸೇರಿದಂತೆ ಯಾವುದೇ ದೂರುಗಳನ್ನು ಇಲ್ಲಿ ನೀಡಬಹುದು. ಜಿಲ್ಲಾಧಿಕಾರಿ ನೇತೃತ್ವದ ಸಮಿತಿಯು ಆಗಿಂದಾಗ್ಗೆ ಸಭೆ ನಡೆಸಿ, ದೂರುಗಳನ್ನು ಪರಿಶೀಲಿಸುತ್ತದೆ. ರಾಜ್ಯ ಮಟ್ಟದಲ್ಲೂ ಈ ಕಾಯ್ದೆಯ ಅನುಷ್ಠಾನಕ್ಕೆ ಸಮಿತಿ ಇದೆ. ಸಾರ್ವಜನಿಕರು ಕೇಬಲ್ ಟಿ.ವಿ ಚಾನೆಲ್, ಕೇಬಲ್ ಆಪರೇಟರ್‌ಗಳಿಗೆ ಸಂಬಂಧಿಸಿದ ದೂರುಗಳನ್ನು ನೀಡಲು ಈ ಅವಕಾಶವನ್ನು ಬಳಸಿಕೊಳ್ಳಬಹುದು.

ಅಬ್ದುಲ್ ಖಾದರ್, ಬೆಂಗಳೂರು

ಲಿಂಗಾನುಪಾತ ಅಸಮತೋಲನ: ಜಾಗೃತಿಯೇ ಪರಿಹಾರ

ಮದುವೆಯಾಗಲು ಹೆಣ್ಣು ಸಿಗದೇ ರೋಸಿಹೋದ ಕುಂದಗೋಳದ ಯುವಕರು, ಅವಿವಾಹಿತ ಯುವಕರಿಗೆ ಹೆಣ್ಣು ಕೊಡಲು ಹೆಣ್ಣುಮಕ್ಕಳ ಪೋಷಕರ ಮನವೊಲಿಸುವಂತೆ ಅಲ್ಲಿನ ತಹಶೀಲ್ದಾರ್‌ಗೆ ಮನವಿ ಮಾಡಿದ್ದಾರೆ. ಕಳೆದ ವಾರ ಚುಂಚನಗಿರಿಯಲ್ಲಿ ವಧು– ವರರ ಸಂಪರ್ಕ ಸಭೆ ಏರ್ಪಡಿಸಲಾಗಿತ್ತು. ಅಲ್ಲಿ ಯುವಕರ ಜಾತ್ರೆಯೇ ನಡೆದಿತ್ತು. 'ಜಿಲ್ಲಾಧಿಕಾರಿ ನಡೆ ಹಳ್ಳಿ ಕಡೆ' ಕಾರ್ಯಕ್ರಮದಲ್ಲಿ ಹಿಂದಿನ ವರ್ಷ ಚಿಕ್ಕನಾಯಕನಹಳ್ಳಿ ತಹಶೀಲ್ದಾರ್ ಅವರಿಗೂ ಯುವಕರು ಅರ್ಜಿ ಸಲ್ಲಿಸಿದ್ದರು.

ಈ ಪ್ರಕರಣಗಳನ್ನು ಗಮನಿಸಿದಾಗ, ನಿಗದಿತ ವಯೋಮಾನದ ಮಿತಿಯಲ್ಲಿ ಯುವಕರು ಮದುವೆಯಾಗಲು ಹೆಣ್ಣು ಸಿಗದೇ ಪರದಾಡುತ್ತಿರುವುದು ಬೆಳಕಿಗೆ ಬರುತ್ತಿದೆ. ಮದುವೆ ವಯಸ್ಸಿನ ಯುವಕ ಯುವತಿಯರಲ್ಲಿನ ಲಿಂಗಾನುಪಾತದ ಅಸಮತೋಲನವೇ ಈ ಸಮಸ್ಯೆಗೆ ಕಾರಣ. ಉದಾಹರಣೆಗೆ, ತುಮಕೂರು ಜಿಲ್ಲೆಯಲ್ಲಿ ಒಂದರಿಂದ ಆರನೇ ವಯಸ್ಸಿನ ಮಕ್ಕಳ ಲಿಂಗಾನುಪಾತದಲ್ಲಿ ಒಂದು ಸಾವಿರ ಗಂಡು ಮಕ್ಕಳಿಗೆ 958 ಹೆಣ್ಣು ಮಕ್ಕಳಿರುವುದು ಆತಂಕಕಾರಿಯಾಗಿದೆ. ರಾಜ್ಯದ ಒಂದೆರಡು ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಜಿಲ್ಲೆಗಳ ಲಿಂಗಾನುಪಾತ ಆಶಾದಾಯಕವಾಗಿಲ್ಲ. ವಂಶೋದ್ಧಾರಕ ಗಂಡು ಎಂಬ ವ್ಯಾಮೋಹ, ಭ್ರೂಣ ಹತ್ಯೆಯಂತಹ ಕಾರಣಗಳಿಂದ ಹೆಣ್ಣುಮಕ್ಕಳ ಸಂಖ್ಯೆ ಕಡಿಮೆಯಾಗಿರುವುದೇ ಇಂದು ಯುವಕರಿಗೆ ಮದುವೆಯಾಗಲು ಹೆಣ್ಣು ಸಿಗದಿರುವುದಕ್ಕೆ ಕಾರಣವಾಗಿದೆ. ಹೀಗಾಗಿ ಇಂತಹ ಸ್ಥಿತಿಗೆ ಸರ್ಕಾರ ಮತ್ತು ಸಮಾಜ ಹೊಣೆಯಲ್ಲ. ನಮ್ಮ ಕುಟುಂಬದಲ್ಲಿಯೂ ಹೆಣ್ಣು ಮಗುವಿರಲಿ ಎಂಬ ಮನೋಭಾವ ಕುಟುಂಬಗಳಿಗೆ ಬರದ ವಿನಾ ಸಮಸ್ಯೆ ಪರಿಹಾರವಾಗುವುದಿಲ್ಲ.

ಲಕ್ಷ್ಮೀಕಾಂತರಾಜು ಎಂ.ಜಿ., ಮಠಗ್ರಾಮ, ಗುಬ್ಬಿ

ಗೋಸಂರಕ್ಷಣೆ: ಸ್ವಯಂಸೇವಕರ ನೇಮಕವಾಗಲಿ

ಈಗಾಗಲೇ ರಾಜ್ಯದಾದ್ಯಂತ ವ್ಯಾಪಿಸಿ ಸಾವಿರಾರು ಸಂಖ್ಯೆಯಲ್ಲಿ ಜಾನುವಾರುಗಳನ್ನು ಬಲಿ ಪಡೆದಿರುವ ಚರ್ಮಗಂಟು ರೋಗಕ್ಕೆ ಸಂಬಂಧಿಸಿದಂತೆ ಸರ್ಕಾರವು ಸಕಾಲಿಕವಾಗಿ ಸಮರ್ಪಕ ಕ್ರಮಗಳನ್ನು ಕೈಗೊಳ್ಳದೇ ಇರುವುದನ್ನು ಪಶುಸಂಗೋಪನಾ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯ ವರದಿ (ಪ್ರ.ವಾ., ನ. 22) ಎತ್ತಿತೋರಿಸುವಂತಿದೆ. ರೋಗವನ್ನು ನಿಯಂತ್ರಿಸಲು ಲಸಿಕೆಯಿದ್ದಾಗ್ಯೂ ಅದನ್ನು ಖರೀದಿಸಿ ದಾಸ್ತಾನು ಇರಿಸಿಕೊಂಡಿದ್ದಾಗ್ಯೂ ಲಸಿಕೆ ಹಾಕಲು ಅಗತ್ಯ ಸಿಬ್ಬಂದಿಯ ಕೊರತೆ ಇದೆ ಎಂದು ಅಧಿಕಾರಿಗಳು ಹೇಳುತ್ತಾರೆ ಎಂದರೆ ಇದಕ್ಕೆ ಏನು ಹೇಳಬೇಕೋ!

ಗೋಸಂರಕ್ಷಣೆಯ ಕುರಿತು ನಮ್ಮ ನಾಯಕರು ಅತಿಯಾದ ಕಾಳಜಿ ವ್ಯಕ್ತಪಡಿಸುತ್ತಾರೆ. ಆದರೂ ಯಾಕಿಷ್ಟು ನಿರ್ಲಕ್ಷ್ಯ? ಗೋವು ರಾಜಕೀಯ ಅಸ್ತ್ರ ಮಾತ್ರವೇ? ಸರ್ಕಾರ ಈ ಕೂಡಲೇ ಅಗತ್ಯ ಸ್ವಯಂಸೇವಕರನ್ನು ನೇಮಕ ಮಾಡಿಕೊಳ್ಳಲು ವೈದ್ಯಾಧಿಕಾರಿಗಳಿಗೆ ಅನುಮತಿ ನೀಡಬೇಕು ಮತ್ತು ರೋಗ ನಿಯಂತ್ರಣ ಸಾಧಿಸಬೇಕು. ಈ ಹೊತ್ತಿಗೂ ನಮ್ಮ ಕೃಷಿಕ್ಷೇತ್ರದ, ಅಪಾರ ಶ್ರಮವನ್ನು ನಿಭಾಯಿಸುತ್ತಿರುವ ಜಾನುವಾರುಗಳು ರೈತಾಪಿ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಸಂಬಂಧಿಸಿದವರೆಲ್ಲರೂ ಇಚ್ಛಾಶಕ್ತಿ ತೋರಿದರೆ ಖಂಡಿತ ರೋಗ ನಿಯಂತ್ರಣವಷ್ಟೇ ಅಲ್ಲ, ನಿರ್ಮೂಲನೆಯೂ ಸಾಧ್ಯ.

ಅಯ್ಯಪ್ಪ ಹೂಗಾರ್, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸುಳ್ಳು ಪತ್ತೆ ಪರೀಕ್ಷೆಗಳ ಸುತ್ತ

ಸುಳ್ಳು ಪತ್ತೆ ಪರೀಕ್ಷೆ ಮತ್ತೆ ಸುದ್ದಿಯಲ್ಲಿದೆ. ದೆಹಲಿಯ ಶ್ರದ್ಧಾ ವಾಲಕರ್ ಹತ್ಯೆ ಆರೋಪಿ ಅಫ್ತಾಬ್‌ನನ್ನು ತನಿಖಾಧಿಕಾರಿಗಳು ಮಂಗಳವಾರ ಸಂಜೆಯಷ್ಟೇ ಪಾಲಿಗ್ರಫಿ ಪರೀಕ್ಷೆಗೆ ಒಳಪಡಿಸಿದ್ದಾರೆ. ಗುರುವಾರ ಆತನನ್ನು ಮಂಪರು ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಈ ಸ್ವರೂಪದ ಸುಳ್ಳು ಪತ್ತೆ ಪರೀಕ್ಷೆಗಳಿಂದ ಕಲೆಹಾಕಿದ ಮಾಹಿತಿಗಳನ್ನು ಆರೋಪಿಯ ವಿರುದ್ಧ ಸಾಕ್ಷ್ಯ ಎಂದು ಪರಿಗಣಿಸಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಈಗಾಗಲೇ ಹಲವು ಪ್ರಕರಣಗಳಲ್ಲಿ ತೀರ್ಪಿತ್ತಿದೆ. ಹೀಗಾಗಿ ಇಂತಹ ಪರೀಕ್ಷೆಗಳನ್ನು ತನಿಖೆಗೆ ಪೂರಕವಾಗಿಯಷ್ಟೇ ಬಳಸಲಾಗುತ್ತದೆ. ಇಂತಹ ಪರೀಕ್ಷೆಗಳಿಗೆ ಸಂಬಂಧಿಸಿದ ಮಾರ್ಗಸೂಚಿಗಳೂ ಇದನ್ನೇ ಹೇಳುತ್ತವೆ

ಪ್ರಜಾವಾಣಿ ವಾರ್ತೆ

ಸುಳ್ಳು ಪತ್ತೆ ಪರೀಕ್ಷೆಗಳನ್ನು ತನಿಖೆಯ ಭಾಗವಾಗಿ ನಡೆಸಲಾಗುತ್ತದೆ. ಬಹುತೇಕ ಸಂದರ್ಭದಲ್ಲಿ ಈ ಪರೀಕ್ಷೆಗಳು ಸರಿಯಾದ ಮಾಹಿತಿಯನ್ನು ಕಲೆಹಾಕಲು ನೆರವಾಗುತ್ತವೆ. ಆದರೆ, ತನಿಖಾಧಿಕಾರಿಗಳು ಇಂತಹ ಪರೀಕ್ಷೆಗಳನ್ನು ತಿರುಚುವ ಮತ್ತು ಆರೋಪಿಗಳೂ ಇಂತಹ ಪರೀಕ್ಷೆಯನ್ನು ಏಮಾರಿಸುವ ಸಾಧ್ಯತೆ ಇರುತ್ತದೆ. ಸುಳ್ಳು ಪತ್ತೆ ಪರೀಕ್ಷೆಗಳಿಗೆ ಸಂಬಂಧಿಸಿದ ಮಾರ್ಗಸೂಚಿಗಳ ಪೂರ್ವಪೀಠಿಕೆಯಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಹೇಳಿರುವ ಮಾತಿದು. ವೈಜ್ಞಾನಿಕವಾಗಿ ಇವು ಸಾಬೀತಾದ ತನಿಖಾ ಮಾರ್ಗಗಳಾದರೂ, ಈ ಪರೀಕ್ಷೆಗಳಲ್ಲಿ ದೊರೆತ ಮಾಹಿತಿಯನ್ನು ಆರೋಪಿಯ ವಿರುದ್ಧ ಸಾಕ್ಷ್ಯ ಎಂದು ಪರಿಗಣಿಸಲು ನಮ್ಮ ಸಂವಿಧಾನವು ಅವಕಾಶ ನೀಡುವುದಿಲ್ಲ. ಹೀಗಾಗಿ, ಈ ಪರೀಕ್ಷೆಗಳಿಂದ ಕಲೆಹಾಕಲಾದ ಮಾಹಿತಿಯನ್ನು ಭಾರತದ ನ್ಯಾಯಾಲಯಗಳು ಸಾಕ್ಷ್ಯ ಎಂದು ಪರಿಗಣಿಸುವುದಿಲ್ಲ.

ಭಾರತದ ಯಾವುದೇ ಪ್ರಜೆ ತನ್ನ ವಿರುದ್ಧ ತಾನೇ ಸಾಕ್ಷ್ಯ ನುಡಿಯಲು ಅಥವಾ ಸಾಕ್ಷಿಯಾಗಲು ಸಂವಿಧಾನದ 21(3)ನೇ ವಿಧಿಯು ಅವಕಾಶ ನೀಡುವುದಿಲ್ಲ. ಈ ಕಾರಣದಿಂದಲೇ ಪೊಲೀಸರ ತನಿಖೆಯ ಸಂದರ್ಭದಲ್ಲಿ ಆರೋಪಿ ನೀಡಿದ ಹೇಳಿಕೆಯನ್ನು ಆತನ ವಿರುದ್ಧವೇ ಸಾಕ್ಷ್ಯ ಎಂದು ಬಳಸಲು ಅವಕಾಶವಿಲ್ಲ. ಭಾರತೀಯ ಸಾಕ್ಷ್ಯ ಕಾಯ್ದೆ ಸಹ ಇದನ್ನೇ ಹೇಳುತ್ತದೆ. ಹೀಗಿದ್ದೂ ಹಲವು ಪ್ರಕರಣಗಳಲ್ಲಿ ತನಿಖಾಧಿಕಾರಿಗಳು ಸುಳ್ಳು ಪತ್ತೆ ಪರೀಕ್ಷೆಗಳನ್ನು ನಡೆಸುತ್ತಾರೆ.



ಸುಳ್ಳು ಪತ್ತೆ ಪರೀಕ್ಷೆಯಲ್ಲಿ ಕಲೆಹಾಕಲಾದ ಮಾಹಿತಿಯನ್ನು ನ್ಯಾಯಾಲಯಗಳು, ‘ತಜ್ಞರ ಅಭಿಪ್ರಾಯ’ ಎಂದಷ್ಟೇ ಪರಿಗಣಿಸುತ್ತದೆ. ಆದರೆ, ಈ ಮಾಹಿತಿಗಳನ್ನು ಬಳಸಿಕೊಂಡು ತನಿಖೆ ಮುಂದುವರಿಸಲು ಪೊಲೀಸರು ಅಥವಾ ತನಿಖಾಧಿಕಾರಿಗಳಿಗೆ ಅವಕಾಶವಿದೆ. ಉದಾಹರಣೆಗೆ, ಕೊಲೆ ಪ್ರಕರಣವೊಂದರಲ್ಲಿ ಬಂಧಿಸಲಾದ ಆರೋಪಿಯೊಬ್ಬ ಹತ್ಯೆಗೆ ಬಳಸಿದ ಆಯುಧದ ಬಗ್ಗೆ ವಿಚಾರಣೆಯಲ್ಲಿ ಮಾಹಿತಿ ನೀಡುತ್ತಿಲ್ಲ. ಅಂತಹ ಸಂದರ್ಭದಲ್ಲಿ ತನಿಖಾಧಿಕಾರಿಗಳು ಸುಳ್ಳು ಪತ್ತೆ ಪರೀಕ್ಷೆಗಳನ್ನು ನಡೆಸುತ್ತಾರೆ. ಆಯುಧವನ್ನು ಇಂತಲ್ಲಿ ಬಿಸಾಡಿದ್ದೇನೆ ಅಥವಾ ಬಚ್ಚಿಟ್ಟಿದ್ದೇನೆ ಎಂದು ಆರೋಪಿ ಮಾಹಿತಿ ನೀಡಿದರೆ, ಅದರ ಆಧಾರದಲ್ಲಿ ತನಿಖಾಧಿಕಾರಿಗಳು ಹುಡುಕಾಟ ನಡೆಸುತ್ತಾರೆ. ಅಲ್ಲಿ ಆಯುಧ ದೊರೆತರೆ ಆರೋಪಿಯ ವಿರುದ್ಧ ಅದನ್ನು ಸಾಕ್ಷ್ಯ ಎಂದು ಪರಿಗಣಿಸಲು ಸಾಧ್ಯವಾಗುತ್ತದೆ.

ಗೊತ್ತೇ ಇಲ್ಲದ ಮಾಹಿತಿಯನ್ನು ಈ ಪರೀಕ್ಷೆಗಳ ಮೂಲಕ ಪತ್ತೆ ಮಾಡಲು ಸಾಧ್ಯವಿಲ್ಲ. ಪೊಲೀಸರಿಗೆ ಗೊತ್ತಿರುವ ಅಲ್ಪಸ್ವಲ್ಪ ಮಾಹಿತಿಯನ್ನೇ ಸ್ಪಷ್ಟಪಡಿಸಿಕೊಳ್ಳಲು ಈ ಪರೀಕ್ಷೆಗಳು ನೆರವಾಗುತ್ತವೆ. ಇದು ಈ ಪರೀಕ್ಷೆಗೆ ಇರುವ ದೊಡ್ಡ ಮಿತಿ. ಹೀಗಿದ್ದೂ, ದೇಶದಲ್ಲಿ ಹಲವು ಪ್ರಕರಣಗಳನ್ನು ಇತ್ಯರ್ಥಪಡಿಸುವಲ್ಲಿ ಇವು ನೆರವಾಗಿವೆ.

ಪರೀಕ್ಷೆಗಳ ವಿಧಗಳು

- **ಪಾಲಿಗ್ರಫಿ ಪರೀಕ್ಷೆ:** ಪಾಲಿಗ್ರಫಿ ಯಂತ್ರದ ಮೂಲಕ ಈ ಪರೀಕ್ಷೆ ನಡೆಸಲಾಗುತ್ತದೆ. ಪರೀಕ್ಷೆಗೆ ಒಳಪಡುವ ವ್ಯಕ್ತಿಯ ದೇಹದಲ್ಲಿ ರಕ್ತದ ಒತ್ತಡದಲ್ಲಿ ಆಗುವ ಏರುಪೇರನ್ನು ಆಧರಿಸಿ ಆತ ಸುಳ್ಳು ಹೇಳುತ್ತಿದ್ದಾನೆಯೇ ಅಥವಾ ಸತ್ಯ ಹೇಳುತ್ತಿದ್ದಾನೆಯೇ ಎಂಬುದನ್ನು ನಿರ್ಧರಿಸಲಾಗುತ್ತದೆ. ಸುಳ್ಳು ಪತ್ತೆ ಪರೀಕ್ಷೆಗಳಲ್ಲಿ ಇದು ಅತ್ಯಂತ ಹಳೆಯ ವಿಧಾನ
- **ಮಂಪರು ಪರೀಕ್ಷೆ:** ಈ ಪರೀಕ್ಷೆಗೆ ಒಳಪಡುವ ವ್ಯಕ್ತಿಯ ದೇಹಕ್ಕೆ ವಿವಿಧ ರಾಸಾಯನಿಕಗಳನ್ನು ಸೇರಿಸುವ ಮೂಲಕ, ಆತನಿಂದ ಮಾಹಿತಿ ಹೆಕ್ಕುವ ವಿಧಾನವಿದು. ವ್ಯಕ್ತಿಯನ್ನು ಅರೆಪ್ರಜ್ಞಾವಸ್ಥೆಗೆ ದೂಡಲಾಗುತ್ತದೆ. ಆತ ಪೂರ್ಣ ಪ್ರಜ್ಞೆ ಕಳೆದುಕೊಳ್ಳುವುದನ್ನು ತಡೆಯುವ ಉದ್ದೇಶದಿಂದ ಕಪಾಲಕ್ಕೆ ಬಾರಿಸುವುದು, ಚಿವುಟುವುದು, ಬಡಿಯುವುದನ್ನು ಮಾಡಲಾಗುತ್ತದೆ. ಇದು ಹೆಚ್ಚು ಹಿಂಸಾತ್ಮಕವಾದ ಸುಳ್ಳು ಪತ್ತೆ ಪರೀಕ್ಷೆಯಾಗಿದೆ. ಆದರೆ, ಇದರಲ್ಲಿ ಪಡೆಯುವ ಮಾಹಿತಿ ಸತ್ಯಕ್ಕೆ ಹತ್ತಿರವಾಗಿರುತ್ತವೆ ಎಂದು ನಂಬಲಾಗಿದೆ
- **ಬ್ರೈನ್ ಮ್ಯಾಪಿಂಗ್:** ಪರೀಕ್ಷೆಗೆ ಒಳಪಡುವ ವ್ಯಕ್ತಿಯ ಮಿದುಳಿನಲ್ಲಿ ಆಗುವ ಬದಲಾವಣೆಗಳನ್ನು ವಿಶ್ಲೇಷಿಸಲಾಗುತ್ತದೆ. ಆತ ಸುಳ್ಳು ಹೇಳುತ್ತಿದ್ದಾನೆಯೇ ಅಥವಾ ಸತ್ಯ ಹೇಳುತ್ತಿದ್ದಾನೆಯೇ ಎಂಬುದನ್ನು ಆ ಬದಲಾವಣೆಗಳ ಆಧಾರದಲ್ಲಿ ನಿರ್ಧರಿಸಲಾಗುತ್ತದೆ. ಸುಳ್ಳು ಪತ್ತೆ ಪರೀಕ್ಷೆಗಳಲ್ಲೇ ಇದು ಅತ್ಯಂತ ಅಹಿಂಸಾತ್ಮಕವಾದ ಮತ್ತು ಹೆಚ್ಚು ಕರಾರುವಕ್ಕಾದ ಪರೀಕ್ಷೆ ಎನಿಸಿದೆ
- ಈ ಎಲ್ಲಾ ಪರೀಕ್ಷೆಗಳಲ್ಲೂ ಆರೋಪಿಗಳು ತಜ್ಞರನ್ನು ಹಾದಿತಪ್ಪಿಸಲು ಅವಕಾಶವಿದೆ. ಪ್ರಬಲ ಇಚ್ಛಾಶಕ್ತಿ ಇರುವವರು, ಸದಾ ಸುಳ್ಳು ಹೇಳುವ ಅಭ್ಯಾಸ ಇರುವವರಿಂದ ಇಂತಹ ಪರೀಕ್ಷೆಗಳಲ್ಲೂ ಸುಳ್ಳನ್ನು ಪತ್ತೆ ಮಾಡುವುದು ಕಷ್ಟಸಾಧ್ಯ ಎನ್ನುತ್ತವೆ ಅಧ್ಯಯನ ವರದಿಗಳು

ಮಾರ್ಗಸೂಚಿಗಳು

ಭಾರತದಲ್ಲಿ 2000ಕ್ಕೂ ಮುನ್ನ ಸುಳ್ಳು ಪತ್ತೆ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಯಾವುದೇ ಕಾನೂನು ಅಥವಾ ಮಾರ್ಗಸೂಚಿಗಳು ಇರಲಿಲ್ಲ. ಇಂತಹ ಪರೀಕ್ಷೆಗಳಲ್ಲಿ ಆರೋಪಿಯ ಮಾನವ ಹಕ್ಕುಗಳ ರಕ್ಷಣೆಗೆ ಅವಕಾಶವೇ ಇರಲಿಲ್ಲ. ಇಂತಹ ಪರೀಕ್ಷೆಗಳನ್ನು ಪೊಲೀಸರು ದುರುಪಯೋಗ ಮಾಡಿಕೊಳ್ಳುತ್ತಾರೆ ಎಂಬ ಆರೋಪ ಇತ್ತು. 1997ರಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ಸಲ್ಲಿಕೆಯಾದ ಒಂದು ಅರ್ಜಿಯೇ ಈ ಪರೀಕ್ಷೆಗಳಿಗೆ ಮಾರ್ಗಸೂಚಿಗಳನ್ನು ರಚಿಸಲು ಕಾರಣ ಎಂದು ಆಯೋಗ ಹೇಳಿಕೊಂಡಿದೆ.

ದೆಹಲಿಯಲ್ಲಿ 1997ರಲ್ಲಿ ನಡೆದಿದ್ದ ಕೊಲೆ ಪ್ರಕರಣವೊಂದರಲ್ಲಿ ವ್ಯಕ್ತಿಯೊಬ್ಬರನ್ನು ಬಂಧಿಸಲಾಗಿರುತ್ತದೆ. ಅವರನ್ನು ಸುಳ್ಳು ಪತ್ತೆ ಪರೀಕ್ಷೆಗೆ ಒಳಪಡಿಸಲಾಗಿರುತ್ತದೆ. ‘ನನ್ನ ಒಪ್ಪಿಗೆ ಇಲ್ಲದೆಯೇ ಈ ಪರೀಕ್ಷೆ ನಡೆಸಲಾಗಿದೆ. ಪರೀಕ್ಷೆ ಸರಿಯಾಗಿ ನಡೆದಿಲ್ಲ. ಇದರಿಂದ ನನ್ನನ್ನು ರಕ್ಷಿಸಿ’ ಎಂದು ಆ ವ್ಯಕ್ತಿ ಅರ್ಜಿಯಲ್ಲಿ ಕೋರಿರುತ್ತಾರೆ. ಆಯೋಗವು ಆ ಅರ್ಜಿಯನ್ನು ತಿರಸ್ಕರಿಸುತ್ತದೆ. ಆ ವ್ಯಕ್ತಿ ಪದೇ ಪದೇ ಅರ್ಜಿ ಸಲ್ಲಿಸುತ್ತಾರೆ. ಹೀಗಾಗಿ 1999ರಲ್ಲಿ ಅರ್ಜಿಯಲ್ಲಿ ಹೇಳಲಾದ ವಿಷಯಗಳನ್ನು ಪರಿಶೀಲಿಸಲು ಆಯೋಗವು ಸಮಿತಿಯನ್ನು ರಚಿಸುತ್ತದೆ. ಸಮಿತಿಯು, ‘ಭಾರತದಲ್ಲಿ ಇಂತಹ ಪರೀಕ್ಷೆಗಳಲ್ಲಿ ಆರೋಪಿಗಳ ಮಾನವ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದಂತೆ ಯಾವುದೇ ಕಾನೂನು ಇಲ್ಲ. ಅಂತಹ ಕಾನೂನಿನ ಅವಶ್ಯಕತೆ ಇದೆ’ ಎಂದು ಶಿಫಾರಸು ಮಾಡುತ್ತದೆ. ಶಿಫಾರಸಿನ ಅನ್ವಯ 1999ರ ನವೆಂಬರ್‌ನಲ್ಲಿ ಮಾರ್ಗಸೂಚಿಗಳನ್ನು ರಚಿಸಲಾಗುತ್ತದೆ. ಅನಂತರ 2000ರ ಜನವರಿ 11ರಂದು ಆ ಮಾರ್ಗಸೂಚಿಗಳನ್ನು ದೇಶದಾದ್ಯಂತ ಜಾರಿಗೆ ತರಲಾಯಿತು.

- ಆರೋಪಿಯ ಒಪ್ಪಿಗೆ ಇಲ್ಲದೆ ಯಾವುದೇ ಸ್ವರೂಪದ ಸುಳ್ಳು ಪತ್ತೆ ಪರೀಕ್ಷೆಗಳನ್ನು ನಡೆಸಬಾರದು. ಪರೀಕ್ಷೆಗೆ ಒಳಗಾಗುವ ಅಥವಾ ಪರೀಕ್ಷೆಯನ್ನು ತಿರಸ್ಕರಿಸುವ ಆಯ್ಕೆಯನ್ನು ಆರೋಪಿಗೆ ನೀಡಬೇಕು. ಅಂತಹ ಪರೀಕ್ಷೆಗೆ ಆರೋಪಿಯ ಒಪ್ಪಿಗೆ ಇದೆ ಎಂಬುದನ್ನು ನ್ಯಾಯಾಧೀಶರ ಎದುರಲ್ಲೇ ದಾಖಲಿಸಬೇಕು
- ಆರೋಪಿಯು ಸ್ವಯಂಪ್ರೇರಿತವಾಗಿ ಸುಳ್ಳು ಪತ್ತೆ ಪರೀಕ್ಷೆಗೆ ಒಳಗಾಗಲು ಇಚ್ಛಿಸಿದರೆ, ಅದಕ್ಕೆ ಸಂಬಂಧಿಸಿದ ಪ್ರಕ್ರಿಯೆಯನ್ನು ಆತನ ವಕೀಲರ ಮೂಲಕವೇ ನಡೆಸಬೇಕು
- ಪರೀಕ್ಷೆ ಸಂದರ್ಭದಲ್ಲಿ ನಡೆಯುವ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಪ್ರಕ್ರಿಯೆಗಳ ಬಗ್ಗೆ ಆರೋಪಿಗೆ ಪೊಲೀಸರು ಮತ್ತು ಅವರ ವಕೀಲರು ವಿವರಿಸಬೇಕು
- ಪರೀಕ್ಷೆಯ ವೇಳೆ ಆರೋಪಿ ನೀಡುವ ಹೇಳಿಕೆಗಳು ತಪ್ಪೊಪ್ಪಿಗೆ ಹೇಳಿಕೆಗಳಾಗುವುದಿಲ್ಲ. ಅವು ಪೊಲೀಸರ ಎದುರು ನೀಡಲಾದ ಹೇಳಿಕೆಗಳು ಎಂದಷ್ಟೇ ಅವನ್ನು ಪರಿಗಣಿಸಲಾಗುತ್ತದೆ’ ಎಂಬುದನ್ನು ಆರೋಪಿಗೆ ವಿವರಿಸಬೇಕು
- ಇಂತಹ ಪರೀಕ್ಷೆಗಳ ಸ್ವರೂಪ, ಪರೀಕ್ಷೆಯ ಅವಧಿ ಮತ್ತು ಆರೋಪಿಯ ಪೊಲೀಸ್ ಕಸ್ಟಡಿ ಅವಧಿಯ ವಿವರಗಳನ್ನು ನ್ಯಾಯಾಲಯಕ್ಕೆ ನೀಡಬೇಕು
- ಆಸ್ಪತ್ರೆ ಅಥವಾ ವಿಧಿವಿಜ್ಞಾನ ಪ್ರಯೋಗಾಲಯಗಳಂತಹ ಸ್ವತಂತ್ರ ಸಂಸ್ಥೆಗಳಲ್ಲಿ ಸುಳ್ಳು ಪತ್ತೆ ಪರೀಕ್ಷೆಯನ್ನು ವಕೀಲರ ಸಮ್ಮುಖದಲ್ಲಿ ನಡೆಸಬೇಕು. ಪರೀಕ್ಷೆಯ ವಿವರಗಳನ್ನು ದಾಖಲಿಸಬೇಕು

ಪ್ರಮುಖ ಪ್ರಕರಣಗಳು...

ಮಂಪರು ಪರೀಕ್ಷೆ, ಪಾಲಿಗ್ರಫಿ ಹಾಗೂ ಬ್ರೈನ್ ಮ್ಯಾಪಿಂಗ್ ಪರೀಕ್ಷೆಗಳನ್ನು ಹಲವು ಪ್ರಕರಣಗಳಲ್ಲಿ ಪ್ರಯೋಗಿಸಲಾಗಿದೆ. ಈ ಎಲ್ಲ ಪರೀಕ್ಷೆಗಳೂ ಯಶಸ್ವಿಯಾಗಿಲ್ಲ. ಕೆಲವು ಪ್ರಕರಣಗಳಲ್ಲಿ ತನಿಖಾಧಿಕಾರಿಗಳ ವಾದಕ್ಕೆ ಪುಷ್ಠಿ ನೀಡುವ ಹೇಳಿಕೆಗಳನ್ನು ಆರೋಪಿಗಳು ಸುಳ್ಳು ಪತ್ತೆ ಪರೀಕ್ಷೆ ವೇಳೆ ನೀಡಿದ್ದಾರೆ. ಆದರೆ, ಕೆಲವು ಪ್ರಕರಣಗಳಲ್ಲಿ ಸುಳ್ಳು ಪತ್ತೆ ಪರೀಕ್ಷೆಗಳಿಂದ ಯಾವ ಮಾಹಿತಿಯೂ ಲಭ್ಯವಾಗಿಲ್ಲ. ಹೀಗಾಗಿ ಇವು ತನಿಖೆಗೆ ನೆರವಾಗುತ್ತವೆ ಎಂದು ಖಚಿತವಾಗಿ ಹೇಳಲಾಗದು

ಅಜ್ಮಲ್ ಕಸಬ್ : ಮುಂಬೈ ಮೇಲೆ ನಡೆದಿದ್ದ ಉಗ್ರರ ದಾಳಿಯಲ್ಲಿ ಸೆರೆಸಿಕ್ಕಿದ್ದ ಉಗ್ರ ಅಜ್ಮಲ್ ಕಸಬ್‌ಗೆ ಮಂಪರು ಪರೀಕ್ಷೆ ನಡೆಸಲಾಗಿತ್ತು. ಪಾಕಿಸ್ತಾನದಲ್ಲಿ ಹೇಗೆ ಸಂಚು ಹೆಣೆಯಲಾಗಿತ್ತು ಎಂಬುದನ್ನು ಅವನು ಬಾಯಿಬಿಟ್ಟಿದ್ದ. ನಿಷೇಧಿತ ಲಷ್ಕರ್ ಸಂಘಟನೆಯ ಶಿಬಿರದಲ್ಲಿ ಶಸ್ತ್ರಾಸ್ತ್ರ ತರಬೇತಿ ಪಡೆದಿದ್ದ ವಿಚಾರ, ತನ್ನ ಕುಟುಂಬದ ಹಿನ್ನೆಲೆ, ತಂಡದ ಜೊತೆ ಭಾರತಕ್ಕೆ ಬಂದ ಮಾಹಿತಿ ನೀಡಿದ್ದ. ಸಾಕಷ್ಟು ಒಳನೋಟಗಳನ್ನು ಈ ಪರೀಕ್ಷೆ ನೀಡಿತ್ತು. ಲಷ್ಕರ್ ಸಂಘಟನೆ ಸ್ಥಾಪಕ ಹಫೀಸ್ ಸಯೀದ್ ದಾಳಿಯ ಸಂಚುಕೋರ ಎಂಬುದು ಗೊತ್ತಾಗಿತ್ತು. ಬಡಯುವಕರ ಮನಪರಿವರ್ತನೆ ಮಾಡಿ, ಅವರನ್ನು ಭಯೋತ್ಪಾದಕ ಚಟುವಟಿಕೆಗಳಿಗೆ ನಿಯೋಜನೆ ಮಾಡಲಾಗುತ್ತಿದೆ ಎಂಬ ಅಂಶಗಳು ಗೊತ್ತಾಗಿದ್ದವು.

ಅಬ್ದುಲ್ ಕರೀಂ ತೆಲಗಿ: ನಕಲಿ ಛಾಪಾಕಾಗದ ಹಗರಣದ ಆರೋಪಿ ಅಬ್ದುಲ್ ಕರೀಂ ತೆಲಗಿಯನ್ನು 2003ರಲ್ಲಿ ಮಂಪರು ಪರೀಕ್ಷೆಗೆ ಒಳಪಡಿಸಲಾಗಿತ್ತು. ಮಂಪರು ಪರೀಕ್ಷೆಯ ವಿಡಿಯೊ ಟೇಪ್ ಸುದ್ದಿವಾಹಿನಿಗಳಲ್ಲಿ ಪ್ರಸಾರವಾಗಿತ್ತು. ಅಂದಿನ ಕೇಂದ್ರ ಸಚಿವರು, ಮಹಾರಾಷ್ಟ್ರ ಉಪಮುಖ್ಯಮಂತ್ರಿ ಹಾಗೂ ಕೆಲವು ರಾಜಕಾರಣಿಗಳ ಹೆಸರನ್ನು ಮಂಪರು ಪರೀಕ್ಷೆಯಲ್ಲಿ ತೆಲಗಿ ಹೇಳಿದ್ದಾನೆ ಎಂದು ವರದಿಯಾಗಿತ್ತು. ಆದರೆ, ಈ ಪರೀಕ್ಷೆಯ ಬಳಿಕ, ನ್ಯಾಯಾಧೀಶರ ಎದುರು ತೆಲಗಿ ನುಡಿದಿದ್ದ ಸಾಕ್ಷ್ಯದಲ್ಲಿ, ಹಣ ನೀಡಿದ್ದನ್ನು ಉಲ್ಲೇಖಿಸಿರಲಿಲ್ಲ.

ನಿಥಾರಿ ಪ್ರಕರಣ: 2007ರಲ್ಲಿ ನೊಯ್ಡಾದಲ್ಲಿ 17 ಮಕ್ಕಳ ಅಸ್ತಿಪಂಜರಗಳು ಸಿಕ್ಕಿದ್ದ ಪ್ರಕರಣದಲ್ಲಿ ಮನೆಯ ಮಾಲೀಕ ಮೊನಿಂದರ್ ಸಿಂಗ್ ಪಂಧೇರ್ ಹಾಗೂ ಮನೆಯಲ್ಲಿ ವಾಸವಿದ್ದ ಸುರಿಂದರ್ ಕೋಲಿ ಎಂಬುವರ ಮೇಲೆ ಬ್ರೈನ್ ಮ್ಯಾಪಿಂಗ್ ಹಾಗೂ ಪಾಲಿಗ್ರಫಿ ಪರೀಕ್ಷೆಗಳನ್ನು ನಡೆಸಲಾಗಿತ್ತು. ಅಪರಾಧವನ್ನು ಕೋಲಿ ಒಪ್ಪಿಕೊಂಡಿದ್ದ ಎಂದು ಪೊಲೀಸರು ಹೇಳಿದ್ದರು. ಕೋಲಿ ಎಸಗಿದ್ದ ಅಪರಾಧ ಕೃತ್ಯಗಳ ಬಗ್ಗೆ ಪಂಧೇರ್‌ಗೆ ಏನೂ ಗೊತ್ತಿರಲಿಲ್ಲ ಎಂದು ಮಂಪರು ಪರೀಕ್ಷೆಯನ್ನು ಉಲ್ಲೇಖಿಸಿ ಪೊಲೀಸರು ಹೇಳಿದ್ದರು.

ಇನ್ನಷ್ಟು ಪ್ರಕರಣ: ಕಾಂಗ್ರೆಸ್ ಮುಖಂಡ ಶಶಿ ತರೂರ್ ಅವರ ಪತ್ನಿ ಸುನಂದಾ ಪುಷ್ಕರ್ ಸಾವಿನ ಪ್ರಕರಣದಲ್ಲಿ ತರೂರ್ ಅವರ ಆಪ್ತರ ಮೇಲೆ ಈ ಪರೀಕ್ಷೆಗಳನ್ನು ನಡೆಸಲಾಗಿತ್ತು. ಸಿಬಿಐ ವಿಶೇಷ ನಿರ್ದೇಶಕರಾಗಿದ್ದ ರಾಕೇಶ್ ಆಸ್ಥಾನ ಅವರ ವಿರುದ್ಧ ಕೇಳಿಬಂದಿದ್ದ ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಪಟ್ಟಂತೆ ದೂರು ನೀಡಿದವರು ಹಾಗೂ ಬಂಧಿತರನ್ನು 2019ರಲ್ಲಿ ಪಾಲಿಗ್ರಫಿ ಪರೀಕ್ಷೆಗೆ ಒಳಪಡಿಸಲಾಗಿತ್ತು. ಉತ್ತರ ಪ್ರದೇಶ ಹಾಥರಸ್‌ನಲ್ಲಿ ನಡೆದ ಅತ್ಯಾಚಾರ ಪ್ರಕರಣದ ಆರೋಪಿಗಳ ಮೇಲೂ ಈ ಪರೀಕ್ಷೆಗಳನ್ನು ನಡೆಸಲಾಗಿದೆ.

ಆರುಷಿ ತಲ್ವಾರ್: ವೈದ್ಯ ದಂಪತಿ ರಾಜೇಶ್ ತಲ್ವಾರ್ ಹಾಗೂ ನೂಪುರ್ ತಲ್ವಾರ್ ಅವರ ಮಗಳು ಆರುಷಿ ತಲ್ವಾರ್ ಹತ್ಯೆ ಪ್ರಕರಣದಲ್ಲಿ ಮಂಪರು ಪರೀಕ್ಷೆ ಕೆಲಸ ಮಾಡಲಿಲ್ಲ. 2010ರಲ್ಲಿ ಆರುಷಿಯ ಹೆತ್ತವರನ್ನು ಮಂಪರು ಪರೀಕ್ಷೆಗೆ ಒಳಪಡಿಸಲಾಗಿದ್ದರೂ, ತನಿಖಾಧಿಕಾರಿಗಳಿಗೆ ಕೊಲೆಯ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಾಗಲಿಲ್ಲ. ಇದಕ್ಕೂ ಮುನ್ನ, 2009ರಲ್ಲಿ ಬ್ರೈನ್ ಮ್ಯಾಪಿಂಗ್ ಹಾಗೂ ಇತರೆ ಸುಳ್ಳುಪತ್ತೆ ಪರೀಕ್ಷೆಗಳನ್ನು ತಲ್ವಾರ್ ದಂಪತಿ ಮೇಲೆ ನಡೆಸಲಾಗಿತ್ತು. ಆದರೆ ಕೊಲೆ ಮಾಡಿರುವುದನ್ನು ಖಚಿತಪಡಿಸುವ ಮಾಹಿತಿ ಅಥವಾ ಪುರಾವೆಗಳು ಲಭ್ಯವಾಗಿರಲಿಲ್ಲ.

ಆಧಾರ: ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, ಸುಳ್ಳು ಪತ್ತೆ ಪರೀಕ್ಷೆಗಳ ಮಾರ್ಗಸೂಚಿಗಳು–2000, ಪಿಟಿಐ

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಟೆಕ್ ದೈತ್ಯ ಸಂಸ್ಥೆಗಳು ದೊಡ್ಡ ಪ್ರಮಾಣದಲ್ಲಿ ಉದ್ಯೋಗ ಕಡಿತ ಮಾಡುತ್ತಿರುವುದು ನಿರುದ್ಯೋಗ ಸಮಸ್ಯೆಯನ್ನು ಉಲ್ಬಣಗೊಳಿಸುವುದೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 283

ವಿಶ್ವಕರ್ಮನ ಅದ್ಭುತ ಕೌಶಲ

ಶಿವನಿಗಾಗಿ ವಿಶ್ವಕರ್ಮನಿಂದ ನಿರ್ಮಿಸಿದ್ದ ವಾಸದ ಮನೆಯಲ್ಲಿ ರತ್ನದ ಪಾತ್ರೆಗಳನ್ನು, ರತ್ನಖಚಿತ ಘಟಾದಿಗಳನ್ನು ಅಲಂಕಾರವಾಗಿ ಇಟ್ಟಿದ್ದರು. ಮುತ್ತು-ರತ್ನಮಣಿಗಳಿಂದ ವಿಧವಿಧವಾದ ಆಕೃತಿಗಳನ್ನು ತಯಾರಿಸಿ ಇಟ್ಟಿದ್ದರು. ಅಲ್ಲಲ್ಲಿ ರತ್ನಗಳನ್ನು ಹಾಕಿರುವ ದೊಡ್ಡ ದೊಡ್ಡ ಕನ್ನಡಿಗಳನ್ನು ತೂಗುಹಾಕಿದ್ದರು. ಶ್ವೇತಚಾಮರಗಳನ್ನು ತಗುಲಿಹಾಕಿದ್ದರು. ಮುತ್ತಿನ ಮತ್ತು ರತ್ನಮಣಿಗಳನ್ನು ಅಲ್ಲಲ್ಲಿಯೇ ಗೊಂಚಲುಗೊಂಚಲಾಗಿ ತೂಗುಹಾಕಿದ್ದರು. ಇಂಥ ರಮ್ಯವಾದ ವಾಸಮಂದಿರವು ಮತ್ತಾವುದೂ ಜಗತ್ತಿನಲ್ಲಿ ಇಲ್ಲವೆನಿಸುವಷ್ಟು ಆಕರ್ಷಕವಾಗಿತ್ತು.

ಮಂದಿರದ ಒಂದು ಪ್ರದೇಶಕ್ಕೆ ಶಿವಲೋಕವೆಂದು ಹೆಸರು ಬರೆಯಲಾಗಿತ್ತು. ಅಲ್ಲಿ ಅನೇಕ ವಿಧದ ಸುಗಂಧ ಪರಿಮಳದ್ರವ್ಯಗಳನ್ನು ಚಿಮುಕಿಸಿದ್ದರಿಂದ ಮೈಮನಸ್ಸು ಪುಳಕಗೊಳಿಸುವಂಥ ಸುವಾಸನೆಯು ಹರಡಿತ್ತು. ಚಂದನ, ಅಗರು ಮುಂತಾದವುಗಳ ಹೊಗೆಯನ್ನು ಹಾಕಿದ್ದರಿಂದ ನಾಸಿಕಗಳು ಉಲ್ಲಾಸದಿಂದ ಆಘ್ರಾಣಿಸುವಂತಿದ್ದವು. ವಾಸಮಂದಿರದಲ್ಲಿ ವಿಶ್ವಕರ್ಮ ಬಿಡಿಸಿದ ಚಿತ್ರಗಳಲ್ಲಿ ಒಂದು ಕಡೆ ಮನೋಹರವಾಗಿ ಕಾಣುವ ವೈಕುಂಠಲೋಕದ ಚಿತ್ರವಿದ್ದರೆ, ಇನ್ನೊಂದು ಕಡೆ ಬ್ರಹ್ಮಲೋಕದ ದೃಶ್ಯ ಬರೆದಿದ್ದ. ಮತ್ತೊಂದು ಕಡೆ ಅಷ್ಟದಿಕ್ಪಾಲಕರ ಸೌಧಗಳನ್ನು, ಮಗದೊಂದು ಕಡೆ ಕೈಲಾಸಪರ್ವತ. ಹಾಗೆಯೇ ಅಮರಾವತಿ, ಶಿವಲೋಕವನ್ನು ಬಹುರಮ್ಯವಾಗಿ ಚಿತ್ರಿಸಿದ್ದ. ಇಂಥ ಅತಿರಮಣೀಯವಾದ ವಾಸಮಂದಿರದ ರತ್ನಖಚಿತವಾದ ಮಂಚದಲ್ಲಿ ಆನಂದದಿಂದ ಮಲಗಿದ.

ಹೀಗೆ ರತ್ನಪರ್ಯಂಕದಲ್ಲಿ ಶಂಕರ ಮಲಗಿ ನಿದ್ರಿಸುತ್ತಿದ್ದರೆ, ಪರ್ವತರಾಜ ನಿದ್ರಿಸದೆ ನಾಳಿನ ಕಾರ್ಯಕ್ರಮಗಳಿಗೆ ಅಗತ್ಯವಾದ ಕೆಲಸವನ್ನು ತನ್ನ ಸೇವಕರಿಂದ ಮಾಡಿಸುತ್ತಿದ್ದ. ಅಷ್ಟರಲ್ಲಿ ಬೆಳಗಾಯಿತು. ಮದುವೆಗೆ ಬಂದವರೆಲ್ಲಾ ಒಬ್ಬೊಬ್ಬರಾಗಿ ಏಳಲು ಪ್ರಾರಂಭಿಸಿದರು. ವಾದ್ಯಗಾರರು ಉತ್ಸಾಹದಿಂದ ಮುಂಜಾನೆ ವಾದ್ಯಗಳನ್ನು ಬಾರಿಸಿದರು. ವಾದ್ಯಗಳ ಧ್ವನಿ ಕೇಳಿ ದೇವತೆಗಳೆಲ್ಲರೂ ಪರಮೇಶ್ವರನನ್ನು ಸ್ಮರಿಸುತ್ತಾ ಉತ್ಸಾಹದಿಂದ ಎದ್ದರು. ಅವರೆಲ್ಲಾ ಕೈಲಾಸಕ್ಕೆ ಹೊರಡಲು ತಮ್ಮ ವಾಹನಗಳನ್ನು ಸಜ್ಜುಗೊಳಿಸಿದರು. ನಂತರ ಶಿವನನ್ನು ಎಬ್ಬಿಸಲು ಯಮಧರ್ಮನನ್ನು ವಿಷ್ಣು ಕಳುಹಿಸಿಕೊಟ್ಟ. ‘ಪ್ರಮಥಾಧಿಪನೆ, ಶುಭಕರವಾದ ಪ್ರಭಾತವು ಪ್ರಾಪ್ತವಾಗಿರುವುದು. ಏಳು, ಎದ್ದೇಳು. ಜನಾವಾಸಕ್ಕೆ ತೆರಳಿ ಅಲ್ಲಿರುವವರನ್ನೆಲ್ಲರನ್ನೂ ಕೃತಾರ್ಥರನ್ನಾಗಿ ಮಾಡು’ ಎಂದು ಅವನು ಪ್ರಾರ್ಥಿಸಿದ.

ಶಂಕರನ ಅಪ್ಪಣೆಯನ್ನು ಪಡೆದು ಯಮಧರ್ಮ ಜನಾವಾಸ ಸ್ಥಳಕ್ಕೆ ಹೋದ. ಅನಂತರ ಶಂಕರ ಸಹ ಹೊರಡಲು ಸಿದ್ಧನಾದ. ಆ ಸಮಯದಲ್ಲಿ ಸ್ತ್ರೀಯರೆಲ್ಲರೂ ಶಂಕರನ ಪಾದಕಮಲಗಳನ್ನು ನೋಡುವ ಕುತೂಹಲದಿಂದ ಅಲ್ಲಿಗೆ ಬಂದು ಮಂಗಳಗೀತೆಗಳನ್ನು ಹಾಡಿದರು. ಜಗತ್ಪ್ರಭು ಶಂಕರ ಸಂಸಾರಿಗಳಂತೆ ಪ್ರಾತಃಕಾಲದಲ್ಲಿ ಮಾಡಬೇಕಾದ ಕೃತ್ಯಗಳನ್ನು ನೆರವೇರಿಸಿದ. ನಂತರ, ಶಿಷ್ಟಾಚಾರದಂತೆ ತಾಯಿ ಸಮಾನಳಾದ ಮೇನಾದೇವಿಗೆ ಮತ್ತು ತಂದೆ ಸಮಾನರಾದ ಹಿಮವಂತರಿಗೆ ನಮಸ್ಕರಿಸಿದ. ಅವರ ಆಶೀರ್ವಾದ ಪಡೆದು ಜನಾವಾಸ ಸ್ಥಳಕ್ಕೆ ಹೋದ. ಆ ಸಮಯದಲ್ಲಿ ಅಲ್ಲಿರುವ ಜನರೆಲ್ಲರೂ ವಿಧವಿಧವಾದ ವಾದ್ಯಗಳನ್ನು ನುಡಿಸಿ, ಸಂಭ್ರಮಿಸಿದರು. ಮುನಿಗಳು ವೇದಘೋಷ ಮಾಡಿದರು. ಪರಶಿವ ಹರಿ, ಬ್ರಹ್ಮನಿಗೆ ನಮಸ್ಕರಿಸಿದ. ನೆರೆದ ಜನರಿಗೆ ಮಹಾಶಿವ ಆಶೀರ್ವಚನ ನೀಡಿದ. ಮಂಗಳಕರವಾದ ಶಿವನ ಮಾತನ್ನು ಕೇಳಿ ಜನರೆಲ್ಲ ಜಯಕಾರ ಮಾಡಿದರು. ದೇವತೆಗಳು ಮುನಿಗಳು ಭಕ್ತಿಯಿಂದ ಶಿವನನ್ನು ಸ್ತುತಿಸಿದರು.

ಇಲ್ಲಿಗೆ ಶ್ರೀಶಿವಮಹಾಪುರಾಣದಲ್ಲಿ ಎರಡನೆಯ ಸಂಹಿತೆಯಾದ ರುದ್ರಸಂಹಿತೆಯ ಮೂರನೆಯ ಖಂಡವಾದ ಪಾರ್ವತೀಖಂಡದ ಐವತ್ತೆರಡನೆಯ ಅಧ್ಯಾಯ ಮುಗಿಯಿತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬೆಳಗಾವಿಯ ವಾಹನ ಹಾಗೂ ಜನದಟ್ಟಣೆಯ ಚೆನ್ನಮ್ಮ ವೃತ್ತದಲ್ಲಿ ಪೊಲೀಸ್ ಸಮವಸ್ತ್ರದಲ್ಲಿರುವ ವ್ಯಕ್ತಿಯೊಬ್ಬರು ಮತ್ತೊಬ್ಬ ವ್ಯಕ್ತಿಯನ್ನು ಥಳಿಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿದೆ. ಜನರು ನೋಡುತ್ತಿದ್ದರೂ, ಆ ವ್ಯಕ್ತಿ ಥಳಿಸುವುದನ್ನು ಮುಂದುವರಿಸುತ್ತಾರೆ. ಯಾರೂ ಮಧ್ಯಪ್ರವೇಶಿಸುವುದಿಲ್ಲ. ‘ನಡುರಸ್ತೆಯಲ್ಲಿ ಜನರ ಮೇಲೆ ಪೊಲೀಸರು ದರ್ಪ ಪ್ರದರ್ಶಿಸುತ್ತಿದ್ದಾರೆ’ ಎಂಬುದಾಗಿ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿದೆ.

ಈ ವಿಡಿಯೊ ‘ಹೊಯ್ಸಳ’ ಹೆಸರಿನ ಸಿನಿಮಾಕ್ಕಾಗಿ ಚಿತ್ರೀಕರಣ ನಡೆಸುತ್ತಿದ್ದಾಗ ಸೆರೆಹಿಡಿದದ್ದು ಎಂದು ಪೊಲೀಸರು ಸ್ಪಷ್ಟಪಡಿಸಿದ್ದಾರೆ. ವಿಡಿಯೊದಲ್ಲಿರುವ ಘಟನೆ ನೈಜವಲ್ಲ. ವಿಡಿಯೊದಲ್ಲಿರುವ ವ್ಯಕ್ತಿ ಪೊಲೀಸ್ ಅಧಿಕಾರಿಯೂ ಅಲ್ಲ ಎಂದು ಬೆಳಗಾವಿ ಪೊಲೀಸರು ಪ್ರಕಟಣೆ ಹೊರಡಿಸಿದ್ದಾರೆ. ಪೊಲೀಸ್ ಫ್ಯಾಕ್ಟ್‌ಚೆಕ್ ಜಾಲತಾಣವೂ ಇದನ್ನು ಸ್ಪಷ್ಟಪಡಿಸಿದೆ. ಪೊಲೀಸರ ಬಗ್ಗೆ ನಕಾರಾತ್ಮಕ ಭಾವನೆ ಬರುವಂತೆ ಜನರು ಮಾತನಾಡುತ್ತಿದ್ದು, ವಿಡಿಯೊ ಹಂಚಿಕೊಳ್ಳಬೇಡಿ ಎಂದು ಪೊಲೀಸರು ಮನವಿ ಮಾಡಿದ್ದಾರೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಸಿದ್ಧಿಯ ಸ್ಮರಣೆ

ಮೇರುಪರ್ವತಕಿಹವು ನೂರೆಂಟು ಶಿಖರಗಳು ದಾರಿ ನೂರಿರಬಹುದು, ನಿಲುವ ಕಡೆ ನೂರು ||
ಸಾರು ನೀಂ ಯಾತ್ರಿಕರಿಗೆಲ್ಲ ಕೆಳೆಯಾಗಿರುತೆ |
ಮೇರು ಸಂಸ್ಮೃತಿಯೆ ಬಲ - ಮಂಕುತಿಮ್ಮ || 763

ಪದ-ಅರ್ಥ: ಪರ್ವತಕಿಹವು = ಪರ್ವತಕೆ + ಇಹವು(ಇವೆ), ಸಾರು = ನಡೆ, ಕೆಳೆಯಾಗಿರುತೆ = ಕೆಳೆ(-ಸ್ನೇಹಿ) + ಆಗಿ + ಇರುತೆ(ಇರುತ್ತ), ಸಂಸ್ಮೃತಿ = ಸ್ಮರಣೆ(ಪ್ರೀತಿಯಿಂದ ನೆನಪಿಸಿಕೊಳ್ಳುವುದು)

ವಾಚ್ಯಾರ್ಥ: ಪರ್ವತಕ್ಕೆ ನೂರಾರು ಶಿಖರಗಳು. ಮೇಲಕ್ಕೇರಲು ನೂರಾರು ದಾರಿಗಳು ಮತ್ತು ನೂರಾರು ನಿಲುಗಡೆಗಳು. ಯಾತ್ರಿಕರಿಗೆಲ್ಲ ನೀನು ಜೊತೆಯಾಗಿ ಸಾಗು. ಮೇರುವಿನ ನೆನಪೇ ಶಕ್ತಿ.

ವಿವರಣೆ: ಈ ಕಗ್ಗದಲ್ಲಿ ಒಂದು ಸುಂದರ ಪ್ರತಿಮೆ ಇದೆ. ಅದು ಒಂದು ಪರ್ವತದ ಬಗ್ಗೆ ಹೇಳುತ್ತದೆ. ಪರ್ವತಕ್ಕೆ ನೂರಾರು ಶಿಖರಗಳಿವೆ. ಅವುಗಳನ್ನು ತಲುಪಲು ಅನೇಕ ದಾರಿಗಳಿವೆ ಮತ್ತು ದಾರಿಯಲ್ಲಿ ನೂರಾರು ನಿಲುಗಡೆಗಳಿವೆ. ಅನೇಕ ಯಾತ್ರಾರ್ಥಿಗಳು ತಮಗೆ ಸರಿಕಂಡ ದಾರಿಯಲ್ಲಿ ಪರ್ವತವನ್ನು ಏರುತ್ತಿದ್ದಾರೆ. ನೀನು ಅವರಿಗೆಲ್ಲ ಸ್ನೇಹಿತರಂತೆ ಜೊತೆಯಾಗಿರುತ್ತ ನಡೆ. ಆ ಎತ್ತರದ ಸ್ಮರಣೆಯೇ ಶಕ್ತಿ ಕೊಡುವಂಥದ್ದು. ಇದೊಂದು ಸಂಕೇತ. ಇದು ಸೂಚಿಸುವುದು ಮನುಷ್ಯನ ಊರ್ಧ್ವಮುಖ ಯಾತ್ರೆಯನ್ನು. ಉನ್ನತಿಯ ಮೇರು ಶಿಖರಕ್ಕೆ ನೂರಾರು ದಾರಿಗಳು. ಕೆಲವರು ಸಂಗೀತದ ಮೂಲಕ, ಕೆಲವರು ಸಾಹಿತ್ಯದ ದಾರಿಯಿಂದ, ನಟನೆಯಿಂದ, ಓದಿನಿಂದ, ತ್ಯಾಗದಿಂದ, ಸಹಕಾರದಿಂದ, ಪ್ರೇಮದಿಂದ ತಮ್ಮ ತಮ್ಮ ಜೀವನದ ಮೇರುವನ್ನೇರಿದ್ದಾರೆ. ಪ್ರತಿಯೊಬ್ಬರಿಗೂ ಅವರವರದೇ ಮಾರ್ಗ. ಅವರು ತಮ್ಮ ಆರೋಹಣದಲ್ಲಿ ಅಲ್ಲಲ್ಲಿ ನಿಂತು ಸುಧಾರಿಸಿಕೊಂಡು ಯಶಸ್ಸಿನ ಶಿಖರಗಳನ್ನು ಏರಿದ್ದಾರೆ. ತೆಂಡೂಲ್ಕರರಿಗೆ ಕ್ರಿಕೆಟ್ ದಾರಿಯಾದರೆ, ಬಿಸ್ಮಿಲ್ಲಾಖಾನ್‌ರಿಗೆ ಶಹನಾಯಿಯಾಯಿತು. ವಿವೇಕಾನಂದರಿಗೆ ಸಮಾಜೋದ್ಧಾರವೇ ಬದುಕಿನ ಗುರಿಯಾದರೆ ಲತಾ ಮಂಗೇಶಕರ್‌ರಿಗೆ ಸಂಗೀತವೇ ತಪಸ್ಸಾಯಿತು. ನೀರಜ್ ಚೋಪ್ರಾ ಭಲ್ಲೆ ಎಸೆದು ಯಶಸ್ಸು ಪಡೆದರೆ, ದೀನರ ಸೇವೆ ಮಾಡಿ ಮದರ್ ತೆರೆಸಾ ಮಾನ್ಯರಾದರು. ಇದರರ್ಥ, ಸಾಧನೆಯ ಶಿಖರಕ್ಕೆ ಹಲವಾರು ದಾರಿಗಳು. ಯಾವ ದಾರಿಯೂ ಸಣ್ಣದಲ್ಲ, ಯಾವುದೂ ದೊಡ್ಡದಲ್ಲ. ಪ್ರತಿಯೊಬ್ಬರೂ ತಮ್ಮಲ್ಲಿ ಅಂತರ್ಗತವಾದ ಶಕ್ತಿಯನ್ನು, ಪ್ರೇರಣೆಯನ್ನು ಬಳಸಿಕೊಂಡು ಬೆಳೆಯುತ್ತಾರೆ. ಕಗ್ಗ ನಮಗೊಂದು ಸಲಹೆ ನೀಡುತ್ತದೆ. ಸಾಧಕರು ತಮ್ಮ ಊರ್ಧ್ವಮುಖ ಸಾಧನೆಯಲ್ಲಿ ತೊಡಗಿದಾಗ, ಅವರನ್ನು ಗಮನಿಸಿ, ಅವರೊಡನೆ ಸಾಮೀಪ್ಯ ಸಾಧಿಸಿ, ಅವರೊಂದಿಗೆ ಸ್ನೇಹದಿಂದಿರಬೇಕು. ಅವರೊಂದಿಗೆ ನಾವೂ ಎತ್ತರಕ್ಕೆ ಏರಲು ಪ್ರಯತ್ನಿಸಬೇಕು. ಆಗ ನಮಗೂ ಸಾಧನೆಯ ಶಿಖರ ಕಂಡೀತು. ಸಿದ್ಧಿಯ ಶಿಖರದ ಪ್ರೀತಿಯ ಸ್ಮರಣೆಯೇ ನಮ್ಮ ಸಾಧನೆಗೆ ಬಲ ತರುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಗುರುವಾರ ನವೆಂಬರ್ 24, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶೀರ್ಷ ಶುಕ್ಲ ಪ್ರತಿಪದ್ ಗಂ. 25-38 ನಕ್ಷತ್ರ: ಅನುರಾಧ ಗಂ. 19-37 ಯೋಗ: ಅತಿಗಂಡ ಗಂ. 12-19, ಕರಣ: ಕಿಂಸ್ತುಘ್ನ ಗಂ. 15-05, ವೃಶ್ಚಿಕ ಮಾಸದ 07 ನೇ ದಿನ.

ರಾಹುಕಾಲ : ಮಧ್ಯಾಹ್ನ 01-30 – 03-00 ಸೂರ್ಯೋದಯ : 06-38 ಸೂರ್ಯಾಸ್ತ : 05-57 ಮುಸ್ಲಿಂ ದಿನಾಂಕ : 28 ರಬಿಯುಸ್ಸಾನಿ

ದಿನ ವಿಶೇಷ : ಗುರು ತೇಗ್ ಬಹದ್ದೂರ್ ಪುಣ್ಯತಿಥಿ

ಅದೃಷ್ಟ ಸಂಖ್ಯೆ : 1, 8

ಮೇಷ: ಈ ದಿನ ಎಚ್ಚರದಿಂದ ಕಾರ್ಯನಿರ್ವಹಿಸಿ. ಯಂತ್ರಗಳನ್ನು ಬಳಸುವಾಗ ತೊಂದರೆಯಾಗುವ ಸಂಭವವಿದೆ. ಮಗಳ ವಿವಾಹ ಪ್ರಸ್ತಾಪ ನಡೆದು ಶುಭದಲ್ಲಿ ಮುಕ್ತಾಯವಾಗಲಿದೆ. ಸುಂದರ ಸಂಜೆ ನಿಮ್ಮದಾಗುತ್ತದೆ.

ವೃಷಭ: ರಕ್ತದ ಒತ್ತಡ, ಮೂತ್ರ ಸಂಬಂಧದ ದೋಷಗಳ ಬಗ್ಗೆ ಜಾಗ್ರತೆ ವಹಿಸಿ. ಈ ದಿನ ಹಣ್ಣು-ತರಕಾರಿಗಳ ವ್ಯಾಪಾರಿಗಳಿಗೆ ಲಾಭಾಂಶ ವೃದ್ಧಿ. ಆತಂಕ ತುಂಬಿದ ಕೆಲಸ ಕಾರ್ಯದಲ್ಲಿರುವವರ ಮನೆಯಲ್ಲಿ ನೆಮ್ಮದಿ ತುಂಬುವುದು.

ಮಿಥುನ: ನಿಮ್ಮ ಆಪ್ತರು ನಿಮ್ಮ ಸಕಾಲಿಕ ನೆರವಿಗಾಗಿ ನಿಮಗೆ ಧನ್ಯವಾದ ತಿಳಿಸುವರು. ನಿಮ್ಮ ಜೀವನದಲ್ಲಿ ನಡೆದ ಕಹಿ ಘಟನೆಗಳನ್ನು ಪಾಠದ ರೂಪದಲ್ಲಿ ಮಗನಿಗೆ ಹೇಳುವ ಅನಿವಾರ್ಯತೆಯ ಸನ್ನಿವೇಶ ಎದುರಾಗುವುದು.

ಕರ್ಕಾಟಕ: ನೆರೆಹೊರೆಯವರ ವೈಷಮ್ಯಗಳು ಅನುಭವಕ್ಕೆ ಬರಲಿದೆ. ಮನೆ ಜಾಗದ ಪಾಲುದಾರಿಕೆ ವಿಷಯದಲ್ಲಿ ಕೆಲವೊಂದು ಬದಲಾವಣೆ ಮಾಡಿಕೊಳ್ಳಬೇಕಾಗುವ ಪರಿಸ್ಥಿತಿ ಬರುವುದು. ವೈದ್ಯರ ಸಲಹೆಯಂತೆ ವಿಶ್ರಾಂತಿ ಪಡೆಯಿರಿ.

ಸಿಂಹ: ಹಿಂದಿನಿಂದ ಬಾಕಿ ಇದ್ದ ಆಫೀಸಿನ ಕೆಲಸಗಳನ್ನು ಪೂರ್ತಿಗೊಳಿಸುವ ಪ್ರಯತ್ನ ಮಾಡಿ. ಕಬ್ಬಿಣದ ಮತ್ತು ತಾಮ್ರದ ವ್ಯಾಪಾರಿಗಳಿಗೆ ಲಾಭ ಸಿಗಲಿದೆ. ಹೊಲದ ಅಥವಾ ಜಮೀನಿನ ಕೆಲಸಕ್ಕೆ ಆಳನ್ನು ಗೊತ್ತು ಮಾಡಿಕೊಳ್ಳಿ.

ಕನ್ಯಾ: ಕೋರ್ಟಿನ ಕೆಲಸಗಳನ್ನು ತ್ವರಿತ ಗತಿಯಲ್ಲಿ ನಡೆಸಿ ಕೊಡುವಂತೆ ವಕೀಲರಲ್ಲಿ ಕೇಳಿಕೊಳ್ಳುವುದು ಉತ್ತಮ. ಮಾರುಕಟ್ಟೆಯ ಬದಲಾವಣೆಗಳನ್ನು ಗಮನಿಸಿ ನಂತರದಲ್ಲಿ ಷೇರುಗಳನ್ನು ಕೊಳ್ಳುವ ಯೋಜನೆಗೆ ಮುಂದಾಗಿ.

ತುಲಾ: ರಾಜಕಾರಣಿಗಳಿಗೆ ಮತ್ತು ಸರ್ಕಾರಿ ನೌಕರರಿಗೆ ಈ ದಿನ ಸುಯೋಗವೆಂದು ಹೇಳಬಹುದು. ಎಲ್ಲರೊಂದಿಗೆ ಸಹಕಾರಮನೋಭಾವನೆಯಿಂದ ಮತ್ತು ಸರಳತೆಯಿಂದ ಮುಂದುವರಿದಲ್ಲಿ ಯಶಸ್ಸು ಕಂಡುಬರುತ್ತದೆ.

ವೃಶ್ಚಿಕ: ನಿಮ್ಮ ಯೋಜನೆಗಳು ಕಾರ್ಯಗತಗೊಳ್ಳಲು ಹೆಚ್ಚಿನ ಪ್ರಯತ್ನ ನಡೆಸಬೇಕಾಗುವುದು. ಮನುಷ್ಯ ಪ್ರಯತ್ನದ ಜೊತೆ ಮಹಾ ಗಣಪತಿಯ ಮೊರೆ ಹೋಗುವುದರಿಂದ ಕಾರ್ಯ ಸಿದ್ಧಿಯಾಗಲಿದೆ. ಹಣದ ಚಿಂತೆ ಇರುವುದಿಲ್ಲ.

ಧನು: ಈ ದಿನ ಜರುಗಲಿರುವ ಸಂಗತಿಯೊಂದು ಗಾಢ ಪರಿಣಾಮ ಬೀರಿ ವೃತ್ತಿಗೆ ಸಂಬಂಧಿಸಿದ ವಿಷಯದಲ್ಲಿ ಉತ್ತಮ ನಿರ್ಧಾರ ಕೈಗೊಳ್ಳಲು ಸಹಾಯವಾಗಲಿದೆ. ಉತ್ಪಾದನಾ ಕೆಲಸ ಚುರುಕುಗತಿಯಿಂದ ಸಾಗುವುದು.

ಮಕರ: ವೈದ್ಯರಲ್ಲಿ ರಕ್ತದೊತ್ತಡ ಪರೀಕ್ಷಿಸಿಕೊಳ್ಳುವುದು ಒಳ್ಳೆಯದು. ಬ್ಯಾಂಕ್ ನೌಕರರಿಗೆ ಕೆಲಸಗಳಲ್ಲಿ ಒತ್ತಡ ಕಡಿಮೆಯಾಗಿ ಮನಸ್ಸಿಗೆ ನೆಮ್ಮದಿಯು ಸಿಗುವುದು. ಹೂಡಿಕೆ ವಿಚಾರದಲ್ಲಿ ದೀರ್ಘಾಲೋಚನೆ ನಡೆಸುವುದು ಉತ್ತಮ.

ಕುಂಭ: ಪರಿಶ್ರಮಕ್ಕೆ ತಕ್ಕಂಥ ಆದಾಯವಿಲ್ಲದೆ ಸೊರಗಿದ್ದ ನಿಮಗೆ, ಹೆಚ್ಚಿನ ವರಮಾನದ ಮಾರ್ಗವನ್ನು ಸ್ನೇಹಿತರೊಬ್ಬರು ತೋರುವರು. ವಿವಾದ ಗೊಡವೆಗಳಿಂದ ದೂರ ಉಳಿಯುವುದರಿಂದ ಗೌರವ ಕಾಪಾಡಿಕೊಳ್ಳಬಹುದು.

ಮೀನ: ಕೃಷಿಕರಿಗೆ ಕೃಷಿಯಲ್ಲಿ ಕಾದು ನೋಡುವ ತೀರ್ಮಾನ ಒಳ್ಳೆಯದು. ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಪ್ರಯತ್ನಬಲ ಹೆಚ್ಚಿಸಿ. ರಾಜಕೀಯ ಭವಿಷ್ಯದಲ್ಲಿ ಜನಪ್ರಿಯತೆ ಹೆಚ್ಚಿಸಿಕೊಳ್ಳಲು ಪ್ರಯತ್ನ ನಡೆಸಬೇಕಾಗುತ್ತದೆ.

ಪದಬಂಧ 5148

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ದೇಶೀ ಗಿಡಮೂಲಿಕೆಗಳಿಂದ ಸಿದ್ಧಪಡಿಸಿದ ಔಷಧ (4)
3. ಶಿರಸ್ಸನ್ನು ವಿಕ್ರಯಿಸಿಕೊಂಡಿರುವ ಪೀಳಿಗೆ! (4)
5. ವ್ಯಾಯಾಮ ಶಾಲೆಯಿಲ್ಲಿ ಉಲ್ಟಾ ಕಾಣುತ್ತಿದೆ (3)
7. ಈತ ಕೆಲಸಕ್ಕೆ ಬಾರದವನು (4)
9. ಹಾಡಿನ ಧಾಟಿಯಿದು (2)
10. ಗಡಿಬಿಡಿಯಲ್ಲಿ ತಿರುಗಿದಾಗ ಕಾಣಿಸಿದ ಎಲ್ಲೆ (2)
11. ಈಕೆ ತೆಳ್ಳನೆಯ ಉದರವುಳ್ಳವಳು (4)
14. ಗಡಿ ಹತ್ತಿರ ದೊರೆತ ಮಡಿಕೆ (3)
16. ಈ ತರಹ ಕನ್ನಡಿಗ ತೋರಿದ ಅರ್ಜೆಂಟ್! (4)
17. ಈಕೆ ವಿದ್ಯಾಧಿದೇವತೆ (4)

ಮೇಲಿಂದ ಕೆಳಕ್ಕೆ

1. ನಾಡಿನಲ್ಲಿರುವ ಅಲ್ಪವ್ಯಕ್ತಿ ಕಾಣುತ್ತಿದ್ದಾನೆಯೇ? (3)
2. ಆನೆ ಎಂಬರ್ಥದ ಋಷಿ (3)
3. ತಡದಿಂದ ಆದ ತಬ್ಬಿಬ್ಬು! (4)
4. ಮಾಲು ತರುವಾಗ ಖರೀದಿಸಿದ ಮುಂಡಾಸು (3)
6. ನೆತ್ತರಲ್ಲೇ ಕೂಡಿದುದು (4)
7. ಈ ಪರಿ ತಪ್ಪಿಸಿಕೊಳ್ಳುವಿಕೆ (3)
8. ಮಿಡಿ ಹಿಡಿದುಕೊಂಡದ್ದಕ್ಕೇ ಈ ಸಿಟ್ಟು (4)
12. ಗಿರಿಯ ಹತ್ತಿರ ಸೆರೆ ಹಿಡಿಯುವುದು (4)
13. ತನಗೆ ತಾನೇ ಮಾತಾಡಿಕೊಳ್ಳುವುದು (3)
14. ಟಾರ ರಸ್ತೆ ಹತ್ತಿರವಿರುವ ಮೋರಿ (3)
15. ಗೆಳೆಯನ ಜೊತೆ ಬಂದಿರುವ ಸ್ನೇಹಿತೆ (3)



5147ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಉಪ್ಪಲಿಗ 2.ಮನೋಹರ 4.ಹರಕತ್ತು 6.ಸಿಂಬಳ 7.ಣಿಹ 9.ಆಯಾಸ 11ಹದಾ 13.ಆಲಸ್ಯ 14.ಅಗ್ರಗಣ್ಯ 16.ಮರಕತ 17.ಗುನ್ಹೆಗಾರ

ಮೇಲಿಂದ ಕೆಳಕ್ಕೆ: 1.ಉದಾಹರಣೆ 2.ಮತ್ತು 3.ಹಣೆಬರಹ 5.ತ್ರುಪಳ 8.ಹಲಾಕೋರ 10.ಸರಳ 12.ದಾಕ್ಷಿಣ್ಯಪರ 15.ಹಠ

ಸುಡೊಕು 5534

3	2			8		9		1
	9	8						4
	4		9			3		8
6								9
	5		7	6	9		8	
8						6		
			2			7		6
				9	7			
						4		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5533 ಸುಡೊಕು

4	5	6	9	7	1	8	3	2
1	9	2	6	8	3	5	7	4
8	7	3	4	2	5	9	6	1
7	2	1	3	4	9	6	5	8
3	8	5	1	6	2	4	9	7
6	4	9	7	5	8	2	1	3
2	3	8	5	1	6	7	4	9
9	6	4	8	3	7	1	2	5
5	1	7	2	9	4	3	8	6

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,244
ಇಂದಿನ ಅಂತ್ಯ	18,267
▲	23
ದಿನದ ಗರಿಷ್ಠ	18,325

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹555
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹555

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1525 (1520)
ಸೋಯಾ (ರಿಫೈನ್ಡ್)	₹1325 (1320)
ಸೂರ್ಯಕಾಂತಿ (ರಿಫೈನ್ಡ್)	₹1460 (1460)
ಪಾಮೋಲಿನ್	₹965 (960)

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹145
ಆರ್‌ಎಸ್‌ಎಸ್-5	₹137
ಗುಡ್ ಲಾಟ್	₹130

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1800-2600
ಮಧ್ಯಮ	₹1000-1800
ಸಣ್ಣ	₹500-1000

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹13200
ಎಸಿ	₹6720
ಆರ್‌ಪಿ	₹8500
ಆರ್‌ಸಿ	₹4530

ಮುಂಬೈ ಧಾರಣೆ

ಶೇಂಗಾ

23–11-2022

ಜಾವಾ 70/80(ಹೊಸ)	11800-11850
ಜಾವಾ 80/90(ಹೊಸ)	10900-10950
ದಪ್ಪ ಮಧ್ಯಪ್ರದೇಶ(ಹೊಸ)	9300-9400
ದಪ್ಪ ಗುಜರಾತ್(ಹೊಸ)	10000-10100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1530 (1530)
ಒಂದು ವಾರದ ಡೆಲಿವರಿ	1525 (1525)
ಸೋಯಾ ಕಚ್ಚಾ	1310 (1320)
ಪಾಮ್ ವಾರದ ಡೆಲಿವರಿ	963 (958)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52,250 (52,250)
ಬೆಳ್ಳಿ ಕೆ.ಜಿ 61,600 (61,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೇಂದ್ರ ರೆವಿನ್ಯು ಕಾರ್ಯದರ್ಶಿ ತರುಣ್ ಬಜಾಜ್ ಹೇಳಿಕೆ

ಅಂದಾಜಿಗೂ ಹೆಚ್ಚು ತೆರಿಗೆ ಸಂಗ್ರಹ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ತೆರಿಗೆ ಸಂಗ್ರಹ ಮೊತ್ತವು ಬಜೆಟ್ ಅಂದಾಜಿಗಿಂತ ₹ 4 ಲಕ್ಷ ಕೋಟಿಯಷ್ಟು ಹೆಚ್ಚಾಗಲಿದೆ ಎಂದು ಕೇಂದ್ರ ರೆವಿನ್ಯು ಕಾರ್ಯದರ್ಶಿ ತರುಣ್ ಬಜಾಜ್ ಹೇಳಿದ್ದಾರೆ. ಅಂದರೆ, ಬಜೆಟ್ ಅಂದಾಜಿಗಿಂತ ತೆರಿಗೆ ಸಂಗ್ರಹವು ಶೇಕಡ 14ರಷ್ಟು ಹೆಚ್ಚು ಇರಲಿದೆ.

ಆದಾಯ ತೆರಿಗೆ, ಸೀಮಾ ಸುಂಕ ಮತ್ತು ಜಿಎಸ್‌ಟಿ ಸಂಗ್ರಹ ಹೆಚ್ಚಾಗಿರುವುದು ಈ ಏರಿಕೆಗೆ ಕಾರಣ ಎಂದು ಅವರು ತಿಳಿಸಿದ್ದಾರೆ.

ತೆರಿಗೆ ಆದಾಯದಲ್ಲಿ ಆಗುವ ಹೆಚ್ಚಳದ ಪ್ರಮಾಣವು ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ಪ್ರಮಾಣಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇರಲಿದೆ ಎಂದು ಅವರು ತಿಳಿಸಿದ್ದಾರೆ.

ಮುಖ್ಯಾಂಶಗಳು

- ₹ 4 ಲಕ್ಷ ಕೋಟಿ ಹೆಚ್ಚಳ ನಿರೀಕ್ಷೆ
- ನೇರ ತೆರಿಗೆ ಸಂಗ್ರಹ ₹ 17.50 ಲಕ್ಷ ಕೋಟಿ ಅಂದಾಜು

2023ರ ಮಾರ್ಚ್ 31ಕ್ಕೆ ಕೊನೆಗೊಳ್ಳುವ ಹಾಲಿ ಆರ್ಥಿಕ ವರ್ಷದಲ್ಲಿ ತೆರಿಗೆಗಳ ಮೂಲಕ ಒಟ್ಟು ₹ 27.50 ಲಕ್ಷ ಕೋಟಿ ಸಂಗ್ರಹವಾಗಲಿದೆ ಎಂದು ಬಜೆಟ್‌ನಲ್ಲಿ ಅಂದಾಜು ಮಾಡಲಾಗಿದೆ.

> **ಸೀಮಾ ಸುಂಕ ಹಾಗೂ ಎಕ್ಸೈಸ್ ಸುಂಕವನ್ನು ಕಡಿಮೆ ಮಾಡಿದ್ದರೂ ಈ ಎರಡು ಬಗೆಯ ಸುಂಕ ಸಂಗ್ರಹದ ಗುರಿಯನ್ನು ಬಹುತೇಕ ತಲುಪಲಾಗುವುದು**
> **ತರುಣ್ ಬಜಾಜ್,** ಕೇಂದ್ರ ರೆವಿನ್ಯು ಕಾರ್ಯದರ್ಶಿ

ಆದಾಯ ತೆರಿಗೆ ಹಾಗೂ ಕಾರ್ಪೊರೇಟ್ ತೆರಿಗೆಯನ್ನು ಒಳಗೊಂಡಿರುವ ನೇರ ತೆರಿಗೆ ಸಂಗ್ರಹವು ಅಂದಾಜು ₹ 17.50 ಲಕ್ಷ ಕೋಟಿ ಆಗಲಿದೆ. ಜಿಎಸ್‌ಟಿ, ಸೀಮಾ ಸುಂಕ, ಎಕ್ಸೈಸ್ ಸುಂಕವನ್ನು ಒಳಗೊಂಡಿರುವ ಪರೋಕ್ಷ ತೆರಿಗೆ ಮೂಲಕ ಸಂಗ್ರಹವಾಗುವ ಮೊತ್ತವು ಸರಿಸುಮಾರು ₹ 14 ಲಕ್ಷ ಕೋಟಿ ಇರಲಿದೆ ಎಂದು ಬಜಾಜ್ ಹೇಳಿದ್ದಾರೆ.

2022–23ರಲ್ಲಿ ಆಗಲಿರುವ ಒಟ್ಟು ತೆರಿಗೆ ಸಂಗ್ರಹವು ₹ 31.50 ಲಕ್ಷ ಕೋಟಿ ಇರಲಿದೆ.

'ನಾವು ಬಹಳಷ್ಟು ದತ್ತಾಂಶಗಳನ್ನು ಬಳಸುತ್ತಿದ್ದೇವೆ. ಅರ್ಥ ವ್ಯವಸ್ಥೆಯಲ್ಲಿನ ವಹಿವಾಟುಗಳು ಹೆಚ್ಚು ಪ್ರಮಾಣದಲ್ಲಿ ಲೆಕ್ಕಕ್ಕೆ ಸಿಗುತ್ತಿರುವುದು ತೆರಿಗೆ ಸಂಗ್ರಹ ಹೆಚ್ಚಾಗುವಲ್ಲಿ ನೆರವಿಗೆ ಬಂದಿದೆ' ಎಂದು ಅವರು ತಿಳಿಸಿದ್ದಾರೆ.

ಬೆಂಗಳೂರಿಗೆ ಶಿವರಾಜ್ ಸಿಂಗ್ ಚೌಹಾಣ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಧ್ಯಪ್ರದೇಶದ ಇಂದೋರ್‌ನಲ್ಲಿ ಜನವರಿ 11 ಮತ್ತು 12ರಂದು ಜಾಗತಿಕ ಹೂಡಿಕೆದಾರರ ಸಮಾವೇಶ ನಡೆಯಲಿದ್ದು, ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಅದಕ್ಕೆ ಸಂಬಂಧಿಸಿದಂತೆ ಬೆಂಗಳೂರಿನಲ್ಲಿ ಹೂಡಿಕೆದಾರರ ಜೊತೆ ಗುರುವಾರ ಮಾತುಕತೆ ನಡೆಸಲಿದ್ದಾರೆ.



ಶಿವರಾಜ್ ಸಿಂಗ್ ಚೌಹಾಣ್

ಹೂಡಿಕೆದಾರರ ಸಮಾವೇಶದ ಮೂಲಕ ಮಧ್ಯಪ್ರದೇಶದಲ್ಲಿ ಭಾರಿ ಸಂಖ್ಯೆಯಲ್ಲಿ ಉದ್ಯೋಗ ಸೃಷ್ಟಿಯಾಗಲಿದೆ ಎಂದು ಚೌಹಾಣ್ ಅವರು ಹೇಳಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಚೌಹಾಣ್ ಅವರು ಬೆಂಗಳೂರಿನಲ್ಲಿ ಮಾಹಿತಿ ತಂತ್ರಜ್ಞಾನ (ಐ.ಟಿ), ವಾಣಿಜ್ಯ ಪ್ರಕ್ರಿಯೆ ಹೊರಗುತ್ತಿಗೆ (ಬಿಪಿಒ), ಎಲೆಕ್ಟ್ರಾನಿಕ್ಸ್ ವ್ಯವಸ್ಥೆಯ ವಿನ್ಯಾಸ ಮತ್ತು ತಯಾರಿಕೆ (ಇಎಸ್‌ಡಿಎಂ) ವಲಯದ ಕಂಪನಿಗಳ ಜೊತೆ ಮಾತುಕತೆ ನಡೆಸಲಿದ್ದಾರೆ.

ಅಲ್ಲದೆ, ಜವಳಿ ಹಾಗೂ ಗಾರ್ಮೆಂಟ್ ಕಂಪನಿಗಳ ಪ್ರತಿನಿಧಿಗಳ ಜೊತೆಯಲ್ಲಿಯೂ ಅವರು ಮಾತುಕತೆ ನಡೆಸಲಿದ್ದಾರೆ.

ಸುದ್ದಿ 2 ನಿಮಿಷ

ಎಚ್‌ಪಿ ಕಂಪನಿಯಲ್ಲಿ ಆರು ಸಾವಿರ ಉದ್ಯೋಗ ಕಡಿತ

ಸ್ಯಾನ್ ಫ್ರಾನ್ಸಿಸ್ಕೊ (ಎಎಫ್‌ಪಿ): ಲ್ಯಾಪ್‌ಟಾಪ್ ಹಾಗೂ ಇತರ ಕಂಪ್ಯೂಟರ್ ತಯಾರಿಕಾ ಕಂಪನಿ ಹ್ಯೂಲೆಟ್ ಪ್ಯಾಕರ್ಡ್, ಮುಂದಿನ ಮೂರು ವರ್ಷಗಳಲ್ಲಿ ಒಟ್ಟು ಆರು ಸಾವಿರ ನೌಕರರನ್ನು ಕೆಲಸದಿಂದ ತೆಗೆಯುವುದಾಗಿ ಮಂಗಳವಾರ ಪ್ರಕಟಿಸಿದೆ.

ಎಚ್‌ಪಿ ಕಂಪನಿಯಲ್ಲಿ ಅಂದಾಜು 61 ಸಾವಿರ ನೌಕರರು ಇದ್ದಾರೆ. 2025ರ ಸುಮಾರಿಗೆ ವಾರ್ಷಿಕವಾಗಿ ಒಟ್ಟು 1.4 ಬಿಲಿಯನ್ ಡಾಲರ್ (ಅಂದಾಜು ₹ 11 ಸಾವಿರ ಕೋಟಿ) ಉಳಿತಾಯ ಮಾಡುವ ಉದ್ದೇಶ ಇದೆ ಎಂದು ಕಂಪನಿ ಹೇಳಿದೆ. ಮೆಟಾ, ಅಮೆಜಾನ್ ಮತ್ತು ಟ್ವಿಟರ್‌ನಂತಹ ಕಂಪನಿಗಳು ಕೂಡ ವೆಚ್ಚ ಕಡಿತದ ಮೊರೆ ಹೋಗಿವೆ.

'ಈ ಕ್ರಮದಿಂದಾಗಿ ನಮಗೆ, ನಮ್ಮ ಗ್ರಾಹಕರಿಗೆ ಇನ್ನಷ್ಟು ಉತ್ತಮವಾದ ಸೇವೆ ಕೊಡಲು ಸಾಧ್ಯವಾಗುತ್ತದೆ. ವೆಚ್ಚಗಳನ್ನು ತಗ್ಗಿಸುವ ಮೂಲಕ ದೀರ್ಘಾವಧಿಯಲ್ಲಿ ಸಂಪತ್ತನ್ನು ಸೃಷ್ಟಿಸಲು ಕೂಡ ಆಗುತ್ತದೆ' ಎಂದು ಕಂಪನಿಯ ಸಿಇಒ ಎನ್ರಿಕ್ ಲಾರೆಸ್ ಹೇಳಿದ್ದಾರೆ.

ಫೇಸ್‌ಬುಕ್ ಮಾಲೀಕತ್ವದ ಮೆಟಾ ಕಂಪನಿಯು 11 ಸಾವಿರ ನೌಕರರನ್ನು ಕೆಲಸದಿಂದ ತೆಗೆಯುವುದಾಗಿ ಹೇಳಿದೆ. ಟ್ವಿಟರ್ ಕಂಪನಿಯು ಉದ್ಯಮಿ ಎಲಾನ್ ಮಸ್ಕ್ ಅವರ ತೆಕ್ಕೆಗೆ ಸೇರಿದ ನಂತರದಲ್ಲಿ ಶೇಕಡ 50ರಷ್ಟು ನೌಕರರನ್ನು ಕೆಲಸದಿಂದ ತೆಗೆಯಲಾಗಿದೆ.

'ಒಎನ್‌ಡಿಸಿ' ಸೇರಿದ ಮೀಶೊ

ಬೆಂಗಳೂರು: ಓಪನ್ ನೆಟ್‌ವರ್ಕ್ ಫಾರ್ ಡಿಜಿಟಲ್ ಕಾಮರ್ಸ್ (ಒಎನ್‌ಡಿಸಿ) ಸೇರಿರುವುದಾಗಿ ಇ-ಕಾಮರ್ಸ್ ಕಂಪನಿ ಮೀಶೊ ಬುಧವಾರ ಹೇಳಿದೆ.

ಖರೀದಿದಾರರಿಗೆ ಹೆಚ್ಚಿನ ಸಂಖ್ಯೆಯ ಮಾರಾಟಗಾರರು ಸಿಗುವಂತೆ ಮಾಡಲು ಈ ನಿರ್ಧಾರಕ್ಕೆ ಬಂದಿರುವುದಾಗಿ ಅದು ತಿಳಿಸಿದೆ.

'ಸಣ್ಣ ಮಾರಾಟಗಾರರನ್ನು ಸಬಲಗೊಳಿಸುವ ಮತ್ತು ಸ್ಥಳೀಯ ವಹಿವಾಟು ಹೆಚ್ಚಿಸುವ ಉದ್ದೇಶದಿಂದ ಈ ವೇದಿಕೆಗೆ ಸೇರಿಕೊಳ್ಳಲಾಗಿದೆ. ಹೆಚ್ಚು ಗ್ರಾಹಕರನ್ನು ಆನ್‌ಲೈನ್ ವ್ಯವಸ್ಥೆಗೆ ತರುವ ಮೂಲಕ ದೇಶದ ಇ-ಕಾಮರ್ಸ್ ವಲಯದ ವಿಸ್ತರಣೆಯಲ್ಲಿ ಒಎನ್‌ಡಿಸಿ ಪ್ರಮುಖ ಪಾತ್ರ ವಹಿಸಲಿದೆ' ಎಂದು ಕಂಪನಿಯ ಸಹಸ್ಥಾಪಕ ವಿದಿತ್ ಆತ್ರೇಯ್ ಹೇಳಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು
ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಐದನೇ ವರ್ಷದ ಸವಿನೆನಪು

ಶ್ರೀಮತಿ ಡಿ.ಲಕ್ಷ್ಮಿರವರು
ಜನನ : 24-10-1959
ಮರಣ : 19-11-2017
ಸದಾ ನಿಮ್ಮ ನೆನಪಿನಲ್ಲಿರುವ
ಪತಿ: ಕೆ.ಸುಬ್ರಮಣ್ಯಂ ನಾಯ್ಡು
ಮಾಜಿ ಅಧ್ಯಕ್ಷರು:
ಕಮ್ಮವಾರಿ ಸಂಘಂ ಬೆಂಗಳೂರು
ಮತ್ತು ಕುಟುಂಬ ವರ್ಗದವರು

'ಫೌಂಡಿಟ್' ಆಗಿ ಬದಲಾದ ಮಾನ್‌ಸ್ಟರ್ ಡಾಟ್ ಕಾಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯೋಗ ಹುಡುಕಾಟದ ವೇದಿಕೆಯಾಗಿರುವ 'ಮಾನ್‌ಸ್ಟರ್ ಡಾಟ್ ಕಾಂ' ಬುಧವಾರದಿಂದ 'ಫೌಂಡಿಟ್' ಎನ್ನುವ ಹೆಸರಿನಲ್ಲಿ ಪ್ರತಿಭೆ ನಿರ್ವಹಣಾ ವೇದಿಕೆಯಾಗಿ ಕಾರ್ಯಾಚರಣೆ ಆರಂಭಿಸಿದೆ.

ಈ ಪರಿವರ್ತನೆಯ ಮೂಲಕ ಏಷ್ಯಾ ಪೆಸಿಫಿಕ್ ಮತ್ತು ಮಧ್ಯಪ್ರಾಚ್ಯದಲ್ಲಿ ಉದ್ಯೋಗದಾತ ಕಂಪನಿಗಳು ಮತ್ತು ಉದ್ಯೋಗದ ಹುಡುಕಾಟದಲ್ಲಿ ಇರುವವರಿಗೆ ತಂತ್ರಜ್ಞಾನ ಆಧಾರಿತ ಸೇವೆ ಒದಗಿಸಲಾಗುವುದು. 18 ದೇಶಗಳಲ್ಲಿ ಉದ್ಯೋಗ ಹುಡುಕುತ್ತಿರುವ 7 ಕೋಟಿಗೂ ಅಧಿಕ ಜನರು ಮತ್ತು 10 ಸಾವಿರ ಕಂಪನಿಗಳಿಗೆ ಸೇವೆ ಒದಗಿಸಲಾಗುತ್ತದೆ ಎಂದು ಕಂಪನಿಯು ತಿಳಿಸಿದೆ.

ಹೊಸ ಬ್ರ್ಯಾಂಡ್ ಅನಾವರಣ ಮಾಡಿದ ಫೌಂಡಿಟ್ ಡಾಟ್ ಇನ್ ಸಿಇಒ ಶೇಖರ್ ಗರಿಸಾ, 'ಬಳಕೆದಾರರಿಗೆ ಉತ್ತಮ ಸೇವೆ ನೀಡಲು ಕೃತಕ ಬುದ್ಧಿಮತ್ತೆ (ಎ.ಐ.), ದತ್ತಾಂಶ ಮತ್ತು ದತ್ತಾಂಶ ವಿಶ್ಲೇಷಣಾ ಸೌಲಭ್ಯಗಳನ್ನು ಬಳಸಿಕೊಳ್ಳಲು ಕಂಪನಿ ಮುಂದಾಗಿದೆ.

'ಉದ್ಯೋಗದ ಹುಡುಕಾಟ ನಡೆಸುವವರಿಗೆ ಅವರ ಪ್ರೊಫೈಲ್ ಅನ್ನು ಹೆಚ್ಚು ಆಕರ್ಷಕವಾಗಿಸಲು, ಕೌಶಲ ವೃದ್ಧಿಗೆ ಗಮನ ಹರಿಸುವಂತೆ ಮಾಡುವ ಜೊತೆಗೆ ಇನ್ನೂ ಹಲವು ವೈಯಕ್ತಿಕ ಸೇವೆಗಳನ್ನು ಸಹ ಫೌಂಡಿಟ್ ನೀಡಲಿದೆ' ಎಂದು ಮಾಹಿತಿ ನೀಡಿದರು.

'ಮಾರುಕಟ್ಟೆಯಲ್ಲಿ ಕೌಶಲ ಆಧಾರಿತ ನೇಮಕಾತಿಗೆ ವೇಗ ದೊರೆಯುವ ನಿರೀಕ್ಷೆ ಇದೆ. ಇಂತಹ ಸಂದರ್ಭದಲ್ಲಿ 'ಫೌಂಡಿಟ್ ಡಾಟ್ ಇನ್' ಮೂಲಕ ಉದ್ಯೋಗದಾತ ಮತ್ತು ಉದ್ಯೋಗದ ಹುಡುಕಾಟದಲ್ಲಿ ಇರುವ ಇಬ್ಬರಿಗೂ ಮಾನವನ ಜಾಣ್ಮೆ ಮತ್ತು ತಂತ್ರಜ್ಞಾನದ ಸಂಯೋಜನೆಯನ್ನು ಒಳಗೊಂಡು ವೇದಿಕೆಯನ್ನು ನೀಡಿದ್ದೇವೆ' ಎಂದು ಫೌಂಡಿಟ್ ಡಾಟ್ ಇನ್‌ನ ಮಾತೃಸಂಸ್ಥೆ ಕ್ವೆಸ್ ಕಾರ್ಪ್‌ನ ಸ್ಥಾಪಕ ಅಜಿತ್ ಐಸಾಕ್ ಹೇಳಿದರು.

ಹೊಸ ಪಲ್ಸರ್

ಬೆಂಗಳೂರು: ಬಜಾಜ್ ಆಟೊ ಕಂಪನಿಯು ಪಲ್ಸರ್ ದ್ವಿಚಕ್ರ ವಾಹನದ ಹೊಸ ಆವೃತ್ತಿ 'ಪಿ150'ಅನ್ನು ಬಿಡುಗಡೆ ಮಾಡಿದೆ. ಇದು 150 ಸಿಸಿ ಎಂಜಿನ್ ಹೊಂದಿದೆ.

'ಪಿ150' ಮಾದರಿಯ ಬೆಲೆ ₹ 1.16 ಲಕ್ಷದಿಂದ ₹ 1.19 ಲಕ್ಷ (ಎಕ್ಸ್ ಷೋರೂಂ) ನಡುವೆ ಇದೆ. ಐದು ಬಣ್ಣಗಳಲ್ಲಿ ಇದು ಲಭ್ಯವಿರಲಿದೆ ಎಂದು ಕಂಪನಿ ಹೇಳಿದೆ. ಎಲ್‌ಇಡಿ ಪ್ರೊಜೆಕ್ಟರ್ ಹೆಡ್‌ಲ್ಯಾಂಪ್, ಯಾವ ಗಿಯರ್‌ನಲ್ಲಿ ವಾಹನ ಚಲಿಸುತ್ತಿದೆ ಎಂಬುದರ ಮಾಹಿತಿ, ಎಬಿಎಸ್ ಇದರಲ್ಲಿ ಇವೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		**ಪುತ್ತೂರು**		ರಾಶಿ	44699-47509
ಬಂಟ್ವಾಳ		ಕೋಕ	11000-26000	**ಶಿರಸಿ**	
ಕೋಕ	12500-25000	ಹೊಸತು	32000-38000	ಬೆಟ್ಟೆ	35299-44499
ಹಳತು	48000-55000	**ಶಿವಮೊಗ್ಗ**		ಬಿಳಿಗೋಟು	18899-34699
ಕಾರ್ಕಳ		ಬೆಟ್ಟೆ	47769-52010	ಚಾಲಿ	28689-40307
ಹೊಸತು	25000-37500	ಗೊರಬಲು	17000-35525	ರಾಶಿ	43869-45808
ಹಳತು	40000-55500	ಹೊಸತು	45139-46909		

ದಿಶಾ ಸಾವು ಆಕಸ್ಮಿಕ: ಸಿಬಿಐ

ಮುಂಬೈ: ಬಾಲಿವುಡ್ ಟ್ಯಾಲೆಂಟ್ ಮ್ಯಾನೇಜರ್ ದಿಶಾ ಸಾಲಿಯಾನ್ (28) ಅವರ ಸಾವು ಆಕಸ್ಮಿಕ ಪ್ರಕರಣ ಎಂದು ಸಿಬಿಐ ತೀರ್ಮಾನಿಸಿದೆ.

2020ರ ಜೂನ್ 8-9 ರ ಮಧ್ಯರಾತ್ರಿ ಮಲಾಡ್‌ನ ಗ್ಯಾಲಕ್ಸಿ ರೀಜೆಂಟ್ ಕಟ್ಟಡದ 14ನೇ ಮಹಡಿಯಿಂದ ಬಿದ್ದಿದ್ದರು ಎಂದು ವರದಿಯಾಗಿತ್ತು. ದಿಶಾ ಕೊಲೆಗೂ ಮುನ್ನ ಅತ್ಯಾಚಾರಕ್ಕೊಳಗಾಗಿದ್ದಾಳೆ. ರಜಪೂತ್ ಈ ವಿಷಯವನ್ನು ಬಹಿರಂಗಪಡಿಸಲು ಯತ್ನಿಸಿದಾಗ ಅವನನ್ನೂ ಕೊಲ್ಲಲಾಯಿತು ಎಂದು ಹೇಳಲಾಗಿತ್ತು.

ಆಫ್ತಾಬ್ ವಿರುದ್ಧ 2020ರಲ್ಲಿ ಪೊಲೀಸರಿಗೆ ದೂರು ನೀಡಿದ್ದ ಶ್ರದ್ಧಾ ವಾಲಕರ್

'2 ವರ್ಷದ ಹಿಂದೆಯೇ ಬೆದರಿಕೆ ಹಾಕಿದ್ದ'

ಮುಂಬೈ (ಪಿಟಿಐ): 'ನನ್ನ ಸಹಜೀವನದ ಸಂಗಾತಿ ಆಫ್ತಾಬ್ ಅಮೀನ್ ಪೂನಾವಾಲಾ ತನ್ನನ್ನು ಕೊಂದು, ತುಂಡು ತುಂಡಾಗಿ ಕತ್ತರಿಸಿ ಎಸೆಯುವುದಾಗಿ ಬೆದರಿಕೆ ಹಾಕಿದ್ದಾನೆ' ಎಂದು ಎರಡು ವರ್ಷಗಳ ಹಿಂದೆಯೇ ಕಾಲ್ ಸೆಂಟರ್ ಉದ್ಯೋಗಿ ಶ್ರದ್ಧಾ ವಾಲಕರ್ ಮಹಾರಾಷ್ಟ್ರದ ಪೊಲೀಸರಿಗೆ ದೂರು ನೀಡಿದ್ದರು ಎಂದು ಬುಧವಾರ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

2020ರ ನ. 23ರಂದು ಪಾಲ್ಘರ್‌ನ ತುಳಿಂಜ್ ಪೊಲೀಸ್ ಠಾಣೆಗೆ ನೀಡಿದ್ದ ದೂರಿನಲ್ಲಿ ಶ್ರದ್ಧಾ, 'ಆಫ್ತಾಬ್ ನನ್ನನ್ನು ಥಳಿಸುತ್ತಿದ್ದು, ಕೊಲೆಯ ಬೆದರಿಕೆಯನ್ನೂ ಹಾಕಿದ್ದಾನೆ. ಈ ವಿಷಯ ಆತನ ಪೋಷಕರಿಗೆ ತಿಳಿದಿದೆ' ಎಂದೂ ಆರೋಪಿಸಿದ್ದರು.

'ಆಫ್ತಾಬ್ ಇಂದು ನನ್ನನ್ನು ಕಟ್ಟಿಹಾಕಿ, ಉಸಿರುಗಟ್ಟಿಸಿ ಕೊಲ್ಲಲು ಯತ್ನಿಸಿದ. ನನ್ನನ್ನು ಕೊಂದು ತುಂಡುಗಳನ್ನಾಗಿ ಕತ್ತರಿಸಿ ಎಸೆಯುವುದಾಗಿ ಬೆದರಿಕೆ ಹಾಕಿದ. ಕಳೆದ ಆರು ತಿಂಗಳಿನಿಂದ ಅವನು ನನ್ನನ್ನು ಹೊಡೆಯುತ್ತಿದ್ದಾನೆ. ಅವನು ನನ್ನನ್ನು ಕೊಲ್ಲುವುದಾಗಿ ಬೆದರಿಕೆ ಹಾಕಿರುವುದರಿಂದ ಪೊಲೀಸರಿಗೆ ದೂರು ನೀಡುವಷ್ಟು ಧೈರ್ಯ ನನ್ನಲ್ಲಿಲ್ಲ' ಎಂದು ಶ್ರದ್ಧಾ ದೂರಿನಲ್ಲಿ ಹೇಳಿದ್ದಾರೆ.



ಶ್ರದ್ಧಾ ವಾಲಕರ್ ಆಫ್ತಾಬ್

'ನಾವಿಬ್ಬರೂ ಸಹಜೀವನ ನಡೆಸುತ್ತಿರುವುದು ಆಫ್ತಾಬ್‌ನ ಪೋಷಕರಿಗೆ ತಿಳಿದಿದೆ. ವಾರಾಂತ್ಯಗಳಲ್ಲಿ ಅವರು ನಮ್ಮ ಮನೆಗೆ ಭೇಟಿ ನೀಡುತ್ತಿದ್ದರು. ಶೀಘ್ರದಲ್ಲಿಯೇ ಮದುವೆಯಾಗುವ ಭರವಸೆಯಿಂದ ಆತನೊಂದಿಗೆ ವಾಸಿಸುತ್ತಿದ್ದೆ. ಆತನ ಕುಟುಂಬದ ಆಶೀರ್ವಾದವೂ ದೊರೆಯಬಹುದು ಎಂದು ಕೊಂಡಿದ್ದೆ. ಆದರೆ, ಹೊರಗೆ ಎಲ್ಲಾದರೂ ಕಂಡರೆ ಆತ ನನ್ನನ್ನು ಕೊಲ್ಲುವುದಾಗಿ ಬೆದರಿಕೆ ಹಾಕಿದ್ದಾನೆ. ಆತನಿಂದ ನನ್ನ ಮೇಲೆ ಯಾವುದೇ ರೀತಿಯ ದೈಹಿಕ ರೀತಿಯ ಹಲ್ಲೆ ನಡೆಯುವ ಸಾಧ್ಯತೆ ಇದೆ' ಎಂದೂ ಶ್ರದ್ಧಾ ಪೊಲೀಸರಿಗೆ ಸಲ್ಲಿಸಿರುವ ದೂರಿನಲ್ಲಿ ಆರೋಪಿಸಿದ್ದಾರೆ.

ಗರಗಸ ಮಾದರಿ ಚಾಕು ಬಳಕೆ ಸಾಧ್ಯತೆ (ನವದೆಹಲಿ): ಶ್ರದ್ಧಾಳ ದೇಹವನ್ನು ತುಂಡು ಮಾಡಲು ಆರೋಪಿಯು ಎಲೆಕ್ಟ್ರಿಕಲ್ ಕಟರ್ ಹಾಗೂ ಗರಗಸದಂಥ ಹಲ್ಲುಗಳನ್ನು ಹೊಂದಿರುವ ಚಾಕುವನ್ನು ಬಳಸಿರುವ ಸಾಧ್ಯತೆ ಇದೆ'ಎಂದು ವಿಧಿವಿಜ್ಞಾನ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

'ಈ ಹಿಂದೆ ಇಂತಹ ಪ್ರಕರಣಗಳಲ್ಲಿ ಎಲೆಕ್ಟ್ರಿಕ್ ಕಟರ್ ಅಥವಾ ಕನಿಷ್ಠ 18 ರಿಂದ 20 ಇಂಚು ಗಾತ್ರದ ಗರಗಸದಂಥ ಹಲ್ಲಿನ ಚಾಕುಗಳನ್ನು ಆರೋಪಿಗಳು ಬಳಸಿದ್ದರು' ಎಂದೂ ತಜ್ಞರು ಹೇಳಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ಇದುವರೆಗೆ ಯಾವುದೇ ಆಯುಧವನ್ನು ವಶಪಡಿಸಿಕೊಂಡಿಲ್ಲ.

ಆಫ್ತಾಬ್‌ಗೆ ಇಂದು ಮಂಪರು ಪರೀಕ್ಷೆ

ನವದೆಹಲಿ: ಆರೋಪಿ ಆಫ್ತಾಬ್‌ಗೆ ದೆಹಲಿ ಪೊಲೀಸರು ಮಂಗಳವಾರ ಸಂಜೆ ಸುಳ್ಳುಪತ್ತೆ ಪರೀಕ್ಷೆ ನಡೆಸಿದ್ದು, ಗುರುವಾರ ಮಂಪರು ಪರೀಕ್ಷೆ ನಡೆಸಲಿದ್ದಾರೆ. ಮಂಪರು ಪರೀಕ್ಷೆ ನಡೆಸಲು ದೆಹಲಿ ಕೋರ್ಟ್ ಕಳೆದ ವಾರವೇ ಪೊಲೀಸರಿಗೆ ಅನುಮತಿ ನೀಡಿದೆ.

ರಕ್ತದ ಕಲೆ ಪತ್ತೆ: ಶ್ರದ್ಧಾ ಮತ್ತು ಆಫ್ತಾಬ್ ಇಬ್ಬರೂ ವಾಸಿಸುತ್ತಿದ್ದ ಫ್ಲ್ಯಾಟ್‌ನಲ್ಲಿ ಪೊಲೀಸರಿಗೆ ರಕ್ತದ ಕಲೆಗಳ ಜೊತೆಗೆ ಮತ್ತಷ್ಟು ಸಾಕ್ಷ್ಯಗಳೂ ದೊರೆತಿವೆ.

ಫ್ಲ್ಯಾಟ್‌ನ ಬಾತ್‌ರೂಂ ಟೈಲ್ಸ್‌ಗಳಲ್ಲಿ ರಕ್ತದ ಕಲೆಗಳು ಪತ್ತೆಯಾಗಿದ್ದು, ರಕ್ತವು ಶ್ರದ್ಧಾಳದ್ದೇ ಎಂದು ಪತ್ತೆ ಹಚ್ಚಲು ಡಿಎನ್‌ಎ ಪರೀಕ್ಷೆಗೆ ಕಳುಹಿಸಲಾಗಿದೆ. ಪರೀಕ್ಷೆಯ ವರದಿಯು ಎರಡು ವಾರಗಳೊಳಗೆ ಬರುವ ಸಾಧ್ಯತೆ ಇದೆ.

'ಸಿಟ್ಟಿನ ಭರದಲ್ಲಿ ಅಪರಾಧ ನಡೆಯಿತು. ಉದ್ದೇಶಪೂರ್ವಕವಾಗಿ ಕೃತ್ಯ ಎಸಗಿಲ್ಲ ಎಂದು ಆಫ್ತಾಬ್ ಹೇಳಿದ್ದಾನೆಯೇ ಹೊರತು ತಾನೇ ಶ್ರದ್ಧಾಳನ್ನು ಕೊಂದಿರುವುದಾಗಿ ಕೋರ್ಟ್ ಮುಂದೆ ತಪ್ಪೊಪ್ಪಿಕೊಂಡಿಲ್ಲ' ಎಂದು ಆರೋಪಿ ಪರ ವಕೀಲ ಅವಿನಾಶ್ ಕುಮಾರ್ ತಿಳಿಸಿದ್ದಾರೆ.

ಬಿಜೆಪಿ–ವಿರೋಧ ಪಕ್ಷಗಳ ಜಟಾಪಟಿ

ಪ್ರಜಾವಾಣಿ ವಾರ್ತೆ

ಮುಂಬೈ: ನನ್ನನ್ನು ಕೊಂದು, ತುಂಡು ತುಂಡಾಗಿ ಕತ್ತರಿಸಿ ಎಸೆಯುವುದಾಗಿ ಆಫ್ತಾಬ್ ಬೆದರಿಕೆ ಹಾಕಿದ್ದಾನೆ ಎಂದು ಆರೋಪಿಸಿ ಶ್ರದ್ಧಾ ಎರಡು ವರ್ಷಗಳ ಹಿಂದೆ ಪೊಲೀಸರಿಗೆ ಬರೆದಿದ್ದ ಪತ್ರವು ಮಹಾರಾಷ್ಟ್ರದ ಆಡಳಿತಾರೂಢ ಬಿಜೆಪಿ ಹಾಗೂ ವಿರೋಧ ಪಕ್ಷಗಳ ನಡುವೆ ಜಟಾಪಟಿಗೆ ಕಾರಣವಾಗಿದೆ. ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಸರ್ಕಾರವು ಶ್ರದ್ಧಾ ದೂರಿನ ಕುರಿತು ಪೊಲೀಸರು ಯಾವುದೇ ಕ್ರಮ ಕೈಗೊಳ್ಳದಿರುವುದರ ಬಗ್ಗೆ ತನಿಖೆ ನಡೆಸಲು ಆದೇಶಿಸಿದೆ.

ದಡಾರ: ಮುಂಬೈಯಲ್ಲಿ 12 ಸಾವು

ಮುಂಬೈ (ಪಿಟಿಐ): 'ನಗರದಲ್ಲಿ ಬುಧವಾರ ಹೊಸದಾಗಿ 13 ದಡಾರ ಪ್ರಕರಣಗಳು ಪತ್ತೆಯಾಗಿದ್ದು, ಮಗುವೊಂದು ಮೃತಪಟ್ಟಿದೆ. ಇದರೊಂದಿಗೆ ಈ ವರ್ಷ ದಡಾರದಿಂದ ಸಾವಿಗೀಡಾದವರ ಸಂಖ್ಯೆ 12ಕ್ಕೆ ಏರಿಕೆಯಾಗಿದೆ' ಎಂದು ಬೃಹತ್ ಮುಂಬೈ ಮಹಾನಗರ ಪಾಲಿಕೆ (ಬಿಎಂಸಿ) ತಿಳಿಸಿದೆ.

'ಭಿವಂಡಿಯಲ್ಲಿ ಎಂಟು ತಿಂಗಳ ಗಂಡು ಮಗುವಿಗೆ ರೋಗ ಬಾಧಿಸಿತ್ತು. ಆ ಮಗು ಚಿಕಿತ್ಸೆಗೆ ಸ್ಪಂದಿಸದೆ ಮಂಗಳವಾರ ಸಂಜೆ ಅಸುನೀಗಿದೆ.

ಈ ರೋಗದಿಂದ ಬಳಲುತ್ತಿದ್ದ ಒಟ್ಟು 30 ಮಂದಿ ಬುಧವಾರ ಚಿಕಿತ್ಸೆಗಾಗಿ ವಿವಿಧ ಆಸ್ಪತ್ರೆಗಳಿಗೆ ದಾಖಲಾಗಿದ್ದರು. ಈ ಪೈಕಿ 22 ಮಂದಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ' ಎಂದು ಬಿಎಂಸಿ ಪ್ರಕಟಣೆ ಹೇಳಿದೆ.

'ಬಿಎಂಸಿ ನಡೆಸಿರುವ ಸಮೀಕ್ಷೆಯಲ್ಲಿ 156 ಶಂಕಿತ ಪ್ರಕರಣಗಳು ಪತ್ತೆಯಾಗಿವೆ. ಈ ವರ್ಷ ಒಟ್ಟು 233 ದಡಾರ ಪ್ರಕರಣಗಳು ವರದಿಯಾಗಿವೆ' ಎಂದು ತಿಳಿಸಿದೆ.

ಬಿ.ಎಲ್. ಸಂತೋಷ್‌ಗೆ ಹೊಸದಾಗಿ ನೋಟಿಸ್: ಎಸ್‌ಐಟಿಗೆ ಸೂಚನೆ

ಹೈದರಾಬಾದ್ (ಪಿಟಿಐ): ಭಾರತ ರಾಷ್ಟ್ರ ಸಮಿತಿಯ (ಬಿಆರ್‌ಎಸ್) ಶಾಸಕರನ್ನು ಖರೀದಿಸಲು ಯತ್ನಿಸಲಾಗಿತ್ತು ಎಂಬ ಪ್ರಕರಣಕ್ಕೆ ಸಂಬಂಧಿಸಿ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್.ಸಂತೋಷ್ ಅವರಿಗೆ ಮತ್ತೊಮ್ಮೆ ನೋಟಿಸ್ ನೀಡುವಂತೆ ತೆಲಂಗಾಣ ಹೈಕೋರ್ಟ್ ಎಸ್‌ಐಟಿಗೆ ಬುಧವಾರ ನಿರ್ದೇಶಿಸಿದೆ.

ವಿಚಾರಣೆಗಾಗಿ ನ.21ರಂದು ತನ್ನ ಮುಂದೆ ಹಾಜರಾಗುವಂತೆ ವಿಶೇಷ ತನಿಖಾ ತಂಡವು (ಎಸ್‌ಐಟಿ), ಸಂತೋಷ್ ಹಾಗೂ ಇತರರಿಗೆ ನೋಟಿಸ್ ಜಾರಿ ಮಾಡಿತ್ತು. ಆದರೆ, ಅವರು ವಿಚಾರಣೆಗೆ ಹಾಜರಾಗಿರಲಿಲ್ಲ.

'ಎಸ್‌ಐಟಿ ಮುಂದೆ ಹಾಜರಾಗುವಂತೆ ಸಂತೋಷ್ ಅವರಿಗೆ ನೋಟಿಸ್ ನೀಡಲಾಗಿತ್ತು. ಪೂರ್ವನಿರ್ಧರಿತ ಪ್ರವಾಸ ಕಾರ್ಯಕ್ರಮಗಳಿಂದಾಗಿ ವಿಚಾರಣೆಗೆ ಹಾಜರಾಗಲು ಕಾಲಾವಕಾಶ ನೀಡುವಂತೆ ಅವರು ಕೇಳಿದ್ದರು' ಎಂದು ತೆಲಂಗಾಣದ ಅಡ್ವೊಕೇಟ್ ಜನರಲ್ ಬಿ.ಎಸ್.ಪ್ರಸಾದ್ ಅವರು ಕೋರ್ಟ್‌ಗೆ ತಿಳಿಸಿದರು.

ವಾದ ಆಲಿಸಿದ ನ್ಯಾಯಮೂರ್ತಿಗಳು, 'ಎಸ್‌ಐಟಿ ಮುಂದೆ ಹಾಜರಾಗಲು ಸಂತೋಷ್ ಅವರಿಗೆ ನ್ಯಾಯಸಮ್ಮತವಾದ ಕಾಲಾವಕಾಶ ಒದಗಿಸಿ, ಹೊಸದಾಗಿ ನೋಟಿಸ್ ಜಾರಿ ಮಾಡಿ' ಎಂದು ಸೂಚಿಸಿ, ವಿಚಾರಣೆಯನ್ನು ನ. 29ಕ್ಕೆ ಮುಂದೂಡಿದರು.

ಇದೇ ಪ್ರಕರಣಕ್ಕೆ ಸಂಬಂಧಿಸಿ, ವಕೀಲರೊಬ್ಬರು ಎಸ್‌ಐಟಿ ಎದುರು ಹಾಜರಾಗಿದ್ದಾರೆ.

ಸಿಆರ್‌ಪಿಎಫ್‌ನಿಂದ ಮಗನಿಗೆ ಥಳಿತ: ತೆಲಂಗಾಣ ಸಚಿವ

ಹೈದರಾಬಾದ್ (ಪಿಟಿಐ): ಆದಾಯ ತೆರಿಗೆ ಇಲಾಖೆಯ(ಐಟಿ) ಅಧಿಕಾರಿಗಳ ಜೊತೆ ಬಂದಿದ್ದ ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ಸಿಬ್ಬಂದಿ ತಮ್ಮ ಮಗನನ್ನು ಥಳಿಸಿದ್ದಾರೆ ಎಂದು ತೆಲಂಗಾಣ ಕಾರ್ಮಿಕ ಕಲ್ಯಾಣ ಸಚಿವ ಮಲ್ಲಾ ರೆಡ್ಡಿ ಅವರು ಬುಧವಾರ ಆರೋಪಿಸಿದ್ದಾರೆ.

ಮಲ್ಲಾ ರೆಡ್ಡಿ ಅವರ ಮನೆ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಐಟಿ ಅಧಿಕಾರಿಗಳು ಮಂಗಳವಾರ ಬೆಳಿಗ್ಗೆ ಶೋಧ ಕಾರ್ಯಾಚರಣೆ ಆರಂಭಿಸಿದರು. ಬುಧವಾರವೂ ಕಾರ್ಯಾಚರಣೆ ಮುಂದುವರಿದಿದೆ. ಈ ನಡುವೆ, ಮಲ್ಲಾ ರೆಡ್ಡಿ ಅವರ ಮಗ ಮಹೇಂದ್ರ ರೆಡ್ಡಿ ಅವರನ್ನು ಎದೆ ನೋವಿನ ಕಾರಣ ಬುಧವಾರ ಬೆಳಿಗ್ಗೆ ಆಸ್ಪತ್ರೆಗೆ ದಾಖಲಿಸಲಾಗಿದೆ.

ಈ ಕುರಿತು ಸುದ್ದಿಗಾರರ ಜೊತೆ ಮಾತನಾಡಿದ ಸಚಿವ ಮಲ್ಲಾ ರೆಡ್ಡಿ, 'ಸಿಆರ್‌ಪಿಎಫ್ ಸಿಬ್ಬಂದಿ ನನ್ನ ಹಿರಿಯ ಮಗನನ್ನು ಇಡೀ ರಾತ್ರಿ ಥಳಿಸಿದ್ದಾರೆ. ಎದೆ ನೋವಿನ ನೆಪ ಹೇಳಿ ಆತನನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ. ನಮ್ಮ ಕುಟುಂಬದ ವೈದ್ಯರಿಗೆ ಆತನನ್ನು ಭೇಟಿ ಮಾಡಲು ಅವಕಾಶ ನೀಡುತ್ತಿಲ್ಲ. ಮಗನನ್ನು ಕಾಣಲು ನನಗೂ ಅನುಮತಿ ಕೊಟ್ಟಿಲ್ಲ. ಅಧಿಕಾರಿಗಳಿಗೆ ದಾಖಲೆಯಿಲ್ಲದ ಹಣ ದೊರೆತರೆ ಅದರಲ್ಲಿ ತಪ್ಪೇನಿದೆ. ಅವರು ಅವರ ಕರ್ತವ್ಯವನ್ನು ನಿಭಾಯಿಸಬೇಕು' ಎಂದು ಹೇಳಿದ್ದಾರೆ.

ಪ್ರಬಲ ಚುನಾವಣಾ ಆಯುಕ್ತ ಅಗತ್ಯ

ಒಂದನೇ ಪುಟದಿಂದ...

ಆದರೆ ಅವರು ತೆಗೆದುಕೊಳ್ಳುವುದಿಲ್ಲ. ಅಂತಹ ಸಂದರ್ಭದಲ್ಲಿ ಇಡೀ ವ್ಯವಸ್ಥೆಯೇ ಕುಸಿದಂತೆ ಆಗುವುದಿಲ್ಲವೇ? ಆಯೋಗವು ಯಾವುದೇ ಕ್ರಮ ತೆಗೆದುಕೊಳ್ಳದ ದುರ್ಬಲ ಸಂಸ್ಥೆಯಂತಿದೆ' ಎಂದು ಪೀಠವು ಅಭಿಪ್ರಾಯಪಟ್ಟಿತು.

ಎಲ್. ಕೆ. ಅಡ್ವಾಣಿ ಅವರಂತಹ ನಾಯಕರು ಮುಖ್ಯ ಚುನಾವಣಾ ಆಯುಕ್ತರ ನೇಮಕಕ್ಕೆ ಕೊಲಿಜಿಯಂನಂತಹ ವ್ಯವಸ್ಥೆ ಬೇಕು ಎಂದು ಹೇಳಿದ್ದರು. ರಾಜಕೀಯ ವಲಯದಿಂದಲೂ ಈ ಬೇಡಿಕೆ ಇದೆ. ಆದರೆ, ಈ ನಿಟ್ಟಿನಲ್ಲಿ ಯಾವ ಪ್ರಕ್ರಿಯೆಯೂ ಆಗಿಲ್ಲ ಎಂದು ಪೀಠವು ಅಭಿಪ್ರಾಯಪಟ್ಟಿದೆ.

ಸಂವಿಧಾನದ 324ನೇ ವಿಧಿಯು ಆಯುಕ್ತರ ನೇಮಕದ ಬಗ್ಗೆ ಹೇಳುತ್ತದೆ. ಆದರೆ, ನೇಮಕಾತಿ ಹೇಗೆ ನಡೆಯಬೇಕು ಎಂಬುದನ್ನು ಈ ವಿಧಿ ಹೇಳುವುದಿಲ್ಲ. ಈ ಸಂಬಂಧ ಸಂಸತ್ತು ಕಾನೂನು ರಚಿಸಬೇಕು ಎಂದು ವಿಧಿಯು ಹೇಳುತ್ತದೆ. ಆದರೆ, 72 ವರ್ಷಗಳಲ್ಲಿ ಆ ಕೆಲಸ ಆಗಿಯೇ ಇಲ್ಲ. ನೇಮಕಾತಿಗೆ ಸಂಬಂಧಿಸಿದಂತೆ ಕಾನೂನು ಇಲ್ಲದೇ ಇರುವ ಸ್ಥಿತಿಯನ್ನು ಎಲ್ಲಾ ಸರ್ಕಾರಗಳೂ ದುರುಪಯೋಗ ಪಡಿಸಿಕೊಂಡಿವೆ ಎಂದು ಪೀಠವು ಮಂಗಳವಾರದ ವಿಚಾರಣೆ ವೇಳೆ ಅಭಿಪ್ರಾಯಪಟ್ಟಿತ್ತು.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಮಿಸಳ್ ಹಾಪ್ಚ
ವಚನಸಾಹಿತ್ಯ ಉಳಿಸಿದ ಉಳವಿ
ಪಾಡ್‌ಕಾಸ್ಟ್: ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8 ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ಕನ್ನಡ ಧ್ವನಿ

ವಜಾಗೊಳಿಸುವ ಸುಗ್ರೀವಾಜ್ಞೆ ನಿರರ್ಥಕ: ಕೇರಳ ರಾಜ್ಯಪಾಲ

ತಿರುವನಂತಪುರ/ನವದೆಹಲಿ (ಪಿಟಿಐ): 'ವಿಧಾನಸಭೆ ಅಧಿವೇಶನ ಕರೆದಿರುವುದರಿಂದ ತಮ್ಮನ್ನು ವಿಶ್ವವಿದ್ಯಾಲಯಗಳ ಕುಲಾಧಿಪತಿ ಹುದ್ದೆಯಿಂದ ವಜಾಗೊಳಿಸುವ ಸಂಬಂಧ ಕೇರಳ ಸರ್ಕಾರ ಹೊರಡಿಸಿರುವ ಸುಗ್ರೀವಾಜ್ಞೆಗೆ ಯಾವುದೇ ಮಹತ್ವವಿಲ್ಲ' ಎಂದು ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಬುಧವಾರ ಹೇಳಿದ್ದಾರೆ.

'ಒಮ್ಮೆ ಅಧಿವೇಶನ ಕರೆದರೆ, ಅದಕ್ಕೂ ಮುನ್ನ ರಾಜಭವನಕ್ಕೆ ಕಳುಹಿಸಿರುವ ಯಾವ ಸುಗ್ರೀವಾಜ್ಞೆಗೂ ಮಹತ್ವ ಇರುವುದಿಲ್ಲ' ಎಂದಿದ್ದಾರೆ.

ರಾಜಭವನಕ್ಕೆ ಬರುವ ಅತಿಥಿಗಳಿಗಾಗಿ ಹೆಚ್ಚುವರಿ ವಾಹನ ಒದಗಿಸುವಂತೆ ಸರ್ಕಾರಕ್ಕೆ ಮನವಿ ಮಾಡಿರುವ ಕುರಿತು ನವದೆಹಲಿಯಲ್ಲಿ ಪ್ರತಿಕ್ರಿಯಿಸಿರುವ ಅವರು, 'ರಾಜಭವನಕ್ಕೆ ಹೆಚ್ಚುವರಿ ಅತಿಥಿಗಳು ಬಂದಾಗ ಹೆಚ್ಚುವರಿ ವಾಹನ ಒದಗಿಸುವಂತೆ ಸರ್ಕಾರವನ್ನು ಕೇಳಬೇಕಾಗುತ್ತದೆ. ಅದರಲ್ಲಿ ವಿಶೇಷ ಏನಿದೆ. ರಾಜ್ಯಪಾಲರ ಭೇಟಿಗೆ ಬರುವವರನ್ನು ನಡೆದುಕೊಂಡು ಬನ್ನಿ ಎಂದು ಹೇಳಬೇಕೇ' ಎಂದು ಪ್ರಶ್ನಿಸಿದ್ದಾರೆ.

ನೇಮಕ: ಕೆ.ರಿಜಿ ಜಾನ್ ಅವರನ್ನು ಮೀನುಗಾರಿಕೆ ಮತ್ತು ಸಾಗರ ಅಧ್ಯಯನಗಳ ವಿ.ವಿ. ಕುಲಪತಿಯನ್ನಾಗಿ ನೇಮಿಸಿದ್ದ ಕೇರಳ ಸರ್ಕಾರದ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿದ ಬೆನ್ನಲ್ಲೇ ರಾಜ್ಯಪಾಲರು ಕೆಯುಎಫ್‌ಒಎಸ್‌ನ ಪ್ರಾಧ್ಯಾಪಕ ಎಂ.ರೋಸಾಲಿಂಡ್ ಜಾರ್ಜ್ ಅವರನ್ನು ಆ ಸ್ಥಾನಕ್ಕೆ ಹಂಗಾಮಿಯಾಗಿ ನೇಮಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ
Astrology
ಸಮಸ್ಯೆ ಏನೇಯಿರಲಿ ಎಷ್ಟೇ ಕಠಿಣವಾಗಿರಲಿ 600ವರ್ಷ ಹಳೆಯ 108ಜ್ಯೋತಿಷ್ಯ ತಂತ್ರಗಳಿಂದ ವಶೀಕರಣ, ಪ್ರೇಮವಿಚಾರ, ದಾಂಪತ್ಯ, ಹಣಕಾಸು, ಇನ್ಯಾವುದೇ ಸಮಸ್ಯೆಗಳಿಗೆ ಪರಿಹಾರ ಶತಸಿದ್ಧ. ಪಂಡಿತ್ ಗಣೇಶ್‌ಕುಮಾರ್ 9880444450

ಉದ್ಯೋಗಾವಕಾಶ
Drivers
ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ : 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

General
ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

Part-Time Jobs
ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು, ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000- 20000 ಗಳಿಸಿ. ಕರೆಮಾಡಿ: 9611224633/ 9611225344

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted
ಆಯುರ್ವೇದಿಕ್ ಉತ್ಪನ್ನಗಳ ನೇರ ಮಾರಾಟ 50 ಮಹಿಳಾ ಪ್ರತಿನಿಧಿಗಳು ಬೇಕಾಗಿದ್ದಾರೆ ಸಂಬಳ 30 ರಿಂದ 50 ಸಂಪರ್ಕಿಸಿ: 8892501007/ 9606701007

ರಿಯಲ್ ಎಸ್ಟೇಟ್ ಬೈಯಿಂಗ್
Sites
General
WANTED FOR immediate purchase site near KIA Bengaluru airport or Bengaluru North for NRI call 7483651933

ಪ್ರವಾಸ
Travel
A/C ರೂಂ ಹಾಗು A/C ಬಸ್ಸಿನಲ್ಲಿ 11.01.2023 15.02.2023 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು 17.01.2023 08.02.2023 ದುಬೈ,ಅಬುಧಾಬಿ 5 ದಿನಗಳು. 13.12.2022 12.01.2023 ಗುಜರಾತ್ 8 ದಿನಗಳು. 13.12.2022 03.01.2023 ರಾಜಸ್ಥಾನ್ 9 ದಿನಗಳು. 17.01.2023 11.02.2023 ಕಾಶಿ,ಗಯಾ,ಅಯೋಧ್ಯ 7 ದಿನಗಳು. 04.12.2022 18.01.2023 ಕುಂಭಕೋಣಂ,ರಾಮೇಶ್ವರ 6 ದಿನಗಳು. 22.12.2022 28.12.2022 ಧರ್ಮಸ್ಥಳ ಹೊರನಾಡು 4 ದಿನಗಳು. ಜೈನ್ ಟ್ರಾವಲ್ಸ್, ಬೆಂಗಳೂರು.3 9448402248 7022547922

ಶ್ರೀ ಶಿವನಂದಿ ಟೂರ್ 8792104518,8147311578 ಗುಜರಾತ್ 12ದಿನ20-12-2022, ವೈಷ್ಣದೇವಿ 12ದಿನ10-01-2023, ಕಾಶಿ, ಗಯಾ 6 ದಿನ28-01-2023, ಮಧ್ಯಪ್ರದೇಶ 6 ದಿನ09-02-2023 ಅಸ್ಸಾಂ, ಅರುಣಾಚಲ,ಮೇಘಾಲಯ 12ದಿನ 22-02-2023ಮತ್ತು 15-03-2023

★16.02.2023 ಶಿವರಾತ್ರಿ★ ವಿಶೇಷ 9ದಿನ ಕಾಶಿಯಲ್ಲಿ ತಂಗುವುದು, 07.02.2023 16ದಿನ 95ದಿವ್ಯದೇಶ ಪ್ರವಾಸ. ಆರ್.ಗಾಂಧಿ ಟೂರ್ಸ್ (ರಿ) 9945445809, 9902433500

Book Your Classifieds Ads Online Log in to dhclassifieds.com
Contact : 9845114560 : 9731810277 9901641752 : 9886213331 080 - 45557163 / 164
DH ಪ್ರಜಾವಾಣಿ

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ರೊನಾಲ್ಡೊ ಆಟಕ್ಕೆ ಅಂಗಣ ಸಿದ್ಧ

ಫಿಫಾ ವಿಶ್ವ ರ‍್ಯಾಂಕಿಂಗ್
ಪೋರ್ಚುಗಲ್ 9
ಘಾನಾ 61
ಮುಖಾಮುಖಿ ಪಂದ್ಯ 1
ಪೋರ್ಚುಗಲ್ ಗೆಲುವು 1

ದೋಹಾ (ಎಪಿ): ಪ್ರಸ್ತುತ ಫುಟ್‌ಬಾಲ್ ಜಗತ್ತಿನ ದಿಗ್ಗಜ ಕ್ರಿಸ್ಟಿಯಾನೊ ರೊನಾಲ್ಡೊ ಗುರುವಾರ ಫಿಫಾ ವಿಶ್ವಕಪ್ ಅಂಗಳಕ್ಕಿಳಿಯಲಿದ್ದಾರೆ.

ಇದು ಅವರು ಆಡುತ್ತಿರುವ ಐದನೇ ವಿಶ್ವಕಪ್ ಟೂರ್ನಿಯಾಗಿದೆ. ಅವರ ವೃತ್ತಿಜೀವನದ ಕೊನೆಯ ವಿಶ್ವಕಪ್ ಟೂರ್ನಿಯೂ ಇದಾಗಲಿದೆ. 37 ವರ್ಷದ ರೊನಾಲ್ಡೊ ಮಂಗಳವಾರವಷ್ಟೇ ಮ್ಯಾಂಚೆಸ್ಟರ್ ಯುನೈಟೆಡ್ ತಂಡವನ್ನು ತೊರೆದದ್ದು ದೊಡ್ಡ ಸುದ್ದಿಯಾಗಿದೆ. ಸದ್ಯಕ್ಕೆ ಹೊಸ ಕ್ಲಬ್ ಜೊತೆಗೆ ಒಪ್ಪಂದ ಮಾಡಿಕೊಂಡಿಲ್ಲ. ತಮ್ಮ ಸಾಮರ್ಥ್ಯವನ್ನು ಸಂಪೂರ್ಣವಾಗಿ ವಿಶ್ವಕಪ್ ಟೂರ್ನಿಯಲ್ಲಿ ವಿನಿಯೋಗಿಸುವತ್ತ ಚಿತ್ತ ನೆಟ್ಟಿದ್ದಾರೆ.

ದೋಹಾದ 974 ಕ್ರೀಡಾಂಗಣದಲ್ಲಿ ರೊನಾಲ್ಡೊ ಅವರ ಪೋರ್ಚುಗಲ್ ತಂಡವು ಘಾನಾ ವಿರುದ್ಧ ಆಡಲಿದೆ. ಘಾನಾ ತಂಡಕ್ಕೆ ಪೋರ್ಚುಗಲ್ ಕಠಿಣ ಸವಾಲೊಡ್ಡುವ ನಿರೀಕ್ಷೆ ಇದೆ. ಆದರೆ ಮಂಗಳವಾರ ಸೌದಿ ಅರೇಬಿಯಾ ತಂಡವು ಲಯೊನೆಲ್ ಮೆಸ್ಸಿ ನೇತೃತ್ವದ ಅರ್ಜೆಂಟೀನಾ ಬಳಗದ ವಿರುದ್ಧ ಗಳಿಸಿದ ಅಚ್ಚರಿ ಗೆಲುವಿನ ಚರ್ಚೆ ಇನ್ನೂ ಫುಟ್‌ಬಾಲ್ ವಲಯದಲ್ಲಿ ನಡೆಯುತ್ತಿದೆ. ಆದ್ದರಿಂದ ಯಾವ ತಂಡವೂ ಇಲ್ಲಿ ದುರ್ಬಲವಲ್ಲವೆಂಬುದಂತೂ ಸತ್ಯ.

ಘಾನಾ ತಂಡದ ಥಾಮಸ್ ಪಾರ್ಟಿ ಮತ್ತು ಮೊಹಮ್ಮದ್ ಕುಡೂಸ್ ಅವರು ಇತ್ತೀಚಿನ ಲೀಗ್ ಟೂರ್ನಿಗಳಲ್ಲಿ ಉತ್ತಮವಾಗಿ ಆಡಿದ್ದಾರೆ.

ಸದ್ಯ ಅತಿ ಹೆಚ್ಚು ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಆಡಿರುವ ಮತ್ತು ಗೋಲು ಗಳಿಸಿರುವ ಪೋರ್ಚುಗಲ್ ಆಟಗಾರನೆಂಬ ಹೆಗ್ಗಳಿಕೆ ರೊನಾಲ್ಡೊ ಅವರದ್ದು. ತಂಡದ ಮ್ಯಾನೇಜರ್ ಫರ್ನಾಂಡೊ ಸ್ಯಾಂಟೋಸ್ ಅವರಿಗೂ ಫಾರ್ವರ್ಡ್ ಆಟಗಾರ ರೊನಾಲ್ಡೊ ಅವರಿಂದ ದೊಡ್ಡ ನಿರೀಕ್ಷೆ ಇದೆ. ಮಿಡ್‌ಫೀಲ್ಡ್ ಮತ್ತು ಅಟ್ಯಾಕಿಂಗ್‌ಗೆ ತಂಡದ ಆಟಗಾರರು ಸಿದ್ಧಹಸ್ತರಾಗಿದ್ದಾರೆ. ಪಂದ್ಯದ ಕೊನೆಯ ಕ್ಷಣಗಳಲ್ಲಿ ಕಾಲ್ಚಳಕ ತೋರುವ ರೊನಾಲ್ಡೊ ಅವರನ್ನು ನಿಯಂತ್ರಿಸುವತ್ತಲೇ ಘಾನಾ ಆಟಗಾರರು ತಂತ್ರಗಾರಿಕೆ ರೂಪಿಸುವ ಸಾಧ್ಯತೆ ಹೆಚ್ಚಿದೆ. ರೊನಾಲ್ಡೊ ಅವರಿಗೆ ವಿಶ್ವಕಪ್ ಉಡುಗೊರೆ ಕೊಡುವ ಮೂಲಕ ಬೀಳ್ಕೊಡುಗೆ ನೀಡುವ ಛಲದಲ್ಲಿ ಪೋರ್ಚುಗಲ್ ತಂಡ ಇದೆ.

ರೊನಾಲ್ಡೊ
189 ಒಟ್ಟು ಪಂದ್ಯ
117 ಗಳಿಸಿದ ಗೋಲು

ಇಂದಿನ ಪಂದ್ಯ

ಸ್ವಿಟ್ಜರ್ಲೆಂಡ್ Vs ಕ್ಯಾಮರೂನ್	ಮಧ್ಯಾಹ್ನ	3.30
ಉರುಗ್ವೆ Vs ದಕ್ಷಿಣ ಕೊರಿಯಾ	ಸಂಜೆ	6.30
ಪೋರ್ಚುಗಲ್ Vs ಘಾನಾ	ರಾತ್ರಿ	9.30
ಬ್ರೆಜಿಲ್ Vs ಸರ್ಬಿಯಾ	ತಡರಾತ್ರಿ	12.30

ಲೈವ್ ಸ್ಪೋರ್ಟ್ಸ್ 18, ಎಂಟಿವಿ, ಜಿಯೊ ಸಿನೆಮಾ ಆ್ಯಪ್

ನೇಮರ್ ಬಳಗಕ್ಕೆ ಸರ್ಬಿಯಾ ಸವಾಲು

ಫಿಫಾ ವಿಶ್ವ ರ‍್ಯಾಂಕಿಂಗ್
ಬ್ರೆಜಿಲ್ 1
ಸರ್ಬಿಯಾ 21
ಮುಖಾಮುಖಿ ಪಂದ್ಯ 2
ಬ್ರೆಜಿಲ್ ಗೆಲುವು 2

ದೋಹಾ (ರಾಯಿಟರ್ಸ್): ಈ ಬಾರಿಯ ಫಿಫಾ ವಿಶ್ವಕಪ್ ಜಯಿಸುವ ನೆಚ್ಚಿನ ತಂಡಗಳಲ್ಲಿ ಬ್ರೆಜಿಲ್ ಅಗ್ರಸ್ಥಾನದಲ್ಲಿದೆ.

ಖ್ಯಾತನಾಮ ಆಟಗಾರ ನೇಮರ್ ಇರುವ ಬ್ರೆಜಿಲ್ ತಂಡವು ಗುರುವಾರ ಜಿ ಗುಂಪಿನ ಮೊದಲ ಪಂದ್ಯದಲ್ಲಿ ಸರ್ಬಿಯಾ ಎದುರು ಅಭಿಯಾನ ಆರಂಭಿಸಲಿದೆ.

ಐದು ಬಾರಿಯ ಚಾಂಪಿಯನ್ ಬ್ರೆಜಿಲ್ ತಂಡದಲ್ಲಿ ಪ್ರತಿಭಾನ್ವಿತ ಆಟಗಾರರ ದಂಡು ಇದೆ. ಈ ಬಳಗದ 16 ಆಟಗಾರರಿಗೆ ಇದು ಚೊಚ್ಚಲ ವಿಶ್ವಕಪ್ ಟೂರ್ನಿಯಾಗಿದೆ. ಅದರಲ್ಲಿ ವಿನಿಸಿಯಸ್ ಜೂನಿಯರ್, ರಾಡ್ರಿಗೊ, ರಫಿನಾ, ಎದರ್ ಮಿಲಿಟಾವೊ, ಬ್ರೂನೊ ಗೈಮಾರೆಸ್ ಮತ್ತು ಅಂತೋಣಿ ಅವರು ಈಗಾಗಲೇ ಯುರೋಪಿಯನ್ ಕ್ಲಬ್ ಫುಟ್‌ಬಾಲ್‌ನಲ್ಲಿ ಜನಪ್ರಿಯರಾಗಿದ್ದಾರೆ. ಇದರಿಂದಾಗಿ ಆಡುವ ಬಳಗವನ್ನು ಕಣಕ್ಕಿಳಿಸಲು ಮ್ಯಾನೇಜರ್ ಟಿಟೆಗೆ ಬಹಳಷ್ಟು ಉತ್ತಮ ಆಯ್ಕೆಗಳಿವೆ. ಅನುಭವಿ ಹಾಗೂ ತಾರಾವರ್ಚಸ್ಸಿನ ನೇಮರ್ ಮುಂದಾಳತ್ವದಲ್ಲಿ ತಂಡದ ಆತ್ಮವಿಶ್ವಾಸ ಹೆಚ್ಚಿದೆ.

2018ರ ವಿಶ್ವಕಪ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಬ್ರೆಜಿಲ್ ತಂಡವು ಬೆಲ್ಜಿಯಂ ವಿರುದ್ಧ ಸೋತಿತ್ತು. ಕಳೆದ ನಾಲ್ಕು ವರ್ಷಗಳಲ್ಲಿ ಆಡಿರುವ 50 ಪಂದ್ಯಗಳಲ್ಲಿ 37ರಲ್ಲಿ ಬ್ರೆಜಿಲ್ ಜಯಿಸಿದೆ. ಚಾಂಪಿಯನ್ಸ್ ಲೀಗ್ ಫೈನಲ್‌ನಲ್ಲಿ ಲಿವರ್‌ಪೂಲ್ ವಿರುದ್ಧದ ಪಂದ್ಯದಲ್ಲಿ ರಿಯಲ್ ಮ್ಯಾಡ್ರಿಡ್ ಪರ ಆಡಿದ್ದ 22 ವರ್ಷದ ವಿನಿಸಿಯಸ್ ಜೂನಿಯರ್ ಮಿಂಚಿದ್ದರು.

ಆದರೆ ಸರ್ಬಿಯಾ ತಂಡವು ಉತ್ತಮ ಸಾಮರ್ಥ್ಯ ಇರುವ ಆಟಗಾರರೊಂದಿಗೆ ದೋಹಾಕ್ಕೆ ಬಂದಿಳಿದಿದೆ. ಈ ತಂಡವು ಆಡಿದ ಕಳೆದ ಎಂಟು ಪಂದ್ಯಗಳಲ್ಲಿ ಆರು ಗೆದ್ದು, ಎರಡರಲ್ಲಿ ಡ್ರಾ ಮಾಡಿಕೊಂಡಿದೆ. ಸ್ಟ್ರೈಕರ್ ಜೋಡಿ ದುಸಾನ್ ವ್ಲಾಹೊವಿಚ್ ಮತ್ತು ಅಲೆಕ್ಸಾಂಡರ್ ಮಿಟ್ರೊವಿಚ್ ಪಂದ್ಯದಲ್ಲಿ ಜಯಿಸಿದರು. ಇದರಿಂದಾಗಿ ಬ್ರೆಜಿಲ್ ತಂಡಕ್ಕೆ ಕಠಿಣ ಸ್ಪರ್ಧೆಯೊಡ್ಡುವ ವಿಶ್ವಾಸದಲ್ಲಿ ಸರ್ಬಿಯಾ ಇದೆ.

ನೇಮರ್
121 ಒಟ್ಟು ಪಂದ್ಯ
75 ಗಳಿಸಿದ ಗೋಲು

ಬ್ರೆಜಿಲ್ ತಂಡದ ನೇಮರ್ ಜೂನಿಯರ್ – ಎಎಫ್‌ಪಿ ಚಿತ್ರ

ಜರ್ಮನಿ ವಿರುದ್ಧ ಜಯಿಸಿದ ಜಪಾನ್ ತಂಡದ ಆಟಗಾರರ ಸಂಭ್ರಮ—ಎಎಫ್‌ಪಿ ಚಿತ್ರ

‘ಇ’ ಗುಂಪಿನ ಪಂದ್ಯದಲ್ಲಿ ರಿತ್ಸು, ಟಕುಮಾ ಕಾಲ್ಚಳಕ

ಜಪಾನ್‌ಗೆ ಜಯ; ಜರ್ಮನಿಗೆ ಆಘಾತ

ದೋಹಾ (ಎಎಫ್‌ಪಿ): ರಿತ್ಸು ಡೊನ್ ಹಾಗೂ ಟಕುಮಾ ಅಸಾನೊ ಅವರ ಕಾಲ್ಚಳಕದಿಂದಾಗಿ ಜಪಾನ್ ತಂಡವು ನಾಲ್ಕು ಬಾರಿಯ ಚಾಂಪಿಯನ್ ಜರ್ಮನಿ ತಂಡಕ್ಕೆ ಆಘಾತ ನೀಡಿತು.

ಫಿಫಾ ವಿಶ್ವಕಪ್ ಟೂರ್ನಿಯ ಇ ಗುಂಪಿನ ಮೊದಲ ಪಂದ್ಯದಲ್ಲಿಯೇ ಜಪಾನ್ ತಂಡವು 2–1ರಿಂದ ಜರ್ಮನಿಯ ವಿರುದ್ಧ ರೋಚಕ ಜಯ ದಾಖಲಿಸಿತು.

ಮೊದಲಾರ್ಧದಲ್ಲಿ 1–0 ಮುನ್ನಡೆಯೊಂದಿಗೆ ಜರ್ಮನಿ ಪಾರಮ್ಯ ಮೆರೆಯಿತು. 33ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿಯಲ್ಲಿ ಜರ್ಮನಿಯ ಲಿಕಾಯ್ ಗುಂಡೊಗನ್ ಗೋಲು ಹೊಡೆದರು. ವಿರಾಮದ ನಂತರವೂ ಜರ್ಮನಿ ತಂಡವು ಬಿಗಿಹಿಡಿತ ಸಾಧಿಸಿತ್ತು.

ಆದರೆ, 75ನೇ ನಿಮಿಷದಲ್ಲಿ ಜಪಾನ್ ತಂಡದ ರಿತ್ಸು ಡೊನ್ ಜರ್ಮನಿಯ ರಕ್ಷಣಾ ಕೋಟೆಯನ್ನು ದಾಟಿ ಗೋಲು ಗಳಿಸಿದರು. ಇದರಿಂದಾಗಿ ಸಮಬಲವಾಯಿತು. 83ನೇ ನಿಮಿಷದಲ್ಲಿ ಟಕುಮಾ ಅಸಾನೊ ಮಿಂಚಿನ ವೇಗದಲ್ಲಿ ಗೋಲು ಗಳಿಸುವ ಮೂಲಕ ಜಪಾನ್ ತಂಡಕ್ಕೆ ಗೆಲುವಿನ ಮುದ್ರೆಯೊತ್ತಿದರು. ಜರ್ಮನಿ ಆಟಗಾರರು ದಂಗಾಗಿಹೋದರು. ಜಪಾನಿ ಆಟಗಾರರ ರಕ್ಷಣಾ ತಂತ್ರವೂ ಅಮೋಘವಾಗಿತ್ತು. ಪದೇ ಪದೇ ದಾಳಿ ಮಾಡಿದ ಜರ್ಮನಿ ಆಟಗಾರರಿಗೆ ತಡೆಯೊಡ್ಡುವಲ್ಲಿ ಸಫಲರಾದರು.

2018ರ ವಿಶ್ವಕಪ್ ಟೂರ್ನಿಯಲ್ಲಿ ಗುಂಪು ಹಂತದಲ್ಲಿಯೇ ನಿರ್ಗಮನಿಸಿತ್ತು.

ಆರ್ಮ್‌ಬ್ಯಾಂಡ್ ನಿಷೇಧವನ್ನು ವಿರೋಧಿಸಿದ ಜರ್ಮನಿ ಆಟಗಾರರು ಬಾಯಿಮುಚ್ಚಿಕೊಂಡು ತಂಡ ಚಿತ್ರಕ್ಕೆ ಪೋಸ್ ಕೊಟ್ಟರು —ಎಎಫ್‌ಪಿ ಚಿತ್ರಗಳು

ಪ್ರತಿಭಟನೆ: ಟೂರ್ನಿಯಲ್ಲಿ ತ್ರಿವರ್ಣದ ಆರ್ಮ್‌ಬ್ಯಾಂಡ್ ಧರಿಸುವುದನ್ನು ನಿಷೇಧ ಮಾಡಿರುವುದರ ವಿರುದ್ಧ ಜರ್ಮನಿ ತಂಡವು ಪ್ರತಿಭಟನೆ ವ್ಯಕ್ತಪಡಿಸಿತು. ಪಂದ್ಯದ ಆರಂಭಕ್ಕೂ ಮುನ್ನ ತಂಡದ ಗುಂಪು ಚಿತ್ರ ತೆಗೆಸಿಕೊಳ್ಳುವಾಗ ಜರ್ಮನಿ ಆಟಗಾರರು ಬಾಯಿಯನ್ನು ಮುಚ್ಚಿಕೊಳ್ಳುವ ಮೂಲಕ ಪ್ರತಿಭಟಿಸಿದರು.

ಗೋಲು ಮಳೆಗರೆದ ಸ್ಪೇನ್ ತಂಡ

ದೋಹಾ (ರಾಯಿಟರ್ಸ್): ಸ್ಪೇನ್ ತಂಡವು ವಿಶ್ವಕಪ್ ಟೂರ್ನಿಯಲ್ಲಿ ಭರ್ಜರಿ ಆರಂಭ ಮಾಡಿತು.

ಇಲ್ಲಿಯ ಅಲ್ ತುಮಾಮಾ ಕ್ರೀಡಾಂಗಣದಲ್ಲಿ ಬುಧವಾರ ನಡೆದ ‘ಇ’ ಗುಂಪಿನ ಹಣಾಹಣಿಯಲ್ಲಿ 7–0ಯಿಂದ ಕೋಸ್ಟರಿಕಾ ತಂಡವನ್ನು ಪರಾಭವಗೊಳಿಸಿತು. ಮೊದಲಾರ್ಧದಲ್ಲಿ ಸ್ಪೇನ್ 3–0ಯಿಂದ ಮುಂದಿತ್ತು. ಅದೇ ಲಯದೊಂದಿಗೆ ಮುನ್ನುಗ್ಗಿ ಗೆಲುವು ಒಲಿಸಿಕೊಂಡಿತು. ವಿಶ್ವಕಪ್ ಟೂರ್ನಿಯಲ್ಲಿ ಆ ತಂಡಕ್ಕೆ ದೊರೆತ ಅತಿ ದೊಡ್ಡ ಅಂತರದ ಜಯ ಇದು.

ಸ್ಪೇನ್ ತಂಡಕ್ಕಾಗಿ ಡ್ಯಾನಿ ಒಲ್ಮೊ (11ನೇ ನಿಮಿಷ), ಮಾರ್ಕೊ ಅಸೆನ್ಸಿಯೊ (21ನೇ ನಿ.), ಫೆರಾನ್ ಟೊರೆಸ್ (31 ಮತ್ತು 54ನೇ ನಿ, ಪೆನಾಲ್ಟಿ), ಗಾವಿ (74ನೇ ನಿ.), ಕಾರ್ಲೊಸ್ ಸೊಲೆರ್ (90ನೇ ನಿ.) ಮತ್ತು ಅಲ್ವಾರೊ ಮೊರಾಟ (90+2ನೇ ನಿ.) ಗೋಲು ದಾಖಲಿಸಿದರು.

ಫ್ರಾನ್ಸ್ ತಂಡದ ಒಲಿವಿಯರ್ ಜಿರೊದ್ ಹಾಗೂ ಅಸ್ಮನ್ ದೆಂಬೆಲ್ ಸಂಭ್ರಮ – ಎಪಿ/ಪಿಟಿಐ ಚಿತ್ರ

ಒಲಿವಿಯರ್ ‘ಡಬಲ್’; ಫ್ರಾನ್ಸ್ ಜಯಭೇರಿ

ಅಲ್ ವಕರಾ, ಕತಾರ್ (ಎಎಫ್‌ಪಿ): ಒಲಿವಿಯರ್ ಜಿರೊದ್ ಗಳಿಸಿದ ಎರಡು ಗೋಲುಗಳಿಂದ ಹಾಲಿ ಚಾಂಪಿಯನ್ ಫ್ರಾನ್ಸ್ ತಂಡವು ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಮಂಗಳವಾರ ತಡರಾತ್ರಿ ನಡೆದ ಡಿ ಗುಂಪಿನ ಪಂದ್ಯದಲ್ಲಿ ಫ್ರಾನ್ಸ್ ತಂಡವು 4–1ರಿಂದ ಆಸ್ಟ್ರೇಲಿಯಾ ಎದುರು ಜಯಿಸಿತು. 2018ರ ಚಾಂಪಿಯನ್ ಫ್ರಾನ್ಸ್ ತಂಡವು ಈ ಬಾರಿ ತನ್ನ ಮೊದಲ ಪಂದ್ಯದಲ್ಲಿಯೇ ಜಯಿಸಿದ್ದು ದಾಖಲೆಯಾಗಿದೆ. 2006ರಲ್ಲಿ ಬ್ರೆಜಿಲ್ ಈ ಸಾಧನೆ ಮಾಡಿತ್ತು.

ಅಲ್ ಜನಾಬ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 9ನೇ ನಿಮಿಷದಲ್ಲಿ ಆಸ್ಟ್ರೇಲಿಯಾದ ಕ್ರೇಗ್ ಗುಡ್ವಿನ್ ಆಘಾತ ನೀಡಿದರು. ರೈಟ್ ವಿಂಗರ್ ಕ್ರೇಗ್ ಗೋಲ್‌ಪೋಸ್ಟ್ ಬಳಿ ತಮಗೆ ಸಿಕ್ಕ ಅವಕಾಶವನ್ನು ಸಮರ್ಪಕವಾಗಿ ಬಳಸಿಕೊಂಡರು.

27ನೇ ನಿಮಿಷದಲ್ಲಿ ಫ್ರಾನ್ಸ್‌ನ ಎಡ್ರಿನ್ ರಾಬಿಯೊಟ್ ಮಿಂಚಿನ ವೇಗದಲ್ಲಿ ಗಳಿಸಿದ ಗೋಲಿನಿಂದ ಸಮಬಲವಾಯಿತು. 32ನೇ ನಿಮಿಷದಲ್ಲಿ ಸ್ಟ್ರೈಕರ್ ಒಲಿವಿಯರ್ ಕಾಲ್ಚಳಕ ಮೆರೆದರು. ಇದರಿಂದಾಗಿ ಅರ್ಧವಿರಾಮಕ್ಕೆ ಫ್ರಾನ್ಸ್ 2–1ರ ಮುನ್ನಡೆ ಸಾಧಿಸಿತು. ನಂತರ ಆಸ್ಟ್ರೇಲಿಯಾದ ಸ್ಟ್ರೈಕರ್‌ಗಳ ಗೋಲು ಗಳಿಕೆಯ ಪ್ರಯತ್ನಕ್ಕೆ ಫ್ರೆಂಚ್ ರಕ್ಷಣಾ ಪಡೆ ಅವಕಾಶ ನೀಡಲಿಲ್ಲ. ಇದರಿಂದಾಗಿ ಒತ್ತಡಕ್ಕೊಳಗಾದ ಆಸ್ಟ್ರೇಲಿಯಾಕ್ಕೆ ಫ್ರಾನ್ಸ್‌ನ ‘ತಾರೆ’ ಕೈಲಿ ಯನ್ ಎಂಬಾಪೆ ಮತ್ತೊಂದು ಪೆಟ್ಟು ಕೊಟ್ಟರು. 68ನೇ ನಿಮಿಷದಲ್ಲಿ ಅವರು ಗಳಿಸಿದ ಗೋಲ್‌ನಿಂದಾಗಿ ಫ್ರಾನ್ಸ್ ಮಹತ್ವದ ಮುನ್ನಡೆ ಗಳಿಸಿತು. 2 ನಿಮಿಷಗಳ ನಂತರ ಮತ್ತೆ ಮಿಂಚಿದ ಒಲಿವಿಯರ್ ಗೋಲು ಗಳಿಸಿದರು.

ಕ್ರೊವೇಷ್ಯಾದ ಲೂಕಾ ಮಾಡ್ರಿಚ್ (ಬಿಳಿ ಮತ್ತು ಕೆಂಪು ಪೋಷಾಕು) ಮತ್ತು ಮೊರೊಕ್ಕೊದ ಹಕೀಂ ನಡುವೆ ಚೆಂಡಿಗಾಗಿ ಪೈಪೋಟಿ

ಡ್ರಾ ಪಂದ್ಯದಲ್ಲಿ ಕ್ರೊವೇಷ್ಯಾ –ಮೊರೊಕ್ಕೊ

ಅಲ್ ಖೋರ್, ಕತಾರ್ (ಎಎಫ್‌ಪಿ): ಪ್ರಮುಖ ಆಟಗಾರ ಲೂಕಾ ಮಾಡ್ರಿಚ್ ಅವರನ್ನು ರಟ್ಟೆಯರಳಿಸಲು ಬಿಡದ ಮೊರೊಕ್ಕೊ ತಂಡವು ಫಿಫಾ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಕ್ರೊವೇಷ್ಯಾದೊಡನೆ ಗೋಲುರಹಿತ ಡ್ರಾ ಸಾಧಿಸಿತು.

ಅಲ್ ಬೈತ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಎಫ್ ಗುಂಪಿನ ಹಣಾಹಣಿಯಲ್ಲಿ, 2018ರ ಆವೃತ್ತಿಯ ರನ್ನರ್‌ಅಪ್ ಕ್ರೊವೇಷ್ಯಾ ತಂಡವನ್ನು ನಿರಾಸೆಯ ಕಡಲಿಗೆ ನೂಕಿತು.

ಡೆಜಾನ್ ಲಾರೆನ್ ಅವರನ್ನೊಳಗೊಂಡ ಕ್ರೊವೇಷ್ಯಾ, ಗೋಲು ಗಳಿಸುವ ಅವಕಾಶಗಳನ್ನು ಸೃಷ್ಟಿಸಿಕೊಳ್ಳುವಲ್ಲಿ ವಿಫಲವಾಯಿತು.

ಸರಿಹಾದಿಗೆ ಮರಳಿದ ಚಿತ್ರೋತ್ಸವ

• ಪ್ರೇಮಕುಮಾರ್ ಹರಿಯಬ್ಬೆ

53rd International Film Festival of India, Goa
20th - 28th November 2022

ಪಣಜಿ: ಪಣಜಿ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ತನ್ನ ಎಂದಿನ ಜಾಡಿಗೆ ಮರಳಿದೆ. ಸಾಂಕ್ರಾಮಿಕ ರೋಗಗಳ ಭಯವಿಲ್ಲದೆ ಪ್ರತಿನಿಧಿಗಳು ಮುಕ್ತವಾಗಿ ಓಡಾಡಿಕೊಂಡು ಸಿನಿಮಾ ನೋಡಲು ಸಾಧ್ಯವಾಗಿದೆ.

ಕಳೆದ ಎರಡು ವರ್ಷಗಳಲ್ಲಿ ಎದ್ದು ಕಂಡ ಅವ್ಯವಸ್ಥೆಗಳನ್ನು ಸಂಘಟಕರು ಸರಿಪಡಿಸಿದ್ದಾರೆ. ಚಿತ್ರೋತ್ಸವದಲ್ಲಿ ಪ್ರದರ್ಶನವಾಗುವ ಸಿನಿಮಾಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸುವ ಎರಡು ಆಕರ್ಷಕ ಕ್ಯಾಟಲಾಗ್‌ಗಳು ಮುದ್ರಣಗೊಂಡಿವೆ. ಅವು ಎಲ್ಲಾ ಪ್ರತಿನಿಧಿಗಳಿಗೂ ಸಕಾಲದಲ್ಲಿ ತಲುಪಿವೆ. ಚಿತ್ರೋತ್ಸವಕ್ಕೆ ನಿಸರ್ಗವೂ ಕೈಜೋಡಿಸಿದೆ. ಆಗಾಗ ಮೋಡ ಮುಸುಕಿದ ವಾತಾವರಣ ನಿರ್ಮಾಣವಾಗುತ್ತಿದ್ದು, ಹಗಲು ಮತ್ತು ರಾತ್ರಿ ಉಷ್ಣಾಂಶದಲ್ಲಿ ಗಣನೀಯ ಇಳಿಕೆಯಾಗಿದೆ.

ಸ್ಮಾರ್ಟ್‌ಫೋನ್ ಬಳಸಿ ಮುಂಗಡವಾಗಿ ಟಿಕೆಟ್ ಕಾಯ್ದಿರಿಸಿಕೊಳ್ಳುವ ವ್ಯವಸ್ಥೆ ಬಗ್ಗೆ ವ್ಯಾಪಕವಾದ ಮೆಚ್ಚುಗೆ ವ್ಯಕ್ತವಾಗಿದೆ. ಹತ್ತು ತೆರೆಗಳಲ್ಲಿ ಚಿತ್ರಗಳ ಪ್ರದರ್ಶನವಾಗುತ್ತಿದ್ದರೂ ತಮಗೆ ಬೇಕಾದ ಸಿನಿಮಾಗಳು ಸಿಕ್ಕಲಿಲ್ಲ ಎನ್ನುವ ಗೊಣಗಾಟ ಇದ್ದೇ ಇದೆ. ಯುವಪೀಳಿಗೆ ಸಿನಿಮಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಚಿತ್ರೋತ್ಸವಕ್ಕೆ ಬಂದಿರುವುದು ಸ್ವಾಗತಾರ್ಹ ಬೆಳವಣಿಗೆ. ದಕ್ಷಿಣ ಭಾರತದ ರಾಜ್ಯಗಳ ಪ್ರತಿನಿಧಿಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಕಳೆದ ಮೂರು ದಿನಗಳ ಅವಧಿಯಲ್ಲಿ ದಕ್ಷಿಣದ ರಾಜ್ಯಗಳ ಸಿನಿಮಾ ನಟ, ನಟಿಯರು ಮತ್ತು ತಂತ್ರಜ್ಞರು ಹೆಚ್ಚಾಗಿ ಕಂಡು ಬರಲಿಲ್ಲ. ನವಾಜುದ್ದೀನ್ ಸಿದ್ಧಿಖಿ, ನಾನಾ ಪಾಟೇಕರ್, ಮುಖೇಶ್ ರಿಷಿ ಮತ್ತಿತರರು ಚಿತ್ರೋತ್ಸವದಲ್ಲಿ ಕಂಡು ಬಂದ ಪ್ರಮುಖರು. ತೆಲುಗಿನ ಮೆಗಾಸ್ಟಾರ್ ಚಿರಂಜೀವಿ ಅವರಿಗೆ ‘ದ ಸಿನಿಮಾ ಪರ್ಸನಾಲಿಟಿ ಆಫ್ ದ ಇಯರ್’ ಪ್ರಶಸ್ತಿ ಘೋಷಣೆ ಆಗಿದ್ದು ಸಮಾರೋಪ ಸಮಾರಂಭಕ್ಕೆ ಅವರು ಆಗಮಿಸುತ್ತಾರೆಂಬ ನಿರೀಕ್ಷೆ ತೆಲಂಗಾಣ ಮತ್ತು ಆಂಧ್ರಪ್ರದೇಶದ ಪ್ರತಿನಿಧಿಗಳಲ್ಲಿದೆ.

ಕನ್ನಡದ ಹದಿನೇಳೆಂಟು, ನಾನು ಕುಸುಮ, ತೆಲುಗಿನ ಕುದಿರಾಂ ಬೋಸ್, ತಮಿಳಿನ ಕೀಡ, ಕುರಂಗು ಪೆಡಲ್, ಮಲಯಾಳಂನ ಅರಿಯಿಪ್ಪು, ಹಿಂದಿಯ ಸ್ಟೋರಿ ಟೆಲ್ಲರ್, ಸೇರಿದಂತೆ ಕಮರ್ಷಿಯಲ್ ಸಿನಿಮಾಗಳಾದ ಜೈ ಭೀಮ್, ಆರ್‌ಆರ್‌ಆರ್, ಕಾಶ್ಮೀರ್ ಫೈಲ್ಸ್ ಇತ್ಯಾದಿ ಸಿನಿಮಾಗಳು ಪ್ರತಿನಿಧಿಗಳನ್ನು ದೊಡ್ಡಮಟ್ಟದಲ್ಲಿ ಸೆಳೆದವು.

ಚೀನಾದಲ್ಲಿ ಕೋವಿಡ್ ಏರಿಕೆ: ಒಂದೇ ದಿನ 29 ಸಾವಿರ ಹೊಸ ಪ್ರಕರಣ

ಶಾಂಘೈ (ರಾಯಿಟರ್ಸ್): ಚೀನಾದಲ್ಲಿ ಕೋವಿಡ್ ಸೋಂಕಿನ ಹೊಸ ಪ್ರಕರಣಗಳ ಸಂಖ್ಯೆ ಏರುತ್ತಿದ್ದು, ಮಂಗಳವಾರ ಒಂದೇ ದಿನ 29,157 ಪ್ರಕರಣಗಳು ದಾಖಲಾಗಿವೆ.

ಇದರಲ್ಲಿ 2,719 ಪ್ರಕರಣಗಳಲ್ಲಿ ರೋಗದ ಲಕ್ಷಣಗಳಿದ್ದರೆ, 26,438 ಪ್ರಕರಣಗಳು ಲಕ್ಷಣ ರಹಿತವಾಗಿವೆ. ಸೋಮವಾರ 28,127 ಪ್ರಕರಣಗಳು ದಾಖಲಾಗಿದ್ದವು ಎಂದು ರಾಷ್ಟ್ರೀಯ ಆರೋಗ್ಯ ಆಯೋಗ ಬುಧವಾರ ಹೇಳಿದೆ.

ನ.22ರವರೆಗೆ ಚೀನಾದಲ್ಲಿ ಕೋವಿಡ್ ಸೋಂಕು ಲಕ್ಷಣದ 2,93,500 ಪ್ರಕರಣಗಳು ದೃಢಪಟ್ಟಿವೆ. ಸಾವಿನ ಹೊಸ ಪ್ರಕರಣಗಳು ದಾಖಲಾಗಿಲ್ಲ. ಬೀಜಿಂಗ್, ಶಾಂಘೈ, ಗುವಾಂಗೌ ಹಾಗೂ ಚಾಂಗ್‌ಕಿಂಗ್‌ನಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದೆ.

ಪ್ರಧಾನಿ ಶೇರ್ ಬಹದ್ದೂರ್ ದೇವುಬಾಗೆ ಗೆಲುವು

ನೇಪಾಳ: ಎನ್‌ಸಿಪಿ ಪ್ರಾಬಲ್ಯ?

ಕಠ್ಮಂಡು (ರಾಯಿಟರ್ಸ್): ನೇಪಾಳದ ಚುನಾವಣಾ ಫಲಿತಾಂಶದಲ್ಲಿ ಆಡಳಿತಾರೂಢ ನೇಪಾಳಿ ಕಾಂಗ್ರೆಸ್ ಪಕ್ಷವು (ಎನ್‌ಸಿಪಿ) ಸದ್ಯ 19 ಸ್ಥಾನಗಳಲ್ಲಿ ಗೆಲುವು ಸಾಧಿಸಿದ್ದು ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮುವ ಸೂಚನೆ ಬುಧವಾರ ಹೊರಬಿದ್ದಿದೆ. ಅಧಿಕಾರ ಉಳಿಸಿಕೊಳ್ಳಲು ಪ್ರಧಾನಿ ಶೇರ್ ಬಹದ್ದೂರ್ ದೇವುಬಾ ಅವರಿಗೆ ಮಿತ್ರಪಕ್ಷಗಳ ನೆರವು ಬೇಕಾಗಲಿದೆ.

ಅತಂತ್ರ ಸಂಸತ್ತು ನಿರ್ಮಾಣವಾಗಿ, ಹೊಸ ರಾಜಕೀಯ ಪಕ್ಷಗಳು ಸರ್ಕಾರ ರಚನೆಯಲ್ಲಿ ನಿರ್ಣಾಯಕ ಪಾತ್ರ ವಹಿಸುವ ನಿರೀಕ್ಷೆ ಇದೆ. ದೇವುಬಾ ಅವರ ಪಕ್ಷವು ಹೆಚ್ಚಿನ ಸ್ಥಾನಗಳನ್ನು ಗೆಲ್ಲುವ ಸಾಧ್ಯತೆ ಇಲ್ಲ ಎನ್ನುವುದು ರಾಜಕೀಯ ವಿಶ್ಲೇಷಕರ ಲೆಕ್ಕಾಚಾರವಾಗಿದೆ.

ನೇಪಾಳ ಪ್ರಧಾನಿ ಶೇರ್ ಬಹದ್ದೂರ್ ದೇವುಬಾ ಅವರು ದಡೆಲ್ಧುರಾ ಕ್ಷೇತ್ರದಿಂದ ಪುನರಾಯ್ಕೆಯಾಗಿದ್ದಾರೆ. ಇದು ಅವರಿಗೆ ಏಳನೇ ಗೆಲುವು. ಐದು ಬಾರಿ ಪ್ರಧಾನಿ ಹುದ್ದೆ ಅಲಂಕರಿಸಿರುವ ದೇವುಬಾ ಅವರ ಎನ್‌ಸಿಪಿ 19 ಸ್ಥಾನಗಳಲ್ಲಿ ಗೆಲುವು ಪಡೆದಿದೆ. 37 ಕ್ಷೇತ್ರಗಳಲ್ಲಿ ಮುನ್ನಡೆಯಲ್ಲಿದೆ. ಪ್ರಮುಖ ವಿರೋಧ ಪಕ್ಷಗಳಾದ ನೇಪಾಳ ಕಮ್ಯುನಿಸ್ಟ್ ಏಕೀಕೃತ ಮಾರ್ಕ್ಸ್‌ವಾದಿ-ಲೆನಿನ್‌ವಾದಿ (ಸಿಪಿಎನ್–ಯುಎಂಎಲ್) 7 ಸ್ಥಾನಗಳಲ್ಲಿ ಗೆಲುವು ಪಡೆದಿದೆ. 37 ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದೆ. ಸಿಪಿಎನ್–ಎಂ 3 ಸ್ಥಾನಗಳಲ್ಲಿ ಗೆಲುವು ಪಡೆದಿದ್ದು, 15 ಸ್ಥಾನಗಳಲ್ಲಿ ಮುನ್ನಡೆಯಲ್ಲಿದೆ. ಸಿಪಿಎನ್–ಯುಎಸ್ 2 ಸ್ಥಾನ, ಹೊಸದಾಗಿ ರಚನೆಯಾಗಿರುವ ರಾಷ್ಟ್ರೀಯ ಸ್ವತಂತ್ರ ಪಕ್ಷ (ಎನ್‌ಐಪಿ) ಮೂರು ಸ್ಥಾನ ಗೆದ್ದುಕೊಂಡಿವೆ.

> ಜನರು ಬದಲಾವಣೆ ಬಯಸಿದ್ದಾರೆ. ಅತಂತ್ರ ಸಂಸತ್ ಸೃಷ್ಟಿ ಮತ್ತು ಹೊಸ ಪಕ್ಷಗಳು ಸರ್ಕಾರದ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸುವ ನಿರೀಕ್ಷೆ ಇದೆ.
> **ಗೆಜಾ ಶರ್ಮಾ ವಾಗ್ಲೆ**
> ನೇಪಾಳಿ ರಾಜಕೀಯ ವಿಶ್ಲೇಷಕ

91 ಸ್ಥಾನಗಳಲ್ಲಿ ಸ್ಪರ್ಧಿಸಿರುವ ದೇವುಬಾ ಅವರ ನೇತೃತ್ವದ ಪಕ್ಷವು 42 ಕ್ಷೇತ್ರಗಳಲ್ಲಿ ಮುನ್ನಡೆಯಲ್ಲಿದೆ. ಪ್ರಮುಖ ಪ್ರತಿಸ್ಪರ್ಧಿ ಯುಎಂಎಲ್ 141 ಸ್ಥಾನಗಳಲ್ಲಿ ಸ್ಪರ್ಧಿಸಿದ್ದು, 43 ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದೆ. ಎನ್‌ಐಪಿ 5 ಸ್ಥಾನಗಳಲ್ಲಿ ಮುಂದಿದೆ.135 ಕ್ಷೇತ್ರಗಳ ಮತ ಎಣಿಕೆ ನಡೆಯುತ್ತಿದೆ.

ಮೈತ್ರಿಕೂಟದಲ್ಲಿ ಪ್ರಮುಖ ಪಾಲುದಾರವಾಗಿರುವ ಮಾವೋವಾದಿ ಸೆಂಟರ್ ಪಕ್ಷ 14 ಸ್ಥಾನಗಳಲ್ಲಿ ಮುನ್ನಡೆಯಲ್ಲಿದ್ದು, ಕೇವಲ 3 ಸ್ಥಾನಗಳನ್ನು ಗೆದ್ದಿದೆ. ಅಂತಿಮ ಫಲಿತಾಂಶ ಹೊರಬೀಳಲು ಇನ್ನೂ 10 ದಿನಗಳು ಬೇಕಾಗಬಹುದು.

ಸಂಕ್ಷಿಪ್ತ ಸುದ್ದಿ

ಟ್ರಂಪ್‌ಗೆ ಮತ್ತೊಂದು ಹಿನ್ನಡೆ

ವಾಷಿಂಗ್ಟನ್ (ಎಪಿ): ಮೂರು ವರ್ಷಗಳ ಕಾನೂನು ಸಮರದ ನಂತರ ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಆದಾಯ ತೆರಿಗೆ ಸಲ್ಲಿಕೆ ವಿವರ ಪರಿಶೀಲನೆಯನ್ನು ಸಂಸದೀಯ ಸಮಿತಿಗೆ ತಕ್ಷಣ ಹಸ್ತಾಂತರಿಸುವ ಹಾದಿಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ಸುಗಮಗೊಳಿಸಿದೆ. ಟ್ರಂಪ್ ಮತ್ತು ಅವರ ಕೆಲವು ವ್ಯವಹಾರಗಳಿಗೆ ಸಂಬಂಧಿಸಿದ ಆರು ವರ್ಷಗಳ ಆದಾಯ ತೆರಿಗೆ ಸಲ್ಲಿಕೆಯ ವಿವರವನ್ನು ಡೆಮಾಕ್ರಟಿಕ್ ನಿಯಂತ್ರಿತ ಹೌಸ್ ವೇಸ್ ಮತ್ತು ಮೀನ್ಸ್ ಸಮಿತಿ ಪರಿಶೀಲಿಸಲು ಅನುಮತಿಸಿರುವ ಖಜಾನೆ ಇಲಾಖೆಯ ಆದೇಶಕ್ಕೆ ತಡೆ ಕೋರಿದ್ದ ಟ್ರಂಪ್ ಮನವಿಯನ್ನು ಕೋರ್ಟ್ ತಿರಸ್ಕರಿಸಿತು.

ಭೂಕಂಪ: 271 ಸಾವು

ಸಿಯಾಂಜೂರ್ (ಇಂಡೊನೇಷ್ಯಾ) (ಎಪಿ): ಇಂಡೊನೇಷ್ಯಾದ ಜಾವಾ ದ್ವೀಪದಲ್ಲಿ ಸೋಮವಾರ ಸಂಭವಿಸಿದ ಪ್ರಬಲ ಭೂಕಂಪದಿಂದ ಮೃತಪಟ್ಟವರ ಸಂಖ್ಯೆ 271ಕ್ಕೆ ತಲುಪಿದೆ.

ಕುಸಿದ ಮನೆಯ ಅವಶೇಷಗಳಡಿ ತನ್ನ ಅಜ್ಜಿಯ ಶವದ ಪಕ್ಕವೇ ಎರಡು ದಿನಗಳಿಂದ ಸಿಲುಕಿದ್ದ ಆರು ವರ್ಷದ ಬಾಲಕನನ್ನು ರಕ್ಷಣಾ ತಂಡಗಳು ಬುಧವಾರ ಜೀವಂತವಾಗಿ ರಕ್ಷಿಸಿವೆ. ಕಟ್ಟಡಗಳ ಅವಶೇಷಗಳ ಅಡಿ ಸಿಲುಕಿದ್ದ ಮೂರು ಮೃತ ದೇಹಗಳನ್ನು ಹೊರತೆಗೆದಿವೆ.

ಭೂಕಂಪದ ನಂತರ ಸುರಿಯುತ್ತಿರುವ ಭಾರಿ ಮಳೆಯಿಂದ ಬುಧವಾರ ಶೋಧ ಕಾರ್ಯಕ್ಕೆ ಅಡಚಣೆ ಉಂಟಾಯಿತು.

ರಷ್ಯಾ ಉಗ್ರ ರಾಷ್ಟ್ರ: ಯುರೋಪ್

ಸ್ಟ್ರಾಸ್‌ಬರ್ಗ್, ಫ್ರಾನ್ಸ್/ ಉಕ್ರೇನ್ (ಎಎಫ್‌ಪಿ): ಉಕ್ರೇನ್ ಮೇಲಿನ ಯುದ್ಧದಲ್ಲಿ ರಷ್ಯಾ ಪಡೆಗಳು ದೌರ್ಜನ್ಯ ಎಸಗಿವೆ ಎಂದು ಆರೋಪಿಸಿರುವ ಯುರೋಪ್ ಒಕ್ಕೂಟದ ಸಂಸತ್, ಬುಧವಾರ ರಷ್ಯಾವನ್ನು ಭಯೋತ್ಪಾದಕ ದೇಶವೆಂದು ಘೋಷಿಸಿದೆ.

‘ಉಕ್ರೇನ್ ನಾಗರಿಕರ ಮೇಲಿನ ರಷ್ಯಾದ ಉದ್ದೇಶಪೂರ್ವಕ ದಾಳಿಗಳು ಮತ್ತು ದೌರ್ಜನ್ಯಗಳು, ನಾಗರಿಕ ಮೂಲಸೌಕರ್ಯಗಳ ನಾಶ ಹಾಗೂ ಮಾನವ ಹಕ್ಕುಗಳ ಉಲ್ಲಂಘನೆ ಭಯೋತ್ಪಾದನೆಯ ಕೃತ್ಯಗಳಿಗೆ ಸಮನಾಗಿದೆ’ ಎಂದು ಸಂಸದರು ಅನುಮೋದಿಸಿದ ನಿರ್ಣಯ ತಿಳಿಸಿದೆ.

ಕೀವ್ ಮೇಲೆ ದಾಳಿ ತೀವ್ರ: ಉಕ್ರೇನ್ ರಾಜಧಾನಿ ಕೀವ್ ಮತ್ತು ಪ್ರಮುಖ ನಗರಗಳ ಇಂಧನ ಮೂಲಸೌಕರ್ಯಗಳು ಹಾಗೂ ಜನವಸತಿ ಕಟ್ಟಡಗಳ ಮೇಲೆ ರಷ್ಯಾ ಪಡೆಗಳ ಕ್ಷಿಪಣಿ ದಾಳಿ ಬುಧವಾರ ತೀವ್ರಗೊಂಡಿತು. ಝಪೊರಿಝಿಯಾ ಪ್ರದೇಶದ ವಿಲ್ನಿಯಾನ್‌ಸ್ಕ್ ಪಟ್ಟಣದ ಹೆರಿಗೆ ಆಸ್ಪತ್ರೆಗೆ ಕ್ಷಿಪಣಿ ಅಪ್ಪಳಿಸಿ ನವಜಾತ ಶಿಶು ಬಲಿಯಾಗಿದೆ. ವಿಶ್‌ಗೊರಾಡ್‌ನಲ್ಲಿ ವಸತಿ ಕಟ್ಟಡ ಧ್ವಂಸಗೊಂಡು, ಮೂವರು ನಾಗರಿಕರು ಮೃತಪಟ್ಟರು.

ಉಕ್ರೇನ್ ನಿಯಂತ್ರಣದ ರಿವ್‌ನೆನ್ಸ್ಕಾ, ಪಿವ್ಡೆನ್ನೊ ಉಕ್ರೈನ್‌ಸ್ಕಾ ಮತ್ತು ಖ್ಮೆಲ್ನಿಂಟ್‌ಸ್ಕಾ ಅಣು ವಿದ್ಯುತ್ ಸ್ಥಾವರಗಳು ವಿದ್ಯುತ್ ಗ್ರಿಡ್‌ನಿಂದ ಸಂಪರ್ಕ ಕಡಿದುಕೊಂಡಿವೆ.

@SudhaWeekly
ಸುಧಾ
ಅಂಗಾಂಗ ದಾನ ಎನ್ನುವುದು ಸಾವಿಗೀಡಾದ ವ್ಯಕ್ತಿಯ ಬದುಕಿನ ಬಹು ದೊಡ್ಡ ಸಾರ್ಥಕತೆ ಮಾತ್ರವಲ್ಲದೆ, ಹಲವರ ಉಳಿವಿಗೆ ಕಾರಣವಾಗುವ ಮಾನವೀಯ ಮಾರ್ಗವೂ ಹೌದು. ಅಂಗಾಂಗ ದಾನ ಮಾಡಿದ ಸಂಚಾರಿ ವಿಜಯ್, ಕಣ್ಣುಗಳನ್ನು ದಾನ ಮಾಡಿದ ಪುನೀತ್ ರಾಜ್‌ಕುಮಾರ್ ಅವರಂಥ ಸೆಲೆಬ್ರಿಟಿಗಳ ಮೂಲಕ ಅಂಗಾಂಗ ದಾನದ ಬಗ್ಗೆ ಸಮಾಜದಲ್ಲಿ ಜಾಗೃತಿ ಮೂಡುತ್ತಿದ್ದರೂ, ಅಂಗಾಂಗಗಳ ಲಭ್ಯತೆ ಹಾಗೂ ನಿರೀಕ್ಷೆಯಲ್ಲಿರುವವರ ಸಂಖ್ಯೆಯ ನಡುವಿನ ಅಂತರ ಹೆಚ್ಚುತ್ತಲೇ ಇದೆ.
ಅಂಗಾಂಗ ದಾನ
ಒಂದು ಜೀವದ ಕೊನೆ ಹಲವು ಜೀವಕ್ಕೆ ಹೊಸಹುಟ್ಟು
ಕಂಬ್ಳಿಹುಳದ ಚಿಟ್ಟೆಪ್ರಪಂಚ
ನಿಮ್ಮ ಸಮೀಪದ ಅಂಗಡಿಗಳಲ್ಲಿ ಲಭ್ಯ
ಜೆರುಸಲೇಂ ಪ್ರಾಚೀನತೆಯ ಸೊಬಗು ಆಧುನಿಕತೆಯ ಮೆರುಗು
ರಾಘವೇಂದ್ರ ಆಚಾರ್ಯ ಸಂದರ್ಶನ
ಟ್ರಯಲ್ ರೂಂನ ಸೆಲ್ಫಿ ಲೋಕ
ಶೋಷಣೆಯ ವಿರುದ್ಧದ ಪ್ರತಿರೋಧ ಕಾವ್ಯ ರ‍್ಯಾಪ್
ವೈಟ್ ಐ ಲೈನರ್ ಚಂದಕ್ಕಿಂತ ಚಂದ
ಅಂತರಂಗದ ಮಾತಿಗಷ್ಟೇ ಒಗ್ಗೊಡುವೆ ಭರತ್ ಬಳುವಳ್ಳಿ ಸಂದರ್ಶನ
ದೇವರು! ವಿಜ್ಞಾನಿಗಳ ನಂಬಿಕೆಯೇನು?
ಎಚ್.ಎಂ. ಕುಮಾರಸ್ವಾಮಿ ಕನ್ನಡಕ್ಕೆ ಅನುವಾದಿಸಿದ ಎರಡು ಹಿಂದಿ ಕಥೆಗಳು
ಕ್ಯಾಚ್‌ವರ್ಡ್ ಕರಾಮತ್ತು
feedback@sudha.co.in

ವಿಜಯ್ ಹಜಾರೆ ಟ್ರೋಫಿ: ಪ್ರೀಕ್ವಾರ್ಟರ್‌ಫೈನಲ್‌ಗೆ ಕರ್ನಾಟಕ; ನಿಕಿನ್, ಶ್ರೇಯಸ್ ಅರ್ಧಶತಕ

ರೋನಿತ್ ದಾಳಿಗೆ ಕುಸಿದ ರಾಜಸ್ಥಾನ

ಕೋಲ್ಕತ್ತ: ಅನುಭವಿ ಬೌಲರ್ ರೋನಿತ್ ಮೋರೆ ಹಾಗೂ ವಾಸುಕಿ ಕೌಶಿಕ್ ಅವರ ಉತ್ತಮ ಬೌಲಿಂಗ್ ಬಲದಿಂದ ಕರ್ನಾಟಕ ತಂಡವು ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ರಾಜಸ್ಥಾನ ವಿರುದ್ಧ ಜಯಿಸಿತು. ಇದರೊಂದಿಗೆ ಪ್ರೀಕ್ವಾರ್ಟರ್‌ಫೈನಲ್ ಪ್ರವೇಶ ಖಚಿತಪಡಿಸಿಕೊಂಡಿತು.

ಬುಧವಾರ ಕಲ್ಕತ್ತಾ ಕ್ರಿಕೆಟ್ ಮತ್ತು ಫುಟ್‌ಬಾಲ್ ಮೈದಾನದಲ್ಲಿ ನಡೆದ ಬಿ ಗುಂಪಿನ ಕೊನೆಯ ಪಂದ್ಯದಲ್ಲಿ ಮಯಂಕ್ ಅಗರವಾಲ್ ಬಳಗವು 60 ರನ್‌ಗಳಿಂದ ಜಯಿಸಿತು.

ಟಾಸ್ ಗೆದ್ದ ರಾಜಸ್ಥಾನ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಕರ್ನಾಟಕ ತಂಡವು 50 ಓವರ್‌ಗಳಲ್ಲಿ 208 ರನ್‌ಗಳ ಸಾಧಾರಣ ಮೊತ್ತ ಗಳಿಸಿ ಆಲೌಟ್ ಆಯಿತು. ನಿಕಿನ್ ಜೋಸ್ (67; 81ಎ, 4X10) ಹಾಗೂ ಶ್ರೇಯಸ್ ಗೋಪಾಲ್ (57; 72ಎ, 4X6) ಅರ್ಧಶತಕಗಳನ್ನು ಗಳಿಸಿದ್ದರಿಂದ ಈ ಮೊತ್ತ ಗಳಿಕೆ ಸಾಧ್ಯವಾಯಿತು. ಆರಂಭಿಕ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದರು.

ರಾಜಸ್ಥಾನದ ಅನಿಕೇತ್ ಚೌಧರಿ ಹಾಲೂ ಸಾಹಿಲ್ ದಿವಾನ್ ಅವರು ತಲಾ ಮೂರು ವಿಕೆಟ್ ಗಳಿಸಿ ಕರ್ನಾಟಕದ ಬ್ಯಾಟಿಂಗ್ ಪಡೆಯನ್ನು ಕಾಡಿದರು. ಆದರೆ, ನವಪ್ರತಿಭೆ ನಿಕಿನ್ ಜೋಸ್ ಹಾಗೂ ಶ್ರೇಯಸ್ ತಂಡವು ಅಲ್ಪಮೊತ್ತಕ್ಕೆ ಕುಸಿಯುವುದನ್ನು ತಡೆದರು.

ರೋನಿತ್ ಮೋರೆ

ಸಾಧಾರಣ ಗುರಿ ಬೆನ್ನಟ್ಟಿದ ರಾಜಸ್ಥಾನ ತಂಡವನ್ನು ಗೆಲುವಿನತ್ತ ಮುನ್ನಡೆಸಲು ಆರಂಭಿಕ ಬ್ಯಾಟರ್ ಯಶ್ ಕೊಠಾರಿ (49; 81ಎ) ಪ್ರಯತ್ನಿಸಿದರು. ಆದರೆ ಮತ್ತೊಂದು ಬದಿಯಿಂದ ಉಳಿದ ಬ್ಯಾಟರ್‌ಗಳು ಅವರಿಗೆ ಜೊತೆ ನೀಡಲು ಕರ್ನಾಟಕದ ಬೌಲರ್‌ಗಳು ಬಿಡಲಿಲ್ಲ.

ಕೌಶಿಕ್ ಮತ್ತು ರೋನಿತ್ ಅವರ ದಾಳಿ ಪರಿಣಾಮಕಾರಿಯಾಗಿತ್ತು. ಕೆಳಕ್ರಮಾಂಕದ ಬ್ಯಾಟರ್‌ಗಳನ್ನು ಪೆವಿಲಿಯನ್‌ಗೆ ಮರಳಿಸುವಲ್ಲಿ ಸ್ಪಿನ್ನರ್ ಗೌತಮ್ ಯಶಸ್ವಿಯಾದರು.

ಕರ್ನಾಟಕ ತಂಡವು ಒಟ್ಟು 24 ಪಾಯಿಂಟ್ ಗಳಿಸಿದೆ. ಇದೇ 26ರಂದು ಅಹಮದಾಬಾದಿನಲ್ಲಿ ನಡೆಯುವ ಪ್ರೀ-ಕ್ವಾರ್ಟರ್‌ನಲ್ಲಿ ಜಾರ್ಖಂಡ್ ತಂಡವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 48.4 ಓವರ್‌ಗಳಲ್ಲಿ 208 (ನಿಕಿನ್ ಜೋಸ್ 67, ಮನೀಷ್ ಪಾಂಡೆ 21, ಶ್ರೇಯಸ್ ಗೋಪಾಲ್ 57, ಬಿ.ಆರ್. ಶರತ್ 24, ಅನಿಕೇತ್ ಚೌಧರಿ 28ಕ್ಕೆ3, ಸಾಹಿಲ್ ದಿವಾನ್ 30ಕ್ಕೆ3, ಶುಭಂ ಶರ್ಮಾ 39ಕ್ಕೆ2) ರಾಜಸ್ಥಾನ: 41.1 ಓವರ್‌ಗಳಲ್ಲಿ 148 (ಯಶ್ ಕೊಠಾರಿ 49, ಕುನಾಲ್ ಸಿಂಗ್ ರಾಥೋಡ್ 35, ವಿದ್ವತ್ ಕಾವೇರಪ್ಪ 17ಕ್ಕೆ2, ವಿ. ಕೌಶಿಕ್ 23ಕ್ಕೆ2, ರೋನಿತ್ ಮೋರೆ 35ಕ್ಕೆ3, ಕೆ. ಗೌತಮ್ 36ಕ್ಕೆ3) ಫಲಿತಾಂಶ: ಕರ್ನಾಟಕ ತಂಡಕ್ಕೆ 60 ರನ್‌ಗಳ ಗೆಲುವು

ಎಂಟರ ಘಟ್ಟಕ್ಕೆ ಅಸ್ಸಾಂ, ಪಂಜಾಬ್

ಅಸ್ಸಾಂ ತಂಡವು ಬಿ ಗುಂಪಿನಿಂದ ಕ್ವಾರ್ಟರ್‌ಫೈನಲ್ ಪ್ರವೇಶಿಸಿದೆ. ಕರ್ನಾಟಕ ಹಾಗೂ ಅಸ್ಸಾಂ ತಂಡಗಳು ತಲಾ 24 ಅಂಕಗಳನ್ನು ಗಳಿಸಿವೆ. ಆದರೆ, ಗುಂಪು ಹಂತದ ಪಂದ್ಯದಲ್ಲಿ ಕರ್ನಾಟಕವು ಅಸ್ಸಾಂ ತಂಡದ ಎದುರು ಸೋತಿತ್ತು.

26ರಂದು ಕರ್ನಾಟಕ ತಂಡವು ಜಾರ್ಖಂಡ್ ಎದುರು ಪ್ರೀಕ್ವಾರ್ಟರ್‌ನಲ್ಲಿ ಆಡಲಿದೆ.

ಇದೇ ಸುತ್ತಿನಲ್ಲಿ ಉತ್ತರಪ್ರದೇಶ –ಮುಂಬೈ, ಜಮ್ಮು ಮತ್ತು ಕಾಶ್ಮೀರ –ಕೇರಳ ಮುಖಾಮುಖಿಯಾಗಲಿವೆ. ಗೆದ್ದ ತಂಡಗಳು ಕ್ವಾರ್ಟರ್‌ಫೈನಲ್ ಪ್ರವೇಶಿಸಲಿವೆ.

ಪಂಜಾಬ್, ಮಹಾರಾಷ್ಟ್ರ, ತಮಿಳುನಾಡು ಹಾಗೂ ಸೌರಾಷ್ಟ್ರ ತಂಡಗಳು ಈಗಾಗಲೇ ಎಂಟರ ಘಟ್ಟ ಪ್ರವೇಶಿಸಿವೆ.

26ರಿಂದ 'ರ‍್ಯಾಲಿ ಆಫ್ ಚಿಕ್ಕಮಗಳೂರು'

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಕಾಫಿನಾಡಿನಲ್ಲಿ ಇದೇ 26 ಮತ್ತು 27ರಂದು ರಾಷ್ಟ್ರಮಟ್ಟದ 'ರ‍್ಯಾಲಿ ಆಫ್ ಚಿಕ್ಕಮಗಳೂರು' ನಡೆಯಲಿದೆ ಎಂದು ಚಿಕ್ಕಮಗಳೂರು ಮೋಟರ್ಸ್ ಸ್ಪೋರ್ಟ್ಸ್ ಕ್ಲಬ್ (ಎಂಎಸ್‌ಸಿಸಿ) ಅಧ್ಯಕ್ಷ ಜಯಂತ್ ಪೈ ಇಲ್ಲಿ ಬುಧವಾರ ತಿಳಿಸಿದರು.

ಎಂಎಸ್‌ಸಿಸಿ, ಪ್ರವಾಸೋದ್ಯಮ ಇಲಾಖೆ, ರಾಯಲ್ ಕಾಫಿ ಆರೆಂಜ್ ಕ್ಲಬ್, ಬ್ಲೂ ಮಿಸ್ಟ್, ಹಲ್ಪೋಲಿಕ್ ಟ್ರೀಟ್, ಮೂಡಿಗೆರೆ ಕ್ಲಬ್ ಸಹಯೋಗದಲ್ಲಿ ರ‍್ಯಾಲಿ ಏರ್ಪಡಿಸಲಾಗಿದೆ. ಇದು ಟೈಪ್ ಸ್ಪೀಡ್ ಡಿಸ್ಟೆನ್ಸ್ (ಡಿಎಸ್‌ಡಿ) ಮಾದರಿಯ ರ‍್ಯಾಲಿ. ಲೆಗ್ –1 ಹಂತದಲ್ಲಿ 190 ಕಿ.ಮೀ ಹಾಗೂ 27ರಂದು ಲೆಗ್–2 ಹಂತದಲ್ಲಿ 115 ಕಿ.ಮೀ ಒಟ್ಟು 305 ಕ್ರಮಿಸಲಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಚಿಕ್ಕಮಗಳೂರು ಸುತ್ತಲಿನ ಪ್ರದೇಶದಲ್ಲಿ ರ‍್ಯಾಲಿ ನಡೆಯಲಿದೆ. ದ್ವಿಚಕ್ರ ಹಾಗೂ ನಾಲ್ಕುಚಕ್ರ ವಾಹನ ಎರಡು ವಿಭಾಗಗಳು ಇವೆ. ರ‍್ಯಾಲಿಯಲ್ಲಿ 40ಕ್ಕೂ ಹೆಚ್ಚಿನ ಸ್ಪರ್ಧಿಗಳು ಭಾಗವಹಿಸುವ ನಿರೀಕ್ಷೆ ಇದೆ. 'ಪ್ರೋ ಎಕ್ಸ್‌ಪರ್ಟ್', 'ಪ್ರೋ ಸ್ಟಾಕ್', 'ಕಾರ್ಪೊರೆಟ್', 'ಕಪಲ್', 'ನಾವೀಸ್', 'ವೆಟರನ್', 'ಚಿಕ್ಕಮಗಳೂರು' ವಿಭಾಗ ಮಾಡಲಾಗಿದೆ. ವಿಜೇತರಿಗೆ ಒಟ್ಟು ₹2.5 ಲಕ್ಷ ನಗದು ಬಹುಮಾನ ನೀಡಲಾಗುವುದು ಎಂದು ತಿಳಿಸಿದರು.

26ರಂದು ಸಂಜೆ 4 ಗಂಟೆಗೆ ಬಿಂಡಿಗಾ ಪೀಕ್ ರೆಸಾರ್ಟ್‌ನಿಂದ ಪ್ರಾರಂಭವಾಗಿ ಸಂಜೆ 7.30ಕ್ಕೆ ಮೂಡಿಗೆರೆಯ ಕ್ಲಬ್ ತಲುಪಲಿದೆ. 8.30ಕ್ಕೆ ಪುನರಾರಂಭವಾಗಿ ರಾತ್ರಿ 11.30ಕ್ಕೆ ಚಿಕ್ಕಮಗಳೂರು ತಲುಪಲಿದೆ. 27ರಂದು 2ನೇ ಹಂತದ ರ‍್ಯಾಲಿ ಬೆಳಿಗ್ಗೆ 9.30ಕ್ಕೆ ಬಿಂಡಿಗಾ ಪೀಕ್‌ನಿಂದ ಪ್ರಾರಂಭವಾಗಿ ಮಧ್ಯಾಹ್ನ ಮುಗಿಯಲಿದೆ ಎಂದರು. ಅಭಿಜಿತ್ ಪೈ, ದಿಲೀಪ್‌ಕುಮಾರ್ ಜೈನ್, ದೀಪಕ್ ಇದ್ದರು.



ಬಾಂಗ್ಲಾದೇಶ ಸರಣಿ: ಜಡೇಜ ಅಲಭ್ಯ

ನವದೆಹಲಿ (ಪಿಟಿಐ): ಆಲ್‌ರೌಂಡರ್ ರವೀಂದ್ರ ಜಡೇಜ ಅವರನ್ನು ಮುಂದಿನ ತಿಂಗಳು ನಡೆಯಲಿರುವ ಬಾಂಗ್ಲಾದೇಶ ಎದುರಿನ ಕ್ರಿಕೆಟ್ ಸರಣಿಯಲ್ಲಿ ಆಡುವ ಭಾರತ ತಂಡದಲ್ಲಿ ಸ್ಥಾನ ಪಡೆದಿಲ್ಲ.

ಕೆಲವು ತಿಂಗಳುಗಳ ಹಿಂದೆ ಅವರ ಮೊಣಕಾಲಿನ ಗಾಯಕ್ಕೆ ಶಸ್ತ್ರಚಿಕಿತ್ಸೆ ಮಾಡಲಾಗಿತ್ತು. ಅವರಿನ್ನೂ ಪೂರ್ಣಪ್ರಮಾಣದಲ್ಲಿ ಚೇತರಿಸಿಕೊಂಡಿಲ್ಲ. ಬೆನ್ನುನೋವಿನಿಂದ ಬಳಲಿರುವ ಯಶ್ ದಯಾಳ್ ಅವರನ್ನೂ ಆಯ್ಕೆ ಮಾಡಿಲ್ಲ. ನ್ಯೂಜಿಲೆಂಡ್‌ನಲ್ಲಿ ನಡೆಯಲಿರುವ ಏಕದಿನ ಸರಣಿ ಮತ್ತು ಬಾಂಗ್ಲಾದೇಶ ಏಕದಿನ ಸರಣಿಯಲ್ಲಿ ಆಡುವ ಭಾರತ ತಂಡಗಳನ್ನು ಬುಧವಾರ ಬಿಸಿಸಿಐ ಪ್ರಕಟಿಸಿದೆ.

ನ್ಯೂಜಿಲೆಂಡ್‌ನಲ್ಲಿ ಶಿಖರ್ ಧವನ್ ತಂಡವನ್ನು ಮುನ್ನಡೆಸುವರು. ಬಾಂಗ್ಲಾ ಸರಣಿಗೆ ರೋಹಿತ್ ತಂಡಕ್ಕೆ ಮರಳುವರು. ಕೆ.ಎಲ್. ರಾಹುಲ್, ವಿರಾಟ್ ಕೊಹ್ಲಿ ಕೂಡ ಮರಳಲಿದ್ದಾರೆ. ಇದೇ ಸಂದರ್ಭದಲ್ಲಿ ಭಾರತ ಎ ತಂಡವನ್ನೂ ಆಯ್ಕೆ ಮಾಡಲಾಗಿದೆ. ಅಭಿಮನ್ಯು ಈಶ್ವರನ್ ನಾಯಕತ್ವ ವಹಿಸುವರು.

ಭಾರತ ತಂಡಗಳು: ನ್ಯೂಜಿಲೆಂಡ್ ಏಕದಿನ ಸರಣಿಗೆ: ಶಿಖರ್ ಧವನ್ (ನಾಯಕ), ಶುಭಮನ್ ಗಿಲ್, ದೀಪಕ್ ಹೂಡಾ, ಸೂರ್ಯಕುಮಾರ್ ಯಾದವ್, ಶ್ರೇಯಸ್ ಅಯ್ಯರ್, ರಿಷಭ್ ಪಂತ್ (ಉಪನಾಯಕ/ ವಿಕೆಟ್‌ಕೀಪರ್), ಸಂಜು ಸ್ಯಾಮ್ಸನ್, ವಾಷಿಂಗ್ಟನ್ ಸುಂದರ್, ಶಾರ್ದೂಲ್ ಠಾಕೂರ್, ಯಜುವೇಂದ್ರ ಚಾಹಲ್, ಕುಲದೀಪ್ ಯಾದವ್, ಅರ್ಷದೀಪ್ ಸಿಂಗ್, ದೀಪಕ್ ಚಾಹರ್, ಉಮ್ರಾನ್ ಮಲಿಕ್

ಬಾಂಗ್ಲಾದೇಶ ಎದುರಿನ ಏಕದಿನ ಸರಣಿ: ರೋಹಿತ್ ಶರ್ಮಾ (ನಾಯಕ), ಕೆ.ಎಲ್. ರಾಹುಲ್ (ಉಪನಾಯಕ), ಶಿಖರ್ ಧವನ್, ವಿರಾಟ್ ಕೊಹ್ಲಿ, ರಜತ್ ಪಾಟೀದಾರ್, ಶ್ರೇಯಸ್ ಅಯ್ಯರ್, ರಾಹುಲ್ ತ್ರಿಪಾಠಿ, ರಿಷಭ್ ಪಂತ್ (ವಿಕೆಟ್‌ಕೀಪರ್), ಇಶಾನ್ ಕಿಶನ್, ಶಾಬಾಜ್ ಅಹಮದ್, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ಶಾರ್ದೂಲ್ ಠಾಕೂರ್, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ದೀಪಕ್ ಚಾಹರ್, ಕುಲದೀಪ್ ಸೇನ್.

ರೊನಾಲ್ಡೊಗೆ 2 ಪಂದ್ಯ ನಿಷೇಧ

ಲಂಡನ್ (ಎಎಫ್‌ಪಿ): ಈ ಹಿಂದೆ ಎವರ್‌ಟನ್ ವಿರುದ್ಧದ ಪಂದ್ಯದ ಸೋಲಿನ ಬಳಿಕ ಅಭಿಮಾನಿಯೊಬ್ಬರ ಮೊಬೈಲ್ ಫೋನ್ ಒಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಮ್ಯಾಂಚೆಸ್ಟರ್ ಯುನೈಟೆಡ್ ತಂಡವನ್ನು ಪ್ರತಿನಿಧಿಸಿದ್ದ ಕ್ರಿಸ್ಟಿಯಾನೊ ರೊನಾಲ್ಡೊ ಅವರಿಗೆ ಇಂಗ್ಲೆಂಡ್ ಫುಟ್ಬಾಲ್ ಒಕ್ಕೂಟ ಎರಡು ಪಂದ್ಯಗಳ ನಿಷೇಧ ವಿಧಿಸಿದೆ.

ರೊನಾಲ್ಡೊ ಅವರನ್ನು ಇಂಗ್ಲಿಷ್ ಪ್ರೀಮಿಯರ್ ಲೀಗ್ ಸರಣಿಯ ಕ್ಲಬ್ ಪಂದ್ಯಗಳಿಂದ ನಿಷೇಧಿಸಲಾಗಿದೆ. ಏಪ್ರಿಲ್‌ನಲ್ಲಿ ನಡೆದ ಪಂದ್ಯದಲ್ಲಿ ಯುನೈಟೆಡ್ 0–1 ಗೋಲುಗಳಿಂದ ಸೋಲು ಅನುಭವಿಸಿತ್ತು. ರೊನಾಲ್ಡೊ ಅವರಿಗೆ ₹ 49 ಲಕ್ಷ ದಂಡವನ್ನೂ ವಿಧಿಸಲಾಗಿದೆ.

ಮ್ಯಾಂಚೆಸ್ಟರ್ ಯುನೈಟೆಡ್ ಮಾರಾಟಕ್ಕೆ!: ಮ್ಯಾಂಚೆಸ್ಟರ್ ಯುನೈಟೆಡ್ ಕ್ಲಬ್ ಅನ್ನು ಮಾರಾಟ ಮಾಡಲು ಸಿದ್ಧರಿದ್ದೇವೆ ಎಂದು ಅಮೆರಿಕದ ಮೂಲದ ಮಾಲೀಕರು ತಿಳಿಸಿದ್ದಾರೆ. ಇದರೊಂದಿಗೆ ಕ್ಲಬ್ ಮಾಲೀಕರಾಗಿರುವ ಅಮೆರಿಕದ ಗ್ಲೇಜರ್ ಕುಟುಂಬದ 17 ವರ್ಷಗಳ ಅಧಿಪತ್ಯಕ್ಕೆ ತೆರೆ ಬೀಳುವ ಸಂಭವವಿದೆ. ರೊನಾಲ್ಡೊ ಅವರು ಮಂಗಳವಾರ ಮ್ಯಾಂಚೆಸ್ಟರ್ ಯುನೈಟೆಡ್ ಕ್ಲಬ್ ತೊರೆದಿದ್ದರು.

ಕಬಡ್ಡಿ: ಬೆಂಗಳೂರಿಗೆ ನಿರಾಶೆ

ಹೈದರಾಬಾದ್: ಬುಧವಾರ ರಾತ್ರಿ ನಡೆದ ಪ್ರೊ ಕಬಡ್ಡಿ ಟೂರ್ನಿಯ ರೋಚಕ ಹೋರಾಟದಲ್ಲಿ ಬೆಂಗಾಲ್ ವಾರಿಯರ್ಸ್ ತಂಡವು ಬೆಂಗಳೂರು ಬುಲ್ಸ್ ಬಳಗವನ್ನು ಮಣಿಸಿತು.

ಆರಂಭದಿಂದಲೂ ತುರುಸಿನ ಪೈಪೋಟಿ ಇದ್ದ ಪಂದ್ಯದಲ್ಲಿ ಬೆಂಗಾಲ್ ತಂಡವು 41–38ರಿಂದ ಗೆದ್ದಿತು. ಮೊದಲಾರ್ಧದಲ್ಲಿ ಬೆಂಗಳೂರು 22–18ರಿಂದ ಮುನ್ನಡೆಯಲ್ಲಿತ್ತು. ಆದರೆ ವಿರಾಮದ ನಂತರ ಬೆಂಗಾಲ್ ಆಟಗಾರರ ಛಲಬಿಡದ ಹೋರಾಟಕ್ಕೆ ಜಯದ ಫಲ ಸಿಕ್ಕಿತು. ಬೆಂಗಾಲ್ ನಾಯಕ ಮಣಿಂದರ್ ಸಿಂಗ್ ರೇಡಿಂಗ್‌ನಲ್ಲಿ 12 ಅಂಕಗಳನ್ನು ಗಳಿಸಿದರು. ಬೆಂಗಳೂರು ತಂಡದ ಭರತ್ (10) ಹಾಗೂ ವಿಕಾಶ್ ಖಂಡೋಲಾ (5) ಅಂಕ ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ಪುಣೇರಿ ಪಲ್ಟನ್ 39–32ರಿಂದ ಜೈಪುರ್ ಪಿಂಕ್ ಪ್ಯಾಂಥರ್ಸ್ ವಿರುದ್ಧ ಗೆದ್ದಿತು.

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಪುಣೇರಿ	17	11	4	2	64
ಬೆಂಗಳೂರು	17	10	6	1	58
ಜೈಪುರ	16	10	6	0	54
ಯುಪಿ	16	8	6	2	50
ಬೆಂಗಾಲ್	16	8	6	2	48
ತಲೈವಾಸ್	16	7	6	3	47

ಯೂತ್ ಬಾಕ್ಸಿಂಗ್: ನಾಲ್ಕರ ಘಟ್ಟಕ್ಕೆ ಮುಸ್ಕಾನ್, ತಮನ್ನಾ

ನವದೆಹಲಿ (ಪಿಟಿಐ): ವಿಶ್ವ ಯೂತ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾರತೀಯರು ಉತ್ತಮ ಸಾಮರ್ಥ್ಯ ಮುಂದುವರಿಸಿದ್ದಾರೆ. ಮುಸ್ಕಾನ್, ತಮನ್ನಾ ಸೇರಿದಂತೆ ಮತ್ತೆ ನಾಲ್ವರು ಬಾಕ್ಸರ್‌ಗಳು ಸೆಮಿಫೈನಲ್ ತಲುಪಿದ್ದು ಪದಕ ಖಚಿತಪಡಿಸಿದ್ದಾರೆ.

ಸ್ಪೇನ್‌ನ ಲಾ ನೂಸಿಯಾದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಕೀರ್ತಿ ಮತ್ತು ದೇವಿಕಾ ಘೋರ್ಪಡೆ ಬುಧವಾರ ನಾಲ್ಕರ ಘಟ್ಟ ತಲುಪಿದ ಇನ್ನಿಬ್ಬರು ಬಾಕ್ಸರ್‌ಗಳು. ಈ ನಾಲ್ವರು ಸೆಮಿ ತಲುಪುವದರೊಂದಿಗೆ ಭಾರತ ಇದುವರೆಗೆ 11 ಪದಕಗಳನ್ನು ಖಚಿತಪಡಿಸಿದೆ. ಮಹಿಳೆಯರ 50 ಕೆಜಿ ವಿಭಾಗದ ಕ್ವಾರ್ಟರ್‌ಫೈನಲ್‌ನಲ್ಲಿ ತಮನ್ನಾ 5–0ಯಿಂದ ಜಪಾನ್‌ನ ಜುನಿ ಟೊನೆಗವಾ ಅವರನ್ನು ಪರಾಭವಗೊಳಿಸಿದರು. ದೇವಿಕಾ (52 ಕೆಜಿ) ಕೂಡ ಇದೇ ಅಂತರದಿಂದ ಜರ್ಮನಿಯ ಅಸ್ಯಾ ಅರಿ ಎದುರು ಗೆದ್ದರು. 75 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿರುವ ಮುಸ್ಕಾನ್ ಎಂಟರಘಟ್ಟದಲ್ಲಿ ಮಂಗೋಲಿಯಾದ ಜಿನೆಯಪ್ ಅಜಿಂಬಯಿ ಎದುರು ಕೀರ್ತಿ (+81 ಕೆಜಿ) ಅವರು ರುಮೇನಿಯಾದ ಲಿವಿಯಾ ಬೊಟಿಕಾ ಅವರನ್ನು ಸೋಲಿಸಿದರು. ಭಾರತದ ಬಾಕ್ಸರ್‌ಗಳು ಆರ್‌ಎಸ್‌ಸಿ (ರೆಫರಿಯಿಂದ ಪಂದ್ಯ ಸ್ಥಗಿತ) ಆಧಾರದಲ್ಲಿ ಗೆಲುವು ಸಾಧಿಸಿದರು.

ಪ್ರೀತಿ ದಹಿಯಾ (57 ಕೆಜಿ), ರಿಧಮ್ (+92 ಕೆಜಿ), ಜಾದೂಮಣಿ ಸಿಂಗ್ ಮಂದೆಂಗಬಮ್ (51 ಕೆಜಿ) ಸೋಲು ಅನುಭವಿಸಿದರು.

ಸಂಕ್ಷಿಪ್ತ ಸುದ್ದಿ

ಚಮಿಕಾ ಅಮಾನತು

ಕೊಲಂಬೊ (ಪಿಟಿಐ): ಆಸ್ಟ್ರೇಲಿಯಾದಲ್ಲಿ ಈಚೆಗೆ ನಡೆದ ಟಿ20 ವಿಶ್ವಕಪ್ ಟೂರ್ನಿ ಸಂದರ್ಭದಲ್ಲಿ ನಿಯಮಗಳನ್ನು ಉಲ್ಲಂಘಿಸಿದ ಆರೋಪದಲ್ಲಿ ಶ್ರೀಲಂಕಾ ಆಟಗಾರ ಚಮಿಕಾ ಕರುಣಾರತ್ನೆ ಅವರನ್ನು ಒಂದು ವರ್ಷ ಅವಧಿಗೆ ಅಮಾನತು ಮಾಡಲಾಗಿದೆ.

'ಕರುಣಾರತ್ನೆ ವಿರುದ್ಧ ಶಿಸ್ತುಕ್ರಮಗಳನ್ನು ಕೈಗೊಳ್ಳಲಾಗಿದೆ. ಶ್ರೀಲಂಕಾ ಕ್ರಿಕೆಟ್ ಮಂಡಳಿಯು ಮೂವರು ಸದಸ್ಯರಿದ್ದ ವಿಚಾರಣೆ ಸಮಿತಿಯನ್ನು ರಚಿಸಿತ್ತು. ವಿಚಾರಣೆ ನಡೆಸಿದ ನಂತರ ಆಟಗಾರನ ಮೇಲೆ ಅಮಾನತು ಹಾಗೂ ಐದು ಸಾವಿರ ಡಾಲರ್ ದಂಡವನ್ನೂ ವಿಧಿಸಲಾಗಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕೇಂದ್ರ ಗುತ್ತಿಗೆಯಿಂದ ಗಪ್ಟಿಲ್ ಬಿಡುಗಡೆ

ವೆಲ್ಲಿಂಗ್ಟನ್ (ಪಿಟಿಐ): ಅನುಭವಿ ಬ್ಯಾಟರ್ ಮಾರ್ಟಿನ್ ಗಪ್ಟಿಲ್ ಅವರನ್ನು ನ್ಯೂಜಿಲೆಂಡ್ ಕ್ರಿಕೆಟ್ ಮಂಡಳಿಯ ಕೇಂದ್ರಿಯ ಗುತ್ತಿಗೆಯಿಂದ ಬಿಡುಗಡೆ ಮಾಡಲಾಗಿದೆ. ವಿದೇಶಗಳಲ್ಲಿ ಆಡುವ ಅವಕಾಶಗಳನ್ನು ಬಳಸಿಕೊಳ್ಳಲು ಅವರು ಈ ನಿರ್ಧಾರ ಕೈಗೊಂಡಿದ್ದಾರೆನ್ನಲಾಗಿದೆ. ಈ ರೀತಿ ಬಿಡುಗಡೆ ಪಡೆದ ಮೂರನೇ ಕಿವೀಸ್ ಆಟಗಾರರಾಗಿದ್ದಾರೆ. ಈ ಮೊದಲು ವೇಗಿ ಟ್ರೆಂಟ್ ಬೌಲ್ಟ್ ಮತ್ತು ಕಾಲಿನ್ ಡಿ ಗ್ರ್ಯಾಂಡ್ ಹೋಮ್ ಕೂಡ ಬಿಡುಗಡೆ ಹೊಂದಿದ್ದರು.

ಡಿ.9ರಿಂದ ಟಿಟಿ

ಬೆಂಗಳೂರು: ಸಿ.ವಿ.ಎಲ್. ಶಾಸ್ತ್ರಿ ಸ್ಮರಣಾರ್ಥ ರಾಜ್ಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್ ಡಿಸೆಂಬರ್ 9ರಿಂದ 12ರವರೆಗೆ ನಡೆಯಲಿದೆ.

ಇಲ್ಲಿಯ ಮಲ್ಲೇಶ್ವರಂ ಕೆನರಾ ಯೂನಿಯನ್‌ನಿಂದ ಆಯೋಜಿಸಲ್ಪಡುವ ಟೂರ್ನಿಯಲ್ಲಿ 11, 13, 15, 17, 19 ವರ್ಷದೊಳಗಿನವರು, ಪುರುಷ, ಮಹಿಳೆ ಮತ್ತು ನಾನ್ ಮೆಡಲ್ಸ್ ವಿಭಾಗದಲ್ಲಿ ಸ್ಪರ್ಧೆಗಳು ನಡೆಯಲಿವೆ. https://karnatakatta.web.appನಲ್ಲಿ ಹೆಸರು ನೋಂದಾಯಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮುಖ್ಯ ರೆಫರಿ ಕೆ.ಆರ್. ಮಂಜುನಾಥ್ (ಮೊಬೈಲ್ ಸಂಖ್ಯೆ 98809 77827) ಅವರನ್ನು ಸಂಪರ್ಕಿಸಬೇಕು ಎಂದು ಕರ್ನಾಟಕ ಟೇಬಲ್ ಟೆನಿಸ್ ಸಂಸ್ಥೆ (ಕೆಟಿಟಿಎ) ಕಾರ್ಯದರ್ಶಿ ಟಿ.ಜಿ. ಉಪಾಧ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಾಕಿ: ಶ್ರೇಯಸ್ ಹ್ಯಾಟ್ರಿಕ್ ಗೋಲು

ಬೆಂಗಳೂರು: ಶ್ರೇಯಸ್ ಆರ್. ಗಳಿಸಿದ ಹ್ಯಾಟ್ರಿಕ್ ಗೋಲುಗಳ ಬಲದಿಂದ ಬ್ಲ್ಯೂಸ್ಟಾರ್ ಹಾಕಿ ಕ್ಲಬ್ ತಂಡವು ರಾಜ್ಯ ಸಿ ಡಿವಿಷನ್ ಲೀಗ್ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಭರ್ಜರಿ ಜಯ ಗಳಿಸಿತು.

ಬುಧವಾರ ಇಲ್ಲಿ ನಡೆದ ಪಂದ್ಯದಲ್ಲಿ ಬ್ಲ್ಯೂಸ್ಟಾರ್ 7–2ರಿಂದ ಸದರ್ನ್ ಅಲ್ಫಾ ಸ್ಪೋರ್ಟ್ಸ್ ಅಕಾಡೆಮಿ ತಂಡವನ್ನು ಮಣಿಸಿತು. ಶ್ರೇಯಸ್ 23, 43 ಮತ್ತು 49ನೇ ನಿಮಿಷಗಳಲ್ಲಿ ಗೋಲು ಕೈಚಳಕ ತೋರಿದರು. ಶ್ರೀ ಹರ್ಷ (17, 40ನೇ ನಿಮಿಷ), ಧನುಷ್ ಎಂ. (34ನೇ ನಿ.) ಮತ್ತು ಸುಂದರ್ ರಾಜ್ (46ನೇ ನಿ.) ವಿಜೇತ ತಂಡಕ್ಕಾಗಿ ಗೋಲು ಗಳಿಸಿದರು.

ಸದರ್ನ್ ಅಲ್ಫಾ ತಂಡದ ಪರ ಧನುಷ್ (24ನೇ ನಿ.) ಮತ್ತು ಕವೀಶ್ವರನ್ (48ನೇ ನಿ.) ಗೋಲು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ಸಹ್ಯಾದ್ರಿ ಸ್ಪೋರ್ಟ್ಸ್ ಕ್ಲಬ್ 3–0ಯಿಂದ ಐಡಿಯಲ್ ಸ್ಪೋರ್ಟ್ಸ್ ಅಕಾಡೆಮಿ ತಂಡಕ್ಕೆ ಸೋಲುಣಿಸಿತು. ಸಹ್ಯಾದ್ರಿ ಪರ ಸುರೇಶ್ (2ನೇ ನಿ.), ದರ್ಶನ್ ಪವಾರ್ (10ನೇ ನಿ.) ಮತ್ತು ಸಾಗರ್ ಆರ್. (36ನೇ ನಿ.) ಗೋಲು ದಾಖಲಿಸಿದರು.